# ಲಂಬಾಣಿ ಲಕ್ಷ

ಜಗ್ಗು ಪ್ರಿಯದರ್ಶಿನಿ



ಜಗ್ಗು ಪ್ರಿಯದರ್ಶಿನಿ

ಪ್ರಕಟಣೆ : ೧೦

# ಲಂಬಾಣಿ ಲಕ್ಕಿ

ಕಾದಂಬರಿ

ಲೇಖಕಿ :
ಜಗ್ಗು ಪ್ರಿಯದರ್ಶಿನಿ

ಪ್ರಕಾಶಕರು
ರಾಜಕಮಲ ಪ್ರಕಾಶನ
ನಂ. ೧, ಹೂವಾಡಿಗರ ಗಲ್ಲಿ, ಬಳೇಪೇಟೆ,
ಬೆಂಗಳೂರು-೫೬೦೦೫೩.

ಈ ಮಾಲೆಯ ಸಂಪಾದಕರು ಮತ್ತು ಪ್ರಕಾಶಕರು.
ಜಿ. ಸಿದ್ಧರಾಜ್
ರಾಜಕಮಲ ಪ್ರಕಾಶನ

ಎಲ್ಲಾ ಹಕ್ಕುಗಳು ಲೇಖಕಿಯದು.

ಮೊದಲ ಮುದ್ರಣ : ಜನವರಿ ೧೯೭೭

ಮುಖ ಚಿತ್ರ ರಚನೆ : 'ಪಲಿಯಂ'

ಬೆಲೆ 6-00 ರೂಪಾಯಿಗಳು

ಮುದ್ರಣ :
ಶ್ರೀ ಧನಲಕ್ಷ್ಮೀ ಪ್ರಿಂಟರ್ಸ್,
ಶೇಷಾದ್ರಿಪುರ ಅಗ್ರಹಾರ, ಬೆಂಗಳೂರು-೨೦.

# ನನ್ನ ಬಿನ್ನಹ

ಏನೇನೋ ಆಸೆ. ಮನಸ್ಸಿನಲ್ಲಿ ಮೂಡಿಸುವುದನ್ನು ಮನ ಮುಟ್ಟುವಂತೆ ಬರೆಯಬೇಕೆಂಬ ಆಸೆ, ಲೇಖನಿಯಿಂದ ದೇಶಸೇವೆ ಮಾಡಬೇಕೆಂಬ ಹಂಬಲ, ಜನರ ರೀತಿ-ನೀತಿಗಳನ್ನು ಎತ್ತಿ ಹಿಡಿದು "ಖಡ್ಗವು ಮಾಡಲಾರದ ಕೆಲಸ ಲೇಖನಿ ಮಾಡಬಲ್ಲದು" ಎಂಬ ಮಾತನ್ನು ಕೂಗಿ ತೋರಿಸಬೇಕೆಂಬ ... ಅದಕ್ಕಾಗಿ ಇಡೀ ಜೀವನವನ್ನು ಬರೆಯಲು ಮುಡುಪಾಗಿಡಬೇಕೆಂಬ ಇಚ್ಛೆ.

ಇವೆಲ್ಲಾ ತುಮುಲಗಳು ಮನಸ್ಸಿನಲ್ಲಿ ತರಂಗಗಳನ್ನೆಬ್ಬಿಸಿ ಮೂಡಿಬಂದ ಭಾವನೆಗಳನ್ನು ಕೃತಿಗೆ ಇಳಿಸಿ, ರಚಿಸಿದ ಕೃತಿಯನ್ನು ನಮ್ಮ ವಾಚಕ ಬಂಧುಗಳ ಕೈಯಲ್ಲಿಟ್ಟು, ಅವರು ಓದಿ, ನಮ್ಮ ಭಾವನೆಗಳನ್ನು ತಾವೂ ಹಂಚಿಕೊಂಡು ಸಹೃದಯದಿಂದ ಮೆಚ್ಚಿದರೆ ಸಾಕು "ನಮ್ಮ ಕೃತಿ ಸಾರ್ಥಕವಾಯಿತು" ಎಂಬ ಲೇಖಕನ ಆಶಾಗೋಪುರವು ಒಡೆದು ಛಿದ್ರ-ಛಿದ್ರವಾಗುವುದು ಯಾವಾಗ ಗೊತ್ತೇ ? ......

"ಬರೆದ ಕೃತಿಯನ್ನು ಸ್ವಂತ ಪ್ರಕಟಿಸಲು ಶಕ್ತಿಯಿಲ್ಲದೇ ಪ್ರಕಾಶಕರ ಮನೆ-ಮನೆ, ಬೀದಿ-ಬೀದಿ ಅಲೆದು ನಿರಾಶರಾದಾಗ, ಈ ಬರೆಯುವ ಹುಚ್ಚು ಬೇಕಿತ್ತಾ ! ದೇವರೇ ? ಅನ್ನಿಸುತ್ತೆ. ಇದು ಲೇಖಕರಿಗೆ ಸಾಹಿತ್ಯದ ಬವಣೆ" ಎನ್ನುವುದು ನನಗೂ ಅರಿವಾಯಿತು.

ಈ ನನ್ನ ಕಾದಂಬರಿ ಪ್ರಕಟವಾಗಿದ್ದರೆ ೫ ವರ್ಷದ ಮೊದಲೇ ಬರಬೇಕಾಗಿತ್ತು. ಇದೇ ಇಂತಹ ತಂಗು ತೊಡರುಗಳಿಂದ ಹಿಂದುಳಿಯಬೇಕಾಯಿತು. ಪ್ರಕಾಶನ ಪ್ರಭುಗಳನ್ನು ಕೇಳಿದರೆ "ನೀವೇನು ಹೆಸರಾಂತ ಲೇಖಕರೇ ? ಹಾಗಿದ್ದರೆ ನಿಮ್ಮ ಕೃತಿಯನ್ನು ಪ್ರಕಟಿಸುತ್ತೇವೆ" ಎನ್ನುತ್ತಾರೆ. ಆದರೆ ಪ್ರಕಟವಾದ ನಂತರ ತಾನೆ ಹೆಸರು ಉಳಿಯುತ್ತದೆಯೋ ? ಅಳಿಯುತ್ತದೆಯೋ ? ತಿಳಿಯಬೇಕಾದರೆ ...

ಒಮ್ಮೆಗೇ ಲೇಖಕರ ಬರೆಗಳಿಲ್ಲ. ಅವರ ಪ್ರೋತ್ಸಾಹವೇ ಬರೆಯುವವನ ಸ್ಫೂರ್ತಿ-ನವಚೇತನ, ಅವರ ಆದರದ ಸ್ವಾಗತಕ್ಕೆ ಕವಿ ತನ್ನ ಜೀವಿತವನ್ನೇ ಮುಡುಪಾಗಿ ಇಡಬಲ್ಲ.

ಆದರೆ ಬರೆದದ್ದನ್ನು ಓದುಗರ ಕೈ ಸೇರುವಂತೆ ಮಾಡಲು ಬರೆದವರ ಬವಣೆ ಭಗವಂತನಿಗೇ ಪ್ರೀತಿ.

ಈ "ಲಂಬಾಣಿ ಲಕ್ಕಿ" ನನ್ನ ಮೊದಲ ಕಾದಂಬರಿ - ಇದನ್ನು ಪ್ರಕಟಿಸಬೇಕೆಂಬ ಹಂಬಲವಂತೂ ನನ್ನ ಮನಸ್ಸನ್ನು ಕೊರೆಯುತ್ತಿತ್ತು. ಪ್ರಕಟಿಸಲು ಶಕ್ತಿ ಸಾಲದೆ ಕೊರಗುತ್ತಿದ್ದೆ. ಅದೇ ಸಮಯಕ್ಕೆ "ಪಾರಿ ಬೀದಿಪಾಲೇ?" ಎಂಬಂತೆ ಶ್ರೀಮಾನ್ "ಜಿ. ಸಿದ್ದರಾಜು"ರವರು ನನ್ನ ನೆರವಿಗೆ ಬಂದು ತಾವು ಪ್ರಕಟಿಸುವುದಾಗಿ ಭರವಸೆ ಇತ್ತರು.

ಇವರ "ರಾಜಕಮಲ ಪ್ರಕಾಶನ" ಮಾಲೆಯು ಅನೇಕ ಹೊಸ ಲೇಖಕ-ಲೇಖಕಿಯರ ಕೃತಿಗಳನ್ನು ಬೆಳಕಿಗೆ ತಂದಿರುವುದಲ್ಲದೆ ಕೆಲವು ಒಳ್ಳೆಯ ಗ್ರಂಥಗಳನ್ನು ಪ್ರಕಟಿಸುವ ಸಾಹಸ ಮಾಡಿರುವುದು ಪ್ರಶಂಸನೀಯ. ಅವರ ಮಾಲೆಯಲ್ಲಿ ನನ್ನದೂ ಒಂದು ಕುಸುಮವನ್ನು ಸೇರಿಸಿದ್ದಕ್ಕಾಗಿ ಶ್ರೀಮಾನ್ ಜಿ. ಸಿದ್ದರಾಜುರವರಿಗೆ ನಾನು ತುಂಬಾ ಕೃತಜ್ಞಳು.

ಕಥೆಗೆ ಕಳೆ ಕಟ್ಟುವಂತೆ ಮುಖ ಪುಟದ ಚಿತ್ರವನ್ನು ಬರೆದುಕೊಟ್ಟ 'ಪಾಲಿಂಪುಂ'ರವರಿಗೆ ಧನ್ಯವಾದಗಳು. ಅಂದವಾಗಿ ಮುದ್ರಣ ಮಾಡಿಕೊಟ್ಟ ಶ್ರೀ ಧನಲಕ್ಷ್ಮೀ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀಮಾನ್ ಜೆ. ಆರ್. ಸತ್ಯನಾರಾಯಣರವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

"ಲಂಬಾಣಿ ಲಕ್ಕಿ" ನನ್ನ ಕಲ್ಪನೆಯ ಕಾದಂಬರಿ. ಸಮಾಜದಲ್ಲಿ ಹೆಣ್ಣಿಗೆ ಅನ್ಯಾಯಗಳೂ ಕಟ್ಟು-ಕಟ್ಟಳೆಯ ತೊಡಕಿದೆ. ಆ ಕಿರುಕುಳವನ್ನು ಸಹಿಸಲಾರದೇ ಯಾವುದೇ ಹೆಣ್ಣು ಸ್ತ್ರೀ ಎಷ್ಟಾದರೂ ಜೀವನವಿಡೀ ಪರಿತಪಿಸುತ್ತಾಳೆ. ನನ್ನ ನಾಡಿಯಲ್ಲಿ ಕರುಳು ಕರಗಿಸುವಂತಹ ಆ ಮಂಗಳೆಯ ಪಾತ್ರವನ್ನು ಕಾದಂಬರಿಗೆ ಆರಿಸಿಕೊಂಡು ರಚಿಸಿರುತ್ತೇನೆ.

ನನ್ನ ಈ ಅಂತರಂಗದ ಅಳಲು ಸೀಮಿತಕ್ಕೆ ಒಳಗಾಗಿ ತಳಮಳಿಸುವ ಸ್ತ್ರೀ ಭಾವುಕತೆಯನ್ನು ಮಂಗಳೆಯಲ್ಲಿ ಚಿತ್ರಿಸಲು ಪ್ರಯತ್ನಿಸಿರುತ್ತೇನೆ. ಮುಖ್ಯ ಪಾತ್ರಗಳು ಅವಳನ್ನು ಪೋಷಿಸಿ, ಅದು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆಯೋ ಅರಿಯೆ.

ವಾಚಕರು ಓದಿ ತಮ್ಮ ಅಭಿಪ್ರಾಯವನ್ನು ಬಿಚ್ಚು ಮನಸ್ಸಿನಿಂದ ನನಗೆ ತಿಳಿಸಬೇಕಾಗಿ ವಿನಂತಿ. ನಿಮ್ಮ ಪತ್ರಗಳಿಗೆ ಆಹ್ವಾನವಿದೆ.

೧-೧-೧೯೭೭

"ಜಗ್ಗು ಸಿಂಗ್ರಯ್ಯನ ಪತ್ನಿ"
ಜಗ್ಗು ಸಿಂಗ್ರಯ್ಯಂಗಾರ್
ಸೋಮೇಶ್ವರ ಎಕ್ಸ್‌ಟೆನ್ಷನ್, ತುಮಕೂರು

# ೧

ಮಂಗಳೆಗೆ ಹೆರಿಗೆಯಾದ ಹನ್ನೊಂದನೆಯ ದಿನ ಮಗು ಬಾಣಂತಿಯನ್ನು ಮನೆಗೆ ಕರೆದುಕೊಂಡು ಹೋಗಲು ಮೂರ್ತಿಯೇ ಆಸ್ಪತ್ರೆಯ ಬಳಿಗೆ ಕಾರನ್ನು ತಂದರು.

ಕಾರಿನ ಸೀಟು ಮೆತ್ತಗಿದ್ದರೂ, ಬಾಣಂತಿಗೆ ಆಯಾಸವಾಗಬಾರದೆಂದು ಮೆತ್ತನೆ ದಿಂಬನ್ನು ಒರಗಿಕೊಳ್ಳಲು ಇಟ್ಟಿದ್ದರು.

ಮೂರ್ತಿಯ ತಂಗಿ ದೇವಕಿ, ಮಗುವನ್ನು ಕೈಗೆತ್ತಿಕೊಂಡು "ಅತ್ತಿಗೆ; ಕಾರನ್ನು ಹತ್ತುವಾಗ ಜೋಪಾನ ಮೆಲ್ಲಗೆ ಹತ್ತು" ಎಂದು ಎಚ್ಚರಿಕೆ ಹೇಳಿದಳು.

ಮೂರ್ತಿಯವರು ರಗ್ಗನ್ನು ಕೈಯಲ್ಲಿ ಹಿಡಿದೇ ನಿಂತಿದ್ದರು. ಮಂಗಳೆ ಕಾರಿನಲ್ಲಿ ಕುಳಿತುಕೊಂಡು ಮಗುವನ್ನೆತ್ತಿಕೊಂಡ ಕೂಡಲೇ ತಾಯಿ-ಮಗುವಿಗೆ ಥಂಡಿಯಾಗದಂತೆ ರಗ್ಗನ್ನು ಹೊದಿಸಿದರು.

ಪತಿರಾಯರ ಈ ಮುತುವರ್ಜಿಯನ್ನು ನೋಡಿ ಮಂಗಳೆ ಮನದಲ್ಲಿಯೇ ನಕ್ಕಳು.

ದೇವಕಿಯೂ ಕುಳಿತ ಮೇಲೆ ಕಾರು ಮನೆಯ ಕಡೆ ಹೊರಟಿತು. ಮಗುವಿನ ನಾಮಕರಣಕ್ಕೆ ಮದುವೆಗೆ ಬರುವಷ್ಟು ನಂಟರಿಷ್ಟರು ಬಂದು ಮನೆಯಲ್ಲಿ ತುಂಬಿದ್ದರು.

ಎಲ್ಲರಿಗೂ ಬಹಳ ಸಂಭ್ರಮ. ಮಂಗಳೆಗೆ ಮಂಗಳದ ಸ್ವಾಗತಕಾದಿತ್ತು, ಅವಳು ಮಗುವಿನೊಂದಿಗೆ ಕಾರಿನಿಂದ ಇಳಿದ ಕೂಡಲೇ ಆರತಿ ಎತ್ತಿ ಅಕ್ಷತೆ ಹಾಕಿ ಒಳಕ್ಕೆ ಕರೆದು ಕೊಂಡರು.

ಮನೆಯ ಬಾಗಿಲು ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಅವಳಿಗಾಗಿ ಮಂಚ, ಹಾಸಿಗೆ ಹಾಕಲಾಗಿತ್ತು. ಮಂಗಳೆ ಮಗುವಿನೊಂದಿಗೆ ಒಳಕ್ಕೆ ಹೋಗಿ ಕುಳಿತಳು.

ಮನೆಯವರೆಲ್ಲಾ ಬಂದು ಅವಳ ಸುತ್ತಲೂ ತುಂಬಿಕೊಂಡರು. "ಎಲ್ಲೇ; ಮಂಗಳಾ ! ಮಗು ತೋರಿಸೇ ; ಯಾರ ಹಾಗಿದೆಯೇ ನೋಡೋಣ" ಎಂದರು ಮಂಗಳೆಯ ದೊಡ್ಡ ಅತ್ತಿಗೆ.

ಮಂಗಳೆಯ ತೊಡೆಯ ಮೇಲೆ ಮಗು ಬಟ್ಟಲು ಕಣ್ಣು ಬಿಟ್ಟು ಮಲಗಿತ್ತು. ಎಲ್ಲರ ಕಣ್ಣೂ ಮಗುವಿನ ಮೇಲೆ ಕೇಂದ್ರೀಕರಿಸಿತ್ತು.

ಅಮ್ಮಾ : ನೋಡು, ಮಗು ತುಂಬಾ ಚೆನ್ನಾಗಿದೆ. ಮೂಗು–ಬಾಯಿ ದೊಡ್ಡದಾದ ಹಣೆ, ಎಲ್ಲಾ ಮೂರ್ತಿ ಮಾವನಂತೆಯೇ ಅಂದಳು ಮಂಗಳೆಯ ಅತ್ತಿಗೆಯ ಮಗಳು ಶಾಂತಿ. ಮಂಗಳೆಯ ಚಿಕ್ಕ ನಾದಿನಿ ದೇವಕಿಗೆ ಈಗ ಅತ್ತಿಗೆಯ ಮೇಲೆ ಎಲ್ಲಿಲ್ಲದ ಪ್ರೀತಿ ಬಂದು ಬಿಟ್ಟಿತ್ತು.

"ಅತ್ತಿಗೆ ! ಎಷ್ಟು ಬೆಳ್ಳಗಿದೆ ಮಗು : ಎತ್ತಿಕೊಂಡು ಇರಬೇಕು ಅಂತ ಆಸೆಯಾಗುತ್ತೆ. ಕೊಡತ್ತಿಗೇ ಇಲ್ಲಿ, ಎಂದು ಕೈ ಚಾಚಿದಳು.

ಸುಮ್ಮನಿರೇ : ಸಾಕು ; ನಿನಗೆ ಸರಿಯಾಗಿ ಎತ್ತಿಕೊಳ್ಳೋಕೆ ಬರೋಲ್ಲ, ಎಂದು ಗದರಿಧರು ದೇವಕಿಯ ಚಿಕ್ಕಮ್ಮ".

ಮಗುವಿನ ಅಂದ ಚೆಂದವನ್ನು ಒಬ್ಬೊಬ್ಬರೂ ವರ್ಣಿಸುವವರೇ. ಅಷ್ಟು ಜನರಲ್ಲಿ ತನ್ನ ಮಿಕ್ಕ ಮಕ್ಕಳನ್ನು ಹುಡುಕುವಂತಾಯಿತು ಮಂಗಳೆಗೆ.

ಅವಳ ದೊಡ್ಡ ಮಗಳು ರಾಜಿ, ಎರಡನೆಯವಳು ಸುಮಿ, ಮೂರನೆಯವಳು ಸುಶೀ ಮೂವರೂ ಅವರೆಲ್ಲರ ಮಧ್ಯೆ ತೂರಿಕೊಂಡು ಮಂಗಳೆಯ ಬಳಿ ಬರಲು ಮುಂದೆ ನುಗ್ಗಿದರು.

ಮಂಗಳೆಗೆ ಏಕೋ ಆ ಮಕ್ಕಳನ್ನು ಯಾವಾಗ ಕಂಡೇನು ಅನ್ನಿಸಿತ್ತು.

ಅಷ್ಟರಲ್ಲಿ ಮಂಗಳೆಯ ಚಿಕ್ಕ ಅತ್ತೆಯವರು ತಾಯಿಯತ್ತ ಓಡುತ್ತಿದ್ದ ಮಕ್ಕಳನ್ನು ತಡೆದು "ಬನ್ರೇ : ಈ ಕಡೆ ನೀರು ಹಾಕುವವರೆಗೂ ಅಮ್ಮನನ್ನೂ, ಪಾಪನನ್ನೂ ಮುಟ್ಟಿಸಿಕೊಳ್ಳಬಾರದು" ಎಂದರು.

ಮಕ್ಕಳ ಮುಖ ಪೆಚ್ಚಾಯಿತು. ಮಂಗಳೆಯ ಕರಳು ಚುರಕ್.... ಎಂದಿತು, ಈ ವೇಳೆಗೆ ಒಳಗೆ ಎಲ್ಲೋ ಕೆಲಸದಲ್ಲಿದ್ದ ಮಂಗಳೆಯ ಅತ್ತೆ ಪಾರ್ವತಮ್ಮನವರೂ ಅಲ್ಲಿಗೆ ಬಂದರು.

"ಏನ್ರೇ : ಎಲ್ಲಾ ಒಟ್ಟಿಗೆ ಇಲ್ಲೇ ಸೇರಿಬಿಟ್ಟಿದ್ದೀರಾ ? ಮಗು ಬಾಣಂತಿಗೆ ಒಂದು ಚೊಂಬು ಬೇಗ ಎರೆದು ಬಿಡೋಣ, ಇನ್ನು ಪುರೋಹಿತರು ಬಂದು ಬಿಡುತ್ತಾರೆ, ನಡೀ ಲಕ್ಷ್ಮಿ ಹಂಡೇಲಿ ನೀರು ಹದ ಮಾಡು. ಎಂದು ತಮ್ಮ ತಂಗಿಗೆ ಹೇಳಿದರು.

"ಎಲ್ಲೇ : ಮಗೂ ಕೊಡೇ ಮಂಗಳಾ ಇತ್ತ" ಎನ್ನುತ್ತಾ ತಾವೇ ಮಂಚದ ಬಳಿ ಬಂದು ಮಗುವನ್ನು ಎರಡು ಕೈಗಳಿಂದಲೂ ಹೂವನ್ನೆತ್ತಿ ಕೊಳ್ಳುವಂತೆ ಎತ್ತಿ ಎದೆಗವುಚಿಕೊಂಡರು. ಅವರ ಸಂತೋಷ, ಮುಖದಲ್ಲಿ ಎದ್ದು ಕಾಣುತ್ತಿತ್ತು. ಅದು "ಗಂಡು ಮಗು" ಅವರ ವಂಶೋದ್ಧಾರಕ ನಲ್ಲವೇ ?

ಇದ್ದಕ್ಕಿದ್ದಂತೆ ಅತ್ತೆಯ ಈ ಬದಲಾವಣೆ ಕಂಡು ಮಂಗಳೆಗೆ ಅಸಹ್ಯ ವೆನಿಸಿತು, "ಮಾತು ಮಾತಿಗೆ ಸಿಡುಕುತ್ತಿದ್ದ ಅದೇ ನನ್ನ ಅತ್ತೆಯವರೇ ಇವರು ?" ಎನಿಸಿತು.

ಒಳ್ಳೇ ಮೂರು ತಿಂಗಳ ಮಗು ಇದ್ದ ಹಾಗಿದೆ ಕಣೇ, ಎಲ್ಲಾದ್ರೂ ನನ್ನ ದೃಷ್ಟಿಯೇ ತಾಕೀತು ? ಮಗುವಿಗೆ ಎಂದು ಮೊಮ್ಮಗನನ್ನು ಅಕ್ಕರೆ ಯಿಂದ ಅಪ್ಪಿಕೊಂಡರು.

"ಮಂಗಳಾ ತುಂಬಾ ಅದೃಷ್ಟವಂತೆ ; ಮೂರು ಹೆಣ್ಣಿನ ಮೇಲೆ ಒಂದು ಗಂಡಾದರೆ ತುಂಬಾ ಅದೃಷ್ಟವಂತೆ ಅಕ್ಕ ! ಎಂದರು ಲಕ್ಷ್ಮಮ್ಮ.

ಅಲ್ಲಾ : ಚಿಕ್ಕಮ್ಮಾ ಸರ್ಕಾರದವರು ಮೂರು ಮಕ್ಕಳ ಮೇಲೆ ಮಕ್ಕಳೇ ಆಗಬಾರದೆಂದು ಯೋಜನೆ ಹಾಕಿರುವಾಗ ಇನ್ನು ಮುಂದೆ ಯಾರಿಗೂ ಇಂಥಾ ಅದೃಷ್ಟವೇ ಸಿಕ್ಕಲಾರದೆಂದು ಕಾಣುತ್ತೆ, ಅಲ್ಲವೇ ಅತ್ತಿಗೆ ? ಅಂದಳು ದೇವಕಿ, ಎಲ್ಲರೂ ಘೊಳ್ಳೆಂದು ನಕ್ಕರು.

ಇವರೆಲ್ಲಾ ಇಷ್ಟು ಕುಣಿದು ಕುಪ್ಪಳಿಸಿದರೂ ಮಂಗಳೆಗೇಕೋ ಏನೂ ಬೇಕಾಗಿರಲಿಲ್ಲ, ಸುಮ್ಮನೆ ಗರ ಬಡಿದಂತೆ ಕುಳಿತಿದ್ದಳು.

ಅವಳ ಎದೆಯಾಳದಲ್ಲಿ ಏನೋ ಸಂಕಟ—ಏನೋ ತಳ—ಮಳ.

"ಅಬ್ಬಾ ! .... ಏನು ಪ್ರಪಂಚ ? "ಗಂಡು ಮಗು" ಎಂದಾಕ್ಷಣ ಅದಕ್ಕೇನು ಕೋಡು ಕೆತ್ತಿದೆಯೇ ? ಎಲ್ಲಿಲ್ಲದ ಆಸೆ—ಅಕ್ಕರೆ ಎಲ್ಲರಿಗೂ ಬಂದು ಬಿಡುತ್ತೆ".

ಹೆಣ್ಣಿಗೂ ಸಮಾನತೆ, ವಿದ್ಯೆ, ಅಧಿಕಾರ, ಎಲ್ಲವೂ ಇದೆ ; ಎಂಬ ಈಗಿನ ಕಾಲದಲ್ಲಿಯೇ ಹೀಗೆ "ಹೆಣ್ಣು, ಎನ್ನುವುದು ನಿಕೃಷ್ಟ. ಗಂಡೇ ಉದ್ಧಾರ ಮಾಡುವವನು" ಎಂಬ ಧೋರಣೆಯಾದರೆ ; ಇನ್ನು "ಹೆಣ್ಣು ಬೋಕಿ ಹುಟ್ಟಿತು" ಎಂದು ಹಿಂದಿನವರು ಹೀಯಾಳಿಸುತ್ತಿದ್ದುದರಲ್ಲಿ ಆಶ್ಚರ್ಯವೇನು ? ಎಂದು ಮಂಗಳೆಯ ಮನಸ್ಸು ರೋಸಿತು.

ಅವಳ ಅತ್ತೆಯು ಅವಳನ್ನು ಮೂದಲಿಸುತ್ತಿದ್ದ ಮಾತನ್ನು ಈಗ ನೆನೆಸಿಕೊಂಡರೂ ಅವಳ ಮೈಯ್ಯೆಲ್ಲಾ ಉರಿಯುತ್ತಿತ್ತು. ಅವಳು ಮೂರು ಹೆಣ್ಣನ್ನು ಹೆತ್ತಿದ್ದೇ ಅಕ್ಷಮ್ಯ ಅಪರಾಧ, ನೆಪವಿಲ್ಲದ ನೆಪದಲ್ಲಿ ಅವಳನ್ನು ಹೀಯಾಳಿಸುತ್ತಿದ್ದರೇನೇ ಅವಳ ಅತ್ತೆಗೆ ಸಮಾಧಾನ.

ಮಾತು ಮಾತಿಗೆ "ಹುಟ್ಟಿದ ಮನೆಯಂತೂ ದರಿದ್ರದ ಮನೆ, ಇನ್ನು ಕೊಟ್ಟ ಮನೆಯನ್ನೂ ತೊಳೆದು ಬಿಡುತ್ತಾಳೆ ಇವಳು," ಎಂದು ಹಂಗಿಸುವುದಲ್ಲದೆ ಆ ಮಕ್ಕಳನ್ನು ಅಸಡ್ಡೆಯಾಗಿ ಕಾಣುತ್ತಿದ್ದರು ಪಾರ್ವತಮ್ಮ.

ಆ ದಿನ ಅಂದ ಮಾತು, ಅಬ್ಬಾ ! .... ಅದನ್ನು ನೆನಸಿಕೊಂಡರೇ ಮಂಗಳೆಯ ಎದೆಯಲ್ಲಿ ಬಾಣ ನೆಟ್ಟಂತಾಗುತ್ತಿತ್ತು.

ಮಂಗಳೆಗೆ ಹೆರಿಗೆ ನೋವು ಪ್ರಾರಂಭವಾಗಿ ಒದ್ದಾಡುತ್ತಿದ್ದಳು. ಅವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬಿಡಲು ಮೂರ್ತಿ ಷೆಡ್, ನಲ್ಲಿದ್ದ ಕಾರನ್ನು ತರಲು ಹೋದರು.

ಆಗ ಅವಳ ಅತ್ತೆ ಅಂದ ಮಾತು "ಏನೇ ! ಪುಣ್ಯಾತಗಿತ್ತೀ : ಇನ್ನು ಈ ಸಲವೂ ಹೆಣ್ಣು ಹೆತ್ತೆಯೋ ನೀನು ಮನೆಗೇ ಬರಬೇಡ, ಆ ಮಗೂವಿಗೂ ಅಷ್ಟು ವಿಷಕೊಟ್ಟು, ಹಾಗೆಯೇ ನೀನೂ ಕುಡಿದು ಸಾಯಿ. "ಹೆಣ್ಣು ಹೆಚ್ಚಿದ ಮನೆ ಹಾಳು, ನಳ್ಳಿ ಹೆಚ್ಚಿದ ಕೆರೆ ಹಾಳು" ಅಂತ ಈಗ ಇರುವ ಮೂರು ಹೆಣ್ಣಿನ ಜೊತೆಗೆ ಇನ್ನೂ ಒಂದಾದರೆ ನನ್ನ ಮಗ ಉದ್ಧಾರ ಆದ ಹಾಗೆಯೇ" ಎಂದರು.

ಎಂಥಾ ಸಂಕಟ ಸಮಯದಲ್ಲಿ ಎಂಥಾ ಕರಳು ಚುಚ್ಚುವ ಮಾತು ? ಅಲ್ಲಾ ; .....ಅವರೂ ಹೆಣ್ಣೇ ಅಲ್ಲವೇ ? ಹೆಣ್ಣಿನ ಕಷ್ಟ ಏನು ಎಂಬ ಅರಿವೇ ಬೇಡವೇ ? ತಾವೂ ನಾಲ್ಕು ಹೆಣ್ಣು ಹೆತ್ತದ್ದು ಮರತೇ ಹೋಯಿತೇ ?

ಆ ಪ್ರಾಣ ಹೋಗುವ ನೋವಿನಲ್ಲೂ ಮಂಗಳೆಯ ಎದೆ ಗಡ....ಗಡನೆ ನಡುಗಿತು. ''ದೇವರೇ ! ಈ ಬಾರಿಯೂ ಹೆಣ್ಣಾದರೆ ಗತಿಯೇನು ? ಈಗಲೇ ಈ ಮನೆಯಲ್ಲಿ ನನ್ನ ಸ್ಥಾನ ಕಸಕ್ಕಿಂತ ಕಡೆ.

ಮೊದಲೇ ನಾನು ಬಡವರ ಮನೆ ಹೆಣ್ಣು, ಅಪ್ಪನ ಮನೆಯ ಆಸರೆಯಂತೂ ನನಗಿಲ್ಲ, ಈಸಲವಾದರೂ ಒಂದು ಗಂಡು ಮಗುವನ್ನು ಕರುಣಿಸಿ ಇವರೆಲ್ಲರ ಬಾಯಿ ಮುಚ್ಚುವಂತೆ ಮಾಡಪ್ಪಾ : ಎಂದು ಮಂಗಳೆ ದೇವರಲ್ಲಿ ಮೊರೆಯಿಟ್ಟಳು, ಗಂಡು ಮಗುವಿಗಾಗಿ ಹಾತೊರೆದಳು.

ಹೆಂಡತಿಯನ್ನು ತುಂಬಾ ಪ್ರೀತಿಸುತ್ತಿದ್ದ ಮೂರ್ತಿಯೂ ಕೂಡ ಮೂರು ಹೆಣ್ಣಾಯಿತೆಂದು ಮಾತು ಮಾತಿಗೆ ಸಿಡುಕುತ್ತಿದ್ದರು.

ಈಸಲ ಗಂಡು ಮಗುವನ್ನು ಅವರ ಕೈಯಲ್ಲಿಟ್ಟಿದ್ದೇ ತಡ, ಮಂಗಳೆಗೆ ಎಲ್ಲಿಲ್ಲದ ಉಪಚಾರ ಎಲ್ಲರೂ ವಿಚಾರಿಸುವವರೇ ಬಾಣಂತಿ ಮಗುವಿಗೆ ಸಂಭ್ರಮದ ಸ್ವಾಗತ.

ನಾಮಕರಣವಾಗಿ ಊಟ ಆಗುವ ವೇಳೆಗೆ ಒಂದು ಗಂಟೆ ಸಮಯ ಆಯಿತು. ಮಂಗಳೆ ಆಯಾಸದಿಂದ ಹಾಗೆಯೇ ಸ್ವಲ್ಪ ಮಂಚದ ಮೇಲೆ ಮಲಗಿದಳು.

ಮೂರ್ತಿ ರೂಮಿನೊಳಕ್ಕೆ ಬಂದರು. ಅಲ್ಲಿಯೇ ಇದ್ದ ಕುರ್ಚಿಯನ್ನು ಮಂಚದ ಬಳಿ ಎಳೆದುಕೊಂಡು ಕುಳಿತರು.

ಮಂಗಳೆಯ ಕೈಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಅಕ್ಕರೆಯ ದನಿಯಲ್ಲಿ ''ತುಂಬಾ ಆಯಾಸವಾಯ್ತಾ ! ಮಂಗಳಾ ? ಎಂದರು.

"ಆಯಾಸವೂ ಇಲ್ಲ ಏನೂ ಇಲ್ಲ'' ಅಂದಳು ಒಂದು ವಿಧವಾದ ಉದಾಸೀನದಿಂದ.

ನೋಡು ; ಆ ಪುರೋಹಿತರು ಇನ್ನು ಸ್ವಲ್ಪ ಬೇಗ ಬಂದಿದ್ದರೆ ಇಷ್ಟು ಕಷ್ಟವಾಗುತ್ತಿರಲಿಲ್ಲ ನಿನಗೆ, ಅಂದರು.

"ಈಗೇನಾಗಿದೆ ಬಿಡಿ" ಎಂದಳು ಮಂಗಳೆ ಸಿಡುಕಿನಿಂದ .... ಈಗ ಮೂರ್ತಿ ಹೆಂಡತಿಯ ಪಕ್ಕದಲ್ಲಿಯೇ ಹೋಗಿ ಕುಳಿತು ಅವಳ ತಲೆಯನ್ನು ನೇವರಿಸುತ್ತಾ ''ಮಂಗಳಾ : ಮಗುವಿಗೆ "ವಿಶ್ವನಾಥ'' ಎಂದು ಹೆಸರಿಟ್ಟಿದ್ದು ಚೆನ್ನಾಗಿಲ್ವೇ ? ಅಂದರು.

ಮಂಗಳೆ ಸುಮ್ಮನಿದ್ದಳು. ಅವಳ ಪಕ್ಕದಲ್ಲಿ ಮಲಗಿದ್ದ ಮಗು ನಿದ್ದೆಯಲ್ಲಿ ಪಕ್ಕನೆ ನಕ್ಕಿತು. ಅದರ ಹವಳದ ಬಣ್ಣದ ಬೋಡು ಬಾಯಿ ಟೊಮೇಟೋ ಹಣ್ಣಿನಂತಹ ಕೆನ್ನೆ ಮೂರ್ತಿಯನ್ನು ತುಂಬಾ ಆಕರ್ಷಿಸಿರಬೇಕು.

ಮಗುವಿನ ಕೆನ್ನೆಯನ್ನು ಸವರುತ್ತಾ;.... ನೋಡು ಮಂಗಳಾ; "ವಿಶ್ವನಾಥ" ಎಂದಿದ್ದೇ ತಡ ಹೇಗೆ ನಗುತ್ತಾನೆ ನಿನ್ನ ಮಗ! ನಿನಗೆ ಆ ಹೆಸರು ಇಷ್ಟ ಆಗಲಿಲ್ಲವೇ ? ಮಂಗಳಾ ; ಅಂದರು.

ನನಗೇನು ಸದ್ಯ ; ಎಂಥದೋ ಒಂದು ಸುಡುಗಾಡು ಹೆಸರು ಕರೆದರಾಯಿತು. ಎಂದಳು ಮಂಗಳೆ ಉದಾಸೀನದಿಂದ.

ಹೆಂಡತಿಯ ಈ ಮಾತಿನಿಂದ ಮೂರ್ತಿಗೆ ಸಿಟ್ಟೇ ಬಂದಿತು, "ಲೇ! ಮಂಗಳಾ .... ಬಿಡತು .... ಅನ್ನು ಎಂಥಾ ಕೆಟ್ಟ ಮಾತಾಡ್ತೀ ನೀನು? ಗಂಡು ಮಗು ಹೆತ್ತು ಬಿಟ್ಟೇ ಅಂತ ನಿನಗೆ ಜಂಭ ಜಾಸ್ತಿ ಆಗಿ ಹೋಯ್ತೇನೇ? ಅಂದರು ಕೋಪದಿಂದ.

ಗಂಡೂ... ಗಂಡೂ... ಗಂಡೂ ; ಈ ದರಿದ್ರ ಯಾರಿಗೆ ಬೇಕಾಗಿತ್ತು ನನ್ನ ರಾಜಿ, ಸುಮ್ಮಿ, ಸುಶೀ ಎಲ್ಲಾ ಏನು ನಿಮ್ಮ ಕಣ್ಣಿಗೆ ಚುಚ್ಚುತಿದ್ದಾರೆಯೇ? ಎಂದು ಕೇಳುವ ಹೊತ್ತಿಗೆ ಮಂಗಳೆಗೆ ದುಃಖ ಒತ್ತರಿಸಿ ಬಂದು ಬಿಟ್ಟಿತು. ಬಲವಂತವಾಗಿ ತಡೆ ಹಿಡಿದಿದ್ದ ಕಟ್ಟೆ ಹೊಡೆಯಿತು. ದುಃಖದ ಕೋಡಿ ಹರಿಯಿತು.

ಹೆಂಡತಿಯ ಈ ದುಃಖಕ್ಕೆ ಕಾರಣ ಏನೆಂದು ಮೂರ್ತಿಗೆ ತಿಳಿಯಲಿಲ್ಲ. ಅವರಿಗೆ ಗಾಬರಿಯಾಯಿತು, ಅವಳ ಹತ್ತಿರ ಸರಿದು ಕಣ್ಣೊರೆಸಿದರು. ಅವಳ ತಲೆ ನೇವರಿಸುತ್ತಾ "ಮಂಗಳಾ ; ನಾನೇನೆ ನಿನಗೆ ಈಗ ಅಂದಿದ್ದೂ? ತಪ್ಪಾಯಿತು ಕಣೇ ಪ್ರಾಣ್ಯಾತ್ತಿಗ್ತೀ! ಸದ್ಯ ಬಾಣಂತಿ ಅಳಬೇಡ, ಏನಾದರೂ ಆದೀತು ? ಹಾಗೆ ಸ್ವಲ್ಪ ಮಲಗಿ ಸುಧಾರಿಸಿಕೋ ; ನಾನು ಹೋಗ್ತೀನಿ" ಎಂದು ಹೇಳಿ ಕೊಠಡಿಯ ಬಾಗಿಲು ಮುಂದೆ ಮಾಡಿ ಹೋದರು.

ಗಂಡನ ಈ ರೀತಿಯ ಪ್ರೀತಿಯು ಮಂಗಳೆಯ ಮನಸ್ಸಿಗೆ ಸಮಾಧಾನವನ್ನೇನೂ ನೀಡಲಿಲ್ಲ. ಮತ್ತೂ ದುಃಖವನ್ನು ಹೆಚ್ಚಿಸಿತು.

ಆದರೆ ಹೆಣ್ಣು ಸಹನಾ ಮೂರ್ತಿ. ಕಡಲು ಬಡಬಾಗ್ನಿಯನ್ನು ಒಡಲಿನಲ್ಲಿ ಅಡಗಿಸಿಟ್ಟು ಪ್ರಶಾಂತವಾಗಿರುವಂತೆ ಹೆಣ್ಣು ತನ್ನ ಸಂಕಟವನ್ನು ತನ್ನಲ್ಲಿಯೇ ಅಡಗಿಸಿ ನೋವನ್ನು ನುಂಗಿಕೊಳ್ಳುವಳು.

ಮಂಗಳೆಗೆ ಈ ಸಲ ಬಾಣಂತನ ಅತಿ:ಯವಾಗಿ ನಡೆಯಿತು. ಹೆಣ್ಣು ಹಡೆದಾಗ ಒಂದು ತಿಂಗಳಿಗೆಲ್ಲಾ ಎದ್ದು ಓಡಾಡಿ, ತನ್ನ ಕೆಲಸವನ್ನು ತಾನೇ ಮಾಡಿಕೊಳ್ಳಬೇಕಾಗಿತ್ತು.

ಈ ಸಲ ಮೂರು ತಿಂಗಳಾದರೂ ಮನೆ ಪೂರ್ತಿ ಓಡಾಡಲು ಬಿಡುತ್ತಿರಲಿಲ್ಲ. ಅತ್ತೆಮ್ಮನವರೇ ಸ್ವತಃ ಆಸಕ್ತಿ ವಹಿಸಿ ಉಪಚರಿಸುತ್ತಿದ್ದರು.

ಇವರು ಉಪಚರಿಸಿದಷ್ಟೂ ಮಂಗಳೆಯು ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದ್ದಳು ಅವಳ ಮನಸ್ಸು ಭುಗಿಲ್....ಎಂದು ಉರಿಯುತ್ತಿತ್ತು.

ಅವರು "ಲೀ ; ಮಂಗಳಾ : ಮಗುಗೆ ನೆಗಡಿ ಆದೀತು, ಶೀತದಲ್ಲಿ ಓಡಾಡಬೇಡ" ಅನ್ನುತ್ತಿದ್ದರು. ಮಂಗಳೆ ಬೇಕೆಂದೇ ತಣ್ಣೀರನ್ನೇ ಕೈ ಕಾಲಿಗೆ ಸುರಿದುಕೊಂಡು ಮುಖವನ್ನೂ ತೊಳೆದುಕೊಳ್ಳುತ್ತಿದ್ದಳು.

ಒಂದು ದಿನ ಮಂಗಳೆಯ ಅತ್ತೆ ಊಟಕ್ಕೆ ಬಡಿಸುತ್ತಿದ್ದರು. "ಥಂಡೀ ಕಾಲ, ಇನ್ನೂ ಸ್ವಲ್ಪ ದಿನ ಹಾಲು ಅನ್ನ ಊಟ ಮಾಡು ಮಂಗಳಾ : ಗಂಡು ಮಗು....ನಿನ್ನ ಅಪಥ್ಯ ಎಲ್ಲಾ ತಡೆಯೋಲ್ಲ" ಅಂದರು.

ಸುಮ್ಮನೆ ಊಟ ಮಾಡುತ್ತಿದ್ದ ಮಂಗಳೆಗೆ ಅವರು "ಗಂಡು ಮಗು ತಡೆಯೋಲ್ಲ" ಅಂದದ್ದೇ ತಡ, ಎಲ್ಲಿಲ್ಲದ ಕೋಪ ನೆತ್ತಿಗೇರಿತು.

"ನನಗೆ ಖಂಡಿತ ಹಾಲು ಅನ್ನ ಬೇಡಿ ಅತ್ತೆ ; ನಾನು ತಿನ್ನೋಲ್ಲ. ನನಗೆ ಮಜ್ಜಿಗೇನೇ ಹಾಕಿ" ಅಂದಳು.

ಅವಳ ಅತ್ತೆಗೆ ಗಾಬರಿಯಾಯಿತು. ಅಯ್ಯೋ : ಮಂಗಳಾ ; ನಿನಗೇನಾಗಿದೆಯೇ ? ನೆಗಡಿ ಜ್ವರ ಬಂದರೆ ಗತಿಯೇನೆ ? ಅಂದರು.

"ಆ ದರಿದ್ರ ಪೀಡೆಗೆ ಯಾವ ರೋಗ ಬಂದ್ರೂ ಸಾಯೋಲ್ಲ ಸುಮ್ಮನಿರಿ ಅಂದಳು ಸಿಡಾರನೆ".

ಅಲ್ಲ ಕಣೇ : ಹೆತ್ತ ತಾಯಿಬಾಯಿಂದ ಈ ಮಾತೇನೇ ಬರೋದು ? ಯಾಕೋ ಬರ ಬರುತ್ತಾ ನಿನ್ನ ಬುದ್ಧಿಯೇ ಒಂದು ಥರಾ ಆಯಿತಮ್ಮ

ಎಂದು ಹಾಲಿನ ಲೋಟವನ್ನು ಮಂಗಳೆಯ ಪಕ್ಕದಲ್ಲಿಟ್ಟು ಅವರು ಹೊರಟು ಹೋದರು.

ಮಂಗಳೆ ಊಟ ಮಾಡಲಿಲ್ಲ ಅಷ್ಟಕ್ಕೇ ಬಿಟ್ಟು ಕೈ ತೊಳೆದು ಎದ್ದಳು.

ಹೀಗೆಯೇ ಎಷ್ಟೋ ಪ್ರಕರಣಗಳು ದಿನ ಬೆಳಗಾದರೆ, ಮೊಮ್ಮಗನ ಮೇಲೆ ಅವರ ಅಕ್ಕರೆ ಹೆಚ್ಚಿದಷ್ಟೂ ಮಂಗಳೆ ಮಗುವನ್ನು ಕಸಕ್ಕಿಂತ ಕಡೆಯಾಗಿ ಕಾಣುತ್ತಿದ್ದಳು.

ಕಡೆಗೆ ಹೊತ್ತಿಗೆ ಸರಿಯಾಗಿ ಅದಕ್ಕೆ ಹಾಲು ಕುಡಿಸುವುದೂ ಅವಳಿಗೆ ಬೇಕಾಗಿರಲಿಲ್ಲ. ಮಗು ಹಸಿವಿನಿಂದ ಅಳುತ್ತಿದ್ದರೆ ಕಣ್ಣು ಮರೆಸಿ ಏನೇನೋ ಕೆಲಸದಲ್ಲಿ ತೊಡಗುತ್ತಿದ್ದಳು.

ಒಂದು ದಿನ ಮಗುವಿಗೆ ಎರೆದು ಸಾಂಬ್ರಾಣಿ ಹೊಗೆಯಲ್ಲಿ ಮೈಕಾಸಿ ಷೆತ್ತನೆಯ ಹಾಸಿನ ತೊಟ್ಟಿಲಲ್ಲಿ ಮಲಗಿಸಿ ಅಡಿಗೆ ಕೆಲಸದಲ್ಲಿ ತೊಡಗಿದ್ದರು, ಮಂಗಳೆಯ ಅತ್ತೆ.

ಚಿಕ್ಕ ಮಕ್ಕಳಿಗೆ ಎರೆಯಲು ಮಂಗಳೆ ಬಚ್ಚಲು ಮನೆಯ ಕಡೆ ಇದ್ದಳು. ಮಲಗಿದ್ದ ಮಗು ಎದ್ದು ತೊಟ್ಟಿಲಲ್ಲಿ ಎಷ್ಟೋ ಹೊತ್ತಿನಿಂದ ಅಳುತ್ತಿತ್ತು. ಮೂರ್ತಿ ಮಹಡಿಯಿಂದ ಇಳಿದು ಬಂದು ಮಗು ಅಳುತ್ತಿರುವುದನ್ನು ನೋಡಿದರು.

ಅವರಿಗೆ ವಿಪರೀತ ಕೋಪ ಬಂದು ಬಿಟ್ಟಿತು. ಲೇ ಮಂಗಳಾ : ಏನು ಮಾಡುತ್ತಿದ್ದೀಯೇ ? ಎಂದು ಕೂಗು ಹಾಕಿದರು.

ಬಚ್ಚಲು ಮನೆಯಿಂದಲೇ "ಸುಶೀಗೆ ನೀರು ಹಾಕುತ್ತಿದ್ದೇನೆ" ಅಂದಳು.

ಮಗು ಆಗಿನಿಂದ ಒಂದೇ ಸಮ ಅಳುತ್ತಾ ಇರೋದು ನಿನ್ನ ಕಿವೀಗೇ ಬೀಳೋಲ್ವೇನೇ ?

ಅತ್ತರೆ ಏನೂ ಮುತ್ತು ಸುರಿದು ಹೋಗೋಲ್ಲ, ಅಳಲಿ ಬಿಡಿ, ಎಂದು ಸುಶೀಗೆ ಎರೆಯುತ್ತಲೇ ಇದ್ದಳು.

ಮಗು ಒಂದೇ ಉಸುರಿಗೆ ಕಾವ್....ಕಾವ್ ಎಂದು ಅಳುತ್ತಲೇ ಇತ್ತು ಮೂರ್ತಿ ಧಡ....ಧಡನೆ ಬಚ್ಚಲು ಮನೆಗೆ ಹೋಗಿ ಮಂಗಳೆಯ

ಮೇಲೆ ರೇಗಾಡಿದರು. "ಮೊದಲು ಬೇಗ ಹೋಗಿ ಮಗುವನ್ನು ಎತ್ತಿಕೋ" ಅಂದರು.

ಯಾಕೆ ? .... ನಿಮ್ಮ ಮಗ ಅಳೋದು ನಿಮಗೆ ಹೆಚ್ಚೇನು ? ಸುಶೀಗೆ ಅರ್ದಂ-ಬರ್ದ ಎರೆಯುತ್ತಿರುವುದು ನಿಮ್ಮ ಕಣ್ಣಿಗೇ ಬೀಳೋಲ್ಪೇನೋ ? ಎಂದು ಮಂಗಳೆಯೂ ಕೂಗಾಡಿದಳು.

ಮಗು ಉಸಿರು ಕಟ್ಟಿ ಅಳುತ್ತಿರುವುದನ್ನು ನೋಡಿ ಪಾರ್ವತಮ್ಮ ನವರು, ಅಡಿಗೆ ಮನೆಯಿಂದ ಬಂದು ಮಗುವನ್ನು ಕೈಗೆತ್ತಿಕೊಂಡು ಬಚ್ಚಲು ಮನೆಗೇ ಬಂದರು.

ಮಂಗಳಾ ನಿನ್ನ ದಮ್ಮಯ್ಯ : ಮಗುವಿಗೆ ಹಾಲು ಕುಡಿಸೇ ; ಎಷ್ಟು ಹೊತ್ತಿನಿಂದ ಅಳುತ್ತಿದೆ, ಅಂದರು.

ಅಮ್ಮಾ ; ಅವಳಿಗೆ ಈ ಮಗೂ ಮೇಲೆ ಅಕ್ಕರೆಯೇ ಇಲ್ಲಾಮ್ಮ, "ಗಂಡು ಮಗು" ಅದನ್ನು ಚೆನ್ನಾಗಿ ಬೆಳೆಸಬೇಕು ; ಅನ್ನೋ ಜ್ಞಾನವೇ ಬೇಡವೇ ? ಎಂದು ಕೂಗಾಡಿದರು ಮೂರ್ತಿ.

"ಹೆಣ್ಣು ಮಕ್ಕಳಾದರೆ ಮಾತ್ರ ತಿಪ್ಪೇಮೇಲೆ ಬಿಸಾಕಿ ಬೆಳೆಸೀ ; ಅಂತ ಹೇಳಿದೆಯೇನೋ" ? ಎಂದು ಹೇಳುತ್ತಾ ಸುಶೀ ತಲೆಗೆ ಟವಲ್ ಕಟ್ಟಿ ಮೈಯ್ಯೆಲ್ಲಾ ಚೆನ್ನಾಗಿ ಒರಸಿದಳು. ಸ್ಟ್ಯಾಂಡಿನ ಮೇಲಿದ್ದ ಫ್ರಾಕನ್ನು ತಂದು ಅವಳಿಗೆ ಹಾಕಿದಳು. ಇದೆಲ್ಲಾ ಮುಗಿಸಿಯೇ ಮಗುವನ್ನು ಎತ್ತಿ ಕೊಂಡಳು ಮಂಗಳೆ.

ಇವರುಗಳು "ಗಂಡು....ಗಂಡು, ಎಂದು ವಿಶ್ವನಾಥನನ್ನು ಓಲೈಸು ತ್ತಿದ್ದಷ್ಟೂ ಮಂಗಳ ಮಿಕ್ಕ ಹೆಣ್ಣು ಮಕ್ಕಳ ಅಕ್ಕರೆಯನ್ನು ಹೆಚ್ಚಿಸು ತ್ತಿದ್ದಳು.

ಮಗು ಆರೋಗ್ಯ ದೃಢಕಾಯವಾಗಿ ಚೆನ್ನಾಗಿ ಬೆಳೆಯುತ್ತಿತ್ತು. ಆರು ತಿಂಗಳು ಆಸ್ನುವ ವೇಳೆಗೆ ವರ್ಷದ ಮಗುವಿನಂತಿತ್ತು. ಅಂಬೆಗಾಲಿಟ್ಟು ಮನೆಯೆಲ್ಲಾ ಓಡಾಡುತ್ತಿತ್ತು.

ಸಾಂಬಮೂರ್ತಿ ಕೈತುಂಬಾ ಸಂಪಾದಿಸುತ್ತಿದ್ದರು. ಲಕ್ಕವಳ್ಳಿಯಲ್ಲಿ ಚೀಫ್ ಇಂಜಿನೀಯರ್ ಆಗಿದ್ದರು, ವಾಸಕ್ಕೆ ಒಳ್ಳೆ ಬಂಗಲೆ, ಕಾರು ಎಲ್ಲಾ ಸರ್ಕಾರದವರೇ ಕೊಟ್ಟಿದ್ದರು.

ಈಗ ಮಗ ಹುಟ್ಟಿದ ಮೇಲಂತೂ ಅವರಿಗೆ ಯಾವ ಕೊರತೆಯೂ ಇರಲಿಲ್ಲ. ಮಗುವಿಗೆ ದಿನಕ್ಕೊಂದು ಬಗೆಯ ಬಟ್ಟೆ ಹೊಲಿಸಿ ತರುತ್ತಿದ್ದರು.

ಆಫೀಸಿನಿಂದ ಮನೆಗೆ ಬಂದ ಕೂಡಲೇ ಮಗುವನ್ನು ಎತ್ತಿಕೊಂಡು ಮುದ್ದಿಸುತ್ತಿದ್ದರು. ಅವರ ಸ್ನೇಹಿತರು ಯಾರೇ ಬರಲಿ "ಮೂರ್ತಿ; ನಿನ್ನ ಮಗ ತುಂಬಾ ಮುದ್ದಾಗಿದ್ದಾನೆ ಕಣೋ; ನೀನು ಎಲ್ಲದರಲ್ಲಿಯೂ ಅದೃಷ್ಟ ಶಾಲಿ" ಅನ್ನುತ್ತಿದ್ದರು.

ಮೂರ್ತಿಗೆ ಎಲ್ಲಿಲ್ಲದ ಹಿಗ್ಗು. ಮಂಗಳೆ ಯಾವ ಹೊಗಳಿಕೆಗೂ ಹಿಗ್ಗದೆ ನಿರ್ಲಿಪ್ತ ಸಂನ್ಯಾಸಿಯಂತಿದ್ದಳು.

ಮಳೆಗಾಲ ಒಂದು; ದಿನ ಜೋರಾಗಿ ಮಳೆ ಬೀಳುತ್ತಿತ್ತು. ಬಹಳ ಥಂಡಿ ಮಗುವಿಗೆ ಸ್ವೆಟರು, ಕುಲಾವಿ ಎಲ್ಲಾ ಹಾಕಿ ಬೆಚ್ಚಗೆ ತೊಟ್ಟಿಲಲ್ಲಿ ಮಲಗಿಸಿದ್ದಳು ಮಂಗಳೆ.

ಮಗುವಿಗೆ ಹೊದ್ದಿಸಲೆಂದೇ ನಲವತ್ತು ರೂಪಾಯಿ ಕೊಟ್ಟು ಒಂದು ಶಾಲು ತಂದಿದ್ದರು ಮೂರ್ತಿ. ಅದನ್ನು ಹೊದಿಸಿದ್ದಳು.

ಹೊರಗೆ ಯಾರೋ ಭಿಕ್ಷುಕಳು ಅಮ್ಮಾ; "ತಾಯೀ" ಏನಾರ.... ಕವಳಾ..... ನೀಡೀ.... ತಾಯಿ .... ಮೊಗಾ ಮಳೇಲಿ ನೆನೀತಾ ಐತೇ ಎಂದು ಕೂಗಿದಳು.

ಮಂಗಳೆ ಮಗುವನ್ನು ತೂಗುತ್ತಿದ್ದವಳು ಬಿಟ್ಟು ಕಿಟಕಿಯಿಂದ ಹೊರಗೆ ನೋಡಿದಳು. ಹೌದು .... ಆ ಭಿಕ್ಷುಕಿ ಕಂಕುಳಲ್ಲಿ ಮಗುವನ್ನೆತ್ತಿಕೊಂಡು ನಿಂತಿದ್ದಳು ಅವಳು ಉಟ್ಟಿದ್ದ ಚಿಂದೀ ಸೀರೆ ಮಳೆಯಿಂದ ಪೂರಾ ನೆನೆದಿತ್ತು. ಮಗುವಿನ ಬಟ್ಟೆಯೂ ನೆನೆದು ಅದು ಛಳಿಯಿಂದ ಗಡ - ಗಡನೆ ನಡುಗುತ್ತಿತ್ತು.

ತಾಯಿಯು ಅದನ್ನು ಎದೆಗವಚಿಕೊಂಡು ತನ್ನ ಶರೀರದ ಬಿಸಿ ಶಾಖದಿಂದ ಮಗುವನ್ನು ಬೆಚ್ಚಗಿಡಲು ಪ್ರಯತ್ನಿಸುತ್ತಿದ್ದಳು.

ಈ ದೃಶ್ಯವನ್ನು ನೋಡಿ ಮಂಗಳೆಯ ಕರುಳಿನ ಯಾವುದೋ ಮೂಲೆಯಲ್ಲಿ ಅಡಗಿದ್ದ ಸಂಕಟವು ಮೇಲೆ ಪುಟಿದೆದ್ದಿತು. ಅವಳ ಹೃದಯವನ್ನೇ ಹಿಂಡಿತು.

ಅವಳು ಚಡಪಡಿಸಿದಳು. "ರಾಜಿ" "ಬೇಗ ಒಳಗೆ ಹೋಗಿ ಒಂದಿಷ್ಟು ಅನ್ನ ತೆಗೆದುಕೊಂಡು ಬಾರೇ" ಎಂದು ಮಗಳನ್ನು ಕೂಗಿದಳು.

ಅವಳು ಅನ್ನ ತರುವ ವೇಳೆಗೆ ತನ್ನ ಮಗುವಿನ ಒಂದೆರಡು ಅಂಗಿಗಳನ್ನೂ ಬೆಚ್ಚಗೆ ಹೊದಿಸಿದ್ದ ಆ ಹೊಸ ಶಾಲುವನ್ನೂ ತೆಗೆದುಕೊಂಡು ಹೋಗಿ ಆ ಭಿಕ್ಷುಕಿಗೆ ಕೊಟ್ಟಳು.

ಆ ಭಿಕ್ಷದವಳು ಎರಡುಕೈಗಳನ್ನೂ ಜೋಡಿಸಿ ''ಮಹಾತಾಯಿ ಪುಣ್ಯವಂತೆ" ಎಂದು ಏನೇನೋ ಹೇಳ ತೊಡಗಿದಳು.

"ಸಾಕು, ನಿಲ್ಲಿಸು" ಮೊದಲು ಮಗುವಿಗೆ ಒದ್ದೆಬಟ್ಟೆ ಬಿಚ್ಚಿ ಬೆಚ್ಚಗೆ ಹೊದಿಸು ....ನಡೀ ...ನನ್ನ ಮುಂದೆ ಒಂದು ನಿಮಿಷವೂ ನಿಲ್ಲಬೇಡ, ಹೂಂ.... ಹೊರಡು" ಎಂದು ಒಂದೇ ಉಸಿರಿಗೆ ಚೀರಿದಳು ಮಂಗಳೆ.

ಆ ಭಿಕ್ಷುಕಿ ಬೇಗ ಬೇಗ ಹೊರಟು ಹೋದಳು. ಎಲ್ಲವನ್ನೂ ನೋಡುತ್ತಾ ಅಲ್ಲೇ ನಿಂತಿದ್ದ ರಾಜಿ ಗಾಬರಿಯಿಂದ "ಅಮ್ಮಾ! ....ಇದೇನಮ್ಮಾ! ಅಪ್ಪ ಮೊನ್ನೆ ತಾನೆ ತಂದ ಹೊಸ ಶಾಲುವನ್ನೇ ಕೊಟ್ಟು ಬಿಟ್ಟೆಯಲ್ಲಮ್ಮಾ" ಅಂದಳು.

"ಹೋಗಲೀಳು; ಅದು ಮಾತ್ರ ಮಗುವಲ್ಲವೇನು? ಎಂದು ಗದರಿದಳು ಮಂಗಳೆ.

ಅದೇ ಸಮಯಕ್ಕೆ ಒಳಗಿನಿಂದ ಬಂದ ಮಂಗಳೆಯ ಅತ್ತೆ ಏನೇ ರಾಜೀ- ಅದು? ಅಂದರು ಕಾತುರದಿಂದ.

ರಾಜೀ ಸುಮ್ಮನಿದ್ದಳು. ಅವಳಿಗೆ ಗೊತ್ತು ಮುಂದೆ ಏನು ರಾಮಾಯಣ ಆಗುತ್ತೆ? ಅಂತ.

"ಏನೇ ರಾಜೀ; .... ಯಾವೋಳಾದರೂ ಭಿಕ್ಷದವಳು ಬಂದಿದ್ದಳೇನು? ಏನುಕೊಟ್ಟು ಬಿಟ್ಟಳೇ? ನಿಮ್ಮಮ್ಮ? ಎಂದು ಜೋರಾಗಿ ಕಿರಿಚಿದರು.

ಹೂಂ....ಅಜ್ಜೀ "ಹೊಸ ಶಾಲುವನ್ನು ಭಿಕ್ಷದವಳ ಮಗುವಿಗೆ ಕೊಟ್ಟು ಬಿಟ್ಟಳು; ಅಮ್ಮ....ಹೇಳಲೋ, ಬೇಡವೋ, ಎಂದು ಹೆದರಿ ಹೇಳಿದಳು ರಾಜೀ

ಇವಳಿಗೆ ಯಾವ ಗ್ರಹ ಬಡಿದಿದೆಯೋ ಕಾಣೆನಲ್ಲೇ ;ಯಾವುದಾದರೂ ಭಿಕ್ಷುಕರ ಮಕ್ಕಳು ಕಾಣೋದಕ್ಕಿಲ್ಲ; ಮನೆಯಲ್ಲಿರೋದನ್ನೆಲ್ಲಾ ದೋಚಿ ಕೊಟ್ಟುಬಿಡುತ್ತಾಳೆ ಇವಳಿಂದ ಉಳಿ ಬಾಳಿಲ್ಲ....ಅಯ್ಯೋ:....ನನ್ನ ಕರ್ಮವೇ? ಎಂದು ತಲೆ-ತಲೆ ಬಡಿದು ಕೊಂಡರು ಪಾರ್ವತಮ್ಮ .

ಯಾಕತ್ತೇ: ಹಾಗೆ ಚಚ್ಚಿ ಕೊಳ್ಳುತ್ತೀರಾ! ನಿಮ್ಮ ಮೊಮ್ಮಗ ಮಾತ್ರ ಬೆಚ್ಚಗೆ ಇರಬೇಕು; ಆ ಬಡಪಾಯಿ ಮಗು ಮಾತ್ರ ಮಳೆಯಲ್ಲಿ ನೆನೆದು

ಚಳಿಯಲ್ಲಿ ಸಾಯಬೇಕೇ ? ಎಂದು ಮಂಗಳೆಯೂ ಜೋರಾಗಿ ಕಿರಿಚಿದಳು.

ಮಂಗಳೆ ಈ ನಡುವೆ ಹೀಗೆಯೇ ಮನೆಯವರಿಗೆ ಬಹಳ ಬೇಸರವಾಗುವ ರೀತಿಯಲ್ಲಿ ವರ್ತಿಸುತ್ತಿದ್ದಳು.

ಅವಳು ತಾನೇ ಏನು ಮಾಡುತ್ತಾಳೆ? ಹೇಗೋ ಸ್ವಲ್ಪ ಸಮಾಧಾನ ಸ್ಥಿತಿಗೆ ಬರಲು ಪ್ರಯತ್ನಿಸುತ್ತಿದ್ದಳು. ಆದರೆ....ಈ ರೀತಿ ಬಡ ಮಕ್ಕಳು ಕಣ್ಣಿಗೆ ಬಿದ್ದರೆ ಸಾಕು ಅವಳ ಕರುಳು ಕಿವುಚುತ್ತಿತ್ತು. ಅವಳು ತಡೆ ಹಿಡಿದಿದ್ದ ದುಃಖ ಒತ್ತರಿಸಿ ಬರುತ್ತಿತ್ತು.

ಈ ರಾದ್ಧಾಂತ ಆಗುತ್ತಿರುವಾಗಲೇ ಹೊರಗಿನಿಂದ ಮೂರ್ತಿ ಬಂದರು. ಏನೇ ಅವೂ ? ಮನೆಗೆ ಬಂದ ಕೂಡಲೇ ನಿನ್ನ ರಾಮಾಯಣ ? ಅಂದರು. ಭೇಸರದಿಂದ.

ಮಂಗಳೆ ಏನೊಂದೂ ಮಾತನಾಡದೆ ಒಳಕ್ಕೆ ಹೊರಟುಹೋದಳು. ನಡೆದದ್ದನ್ನೆಲ್ಲಾ ವಿವರಿಸಿ ಮಗನಿಗೆ ದೂರು ಹೇಳಿದರು ಪಾರ್ವತಮ್ಮ.

ಅಲ್ಲಾ : ಕಣಪ್ಪಾ : ಮೂರ್ತಿ ; ಹೀಗೆ ಮನೆಯಲ್ಲಿರುವುದನೆಲ್ಲಾ ತಿರಿಕೆಯವರಿಗೆ ದೋಚಿಕೊಡುತ್ತಿದ್ದರೆ ಯಾವ ಸಂಸಾರ ತಾನೇ ಉದ್ಧಾರ ವಾದೀತು ? ಹೇಳು .... ಇವಳನ್ನು ಕಟ್ಟಿಕೊಂಡು ಹೇಗಪ್ಪಾ ಸಂಸಾರ ಮಾಡೋದು ? ಎಂದು ಪೇಚಾಡಿಕೊಂಡರು.

ತಾಯಿ ಹೇಳುವ ಮಾತಿನಲ್ಲಿ ತಪ್ಪೇನೂ ಇಲ್ಲವೆಂದು ಮೂರ್ತಿಗೆ ಗೊತ್ತು. ಆದರೂ ಮಂಗಳೆಯ ಮನಸ್ಸಿಗೆ ವಿರುದ್ಧ ಏನೂ ಮಾಡುವಂತಿರ ಲಿಲ್ಲ.

ತಾಯಿಯನ್ನೇ ಸಮಾಧಾನ ಪಡಿಸುತ್ತಾ, ಅಮ್ಮಾ; ಶಾಲು ತಾನೆ ಹೋಯಿತು ?....ಹೋದರೆ ಹೋಗಲಿ ಬಿಡು ಅವಳ ಬುದ್ಧಿ ಸ್ವಲ್ಪ ಸ್ಥಿಮಿತಕ್ಕೆ ಬರುವವರೆಗೂ ಅವಳನ್ನು ನೀನು ಏನೂ ಅನ್ನಬೇಡಮ್ಮ ಸದ್ಯ ಬೇಕಾದ್ದು ಮಾಡಿಕೊಳ್ಳಲಿ "ಸುಮ್ಮನಿರು" ಅಂದರು ಮೂರ್ತಿ.

ಅಲ್ಲಾ ; ಕಣೋ ಮೊನ್ನೇ ಅಂದ್ರೆ ಯಾವಳೋ ತಿರಿಕೆಯವಳು ಜೋಳಿಗೆಯಲ್ಲಿ ಮಗುವನ್ನಿತ್ತಿಕೊಂಡು ಬಂದಿದ್ದಳು. ಅದು ಇವಳ ಕಣ್ಣಿಗೆ ಬಿದ್ದದ್ದೇ ತಡ ; ಅಟ್ಟದ ಮೇಲಿದ್ದ ಬಿದಿರು ತೊಟ್ಟಿಲನ್ನೇ ಆವಳಿಗೆ ಕೊಟ್ಟು ಬಿಟ್ಟಳು. ನಾನು ಎಷ್ಟು ಬೇಡಾ ಅಂದ್ರೂ ಕೇಳಲಿಲ್ಲಿ. ಆ ತೊಟ್ಟಿಲು

ನೀನು ಎಳೆ ಮಗುವಾಗಿದ್ದಾಗಿನಿಂದಲೂ ತೂಗಿದ ತೊಟ್ಟಿಲು ಯಾವ ಮಕ್ಕಳಿಗಾದರೂ ಮೊದಲು ಅದರಲ್ಲೇ ತೊಟ್ಟಿಲಿಡುತ್ತಾ ಇದ್ದದ್ದು. ಇದು ವರೆಗೂ ಎಷ್ಟು ಜೋಪಾನವಾಗಿ ಇಟ್ಟಿದ್ದೆನಲ್ಲೋ : ಏನೋಪ್ಪ ಇವಳ ಕೈಲಿ ಹೇಗೆ ಯೇಗಲಿ ಹೇಳು ಎಂದು ತಮ್ಮ ಮನಸ್ಸಿನ ದುಗುಡವನ್ನು ತೋಡಿ ಕೊಂಡರು ಪಾರ್ವತಮ್ಮ.

ಏನು ಹೋದರೂ ಹೋಗಲಿ ಬಿಡಮ್ಮ : ಸದ್ಯ ಅವಳ ಮನಸ್ಸಿಗೆ ವ್ಯಥೆಯಾಗದಂತೆ ನಾವು ನೋಡಿಕೊಳ್ಳಬೇಕು. ಡಾಕ್ಟರು ಸಾರಿ - ಸಾರಿ ಹೇಳಿದ್ದಾರೆ. "ಅವರ ಮನಸ್ಸಿಗೆ ಸ್ವಲ್ಪವೂ ಗಾಬರಿ ನೋವು ಮಾಡಬೇಡಿ. ಬ್ರೈನೇ ಕೆಟ್ಟುಹೋಗುತ್ತೆ ಹುಷಾರು". ಅಂದಿದಾರೆ ಅಮ್ಮಾ! ಎಂದು ತಾಯಿ - ಮಗ ಇನ್ನೂ ಏನೇನೋ ಮಾತನಾಡಿಕೊಂಡರು.

ಇದನೆಲ್ಲಾ ಕೇಳಿಸಿಕೊಂಡ ಮಂಗಳೆ ಮನಸ್ಸಿನಲ್ಲಿಯೇ "ಹುಂ.... ಆ ಡಾಕ್ಟರಿಗೆ ಬಲಿಗೊತ್ತು ಅವನ ಮೂಡ ; ನನ್ನ ಎದೆಯಾಳದಲ್ಲಿ ಎಂಥ ಬಡಬಾಗ್ನಿಯನ್ನು ಅಡಗಿಸಿಟ್ಟು ಅದರಿಂದ ಒಳಗೇ ಬೆಂದು ಭಸ್ಮವಾಗ ತ್ತಿದ್ದೇನೆ ಎಂಬುದನ್ನು ಯಾವ ಡಾಕ್ಟರುತಾನೇ ಹೇಳಬಲ್ಲ ?

ಈ ದಾವಾನಲವನ್ನು ಆರಿಸುವ ಶೀತೋದಕವೇ ದೊರೆಯಲಾರದೇ ? ಇಲ್ಲಾ; ಈ ಕಿಚ್ಚಿನಿಂದಲೇ ನಾನು ಸುಟ್ಟು ಬೂದಿಯಾಗಬೇಕೇ ? ಬಾಯಿ ಬಿಡಲಾರದ ನನ್ನ ಈ ಸಂಕಟವನ್ನು ಒಳಗೆ ಅದುಮಿಟ್ಟು ಉಸಿರು ಕಟ್ಟಿ ಎದೆಯೊಡೆದು ಹೋಗುವುದೇನೋ ಅನ್ನಿಸುತ್ತೆ. ಕೈ ಮೀರಿ ಹೋದ ಕೆಲಸಕ್ಕೆ ಪಶ್ಚಾತ್ತಾಪ ಪಟ್ಟು ಫಲವೇನು ಎಂದು ನಿಟ್ಟುಸಿರುಬಿಟ್ಟಳು.

ಹಾಗೆ ಅತೀ ದುಃಖವಾದಾಗಲೆಲ್ಲಾ ದಿನವೆಲ್ಲಾ ಅತ್ತು ಅತ್ತು ತನ್ನ ಎದೆಯ ಭಾರವನ್ನು ಹಗುರ ಮಾಡಿಕೊಳ್ಳುತ್ತಿದ್ದಳು.

ಮಂಗಳೆಯ ಈ ವಿಚಿತ್ರ ವರ್ತನೆಯಿಂದಾಗಿ ಮೂರ್ತಿಗೆ ಗಾಬರಿ ಯಾಗಿತ್ತು. ಅವಳನ್ನು ಸಂತೋಷವಾಗಿಡಲು ಸತತ ಪ್ರಯತ್ನಿಸು ತ್ತಿದ್ದರು.

ನವರಾತ್ರಿ ಹಬ್ಬ ಪ್ರಾರಂಭವಾಯಿತು. ಹೆಣ್ಣು ಮಕ್ಕಳಿರುವ ಮನೆ ಯಲ್ಲಿ ಬೊಂಬೆಗಳಿಗೆ ಅಂದವಾಗಿ ಅಲಂಕರಿಸಿ ಪಟ್ಟದ ಗೊಂಬೆಗಳನ್ನು ಮೇಲಿನ ಅಂತಸ್ತಿನಲ್ಲಿ ಕೂರಿಸಿ ವಿಧ - ವಿಧವಾದ ಬಣ್ಣದ ಗೊಂಬೆಗಳನ್ನು

ಅಂದವಾಗಿ ಮೆಟ್ಟಿಲುಗಳಲ್ಲಿ ಜೋಡಿಸಿಟ್ಟು ಹೆಣ್ಣು ಮಕ್ಕಳು ನಕ್ಕು ನಲಿಯುವ ಹಬ್ಬ ನವರಾತ್ರಿ.

ಈ ಸಲ ಮೂರ್ತಿಯೇ ಮುತುವರ್ಜಿ ವಹಿಸಿ ಬೊಂಬೆ ಇಡಲು ಹೆಣ್ಣು ಮಕ್ಕಳಿಗೆ ಹಿನ್ನೆಲೆಯಾಗಿ ನಿಂತರು.

ರಾಜಿ, ಸುಮೀ ಅವರಿಗೆ ಬಲು ಖುಷಿ, ಸುಶೀಲ ಇನ್ನೂ ಮೂರು ವರ್ಷದ ಮಗು.

ಮೂರ್ತಿಯು ಬೆಂಗಳೂರಿನಿಂದ ತಂದಿದ್ದ ಬೊಂಬೆ ಪೆಟ್ಟಿಗೆಯನ್ನು ತೆರೆದರು. ಅದರ ತುಂಬಾ ವಿಧ - ವಿಧ ಪ್ಲಾಸ್ಟಿಕ್ ಬೊಂಬೆಗಳು.

ರಾಜಿ, ಓಡಿ ಬಂದು ಬ್ಯಾಂಡ್ ಸೆಟ್ಟಿನ ಬೊಂಬೆಗಳನ್ನು ಕೈಗೆತ್ತಿ ಕೊಂಡು ಅಪ್ಪಾ ಈ ಬೊಂಬೆಗಳು ನಿಜವಾಗಿಯೂ ಬ್ಯಾಂಡ್ ಬಾರಿಸುತ್ತೇನಪ್ಪಾ ? ಎಂದು ಕೇಳಿದಳು.

ಓಹೋ ಈ ಟೇಬಲ್ ಮೇಲೆ ಇಡು ತೋರಿಸ್ತೇನಿ ಅಂದರು.

ರಾಜಿ ಟೇಬಲ್ ಮೇಲೆ ಸೆಟ್ ಪೂರ್ತಿ ಇಟ್ಟಳು.

ಮೂರ್ತಿ ಅವುಗಳಿಗೆ ಕೀ ಕೊಟ್ಟರು. ಒಂದು ಬೊಂಬೆ ಪಿಯಾನೋ ಬಾರಿಸಿತು. ಒಂದು ಬ್ಯಾಂಡ್ ಬಡಿಯಿತು. ಒಂದು ತುತ್ತೂರಿ ಊದು ವಂತೆ ಮಾಡಿತು.

ಇದನ್ನು ನೋಡಿ ರಾಜಿ, ಸುಮೀ, ಸುಶೀ ಕುಣಿದಾಡಿದರು. ಸುಮಿ ಒಂದು ಲಾಗ ಹಾಕುವ ಕೋತಿಯನ್ನು ಕೈಗೆ ತೆಗೆದುಕೊಂಡಳು.

ಮೂರ್ತಿ ಅದರ ಸ್ಪ್ರಿಂಗ್ ತಿರುಗಿಸಿ ಅದು ಲಾಗ ಹಾಕುವುದನ್ನು ತೋರಿಸಿದರು.

ಸುಶೀ ಒಂದು ದೊಡ್ಡ ಕರ್ಪೂರದ ಗೊಂಬೆಯನ್ನು ಕೈಗೆತ್ತಿಕೊಂಡು ಅಮ್ಮಾ: ನೋಡಮ್ಮಾ: ಪಾಪಚ್ಚಿ. ಎಂದು ಮಂಗಳೆಯ ಬಳಿಗೆ ಓಡಿ ಹೋಯಿತು.

ವಿಶೂವನ್ನು ಎತ್ತಿಕೊಂಡಿದ್ದ ಮಂಗಳೆಯೂ ಬಂದು ಮಕ್ಕಳ ಕೈಲಿದ್ದ ಗೊಂಬೆಗಳನ್ನು ನೋಡಿ ; ಇದೇನೊಂದ್ರೆ ! .... ಇಷ್ಟೊಂದು ಬೊಂಬೆ ? .... ಪೆಟ್ಟಿಗೆ ತುಂಬಾ ಇವೆಯಲ್ಲಾ ! ಯಾವಾಗ ತಂದ್ರೀ ? ಅಂದಳು ಆಶ್ಚರ್ಯ ದಿಂದ.

ಮೊನ್ನೆ ಬೆಂಗಳೂರಿಗೆ ಹೋಗಿದ್ದಾಗ ತಂದೆ. ಇಲ್ನೋಡು ಇದೊಂದು ತಮಾಷಿ, .... ಎಂದು ಅಜ್ಜ - ಅಜ್ಜಿ ಬೊಂಬೆಗಳು ಎದುರು - ಬದುರು ಕೂಡಿರುವ ಜೋಡಿಯನ್ನು ತೋರಿಸಿದರು.

ಅಬ್ಬ್ಯಾ ! : ಎಷ್ಟು ಚೆನ್ನಾಗಿದೆ ಈ ಜೋಡಿ : ಅಂದಳು ಉತ್ಸಾಹದಿಂದ ಮಂಗಳೆ.

ಇನ್ನೂ ತಮಾಷಿ ನೋಡುವಿಯಂತೆ ಇರು. ಮೂರ್ತಿ ಅದಕ್ಕೆ ಕೀ ಕೊಟ್ಟರು.

ಎರಡೂ ಮುಂದಕ್ಕೆ ಬಗ್ಗಿ ಅಜ್ಜ - ಅಜ್ಜಿ ಒಂದರ ತಲೆಗೊಂದು ಡಿಕ್ಕಿ ಕೊಡುತ್ತಲೇ ಇದ್ದುವು.

ಇದನ್ನು ನೋಡಿ ಮಂಗಳೆಗೆ ತುಂಬಾ ನಗು ಬಂದು ಬಿಟ್ಟಿತು. ಒಳ್ಳೆ ತಮಾಷೆ ಬೊಂಬೆ ತಂದಿದ್ದೀರೀಂದ್ರೇ ಅಂದಳು ಮೂರ್ತಿಯ ಮುಖವನ್ನು ನೋಡುತ್ತಾ.

ಮಕ್ಕಳೆಲ್ಲಾ ಒಂದೊಂದನ್ನು ಕೈಯ್ಯಲ್ಲಿ ಹಿಡಿದು ಆಟವಾಡುತ್ತಿದ್ದುವು. ಎಳೆಯ ಮಗು ವಿಶು ಮಂಗಳೆಯ ಕೈಯಿಂದ ಕೆಳಕ್ಕೆ ಧುಮುಕಿ ಆ ಬೊಂಬೆಗಳನ್ನು ಹಿಡಿಯಲು ಆಸೆ ಪಡುತ್ತಿತ್ತು.

ಅಲ್ಲಾಂದ್ರೆ ; ಎಲ್ಲಾ ಮಕ್ಕಳಿಗೂ ಒಂದೊಂದು ತರಹ ಬೊಂಬೆ ತಂದಿದ್ದೀರಿ, ಎಳೆಯ ಮಗುವಿಗೆ ಏನೂ ಬೇಡವೇ ? ಅಂದಳು.

ಸದ್ಯ ಮಂಗಳೆ ಇಷ್ಟು ಸಮಾಧಾನವಾಗಿ ಮಾತಾಡಿದ್ದನ್ನು ನೋಡಿ ಮೂರ್ತಿಗೆ ಆಶ್ಚರ್ಯವಾಯಿತು. "ಅವನಿಗೂ ಒಂದು ಕೊಟ್ಟರಾಯಿತು ಬಿಡೇ ;" ಎಂದು ರೆಡ್ ಕಲರ್ ಪ್ಲಾಸ್ಟಿಕ್ ಬಾಲ್ ಒಂದನ್ನು ವಿಶೂ ಕೈಗೆ ಕೊಟ್ಟರು.

ಅವನು ಬಾಲನ್ನು ಕೈಯ್ಯಲ್ಲಿ ಹಿಡಿದು ಕೇಕೆ ಹಾಕಿ ನಕ್ಕ. ಮಂಗಳೆಯ ಕೈಯ್ಯಿಂದ ಮೂರ್ತಿ ಮಗುವನ್ನು ಎತ್ತಿಕೊಂಡು ಮುದ್ದಾಡಿದರು. ಸುಶೀ ತನ್ನ ಬೊಂಬೆಯನ್ನು ತೋರಿಸಿ ಅಪ್ಪಾ ; ಇದೂ ಚೆನ್ನಾಗಿಲ್ಲ ಅಪ್ಪಾ ; ನನ್ನ ಪಾಪಾನೇ ಚೆನ್ನ. ಎಂದಳು ಮುದ್ದು ಮುದ್ದಾಗಿ. ಮಂಗಳೆಯೂ ಮೂರ್ತಿಯೂ ಗಟ್ಟಿಯಾಗಿ ನಕ್ಕರು.

ಅಡಿಗೆ ಮನೆ ಒಳಗೆ ಏನೋ ಕೆಲಸ ಮಾಡುತ್ತಿದ್ದ ಪಾರ್ವತಮ್ಮ

ಇವರ ನಗುವನ್ನು ಕೇಳಿ ಏನೋ ಎಂದು ಹೊರಕ್ಕೆ ಬಂದರು. ಎಲ್ಲಾ ಮಕ್ಕಳೂ ಕೈಯ್ಯಲ್ಲಿ ವಿಧ-ವಿಧ ಬೊಂಬೆ ಹಿಡಿದುಕೊಂಡು ಕುಣಿದಾಡ್ತಿದ್ದವು.

ನೋಡಿ ಪಾರ್ವತಮ್ಮನಿಗೂ ಸಂತೋಷವಾಯಿತು. ಏನೋ ಮೂರ್ತಿ ; ಇಷ್ಟೊಂದು ಹೊಸ ಬೊಂಬೆಗಳನ್ನು ತಂದು ಬಿಟ್ಟದ್ದೀ ; ನಮ್ಮ ಕಾಲದಲ್ಲಿ ಇವೆಲ್ಲಾ ಇರಲೇ ಇಲ್ಲಪ್ಪ. ಮರದ ಬೊಂಬೆಗೆ ಅಲಂಕಾರ ಮಾಡಿ ಪಟ್ಟಕ್ಕೆ ಕೂರಿಸೋದು, ಸರಿ, ಹಿತ್ತಾಳೆ, ಕಂಚು, ಕವಡೆ' ಇವುಗಳ ವಿಗ್ರಹ, ಸಾಮಾನುಗಳನ್ನು ಸ್ವಲ್ಪ ಜೋಡಿಸಿ ಇಡುತ್ತಿದ್ದೇವಪ್ಪ ; ಈಗ ನೋಡು ಈ ಪ್ಲಾಸ್ಟಿಕ್‌ನಲ್ಲಿ ಬರದೇ ಇರೋ ಸಾಮಾನೇ ಇಲ್ಲ. ಅದು ಸರಿ ನಾಳೆನೇ ಪಾಡ್ಯ. ಮಂಗಳಾ ; ದೇವಕಿ ಬಂದ ಮೇಲೆ ಇಬ್ಬರೂ ಸೇರಿ ಅಚ್ಚುಕಟ್ಟಾಗಿ ಒಂಭತ್ತು ಮೆಟ್ಟಲು ಜೋಡಿಸಿ, ಬೊಂಬೆ ಕೂರಿಸಿಬಿಡೀಮ್ಮ. ಇವತ್ತು ಅಮಾವಾಸ್ಯೆ. "ಪಟ್ಟದ ಬೊಂಬೆ ಕೂರಿಸಬಾರದು. ಅದನ್ನ ಮಾತ್ರ ನಾಳೆ ಕೂರಿಸುವಿರಂತೆ" ಎಂದರು.

ಹೂಂ ಅತ್ತೇ.... ಕೂರ್ಸೋದೇನೋ ಸರಿ. ಆದರೆ ಈ ತುಂಟ ಕೈಗೆ ಎಟುಕೋದನ್ನೆಲ್ಲಾ ಎತ್ತಿಕೊಂಡು ಆಚೆ ಬಿಸಾಕ್ತಾನಲ್ಲಾ ಹೇಳಿ ; ಅಂದಳು ವಿಜು ಕೆನ್ನೆಯನ್ನು ಮೆಲ್ಲನೆ ಚಿವುಟಿ.

ಯಾವ ದುಗುಡವೂ ಇಲ್ಲದೆ ಆ ದಿನ ಎಲ್ಲರೂ ಆನಂದವಾಗಿದ್ದುದನ್ನು ನೋಡಿ ಮೂರ್ತಿಗೆ ಎಷ್ಟೋ ನೆಮ್ಮದಿ.

ಹೀಗೆ ಯಾವುದೋ ರೀತಿಯಲ್ಲಿ ಮಂಗಳೆ ಸಂತೋಷವಾಗಿದ್ದರೆ ಸಾಕೆಂದು ಮೂರ್ತಿ ಆ ಹೆಣ್ಣು ಮಕ್ಕಳನ್ನೂ ಹೆಚ್ಚಾಗಿ ಪ್ರೀತಿಸುತ್ತಿದ್ದರು.

ದೇವಕಿ ಈಗ ಪ್ರತಿ ದಿನ ಸಾಯಂಕಾಲ ಸಂಗೀತ ಕಲಿಯಲು ಸಮಾಜಕ್ಕೆ ಹೋಗುತ್ತಿದ್ದಳು. ಅವಳ ಮದುವೆಯೊಂದು ಆಗಿಬಿಟ್ಟರೆ ತಮ್ಮ ಜವಾಬ್ದಾರಿ ತೀರಿದಂತೆ. ಎಂದು ಪಾರ್ವತಮ್ಮನವರು ಸರಿಯಾದ ಕಡೆ ವರ ಬರುವುದನ್ನು ಕಾದಿದ್ದರು.

ದೇವಕಿ ನೋಡಲು ಲಕ್ಷಣವಾಗಿದ್ದಳು. ಸುಶ್ರಾವ್ಯವಾಗಿ ಹಾಡುತ್ತಿದ್ದಳು. ಮೂರ್ತಿಯವರಿಗೆ ಹಣ ಕಾಸಿಗೆ ಏನೂ ಕೊರತೆ ಇರಲಿಲ್ಲ. ಅಂತಹುದರಲ್ಲಿ ಯಾರಾದರೂ ನಾನು - ತಾನೆಂದು ಸರಿಯಾದವರೇ ಅವಳನ್ನು

ವ ಮನೆಯಾಗುತ್ತಾರೆ. ಇದಕ್ಕೇಕೆ ಚಿಂತೆಯಮ್ಮಾ; ಎಂದು ಮೂರ್ತಿ ತಾಯಿಗೆ ಹೇಳುತ್ತಿದ್ದರು ಅವಳೂ ತನ್ನ ಜವಾಬ್ದಾರಿ" ತಂದೆಯ ಸ್ಥಾನದಲ್ಲಿ ತಾನಿರುವುದರಿಂದ ಅವಳಿಗೆ ಒಂದು ಸರಿಯಾದ ಕಡೆ ಮಾಡಿಬಿಡಬೇಕೆಂದು ತಮಗೆ ತಿಳಿದವರನ್ನು ವಿಚಾರಿಸುತ್ತಿದ್ದರು ಮೂರ್ತಿ.

## ೨

ಆ ಊರಿನಲ್ಲಿ ಲಂಬಾಣಿಗಳು ಜಾಸ್ತಿ. ಲಂಬಾಣಿ ಹೆಂಗಸರು ಕಾಡು ಪುರಲೆ ಕಡ್ಡಿಗಳ ಸೌದೆ ಹೊರೆಯನ್ನು ಹೊತ್ತು ತರುತ್ತಿದ್ದರು.

ಹಾಗೆ ಲಂಬಾಣಿಗಳನ್ನು ಕಂಡರೆ ಸಾಕು ಮಂಗಳೆ ಅವರನ್ನು ಕರೆದು ಸ್ವಲ್ಪ ಹೊತ್ತು ನಿಲ್ಲಿಸಿಕೊಂಡು, ಮಾತನಾಡಿಸಿ ಅವರು ಹೇಳಿದಷ್ಟು ದುಡ್ಡು ಕೊಟ್ಟು ಆ ಪುರಲೆ ಸೌದೆ ಕಂತೆಯನ್ನು ಹಾಕಿಸಿಕೊಳ್ಳುತ್ತಿದ್ದಳು.

ಅವರಲ್ಲಿ ಯಾರಾದರೂ ಕಂಕುಳಲ್ಲಿ ಮಗುವನ್ನು ಎತ್ತಿಕೊಂಡು ಬಂದಿದ್ದರೆ ತೀರಿತು. ಮಂಗಳೆಯ ಹೃದಯದ ಬಡಿತ ಜೋರಾಗುತ್ತಿತ್ತು. ತನ್ನನ್ನೇ ಮರೆತು ಮಗುವನ್ನೂ ತಾಯಿಯನ್ನೂ ನೋಡುತ್ತಾ ನಿಂತುಬಿಡುತ್ತಿದ್ದಳು.

ಕಡೆಗೆ ಆ ಮಗುವಿಗೆ ಊಟವನ್ನಾದರೂ ಹಾಕಿ ಕಳುಹಿಸಿದರೇನೇ ಅವಳಿಗೆ ಸಮಾಧಾನ. ದಿನ ಕ್ರಮೇಣ ಇದು ಹೀಗೆಯೇ ನಡೆಯುತ್ತಿತ್ತು.

ಮೂರ್ತಿ ದೊಡ್ಡ ಇಂಜಿನಿಯರ್ ಅಂದಮೇಲೆ ಯಾವುದಕ್ಕೇನು ಕೊರತೆ? ಕಾಡು ದಿಮ್ಮಿ ಸೌದೆಯನ್ನು ಗಾಡಿಗಟ್ಟಲೆ ತಂದು ಮನೆಯಲ್ಲಿ ಅಡುಕುತ್ತಿದ್ದರು.

ಮಂಗಳೆ ಲಂಬಾಣಿಗಳ ಪುರಲೆ ಸೌದೆಯನ್ನು ತೆಗೆವದ್ದನ್ನು ನೋಡಿದರೆ "ಮಂಗಳಾ ! ನಿನಗೆ ಅವರ ಮೇಲೆ ಅಷ್ಟು ಕನಿಕರವಾದರೆ ಸುಮ್ಮನೆ ಒಂದಷ್ಟು ದುಡ್ಡು ಕೊಟ್ಟು ಕಳುಹಿಸು. ಅವರ ಆ ಪುರಲೆ ಸೌದೆ ನಮಗೇತಕ್ಕೆ" ? ಅನ್ನುತ್ತಿದ್ದರು.

ಮಂಗಳೆ ಮಾತನಾಡದೆ ಒಳಕ್ಕೆ ನಡೆಯುತ್ತಿದ್ದಳು. ತನ್ನ ಗಂಡನ ತಾಳ್ಮೆ, ಸೌಹಾರ್ದಗಳನ್ನು ನೋಡಿ ಮಂಗಳೆಗೆ ತಲೆ ತಗ್ಗಿಸುವಂತಾಗುತ್ತಿತ್ತು.

"ಪಾಪ ! ಅವರ ಮನಸ್ಸಿಗೆ ನೋವಾಗನುತೆ ಇನ್ನು ಮುಂದೆ ನಡೆಸುಕೊಳ್ಳ ಬೇಕು" ಎಂದು ತೀರ್ಮಾನಿಸಿಕೊಳ್ಳುತ್ತಿದ್ದಳು.

ಆದರೆ ಬಿರುಗಾಳಿಗೆ ತರಗೆಲೆಗಳು ತೂರಿ ಹೋಗುವಂತೆ ಯಾವುದೋ ನೆನೆಪು ಅವಳ ನಿರ್ಧಾರವನ್ನು ಸಡಲಿಸುತ್ತಿತ್ತು.

ಈ ತಳ-ಮಳ ತೊಳಲಾಟದಲ್ಲಿಯೇ ದಿನಗಳನ್ನು ತಳ್ಳುತ್ತಿದ್ದಳು ಮಂಗಳೆ ವಿಶ್ವನಾಥ ಬಲು ಮುದ್ದಾಗಿ, ಅಜ್ಜಿಯ ಆಸೆಯ ಮೊಮ್ಮಗನಾಗಿ ಬೆಳೆದ, ತನ್ನ ಮುದ್ದು ಮಾತುಗಳಿಂದ ಮನೆಯವರನ್ನೆಲ್ಲಾ ಮೋಹ ಗೊಳಿಸುತ್ತಿದ್ದ.

ರಾಜಿ, ಸುಮ್ಮಿ ಅವರುಗಳಿಗೆ ಒಬ್ಬನೇ ತಮ್ಮನೆಂದು ಅವನ ಮೇಲೆ ಬಲು ಪ್ರೀತಿ, ಐದು ವರ್ಷದವನಾದರೂ ಎತ್ತಿಕೊಂಡೇ ಓಡಾಡಿಸುತ್ತಿದ್ದರು.

ಸುಶೀಗೆ ಆಡಲು ಒಬ್ಬ ತಮ್ಮ ಸಿಕ್ಕಿದ್ದು ಬಲು ಖುಷಿ. ಹೆಚ್ಚು ಹೊತ್ತು ಅವನ ಜೊತೆಯಲ್ಲಿಯೇ ಆಡುತ್ತಿದ್ದಳು.

ಮಗನಿಗೆ ನೀಟಾಗಿ ಡ್ರೆಸ್ ಮಾಡಿ ಜೊತೆಯಲ್ಲಿ ಕರೆದುಕೊಂಡು ಹೋಗುವುದೆಂದರೆ ಮೂರ್ತಿಗೆ ಬಲು ಹೆಮ್ಮೆ. ಕಾರಿನಲ್ಲಿ ಮಕ್ಕಳನ್ನೂ, ಮಂಗಳೆಯನ್ನೂ ಆಗಾಗ ಎಲ್ಲಿಗಾದರೂ ಕರೆದುಕೊಂಡು ಹೋಗುತ್ತಿದ್ದರು.

ವಿಶುವಿನ ಮುದ್ದು ಮುದ್ದು ಮಾತು, ಮುದ್ದು ಮುಖ, ಮಂಗಳೆಯನ್ನೂ ಮೋಹಗೊಳಿಸುತ್ತಿತ್ತು. ಒಂದು ವಿಧದಲ್ಲಿ ಮಂಗಳೆಯೂ ಸಮಾಧಾನ ಸ್ಥಿತಿಗೆ ಬರುತ್ತಿದ್ದಳು.

ಒಂದು ದಿನ ಬೆಳಿಗ್ಗೆ ಹತ್ತು ಗಂಟೆ ಸಮಯ, ಮಕ್ಕಳೆಲ್ಲಾ ಸ್ಕೂಲಿಗೆ ಹೊರಡುವ ಅವಸರದಲ್ಲಿದ್ದರು. ವಿಶ್ವನಾಥನನ್ನೂ ಅಲ್ಲೆ ಹತ್ತಿರದ ಶಿಶು ವಿಹಾರಕ್ಕೆ ಸೇರಿಸಿದ್ದರು.

ಅವನನ್ನೂ ಶಿಶು ವಿಹಾರಕ್ಕೆ ಕಳುಹಿಸಲು ಬ್ಲೂ ನಿಕ್ಕರ್, ವೈಟ್ ಬುಶ್ ಶರಟು, ಕುತ್ತಿಗೆಗೆ ಎಲ್ಲೋ ಟೈ, ಕಟ್ಟಿ ನೀಟಾಗಿ ಡ್ರೆಸ್ ಮಾಡಿದ್ದಳು ಮಂಗಳೆ.

ಸ್ಕೂಲಿಗೆ ತೆಗೆದುಕೊಂಡು ಹೋಗುವ ಬ್ಯಾಗನ್ನು ಬುಜಕ್ಕೆ ತಗಲುಹಾಕಿ ಕೊಂಡು ವಿಶು ರಾಜಕುಮಾರನಂತೆ ಠೀವಿಯಿಂದ ಮರಗುದುರೆಯ ಮೇಲೆ ಕುಳಿತು ಆಡುತ್ತಿದ್ದ.

ಅವನಿಗೆ ಸ್ವಲ್ಪ ತಿಂಡಿ ತಿನ್ನಿಸಿ ಕಳುಹಿಸಲು ಮಂಗಳೆ ತಟ್ಟೆಯಲ್ಲಿ ಬೆಣ್ಣೆ

ಹಾಕಿದ ದೋಸೆಯನ್ನು ಕೈಯ್ಯಲ್ಲಿ ಹಿಡಿದು, ವಿಶೂ !.... ವಿಶೂ !.... ಎಂದು ಕೂಗುತ್ತಾ ವೆರಾಂಡಕ್ಕೆ ಬಂದಳು.

ಬೆಳಗ್ಗೆ ಎದ್ದ ಕೂಡಲೇ ಬಿಸ್ಕತ್ತು ಒಂದು ಲೋಟ ಹಾಲು ಸೇವಿಸಿದ್ದ ವಿಶೂಗೆ ಹಸಿವೆಲ್ಲಿಂದ ಬರಬೇಕು ? ಅವನು ಅತ್ತ ತಿರುಗಿಯೂ ನೋಡಲಿಲ್ಲ.

ಬಾರೋ ವಿಶೂ : ........ ಸ್ವಲ್ಪ ತಿಂಡಿ ತಿಂದುಬಿಡು, ಸ್ಕೂಲಿಗೆ ಹೊತ್ತಾಗುತ್ತೆ ಎಂದು ಅವನ ಹತ್ತಿರವೇ ಬಂದಳು.

ಅಮ್ಮಾ !...."ನಂಗೆ ಬೇಡ ಹಸಿವಿಲ್ಲ" ಅಂದ. 'ಪರವಾಗಿಲ್ಲ ಬಾ ಮರಿ'.... ನೀನು ಜಾಣ, ನೋಡು ಬೆಣ್ಣೆದೋಸೆ ಎಷ್ಟು ಚೆನ್ನಾಗಿದೆ, ಎಂದು ಅವನನ್ನು ಎತ್ತಿಕೊಂಡು ಮುದ್ದುಮಾಡಿ ಅವಳೇ ತಿನ್ನಿಸತೊಡಗಿದಳು.

ಒಬ್ಬಳು ಸೌದೆ ಹೊತ್ತ ಲಂಬಾಣಿಹೆಂಗಸು ಮನೆ ಬಳಿ ಬಂದು "ತಾಯೀ.... ಸೌದೆ ಬೇಕಾ ?" ಅಂದಳು.

ಅಲ್ಲಿಯೇ ವರಾಂಡದಲ್ಲಿ ನಿಂತಿದ್ದ ಮಂಗಳೆ ಚಟ್ಟನೆ ತಿರುಗಿ ತಂತಿ ಹಾಕಿದ್ದ ಕಟ ಕಟೆಯಿಂದ ಆಚೆ ನೋಡಿದಳು. ಮತ್ತು ಸರ್ರನೆ ಬಾಗಿಲು ತೆಗೆದು ಆ ಲಂಬಾಣಿಯ ಮುಖವನ್ನೇ ದಿಟ್ಟಿಸಿ ನೋಡಿದಳು.

ಮಂಗಳೆಯ ಶರೀರ ಆದ್ಯಂತ ಝಲ್........ ಎಂದಿತು. ಹೌದು ; ... ಅವಳೇ .. ಇವಳು ಅದೇ ಲಂಬಾಣಿ ಹೆಂಗಸು .. ನಾನು ಎಷ್ಟೋ ದಿವಸಗಳಿಂದ ಯಾವ ಲಂಬಾಣಿ ಹೆಂಗಸನ್ನು ಹುಡುಕುತ್ತಿದ್ದನೋ ಅವಳೇ ಇವಳು.

ಅದೇ ಬಿಳುಪು, ದುಂಡುಮುಖ, ಬಟ್ಟಲುಕಣ್ಣುಗಳು, ಪಾಪ ! ಬಡತನ ದಿಂದಾಗಿ ಅವಳ ಕಣ್ಣಿನ ಕಳೆಯು ತುಸ ಮಾಸಿದೆ .. ಅಂದು ಕೊಂಡಳು ಮಂಗಳೆ.

ಆ ಲಂಬಾಣಿಯ ಪಕ್ಕದಲ್ಲಿ ಹರಕಲು ಲಂಗ ಅಂಗಿ ತೊಟ್ಟಿದ್ದ ಚಿಕ್ಕ ಹುಡುಗಿ, ಅವರ ತಲೆಯ ಮೇಲೂ ಒಂದು ಸಣ್ಣ ಸೌದೆಯ ಕಂತೆಯಿತ್ತು.

ಹುಡುಗಿಯು ನೋಡಲು ತುಂಬಾ ಮುದ್ದಾಗಿತ್ತು ಬಿಳುಪಾದ ದುಂಡು ಮುಖ. ವಿಶಾಲವಾದ ಕಣ್ಣುಗಳು, ತಲೆಗೆ ಎಣ್ಣೆ ಕಾಣದೆ ಬಾಚದೆ ಬಿಟ್ಟಿದ್ದ ಅವರ ಗುಂಗುರು ಕೂದಲು ಬೆನ್ನು ಮೇಲೆ ಮುಖದ ಮೇಲೆಲ್ಲಾ ಹರಡಿತ್ತು.

ನಾಲ್ಕು, ಐದು ವರ್ಷದ ಆ ಮಗುವಿನ ತಲೆಯ ಮೇಲೆ ಅದು ಹೊರುವಷ್ಟು ಭಾರದ ಸೌದೆ ತಂತೆಯಿತ್ತು. ಮಂಗಳೆ ಎತ್ತಿಕೊಂಡಿದ್ದ ವಿಶ್ವನಾಥನನ್ನು ತಟ್ಟನೆ

ಕೆಳಗಿಳಿಸಿದಳು. ಹೊರಕ್ಕೆ ಓಡಿಹೋಗಿ ಆ ಮಗುವಿನ ತಲೆಯ ಮೇಲಿದ್ದ ಸೌದೆ ಕಂತೆಯನ್ನು ತನ್ನ ಕೈಯಿಂದಲೇ ಎತ್ತಿ ಕೆಳಗೆ ಹಾಕಿದಳು.

ಆ ಮಗುವಿನ ಕೈ ಹಿಡಿದು ವರಾಂಡಕ್ಕೆ ಕರತಂದಳು, ಇಷ್ಟು ಒಂದೇ ನಿಮಿಷದಲ್ಲಿ ಆಯಿತು.

ಆ ಹುಡುಗಿ ಬೆಕ್ಕಸ ಬೆರಗಾದಂತೆ ಮಂಗಳೆಯ ಮುಖವನ್ನೇ ದಿಟ್ಟಿಸಿ ನೋಡುತ್ತಾ ನಿಂತುಬಿಟ್ಟಿತು.

ಆ ಲಂಬಾಣಿ ಹೆಂಗಸು "ಯಾಕೆ ತಾಯೀ !....ಬಡವರ ಮಕ್ಕಳ ಮೇಲೆ ನಿಮಗೆ ಅಷ್ಟೊಂದು ಕನಿಕರವಾ ?" ಅಂದಳು.

ಅವಳೂ ತನ್ನ ತಲೆಯ ಮೇಲಿನ ಸೌದೆಯನ್ನು ಇಳಿಸಿ ಬಾಗಿಲ ಬಳಿ ಘಟ್ಟಿಲ ಮೇಲೆ ನಿಂತು ಮಂಗಳೆಯ ಮುಖವನ್ನೇ ಸ್ವಲ್ಪಹೊತ್ತು ನೋಡಿದಳು.

"ತಾಯಿ; .. ನಾನು ಈ ಮಗುವನ್ನು ಹೆತ್ತಿದ್ದಾಗ ನೀವೂ ಅದೇ ಆಸ್ಪತ್ರೆಗೆ ಬಂದಿದ್ದೋರಲ್ಲವಾ ?" ಅಂದಳು.

ಮಂಗಳೆಗೆ ಇನ್ನೂ ಸಂದೇಹ ಉಳಿಯಲಿಲ್ಲ. ಹೌದು... ಕಣಮ್ಮಾ ; ಬಾರಮ್ಮಾ ಒಳಕ್ಕೆ, ಎಂದು ಅಕ್ಕರೆಯಿಂದ ಕರೆದಳು.

ಆಸ್ಪತ್ರೇಲಿ ಎತ್ತಿದ್ದ ನಿಮ್ಮ ಗಂಡು ಮೊಗಾ ಎಲ್ರವ್ವಾ? ಎಂದು ಕೇಳುತ್ತಾ ಒಳಕ್ಕೆ ಬಂದಳು. ವಿಶೂ ಅಲ್ಲಿಯೇ ಠೀವಿಯಿಂದ ನಿಂತಿದ್ದ.

"ಇದೇ ಅಲ್ಲವೇನ್ರವ್ವಾ ?....ಓ ಎಷ್ಟು ದೊಡ್ಡವನಾಗಿ ಬಿಟ್ಟವ್ನೆ ? ... ಒಳ್ಳೆ ರಾಜಕುಮಾರ ಇದ್ದಂಗೆ ಅವ್ನಲ್ಲವ್ವಾ; ಎಂದು ತನ್ನ ಎರಡು ಕೈಗಳಿಂದ ಅವನ ಕೆನ್ನೆ ಮುಟ್ಟಿ ತನ್ನ ಕೆನ್ನೆಯ ಮೇಲೆ ಲಟ ಲಟನೆ ... ಲಟಿಕೆ ಮುರಿದಳು.

ವಿಶ್ವನಾಥ ಒಂದು ವಿಧವಾದ ದೊಡ್ಡಸ್ತಿಕೆಯಿಂದ ಅಸಹ್ಯ ಪಟ್ಟು ದೂರ ನಿಂತ....

"ಏನೇ ! ನಿನ್ನ ಹೆಸರು ಮಲ್ಯಾ, ಅಲ್ವಾ ? ಅಂದಳು ಮಂಗಳೆ. ಹೌದು ತಾಯಿ, ಇನ್ನೂ ಎಸರು ಜ್ಞಾಪಕ ಐತಾ ! ತಾಯೀ ?

ನಿನ್ನನ್ನು ಎಷ್ಟೋ ದಿವಸಗಳಿಂದ ಹುಡುಕಿಬಿಟ್ಟೆ. ಇದುವರೆಗೂ ಕಾಣಲಿಲ್ಲ ಎಲ್ಲಿ ಹೋಗಿದ್ಯೇ ? ಯಾಡೀ !....

ಅಯ್ಯೋ! ನಮ್ಮವ್ವ! ಏನೋ ಆಸ್ಪತ್ರೆನಾಗ ಒಂದು ಹತ್ತು ದಿನ ಜೊತೆಯಾಗೆ ಕಳೆದೋ ಅಂದರೆ ಈ ಬಡವರ ಮ್ಯಾಲೆ ಅಮ್ಮಾವ್ರಿಗೆ ಇಷ್ಟು ಪಿರೀತಿನಾ?

ನಾವು ಬೇರೆ ಹಳ್ಳಿಗೆ ನಮ್ಮ ಮೈನಾನ್ರ ಮನೆಗೆ ಹೋಗಿದ್ದೋ ಕಣವ್ವ .. ಎಂದು ಮುಖದ ಮೇಲೆ ಹನಿ ಹನಿಯಾಗಿ ಸುರಿಯುತ್ತಿದ್ದ ಬೆವರನ್ನು ತನ್ನ ಒರಟು ದಾವಣಿಯಿಂದ ಒರಸಿಕೊಂಡಳು ಆ ಲಂಬಾಣಿ.

ಅಲ್ಲಾ ಕಣೇ ಯಾಡೀ ! ಆ ಪುಟ್ಟ ಮಗು ತಲೆ ಮೇಲೆ ಸೌದೆ ಹೊರೆ ಹೊರಿಸೋದಾ ? ಎಂಥಾ ಜನಾನಮ್ಮ ನೀವು ? ಪರಿತಾಪದಿಂದ ಮಂಗಳೆ ಅಂದಳು.

"ನಂಗೂ ಸೌದೆ ಹೊರೆ ಕೊಡಮ್ಮಾ; ನಾನೂ ತತ್ತೀನಿ" ಎಂದು ದುಂಬಾಲ ಬಿದ್ದಳು ಕಣವ್ವ... ಹೆಂಗಿದ್ದರೂ ನಾವು ಬಡವರು. ಮುಂದಕ್ಕಾದರೂ ಸೌದೆ ಒರಲೇಬೇಕು. ಈಗಿನಿಂದಲೇ ಪಾಟ ಆಗಲೀ ಎಂದು ಕೊಟ್ಟೆ ಕಣವ್ವಾ !

ನೋಡು ಇನ್ನು ಎಂದಾದರೂ ಆ ಮಗುವಿನ ತಲೆ ಮೇಲೆ ಸೌದೆ ಹೊರಿಸಿದರೆ ನಾನು ಸುಮ್ಮನಿರೋಲ್ಲ. ಅದು ಹರುಕು ಬಟ್ಟೆ ಹಾಕಿಕೊಂಡಿರುವುದನ್ನು ನಾನು ನೋಡಲಾರೆ. ಮೊದಲು ಒಳ್ಳೆ ಬಟ್ಟೆ ಹಾಕು. ತಿಳೀತೆ? ನಿನಗೆ ಬೇಕಾದಷ್ಟು ದುಡ್ಡು ನಾನು ಕೊಡುತ್ತೇನೆ .. ಎಂದು ಉದ್ವೇಗದಿಂದ ನುಡಿದಳು ಮಂಗಳೆ.

ಆ ಮಗು ಅವಳ ತಾಯಿಯನ್ನೊಮ್ಮೆ, ಮಂಗಳೆಯನ್ನೊಮ್ಮೆ, ತನ್ನ ಬಟ್ಟಲು ಕಣ್ಣನ್ನು ಇನ್ನೂ ಅಗಲವಾಗಿ ಬಿಟ್ಟು ನೋಡುತ್ತಿತ್ತು.

ಮಂಗಳೆ ಒಂದು ಹೆಜ್ಜೆ ಮುಂದಿಟ್ಟು ಕೊಳಕು ಬಟ್ಟೆಯ ಆ ಮಗುವನ್ನು ಅಳುಕದೆ ಬರ ಸೆಳೆದು ಎದೆಗಪ್ಪಿಕೊಂಡಳು.

ಅವಳಿಗೆ ಅನಿರ್ವಚನೀಯ ಆನಂದವಾಯಿತು. ಮಂಗಳೆಯ ಗಂಡ ಒಳಗೆ ಸ್ನಾನ ಮಾಡುತ್ತಿದ್ದರು. ಬಟ್ಟೆ ಹಾಕಿಕೊಂಡು ಹೊರಕ್ಕೆ ಬಂದರು. ಈ ದೃಶ್ಯವನ್ನು ನೋಡಿ ಬಹಳ ಅಸಹ್ಯಪಟ್ಟು ರೇಗಿಕೊಂಡರು.

"ಲೇ! ಮಂಗಳಾ ನಿನ್ನದು ಅತೀ ಆಯಿತು. ಆ ಕೊಳಕು ಕಂಗಾಲಿ ಮಕ್ಕಳನ್ನೆಲ್ಲಾ ಅದೇನು ಹಾಗೆ ಮುದ್ದಿಸುತ್ತೀ ? ಏನು ಬೇಕೋ ಕೊಟ್ಟು ಮೊದಲು ಆಚೆಗೆ ಕಳುಹಿಸು .. ಎಂದು ಕೂಗಾಡಿದರು.

ಮಂಗಳೆಯು ಅಪ್ಪಿದ್ದ ಮಗುವನ್ನು ತನ್ನಿಂದ ಮೆಲ್ಲನೆ ಸರಿಸಿದಳು. ಆ ಮಗು, ಸಿಟ್ಟಿನಿಂದ ಕೂಡಿದ್ದ ಮೂರ್ತಿಯ ಮುಖವನ್ನೇ ದಿಟ್ಟಿಸಿ ನೋಡುತ್ತಾ ತನ್ನ ತಾಯಿಯನ್ನು ತಬ್ಬಿನಿಂತಿತು.

ಮಂಗಳೆಯು ಆ ಲಂಬಾಣಿಗೆ ಇರುವಂತೆ ಸನ್ನೆ ಮಾಡಿ ಒಳಗೆ ಹೋದಳು.

ಮಗುವಿಗೆ ಒಂದಷ್ಟು ಹೊಸ ಬಟ್ಟೆ, ಹೊದಿಸಲು ಒಂದೆರಡು ಬೆಡ್‌ಷೀಟ್, ಅವಳಿಗೆ ಒಂದು ಸೀರೆ, ಕೈಯಲ್ಲಿ ಸ್ವಲ್ಪ ರೂಪಾಯಿ, ಇವಿಷ್ಟನ್ನೂ ಹೊರಕ್ಕೆ ತರುವ ವೇಳೆಗೆ ಮೂರ್ತಿಯವರು ಆ ಲಂಬಾಣಿಯನ್ನೂ ಮಗುವನ್ನೂ ಗದರಿ ಹೊರಕ್ಕೆ ಅಟ್ಟಿ ಬಿಟ್ಟಿದ್ದರು. ಮಂಗಳೆಯು ಎಲ್ಲವನ್ನೂ ಕೈಯ್ಯಲ್ಲಿ ಹಿಡಿದು ಹಾಗೆಯೇ ಬಾಗಿಲಲ್ಲಿ ಬಗ್ಗಿ ನೋಡಿದಳು. ಆ ತಾಯಿ, ಮಗು ಕಾಣಲೇ ಇಲ್ಲ. ಆ ಎರಡು ಸೌದೆ ಹೊರೆಗಳೂ ಅಲ್ಲಿರಲಿಲ್ಲ. ಪಾಪ! ಆ ಬಡಪಾಯಿಗಳು ಸೌದೆಯನ್ನು ಹೊತ್ತು ಮುಂದೆ ನಡೆದಿದ್ದರು.

ಮಂಗಳೆಯು ಕಂಗಾಲಾದಳು, ಅವಳ ಚಲನ ಶಕ್ತಿಯೇ ಉಡುಗಿ ಅಲ್ಲಿಯೇ ಕುಸಿದು ಕುಳಿತು ಬಿಟ್ಟಳು.

ಅಬ್ಬಾ! ಇದು ಎಂಥಾ ಕಣ್ಣಿಗೆ ಕಾಣದ ಕರುಳಿನ-ಸಂಕಟ? ದೇವರೇ! ...... ಯಾಕಾದರೂ ಹೀಗೆ ಮಾಡಿದೆ? ಎಂದು ತಟು ಗುಟ್ಟಿತು ಮಂಗಳೆಯ ಜೀವ.

ಎಷ್ಟು ಹೊತ್ತು ಗರ ಬಡಿದಂತೆ ವರಾಂಡದಲ್ಲಿ ಹಾಗೇ ಕುಳಿತಿರುತ್ತಿದ್ದಳೋ! "ಮಂಗಳಾ ಎದ್ದು ಬಾ. ನನಗೆ ಆಫೀಸಿಗೆ ಹೊತ್ತಾಯಿತು. ಬಡಿಸು" ಎಂದು ಮೂರ್ತಿ ಗದರಿದಾಗಲೇ ಮಂಗಳೆಗೆ ಎಚ್ಚರ, ನಿಟ್ಟುಸಿರು ಬಿಟ್ಟು ಎದ್ದವಳು ಅನಿವಾರ್ಯವಾಗಿ ಕೆಲಸದಲ್ಲಿ ತೊಡಗಿದಳು.

ಹೌದು ...... ಆ ಲಂಬಾಣಿ ಹೇಳಿದ್ದು ನಿಜ. ಇದೇ ಇಲ್ಲಿಗೆ ಐದು ವರ್ಷಗಳ ಕೆಳಗೆ ಮಂಳೆಯು ಹೆರಿಗೆಗೆ ಅದೇ ಆಸ್ಪತ್ರೆಗೆ ಹೋದಳು.

ಅದು ಸಾಮಾನ್ಯವಾದ ಸಣ್ಣ ಹೆರಿಗೆ ಆಸ್ಪತ್ರೆ. ಒಬ್ಬ ಲೇಡಿ ಡಾಕ್ಟರ್, ಒಂದಿಬ್ಬರು ನರ್ಸ್ ಅಷ್ಟೇ ಇದ್ದರು. ಅಂದು ಸಾಯಂಕಾಲ ಮಂಗಳೆ ಆಸ್ಪತ್ರೆಗೆ ಹೋದ ಸಮಯದಲ್ಲಿ. ಡ್ಯೂಟಿ ಮುಗಿಸಿ ಡಾಕ್ಟರು, ಒಬ್ಬ ನರ್ಸೂ ಮನಗ ಹೋಗಿ ಬಿಟ್ಟಿದ್ದರು. ಒಬ್ಬಳೇ ನರ್ಸ್ ಇದ್ದುದು.

ಮಂಗಳೆಗೆ ಮೂರೂ ಹೆಣ್ಣಾಗಿ ಮನೆಯವರ ಮೂದಲಿಕೆ ಕೇಳಿ ಕೇಳಿ ಸಾಕಾಗಿತ್ತು. ಅವಳ ಅತ್ತೆಯಂತೂ, ಮಾತು ಮಾತಿಗೆ ಕುಕ್ಕುತ್ತಿದ್ದರು. ಈ ಸಲವೂ ಹೆಣ್ಣಾಗಿ ಬಿಟ್ಟರೆ ಆ ಮನೆಯಲ್ಲಿ ಬಾಳುವಂತಿರಲಿಲ್ಲ.

ಆ ಬೇನೆಯಲ್ಲಿಯೂ, ದೇವರಿಗೆ ಮೊರೆಯಿಟ್ಟಳು, "ಸ್ವಾಮಿ!....ಈ

ಬಾರಿಯಾದರೂ ಗಂಡು ಮಗುವನ್ನು ಕರುಣಿಸು" ಎಂದು.

ಮಗುವಿನ ಜನನವಾಯಿತು. ಭೂಸ್ಪರ್ಶವಾದ ಮಗು ಕಾವ್... ಕಾವ್ ಎಂದು ಅಳುವ ಶಬ್ದ ಕೇಳಿಸಿತೋ ಇಲ್ಲವೋ ; ಮಂಗಳೆ ತನ್ನ ನೋವನೆಲ್ಲಾ ಮರೆತು "ನರ್ಸ್! ಎಂಥಾ ಮಗು? ಹೆಣ್ಣೋ ? ಗಂಡೋ ಎಂದಳು ಕಾತುರಳಾಗಿ.

ಆ ನರ್ಸ್‌ಗೆ ತಾನು ಕೈ ಹಾಕಿದ ಕೇಸು ಸುಖ ಪ್ರಸವವಾಯಿತಲ್ಲಾ ! ಎಂಬ ಸಂತೋಷ "ಮಗು ತುಂಬಾ ಮುದ್ದಾಗಿದೆ ಅಮ್ಮಾ : "ಹೆಣ್ಣು ಮಗು" ಎಂದಳು.

ಆಯಿತು. ಮಂಗಳೆಯ ಎದೆ "ಢಮಾರ್" ಎಂದಿತು ಆ ನಿಶ್ಶಕ್ತಿಯಲ್ಲಿ - ಯೂ "ಇನ್ನೇನು ಗತಿ ನರ್ಸ್ ; ದೇವರೂ ನನ್ನ ಕೈ ಬಿಟ್ಟ. ಎಂದು ಏಳಲು ಹೋದಳು.

"ಇದೇನಮ್ಮ ! ಯಾಕಿಷ್ಟು ಗಾಬರಿ ? ಲಕ್ಷಣವಾದ ಹೆಣ್ಣು ಮಗು ಮಲಗಿಕೊಳ್ಳಿ" ಎಂದು ನರ್ಸ್ ಮೆಲ್ಲನೆ ಮಂಗಳೆಯನ್ನು ಮಲಗಿಸಿದಳು.

ಮಂಗಳೆಗೆ ಒಂದೇ ಗಾಬರಿ. "ಇದೂ ಹೆಣ್ಣಾಯಿತಲ್ಲಾ ! ಇನ್ನೇನು ಗತಿ" ಎಂದು. ಅವಳಿಗೆ ಆಲೋಚಿಸಲೂ ಅವಕಾಶವಿಲ್ಲ.

"ಇಲ್ಲಾ ನರ್ಸ್ ನಿನ್ನ ಕಾಲಿಗೆ ಬೀಳುತ್ತೇನೆ. ಈ ಕೂಡಲೇ ಈ ಹೆಣ್ಣು ಮಗುವನ್ನು ಬದಲಾಯಿಸಿ ಕೊಟ್ಟು ಯಾರ ಗಂಡು ಮಗುವನ್ನಾದರೂ ನನಗೆ ತಂದು ಕೊಡಲಾರೆಯಾ" ? ಎಂದು ಗೋಳಾಡಿದಳು.

ಮಂಗಳೆಯ ಸಂಕಟ ನೋಡಿ ಆ ನರ್ಸ್ ಮನಸ್ಸು ಕರಗಿತು. ಅವಳು ಸ್ವಲ್ಪ ಹೊತ್ತು ಯೋಚಿಸಿ, ಮಾಡಬಹುದು. ಆದರೆ.. ಸ್ವಲ್ಪ ಸೂಕ್ಷ್ಮ ತಿಳಿದರೂ ನನ್ನ ತಲೆಯೇ ಹೋಗುತ್ತೆ, ಅಮ್ಮ ! ನಿಮಗೇನಮ್ಮ ಅಂಥಾ ತೊಂದರೆ" ? ಅಂದಳು.

ಅಯ್ಯೋ ! . ನರ್ಸ್... ನೀನು ಕೃಪೆ ಮಾಡಿದರೆ ನನ್ನ ಬಾಳು, ನೋಡು, ನನ್ನ ಸಾವು-ಬದುಕು ನಿನ್ನ ಕೈಯ್ಯಲ್ಲಿದೆ. ಎಂದು ಮಂಗಳೆ ಕಣ್ಣೀರು ಸುರಿಸಿದಳು.

ಆ ನರ್ಸ್ ಸ್ವಲ್ಪ ಹೊತ್ತು ಏನೂ ತೋಚದೆ ನಿಂತು ಬಿಟ್ಟಳು. ನಂತರ "ಹೂಂ.... ನೋಡೋಣ ನಿಮ್ಮ ಅದೃಷ್ಟ : ಪಕ್ಕದ ರೂಮಿನಲ್ಲಿ ಒಂದು ಹೆರಿಗೆ ಕೇಸು ಬಂದಿದೆ. ಅದೂ ಈಗ ಆಗಿಬಿಡುತ್ತೆ. ಅದೇನಾದರೂ ಗಂಡು ಮಗು

ವಾದರೆ ಕೂಡಲೇ ಬದಲಾಯಿಸಿ ಬಿಡುತ್ತೇನೆ. ಆ....ದ....ರೆ! ನೋಡಿ ನಿಮ್ಮ ಮಗುವಿನ ಮೇಲೆ ಆಣೆ.... ಈ ವಿಷಯವನ್ನು ಖಂಡಿತ ಯಾರ ಬಳಿಯಲ್ಲೂ ಬಾಯಿ ಬಿಡಕೂಡದು" ಅಂದಳು.

ಮಂಗಳೆಗೆ ಹೋದ ಜೀವ ಬಂದಂತಾಯಿತು. ಕೂಡಲೇ ತನ್ನ ಕತ್ತಿನಲ್ಲಿದ್ದ ಒಂದೆಳೆ ಚಿನ್ನದ ಸರವನ್ನು ಆ ನರ್ಸಿಗೆ ಕೊಟ್ಟು: "ಇಲ್ಲಮ್ಮ ನಾನು ಯಾರ ಬಳಿಯೂ ಖಂಡಿತ ಹೇಳುವುದಿಲ್ಲ" ಅಂದಳು.

ನರ್ಸ್ ಅವಳೊಬ್ಬಳೆ ಇದ್ದುದರಿಂದ ಪಕ್ಕದ ಲೇಬರ್ ವಾರ್ಡಿಗೆ ಹೋದಳು. ಒಂದೆರಡು ನಿಮಿಷದಲ್ಲಿಯೇ ಅಲ್ಲಿಂದ ಮಗು ಅಳುವ ಶಬ್ದ ಕೇಳಿಸಿತು.

ಏಕೋ ಮಂಗಳೆಯ ಕೈ ಕಾಲು ಥರ-ಥರ ಎಂದು ನಡುಗಲು ಶುರುವಾಯಿತು. ಒಂದೊಂದು ನಿಮಿಷಕ್ಕೂ ಅವಳ ಎದೆಯ ಬಡಿತ ಜೋರಾಗುತ್ತಿತ್ತು.

ನರ್ಸ್ ಮಂಗಳೆಯ ಮಗುವನ್ನೂ ತೊಳೆಯಲು ತೆಗೆದುಕೊಂಡು ಹೋಗಿದ್ದಳು. ಸ್ವಲ್ಪ ಹೊತ್ತಿಗೆಲ್ಲಾ ಮಗುವನ್ನು ತಂದು ಮಂಗಳೆಯ ಪಕ್ಕದಲ್ಲಿ ಮಲಗಿಸಿದಳು. "ಗಂಡು ಮಗು" ಬೆಳ್ಳಗೆ ತುಂಬಾ ಮುದ್ದಾಗಿತ್ತು.

ಮಗು ಹುಟ್ಟಿದ ಸಮಾಚಾರ ಕೇಳಲು ಮಂಗಳೆಯ ಮನೆಯವರು ಹೊರಗಡೆ ಕಾದಿದ್ದರು. ಎಂತಹ ಮಗು? ಎಂದು ತಿಳಿಯಲು ಕಾತುರರಾಗಿದ್ದರು.

ನರ್ಸ್ ಹೊರಗೆ ಬಂದು "ಗಂಡು ಮಗು ಹುಟ್ಟಿದೆ ಬಂದು ನೋಡಬಹುದು" ಎಂದಳು.

ಪಕ್ಕದ ಕೊಠಡಿಯಲ್ಲಿ ಹೆರಿಗೆಯಾದ ಹೆಂಗಸನ್ನೂ ಮಂಗಳೆಯ ಮಂಚದ ಪಕ್ಕದಲ್ಲಿಯೇ ತಂದು ಮಲಗಿಸಿದರು. ಅವಳ ಗಂಡು ಮಗುವನ್ನೇ ಬದಲಾಯಿಸಿ ಕೊಟ್ಟಿರುವುದು ಎಂಬುದನ್ನು ಬೇರೆ ಹೇಳಬೇಕಾಗಿಯೇ ಇಲ್ಲ. "ಅವಳು ಒಬ್ಬ ಲಂಬಾಣಿ ಹುಡುಗಿ" ಎಂದು ಮಂಗಳೆಗೆ ತಿಳಿಯಿತು.

ಆ ಲಂಬಾಣಿಗೆ ಮಾತ್ರ ಈ ಮಗು ಬದಲಾವಣೆಯ ವಿಚಾರ ಸ್ವಲ್ಪವೂ ತಿಳಿಯದು. ತಾನು ಮುದ್ದಾದ ಹೆಣ್ಣು ಮಗುವನ್ನು ಹೆತ್ತಿದ್ದೇನೆಂಬ ಹಿಗ್ಗು ಅವಳ ಮುಖದಲ್ಲಿ ಕಾಣುತ್ತಿತ್ತು. ತನ್ನ ಪಕ್ಕದಲ್ಲಿ ಮಲಗಿದ್ದ ಮಗುವನ್ನು ಅಕ್ಕರೆಯಿಂದ ನೋಡುತ್ತಾ ಆಗಾಗ ಅದರ ಮುಖ, ಕೈ, ಕಾಲು, ಎಲ್ಲವನ್ನೂ

ವಾತ್ಸಲ್ಯದಿಂದ ಮುಟ್ಟಿ-ಮುಟ್ಟಿ ನೋಡುತ್ತಿದ್ದಳು.

ಮಂಗಳೆಯ ಅತ್ತೆ ಮತ್ತು ಅವಳ ನಾದಿನಿ, ಮೂರ್ತಿ, ಎಲ್ಲರೂ ಮಗುವನ್ನು ನೋಡಲು ಒಳಕ್ಕೆ ಬಂದರು. ಗಂಡು ಮಗುವಾಯಿತೆಂಬ ಹಿಗ್ಗು ಅವರೆಲ್ಲರ ಮುಖದಲ್ಲಿ ಎತ್ತಿ ಕಾಣುತ್ತಿತ್ತು.

"ಸದ್ಯ ದೇವರು ಈ ಸಲವಾದರೂ ಗಂಡು ಮಗು ಕೊಟ್ಟ. ನಾಳೆ ಮೊದಲು ನಂಜುಂಡೇಶ್ವರನಿಗೆ ಕಾಣಿಕೆ ಕಳುಹಿಸಿಬಿಡೋ ಮೂರ್ತಿ! ಮಗು ಲಕ್ಷಣವಾಗಿದೆ" ಅಂದರು ಮಂಗಳೆಯ ಅತ್ತೆ.

"ಅಣ್ಣಾ! ನೋಡು ಸುಮಿ, ಸುಶೀಗಿನ್ನ ಇದು ಚೆನ್ನಾಗಿದೆ. ಅಲ್ವೇ ಅತ್ತಿಗೆ"? ಅಂದಳು ದೇವಕಿ.

ಮೂರ್ತಿಗಂತೂ ಮಗುವನ್ನು ಬಿಟ್ಟು ಹೋಗಲು ಮನಸ್ಸೇ ಇಲ್ಲ. ಮಂಗಳೆಗೆ ಇವರ ಮಾತಿನ ಕಡೆ ಗಮನವೇ ಇರಲಿಲ್ಲ. ಅವಳ ಮನಸ್ಸು ಇನ್ನೂ ಒಂದು ಸ್ಥಿಮಿತಕ್ಕೆ ಬಂದಿರಲಿಲ್ಲ. ತನ್ನ ಪಕ್ಕದಲ್ಲಿ ಮಲಗಿದ್ದ ಆ ಮಗುವನ್ನು ಮುಟ್ಟಲೂ ಇಷ್ಟವಾಗಲಿಲ್ಲ.

ಅವಳ ಕಣ್ಣೆಲ್ಲಾ ಆ ಲಂಬಾಣಿ ಹುಡುಗಿಯ ಪಕ್ಕದಲ್ಲಿ ಮಲಗಿದ್ದ ತನ್ನ ಕರುಳಿನ ತುಂಡು ಆ ಕಂದನ ಮೇಲೇ ಇತ್ತು. ಅದು ಹೆಣ್ಣಾದರೆ ಏನಂತೆ, ತನ್ನ ಬಸುರಿನಲ್ಲಿ ಒಂಭತ್ತು ತಿಂಗಳು ಅದನ್ನು ಹೊತ್ತಿರಲಿಲ್ಲವೇ? ತನ್ನ ರಕ್ತದಿಂದಲ್ಲವೇ ಅದು ಬೆಳೆದಿರುವುದು? ಅದರ ಸಂಬಂಧ ಹೇಗೆ ಕಡಿದೀತು?

ಪಾಪ! ಕಂದಮ್ಮ! ಅರಿಯದ ಶಿಶು ಅದೇನು ಪಾಪ ಮಾಡಿತು? "ನನ್ನ ಹೆತ್ತಮ್ಮ ಇವಳಲ್ಲ" ಎಂದು ಹೇಳುವ ಶಕ್ತಿ ಅದಕ್ಕಿದೆಯೇ? ಭೋಗ ಭಾಗ್ಯದ ಮನೆಯಲ್ಲಿ ಸುಖವಾಗಿ ಬೆಳೆಯಬೇಕಾದ ಮಗು ಹೆತ್ತವರನ್ನು ತೊರೆದು ಆ ಬಡ ಲಂಬಾಣಿ ಗುಡಿಸಲಿನಲ್ಲಿ ಬೆಳೆಯಬೇಕಾಯಿತಲ್ಲಾ! ಎಂದು ಮಂಗಳೆಯ ಹೃದಯ ತಳ-ಮಳಗೊಳ್ಳುತ್ತಿತ್ತು.

ಆಸ್ಪತ್ರೆಯಲ್ಲಿದ್ದ ಹತ್ತು ದಿನಗಳಲ್ಲಿ ಆ ಲಂಬಾಣಿ ಹುಡುಗಿಯ ವಿಚಾರವನ್ನೆಲ್ಲಾ ಕೇಳಿ ತಿಳಿದುಕೊಂಡಳು ಮಂಗಳೆ. "ಅವರು ತೀರಾ ಬಡ ಸಂಸಾರದವರು. ಅವಳ ಗಂಡ ಸೌದೆ ಸೊಪ್ಪು ಮಾರಿ ಬಂದ ದುಡ್ಡಿನಿಂದ ಆಯಾ ದಿನದ ರೊಟ್ಟಿಯೋ ಹಿಟ್ಟೋ ಬೇಯಿಸಿ ತಿನ್ನಬೇಕು. ಅವಳಿಗೆ ಇದೇ ಮೊದಲ ಮಗು. ಇಲ್ಲಿಂದ ನಾಲ್ಕು-ಐದು ಮೈಲಿ ದೂರದ ಹಳ್ಳಿಯಲ್ಲಿ ಒಂದು ಗುಡಿ

ಸಲಿನಲ್ಲಿ ಅವರ ವಾಸ".

ಇದನ್ನೆಲ್ಲಾ ಆ ಲಂಬಾಣಿ ಹುಡುಗಿಯೇ ಹೇಳಿದಳು ಮಂಗಳೆಗೆ. ಆ ಲಂಬಾಣಿ ಬೆಳ್ಳಗೆ ಲಕ್ಷಣವಾಗಿದ್ದುದರಿಂದ ಅವಳ ಮಗುವೂ ತಾಯಿಯಂತೆ ಲಕ್ಷಣವಾಗಿತ್ತು. ಆದರೆ ತಾನೇ ಏನು ? ತನ್ನದಲ್ಲದ ಆ ಮಗುವನ್ನು ಅಪ್ಪಿ ಮುದ್ದಿಸಲು ಮಂಗಳೆಯ ಮನ ಅಳುಕುತ್ತಿತ್ತು.

ಆದರೆ ಆ ಲಂಬಾಣಿಗೆ ಈ ಯಾವ ಆತಂಕವೂ ಇರಲಿಲ್ಲ. ತಾನು ಹೆತ್ತಿದ್ದೇ ಹೆಣ್ಣೆಂದು ನಿಶ್ಚಿಂತೆಯಿಂದಿದ್ದಳು. ಅವಳ ಗಂಡ ಮಧ್ಯಾಹ್ನ ಒಂದು ಗಂಟೆಗೋ ಎರಡು ಗಂಟೆಗೋ ಒಂದಿಷ್ಟು ರೊಟ್ಟಿಯನ್ನೋ ಹಿಟ್ಟನ್ನೋ ತಂದು ಕೊಡುತ್ತಿದ್ದ.

ದಣಿದು ಆಯಾಸಗೊಂಡಿದ್ದ ಅವನ ಮುಖವನ್ನು ನೋಡಿ ಹೆಂಡತಿ ಅಕ್ಕರೆಯಿಂದ ಕೇಳುತ್ತಿದ್ದಳು "ಯಾಕಾ ! ನೀನು ಉಂಡು ಬರ್ಲಿಲ್ಲಾ ?

ಐ.... ತಕೋ ನೀನು ಬಾಣಂತಿ ಇನ್ನೂ ಉಂಡಿಲ್ಲ. ನನಗೇನಾಗ್ಯೆತೆ. ಮೊದ್ಲು ಉಣ್ಣೋಕೆ ? ಅಂತ ಪ್ರೀತಿಯಿಂದ ಹೆಂಡತಿಯ ಕಡೆ ನೋಡುತ್ತಿದ್ದ.

ಇವತ್ತೂ ಸೌದೇಗೆ ಓಗಿದ್ಯಾ ?

ಓಗದಿದ್ರೆ ಕಾಸೆಲ್ಲೈತೆ ಸೌದೆ ಮಾರಿದ್ರಾಗೆ ಒಂದು ಸೇರು ಜೋಳ ಒಂದು ಪಾವು ರಾಗಿ ತಂದೆ. ಅಮ್ಮ ನಮಗೆ ಜೋಳದ ರೊಟ್ಟಿ ಮಾಡವ್ಳೆ. ನಿನಗೇಂತ ರಾಗಿ ಹಿಟ್ಟು.... ಆರೋಗ್ತದೆ, ಬೇಗ ಉಣ್ಣು ಏಳು ಎಂದು ಹೆಂಡತಿಗೆ ಹೇಳಿ, ಅವಳು ಊಟ ಮಾಡುವವರೆಗೂ ಅಲ್ಲಿಯೇ ಕುಳಿತಿರುತ್ತಿದ್ದು ಹೋಗುವಾಗ ಮಗುವನ್ನು ಒಂದು ಸಲ ಎತ್ತಿ ಮುದ್ದಾಡಿ ಹೋಗುತ್ತಿದ್ದ.

ಆ ಬಡ ದಂಪತಿಗಳಲ್ಲಿದ್ದ ಪ್ರೇಮವನ್ನು ನೋಡಿ ಮಂಗಳೆಗೆ ಸಂತೋಷ ವಾಗುತ್ತಿತ್ತು.

ಮಂಗಳೆಯ ಮನೆಯವರು ದಿನಕ್ಕೆ ನಾಲ್ಕು ಬಾರಿಯಾದರೂ ಬಂದು ಮಂಗಳೆಯನ್ನು ವಿಚಾರಿಸಿಕೊಳ್ಳುತ್ತಿದ್ದರು. ಅವಳಿಗೆ ಬೇಕಾದ ಹಾಗೆ ಊಟ, ಹಾಲು, ಕಾಫಿ, ಎಲ್ಲಾ ತಂದುಕೊಡುತ್ತಿದ್ದರು.

ಈ ಎಲ್ಲಾ ಅತಿಶಯ ಉಪಚಾರವೂ ತಾನು ಗಂಡು ಮಗುವಿನ ತಾಯಿ ಎನ್ನಿಸಿ ಕೊಂಡಿದ್ದಕ್ಕಲ್ಲವೇ ? ಇವರ ದುರಾಸೆಯ ಫಲವಾಗಿ ಪಾಪ ! ಆ ಅರಿಯ ದ ಕಂದ ಬಡ ಲಂಬಾಣಿಗಳ ಮನೆ ಸೇರಬೇಕಾಯಿತು.

ಇವರ ಕಠಿಣ ಮಾತುಗಳನ್ನು ತಡೆಯಲಾರದೆಯಲ್ಲವೇ ! ನಾನು ಇಂಥ ಪಾಪ ಕೆಲಸವನ್ನು ಮಾಡಿಬಿಟ್ಟೆ ! ಈಗ ಇವನ್ನು ಸರಿಪಡಿಸಿಕೊಳ್ಳುವಂತೆಯೇ ಇಲ್ಲವಲ್ಲಾ ! ಎಂದು ವಿಲಿ ವಿಲಿ ಒದ್ದಾಡಿದಳು ಮಂಗಳೆ.

ಆಸ್ಪತ್ರೆಯಿಂದ ಮನೆಗೆ ಬಂದಮೇಲೆ ಎಲ್ಲಿಲ್ಲದ ವೈಭೋಗ ಈ ಮಗುವಿಗೆ ವಂಶೋದ್ಧಾರಕನೆಂದು. ಇವನೆಲ್ಲಿಯ ವಂಶೊದ್ಧಾರಕ ? ಇವನು ಯಾರ ಹೆಸರನ್ನು ಹೇಳಬೇಕಾದವನು ? ತಿರಿಕೆ ಜೀವನದಿಂದ ಗುಡಿಸಲಿನಲ್ಲಿ ಬೆಳೆಯಬೇಕಾಗಿದ್ದವನಿಗೆ ಯಾವ ರಾಜ ವೈಭವ ? ಹಸಿವಿಲ್ಲವೆಂದರೂ ಒಲಿಸಿ ಮುದ್ದು ಮಾಡಿ ತಿನ್ನಿಸುವುದು, ತನ್ನ ಕರುಳಿನ ಕಂದ ಒಂದು ಚೂರು ರೊಟ್ಟಿಗೆ ಬಾಯಿ ಬಾಯಿ ಬಿಡಬೇಕು. ಛಳಿ ಮಳೆಯಲ್ಲಿ ಬೆತ್ತಲೆಯಾಗಿ ಬೆಳೆಯಬೇಕು.

ಇದನ್ನು ನೆನೆಸಿಕೊಂಡಾಗಲೆಲ್ಲಾ ಮಂಗಳೆಯು ಹುಚ್ಚಿಯಂತಾಗುತ್ತಿದ್ದಳು.

ತನ್ನ ಕರುಳಿನ ಸಂಕಟವನ್ನು ಯಾರಲ್ಲಿಯೂ ಹೇಳಿಕೊಳ್ಳಲಾರದೇ ಕೊರಗುತ್ತಿದ್ದಳು.

ಎಂದಾದರೂ ಆ ಲಂಬಾಣಿ ಪುನಃ ಕಂಡಾಳೇ ? ತನ್ನ ಕಂದನನ್ನು ನೋಡೇನೆ ? ಎಂದು ಹಾತೊರೆಯುತ್ತಿದ್ದಳು.

ಯಾವ ಬಡ ಮಕ್ಕಳು ಅವಳ ಮುಂದೆ ಸುಳಿದರೂ ತನ್ನ ಕಂದನೂ ಹೀಗೆಯೇ ಹೊಟ್ಟೆ ಬಟ್ಟೆಗೆ ಇಲ್ಲದೆ ಕಂಗಾಲಿಯಾಗಿರಬಹುದಲ್ಲವೇ ? ಎಂದು ಅವಳ ಕರುಳು ಕಿವಿಚುತ್ತಿತ್ತು.

ಅವಳು ಯಾವುದಕ್ಕಾಗಿ ಹಂಬಲಿಸುತ್ತಿದ್ದಳೋ ! ಯಾರನ್ನು ಕಾಣಲು ಹಾತೊರೆಯುತ್ತಿದ್ದಳೋ ? .... ಆ ಒಂದು ಆಸೆಯು ಈಡೆರುವ ಕಾಲ ಒದಗಿತು.

ಅವಳ ಕಂದನು ಐದು ವರ್ಷಗಳ ನಂತರ ಅವಳ ಕಣ್ಣಿಗೆ ಬಿತ್ತು. ಅವಳ ಮನೆಯ ಬಾಗಿಲಿಗೇ ಬಂದಿತ್ತು ಅದನ್ನು ತನ್ನ ಕೈಯ್ಯಾರ ಎತ್ತಿ ಮುದ್ದಾಡುವ ಸುಯೋಗವೂ ದೊರಕಿತು.

ಆ ....ದ .... ರೆ ? ಅದು ತನ್ನ ಮಗುವೆಂದು ಹೇಳಿ ಕೊಳ್ಳುವಂತಿರಲಿಲ್ಲ. ಅದನ್ನು ತನ್ನ ಮನೆಯಲ್ಲಿಯೇ ಉಳಿಸಿಕೊಂಡು ಬೆಳೆಸಲು ತಾನು ಯಾರು ?

ಅದರ ತಾಯಿ ಎನಿಸಿ ಕೊಂಡವಳು ಏಕೆ ಕೊಟ್ಟಾಳು ? ಅಬ್ಬ !........ ಎಂಥ ಅಪೂರ್ವ ಸಂದಿಗ್ಧ ಪರಿಸ್ಥಿತಿ ? ತನ್ನ ಮಗುವು ಕಣ್ಣೆದುರಿಗೆ ಬಂದರೂ

ತನ್ನವರು ಗ ರ:ತಿಸವಾದರು.

ಅಸಹ್ಯ ಪಟ್ಟು ತಿ.ಎಪೆ ಕಂಗಾಲಿ ಮಗುವೆಂದು ಗವರಿ ಕಳುಹಿದರು. ಆ ದರಿದ್ರ ಲಂಬಾಣಿ ಮಗುವನ್ನು ತಮ್ಮ ಮಂಗೋಪ್ಯಾರನೆಂದು ಎತ್ತಿ ಒಲ್ಲಿಸುತ್ತಾರೆ.

ಇಂತಹ ಅನಾಚಾರಕ್ಕೆ ಕಾರಣ ಹೆಣ್ಣು ಹೆಣ್ಣು ಎಂದು ಅವರು ಹೇಗೆತ್ತಿ ಳೆಯುತ್ತಿದ್ದು ಕಾರಣವಲ್ಲವೆ?

ಈ ಮರ್ಮವು ಅವರಿಗೆ ಗೊತ್ತಾಗದೇ ಇರುವುದರಿಂದ ಅವರೆಲ್ಲಾ ನೆಮ್ಮದಿಯಾಗಿಯೇ ಇದ್ದಾರೆ. ಆದರೆ ? ನಾನು ?

ನನ್ನ ಕಂದನ ಭಿಕಾರಿಯಾಗಿ ಇರುವುದನ್ನು ಕಂಡೂ ಹೇಗೆ ನೆಮ್ಮದಿ ಯಿಂದಿರಲಿ ? ಎಂದು ಮಂಗಳೆಯ ಮನಸ್ಸು ಕಾಡುತ್ತಿತ್ತು.

ತನ್ನ ಮನೆಯಲ್ಲಿರುವ ಸಕಲ ಭೋಗ ಭಾಗ್ಯಗಳಲ್ಲಿ ಸ್ವಲ್ಪವನ್ನಾದರೂ ಕೊಟ್ಟು ಆ ಮಗುವನ್ನು ಉತ್ತಮ ಸ್ಥಿತಿಯಲ್ಲಿಡೋಣ, ಎಂದು ಮಂಗಳೆ ಹವಣಿಸುತ್ತಿದ್ದಳು.

ಆದರೆ ವಿಧಿ ಅದನ್ನೂ ನಡೆಯಗೊಡಲಿಲ್ಲ. ಮತ್ತೆ ಆ ಲಂಬಾಣಿ ಯನ್ನು ಕಾಣುವ ಕಾತರದಲ್ಲಿ ಮಂಗಳೆ ಹಾತೊರೆಯುತ್ತಿರುವಾಗಲೇ ಮೂರ್ತಿಗೆ ತುಂಗ-ಭದ್ರಾ ಪ್ರಾಜೆಕ್ಟಿಗೆ ವರ್ಗವಾಗಿಬಿಟ್ಟಿತು.

ಎರಡೇ ದಿನಗಳಲ್ಲಿ ಸಾಮಾನುಗಳನ್ನೆಲ್ಲಾ ಲಾರಿಗೆ ತುಂಬಿ ಒಂದೇ ಸಲ ಸಂಸಾರ ಸಹಿತ ಹೊರಟುಬಿಟ್ಟರು ಮೂರ್ತಿ.

ತನ್ನ ಮಗುವನ್ನು ಮತ್ತೆ ಎಂದಾದರೂ ನೋಡುತ್ತೇನೆಂದು ಆಸೆ ಇಟ್ಟು ಕೊಂಡಿದ್ದ ಮಂಗಳೆಗೆ "ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ" ಎಂಬಂತಾ ಯಿತು.

ತನ್ನ ಕರುಳಿನ ಚೂರನ್ನು ಅಲ್ಲಿಯೇ ಬಿಟ್ಟು ಹೋಗುವಾಗ ಮಂಗಳೆಗೆ ಅಪಾರ ಸಂಕಟವಾಯಿತು.

ಒಂದು ಬಾರಿ ಕಣ್ಣಾರೆ ಕಂಡ ಮೇಲಂತೂ ಮಂಗಳೆಯ ಹಂಬಲ ಇನ್ನೂ ಹೆಚ್ಚಾಗಿಬಿಟ್ಟಿತು.

ಎಂದಾದರೊಂದು ದಿನ "ವಿಶೂ ನನ್ನ ಮಗನಲ್ಲ ಲಂಬಾಣಿ ಮಗು" ಎಂದು ಹೇಳಿ ಬಿಡುವೆನು ? ಇಷ್ಟು ದಿನ ಬಚ್ಚಿಟ್ಟ ರಹಸ್ಯ ಬಯಲಾಗಿ

ಬಿಟ್ಟರೆ ಗತಿಯೇನು ಎಂಬ ಭೀತಿಯೂ ಮಗಳ ಅಂತರಂಗವನ್ನು ಪೀಡಿಸುತ್ತಲೇ ಇತ್ತು.

೩

ಇತ್ತ ಲಂಬಾಣಿ ಮಲ್ಯಾ ಸಂಸಾರವೆಂದರೆ ತೀರಾ ಬಡತನದ ಬಾಳಾಗಿತ್ತು. ಅವಳ ಗಂಡ ಗಂಗನಾಯಕ ನಿತ್ಯ ರೋಗಿಯಾಗಿದ್ದ. ಅವನಿಗೆ ಕಾಮಾಲೆ ಖಾಯಿಲೆ ಅಂಟಿಕೊಂಡಿತ್ತು. ಮುಖ, ಕೈ ಕಾಲು ಆಗಾಗ ಊದಿಕೊಂಡು ನಿಶ್ಶಕ್ತಿಯಿಂದ ಬಳಲಿ ಮಲಗಿ ಬಿಡುತ್ತಿದ್ದ.

ನಿತ್ಯ ರೋಗಿಯಾಗಿದ್ದ ಅವನು ತೀರಾ ? ದುರ್ಬಲನಾಗಿದ್ದ. ಇನ್ನು ಸೌದೆ ಕಡಿದು ಹೊತ್ತು ಮಾರಿ ಜೀವನಕ್ಕೆ ಸಂಪಾದಿಸುವುದು ಅವನಿಂದ ಸಾಧ್ಯವಿಲ್ಲದ ಮಾತಾಗಿತ್ತು.

ಹೆಂಡತಿ ಮಗಳೆಂದರೆ ಅವನಿಗೆ ಅಪಾರ ಪ್ರೇಮ. ಅವರನ್ನು ಹೇಗಾದರೂ ಸುಖವಾಗಿಡಬೇಕೆಂದು ಹೆಣಗುತ್ತಿದ್ದ.

ಆ ಖಾಯಿಲೆಯಲ್ಲಿಯೂ ಗಿಡಕ್ಕೆ ಹೋಗಿ ಸೌದೆ ಕಡಿದು ಆಯಾಸದಿಂದ ಬಸವಳಿದು ಅಲ್ಲಿಯೇ ಬಿದ್ದಿರುತ್ತಿದ್ದ. ಅವನ ಹೆಂಡತಿ ಹುಡುಕಿಕೊಂಡು ಬಂದು ಅವನ ಸ್ಥಿತಿಯನ್ನು ಕಂಡು ಕಣ್ಣೀರಿಡುತ್ತಿದ್ದಳು.

ಅಸ್ಥಿ ಪಂಜರದಂತಿದ್ದ ಅವನ ಶರೀರವನ್ನು ಮೆಲ್ಲನೆ ಎತ್ತಿ ತನ್ನ ಆಸರೆ ಕೊಟ್ಟು ಕುಳ್ಳಿರಿಸಿಕೊಂಡು ಅಲ್ಯುಮಿನಿಯಂ ಚೊಂಬಿನಲ್ಲಿ ತಂದಿದ್ದ ಚಹಾವನ್ನು ಅವನಿಗೆ ಸ್ವಲ್ಪ ಸ್ವಲ್ಪವೇ ಕುಡಿಸಿ ಸುಧಾರಿಸುತ್ತಿದ್ದಳು.

ಅವನು ಸ್ವಲ್ಪ ಚೇತರಿಸಿಕೊಂಡ ಮೇಲೆ ಮೆಲ್ಲನೆ ಮನೆಗೆ ಕರೆದುಕೊಂಡು ಹೋಗುತ್ತಿದ್ದಳು.

ಅವಳು ಎಷ್ಟು ಬೇಡವೆಂದರೂ ಕೇಳದೆ ಹೊಟ್ಟೆಯ ಪಾಡಿಗಾಗಿ ದುಡಿಯಲು ಹೊರಟು ಬಿಡುತ್ತಿದ್ದ ಗಂಗನಾಯಕ.

ಒಂದು ದಿನ ಮಲ್ಯಾ ಮಾಕಳೀ ಬೇರನ್ನು ಅಗೆದು ತರಲು ಬೆಟ್ಟದ ಬುಟಕ್ಕೆ ಹೋದಳು ; ಮನೆಯಲ್ಲಿ ಅವಳ ಗಂಡ, ಆರು ವರ್ಷದ ಮಗಳು "ಲಕ್ಕಿ" ಇಬ್ಬರನ್ನೂ ಬಿಟ್ಟು "ಅಪ್ಪನಿಗೆ ಗಂಜಿ ಕಾಯಿಸಿ ಕೊಡವ್ವ" ಎಂದು ಲಕ್ಕಿಗೆ ಹೇಳಿ ಹೋದಳು.

ಲಾಯರು ಗೋವಿಂದಾಚಾರ್ರ ಮನೆಯವರು " ಉಪ್ಪಿನಕಾಯಿಗೆ ನಿಂಬೇ ಹಣ್ಣು ತೆಗೆಸಿ ಬಿಟ್ಟಿದ್ದೇವೆ ನಾಳೆಯೇ ಮಾಕಳೀ ಬೇರು ತಂದುಕೊಡೇ ಯಾಡಿ! ಎಂದು ಹೇಳಿದ್ದರು.

ಸದ್ಯ ಮಾಕಳೀ ಬೇರು ಅಗೆದು ತಂದರೆ 2-3 ರೂಪಾಯಿಯಾದರೂ ಸಿಕ್ಕುತ್ತೆ. ಆ ಪಂಡಿತರು ಹೇಳಿರುವ ಔಷಧಿಯನ್ನಾದರೂ ತಂದು ಗಂಡನಿಗೆ ಕೊಡಬಹುದು.

ಹೇಗಾದರೂ ಅವನ ಖಾಯಿಲೆಯೊಂದು ವಾಸಿಯಾಗಿಬಿಟ್ಟರೆ ಸಾಕಪ್ಪಾ! ದೇವರೇ !....ಎಂದು ಮಲ್ಯಾ ಯೋಚಿಸುತ್ತಿದ್ದಳು.

ಕಾರ್ತಿಕಮಾಸ. ಇಬ್ಬನಿ. ಮಂಜಿನ ಕೊರೆತ ಮೈಯನ್ನು ಮುದುಡಿಸುತ್ತಿತ್ತು. ಬೆಚ್ಚಗೆ ಸ್ವೆಟರ್ ತುಂಬಾ ಹೊದ್ದಿದ್ದರೂ ಗಡ - ಗಡನೆ ನಡುಗಿಸುವ ಚಳಿಗಾಲ.

ಗಂಗನಾಯಕ ಒಂದು ಹರಕಲು ಈಚಲ ಚಾಪೆಯಮೇಲೆ ಮೈ ಮುದುಡಿ ಮಲಗಿದ್ದ. ಬೆಚ್ಚಗೆ ಹೊದೆಯಲು ಒಂದು ಕಂಬಳಿ ಸಹ ಇಲ್ಲದೆ ಗೋಣೀ ಚೀಲವನ್ನೇ ಹೊದ್ದಿದ್ದ.

ರಕ್ತ ಬಲವಿಲ್ಲದ ಅವನ ಶರೀರ ಚಳಿಯನ್ನು ತಡೆಯಲಾರದೇ ಗಡ -ಗಡನೆ ನಡುಗುತ್ತಿತ್ತು.

ಹಾಗೆಯೇ ಮಗ್ಗುಲು ಹೊರಳಿದ. ತನ್ನ ಪಕ್ಕದಲ್ಲಿಯೇ ಮಲಗಿದ್ದ ಮಗಳು ಲಕ್ಕಿ ಅಲ್ಲಿರಲಿಲ್ಲ.

ಇಷ್ಟು ಮೈ ಕೊರೆಯುವ ಥಂಡಿಯಲ್ಲಿ ಮಗು ಎಲ್ಲಿ ಹೋಯಿತು? ಇನ್ನೂ ಸ್ವಲ್ಪ ಹೊತ್ತು ಮಲಗಿರಬಾರದೇ? ಎಂದುಕೊಳ್ಳುತ್ತಾ ಗಂಗ ಮೆಲ್ಲನೆ ಎದ್ದು ಕುಳಿತು ಸುತ್ತಲೂ ನೋಡಿದ.

ಹೆಂಡತಿ ಮಲಗಿದ್ದ ಈಚಲ ಚಾಪೆ ಖಾಲಿಯಾಗಿತ್ತು ಇಷ್ಟು ಮುಂಜಾನೆಯೇ ಮಗುವನ್ನು ಎಬ್ಬಿಸಿಕೊಂಡು ಇವಳೆಲ್ಲಿ ಹೋದಳು? ಎಂದು ಯೋಚಿಸಿ....

" ಏಯ್ ! ಮೊಗಾ ! ಲಕ್ಕಿ.... ಎಂದು ಕೂಗಿದ.

ಪುಳ್ಳೆ ಸೌದೆಯನ್ನು ಗುಡಿಸಲ ಮುಂದೆ ಜೋಡಿಸುತ್ತಿದ್ದ ಲಕ್ಕಿ "ಯಾಕಪ್ಪ! ಏನ್ ಬೇಕೂ? ಎಂದು ಕೇಳುತ್ತಾ ಒಳಕ್ಕೆ ಬಂದಳು.

ಯಾಕ್ ಮೊಗಾ ? ಈ ಚಳೀಲಿ ಈಟೋತ್ತಿಗೇ ಎದ್ದು ಏನ್ ಮಾಡ್ತಿಯವ್ವಾ ? ಮಲೀಕೋ ಬಾ.

ಹಟ್ಟಿ ಕಸಾ ತೆಗೀತಿವ್ನಿ ಅಪ್ಪಾ ! ನಿಮ್ಮವ್ವ ಎಲ್ಲಿ ಹೋದಳು ಲಕ್ಕೀ ?

ಅವ್ವ ಮಸುಬ್ಬಿಗೇ ಮಾಕಳೀಬೇರಿಗೆ ಓದ್ಲು ಕಣಪ್ಪ. ಅಂದಳು ಲಕ್ಕಿ.

ಈ ಮಾತು ಕೇಳಿದ ಕೂಡಲೇ ಗಂಗನಾಯಕನ ಮನಸ್ಸು ತಳಮಳಿಸಿತು. "ಅಯ್ಯೋ!....ನಾನಿದ್ದೂ ನಿಮ್ಮನ್ನು ಸುಖವಾಗಿ ಮಡಗ್ಲಿಲ್ಲ ಮೊಗಾ ! ಈ ಮನೆಯಾಗೆ ನನ್ನಿಂದ ಕಷ್ಟಾನೇ ಒರತು ಸುಖಾ ಇಲ್ಲ ಕಣವ್ವ. ಎಂದು ಮರುಗಿದ.

"ನೀನು ಸುಮ್ಕೆ ಮನಗಿರಪ್ಪಾ! ಕಸಾ ಹಾಕಿ ಬಂದು ಬಿಸಿ ನೀರು ಕಾಸಿ ಕೊಟ್ಟೇನಂತೆ ಮೊಕಾ ತೊಳಿಯಾಕೆ" ಅಂದಳು ಆರು ವರ್ಷದ ಲಕ್ಕಿ ಅನುಭವಸ್ಥ ಹೆಂಗಸಿನಂತೆ.

ಅಯ್ಯೋ ನನ್ನ ಕಂದಾ... ಮೊಗಾ ನಿನ್ನ ಕೈಲಿ ನಾನು ಮಾಡಿಸಿ ಕೊಳ್ಳಬೇಕೆನವ್ವಾ ? ಸುಮ್ಕಿರು ನಾನು ಉಷಾರಾಗಿವ್ನಿ. ನಾನೆ ಒಲೆ ಹಚ್ಚತೀನಿ. ಎಂದು ಎದ್ದ. ತಾನೇ ಒಲೆ ಉರಿಮಾಡಿದ. ಲಕ್ಕಿಯೂ ಬಂದು ಅಪ್ಪನ ಮಗ್ಗಲು ಒಲೆಯ ಮುಂದೆ ಕುಳಿತಳು.

ತಂದೆ ಮಗಳು ಚಳಿಗೆ ಬೆಚ್ಚಗೆ ಬೆಂಕಿ ಕಾಯಿಸಿಕೊಂಡರು. ತನ್ನ ಪ್ರೀತಿಯ ಹೆಂಡತಿ ಮೈ ನಡುಗುವ ಈ ಚಳಿಯಲ್ಲಿ ಮೂರು ಮೈಲಿ ಯಾಚೆ ಬೆಟ್ಟದ ಬುಡಕ್ಕೆ ಹೋಗಿ ಮಾಕಳೀ ಬೇರು ಅಗೆಯುವುದನ್ನು ನೆನೆಸಿಕೊಂಡು ಮರುಗಿದ ಗಂಗನಾಯಕ.

ಬಿಸಿ ನೀರಿನಲ್ಲಿ ಬೆಚ್ಚಗೆ ಮುಖ ತೊಳೆದ ತಂದೆ ಮಗಳು ಮನೆಯೆಲ್ಲಾ ಹುಡುಕಾಡಿದರು. ದಿನಸಿ-ಧಾನ್ಯ ಹಿಟ್ಟು ಏನೂ ಇರಲಿಲ್ಲ ಮಡಿಕೆಗಳೆಲ್ಲಾ ಖಾಲಿಯಾಗಿದ್ದವು.

ಎಲ್ಲೋ ಒಂದು ಹಿಡಿಯಾಗುವಷ್ಟು ಜೋಳದ ತರಿ ಒಂದು ಮಡಿಕೆಯಲ್ಲಿ ಬಿದ್ದಿತ್ತು.

ಬರಿ ಮನೆಯನ್ನು ನೋಡಿ ಗಂಗನಾಯಕನಿಗೆ ತುಂಬಾ ಸಂಕಟವಾಯಿತು. ತನ್ನ ಮುದ್ದು ಮಗಳು ಲಕ್ಕಿ ಹೀಗೆ ರೊಟ್ಟಿಗೂ ಗತಿಯಿಲ್ಲದೆ ಬೆಳೆಯ ಬೇಕಾಯಿತಲ್ಲಾ ! ಎಂದು ಅವನ ಕರುಳು ಹಿಂಡಿತು.

ಅವರ ಬಡತನದ ಬಾಳಿನಲ್ಲಿಯೂ ಆಶಾಜ್ಯೋತಿಯಾಗಿದ್ದುದು ಆ ಒಂದೆ ಒಂದು ಹೆಣ್ಣು ಮಗು "ಲಕ್ಕಿ". ಈಗ ಆರು ವರ್ಷದವಳಾಗಿ ಅರಗಿಣಿಯಂತಿದ್ದಳು.

ಅದೊಂದು ಮಗುವನ್ನೂ ಚೆನ್ನಾಗಿ ಬೆಳೆಸಲು ನಮಗೆ ಚೈತನ್ಯವಿಲ್ಲವಲ್ಲಾ! ಎಂದು ಹಲುಬಿದ ಗಂಗನಾಯಕ.

ಲಕ್ಕಿಗೆ ವಯಸ್ಸಿಗೆ ಮೀರಿದ ಬುದ್ಧಿ. ಹೊಟ್ಟೆ-ಬಟ್ಟೆಗೂ ಸಾಲದಿದ್ದ ತಮ್ಮ ಸಂಸಾರದ ಕಷ್ಟ ಸುಖವನ್ನು ಚೆನ್ನಾಗಿ ಅರಿತಿದ್ದಳು. ಅಪ್ಪಾ ಪೇಚಾಡುತ್ತಿದ್ದುದನ್ನು ನೋಡಿ "ನಂಗೆ ಈಗ ಏನೂ ಬೇಡಪ್ಪ ಈ ಜೋಳದ ಬರಿ ಗಂಜಿ ಕಾಸ್ತೀನಿ ನೀನು ಕುಡಿಯಪ್ಪ" ಎಂದು ಗಂಜಿಗೆ ಒಲೆಯ ಮೇಲೆ ನೀರಿಟ್ಟಳು.

ಗಂಗನಾಯಕನೇ ತರಿಹಾಕಿ ಗಂಜಿ ಕಾಯಿಸಿದ. ಉಪ್ಪುಹಾಕಿ ಇಬ್ಬರೂ ಒಂದೊಂದು ಬಟ್ಟಲು ಕುಡಿದರು.

ಒಂದು ಹೊರೆ ಸೌದೆಯನ್ನಾದರೂ ಕಡಿದು ತಂದರೆ ಒಪ್ಪತ್ತಿನ ರಾಗಿಯನ್ನಾದರೂ ಹೊಂಚಬಹುದು. ಎಂದುಕೊಂಡು ಗಂಗನಾಯಕ ಮಗಳಿಗೆ "ಮನೆತಾವೇ ಇರು ಮಗಾ! ನಾನು ಈಗ ಬಂದು ಬಿಡ್ತೀನಿ" ಎಂದು ಹೇಳುತ್ತಲೇ ಕೊಡಲಿ ಹೆಗಲಿಗೇರಿಸಿ ಹೊರಟ.

ಕೈಲಾಗದಿದ್ದರೂ ತಂದೆ ಸೌದೆಗೆ ಹೊರಟಿದ್ದನ್ನು ನೋಡಿ "ಅಪ್ಪಾ! ನಿನ್ನ ಕೈಲಿ ಆಗಾಕಿಲ್ಲ ಹೋಗಬೇಡ ಅಪ್ಪಾ" ಎಂದು ಕೂಗಿಕೊಂಡಳು.

ಆದರೆ ಗಂಗನಾಯಕ ಅವಳ ಕೂಗಿಗೆ ಕಿವಿಗೊಡದೆ ಮುಂದೆ ಮುಂದೆ ಸಾಗಿದ.

ಮಲ್ಯಾ ಮಾಕಳೀಬೇರಿನ ಮಕ್ಕರಿಯನ್ನು ಹೊತ್ತು ಮಟ ಮಟ ಮಧ್ಯಾಹ್ನದ ಉರಿಬಿಸಿಲಿನಲ್ಲಿ ಮನೆಗೆ ಬಂದಳು.

ರಸವತ್ತಾದ ಮಾಕಳೀಬೇರು ಮಕ್ಕರಿ ತುಂಬಾ ಇದ್ದುದನ್ನು ನೋಡಿ ಲಕ್ಕಿ ಹಿಗ್ಗಿದಳು. ಮಲ್ಯಾ ತಲೆಯ ಮೇಲಿಂದ ಮಕ್ಕರಿ ಇಳಿಸಿ ಬೆವರನ್ನು ಒರೆಸಿಕೊಂಡಳು. ಹೊಟ್ಟೆ ಹಸಿದಿತ್ತು. ಮಾಕಳೀ ಬೇರನ್ನು ಭೂಮಿಯಿಂದ ಅಗೆದು ತರಬೇಕಾದರೆ ಸಾಮಾನ್ಯವಲ್ಲ. ಬೆನ್ನು ಮೂಳೆ ಮುರಿಯುವಂತಾಗಿತ್ತು.

ಆ ದಣಿವಿನಲ್ಲಿಯೇ "ಏಯ್ ಲಕ್ಕೀ! ನಿಮ್ಮ ಅಪ್ಪನಿಗೆ ಗಂಜಿ ಮಾಡಿಕೊಟ್ಟೇನವ್ವಾ? ಎಂದು ಮಗಳನ್ನು ಕೇಳಿದಳು.

ಅಪ್ಪನೇ ಎದ್ದು ಜೋಳದ ತರಿ ಗಂಜಿ ಮಾಡಿದ ಕಣವ್ವಾ ! ನಂಗೂ ರವಷ್ಟು ಕೊಟ್ಟು ತಾನೂ ಕುಡಿದು. ಆಗಲೇ ಸೌದೆಗೆ ಹೋದ ಕಣವ್ವಾ ! ಎಂದು ಎಲ್ಲವನ್ನೂ ಒಂದೇ ಸಾರಿ ಪಟ ಪಟನೆ ಹೇಳಿದಳು ಲಕ್ಕಿ.

ಮೇಲಕ್ಕೆ ಏಳಲೂ ಕೈಲಾಗದಿದ್ದ ತನ್ನ ಗಂಡ ಸೌದೆಗೆ ಹೋಗಿದ್ದಾನೆಂದು ಕೇಳಿದ ಕೂಡಲೇ ಮಲ್ಯಾಗೆ ತುಂಬಾ ಗಾಬರಿಯಾಯಿತು.

ದಣಿದು ಬಂದಿದ್ದ ಮಲ್ಯಾ ಮಗಳ ಮೇಲೆ ತನ್ನ ಕೋಪತೀರಿಸಿ ಕೊಂಡಳು " ನಿನಗೇನು ಕೇಡು ಬಂದೈತೆ ನಿಮ್ಮ ಅಪ್ಪನ್ನ ವೋಗಬ್ಯಾಡ ಅಂತ ಹೇಳಕಿಲ್ಲಾ! ಪಾಪಿ ಲೌಡಿ ! ಎಂದು ಬೈದು ಬೆನ್ನಿನ ಮೇಲೆ ಬಾರಿಸಿದಳು.

ಹೊಡೆತವನ್ನು ತಾಳಲಾರದೆ ಲಕ್ಕಿ ಹೇಳ್ದಿ ಕಣವ್ವಾ !....ಹೇಳ್ದಿ ಕಣವ್ವಾ ! ಎಂದು ಕೂಗಿಕೊಂಡರೂ ಬಿಡದೆ ಬಾರಿಸಿದಳು.

ತನ್ನ ಕೋಪ ಇಳಿದ ಮೇಲೆ ಮಲ್ಯಾ ಮಗಳನ್ನು ಬಡಿದುದಕ್ಕಾಗಿ ಮನ ನೊಂದು ಸಂತೈಸಿದಳು.

ಪಾಪ ! ಲಕ್ಕಿ ಅಳುತ್ತಾ ಒಂದು ಮೂಲೆಯಲ್ಲಿ ಮುದುಡಿ ಕುಳಿತಳು.

ಈ ಬಿಸಿಲಿನಾಗ ನಿಮ್ಮಪ್ಪ ಎಲ್ಲಿ ಬಿದ್ದವ್ನೋ ಏನೋ? ನಾನೂ ಓಗಿ ನೋಡಿಕೊಂಡು ಬತ್ತೀನಿ ಬಾ ಇಲ್ಲಿ. ಮೂದೇವಿಹಂಗೆ ಅಳ್ತಾ ಕುಂತಿರಬೇಡ. ಈ ಮಾಕಳಿ ಬೇರನ್ನೆಲ್ಲಾ ಮುರಿದು ಕಂತೆ ಕಟ್ಟು ಮಡಗು. ಇಗೋ ಅಕ್ಕಿ ತಂದಿವ್ನಿ. ನಾನು ಬಂದು ಮಾಡಿ ಹಾಕ್ತೀನಿ. ಅಂ... ಏನು ಜಾಣ ! ಎಂದು ತಾನು ಬಾರಿಸಿದ ಬೆನ್ನ ಮೇಲೆ ಪ್ರೀತಿಯಿಂದ ಕೈಯ್ಯಾಡಿಸಿ ಮಗಳ ಕಣ್ಣೊರೆಸಿದಳು ಮಲ್ಯಾ.

ಒಂದೇ ನಿಮಿಷದಲ್ಲಿ ತಾಯಿಯ ಪ್ರೀತಿಗೆ ಮಾರುಹೋದಳು ಲಕ್ಕಿ. ಹರಕು ಲಂಗದಲ್ಲಿ ಕಣ್ಣೊರಸಿಕೊಳ್ಳುತ್ತಲೇ "ನೀನು ಹೋಗವ್ವ ಅಪ್ಪನ್ನ ಕರೆದುಕೊಂಡು ಬಾ, ನಾನೆಲ್ಲಾ ಮಾಡ್ತೀನಿ" ಅಂದಳು.

ಮಲ್ಯಾ ಗಂಡನನ್ನು ಹುಡುಕಿಕೊಂಡು ಹೊರಟಳು. ಅವಳಿಗೆ ಹಸಿವು ಆಯಾಸವನ್ನೂ ಮರೆಸುವಷ್ಟು ದಿಗಿಲು ಮನಸ್ಸಿಲ್ಲಿ ಮೂಡಿತ್ತು. ತನ್ನ ಪ್ರೀತಿಯ ಗಂಡ ನಡೆಯುವ ಸ್ಥಿತಿಯಲ್ಲಿಯೇ ಇಲ್ಲದಿರುವಾಗ ಸೌದೆ ಕಡಿಯಲು ಹೊರಟುಬಿಟ್ಟನಲ್ಲಾ ! ಇನ್ನೇನು ಗತಿ ? ಎಂದು ಮನೆಯಿಂದ ಧಾವಿಸಿದಳು.

ಮಕ್ಕಳ ಜೊತೆ ಆಡಿಕೊಂಡಿರಬೇಕಾದ ಆರು ವರ್ಷದ ಮಗು ಲಕ್ಕಿ,

ಪಾಪ ! ಬಡತನದ ಬೇಗೆಯಲ್ಲಿ ಬೆಂದು ಎಲ್ಲವನ್ನೂ ಸಹಿಸುವ ತಾಳ್ಮೆಯನ್ನು ಹೊಂದಿದ್ದಳು. ಬಿದ್ದ ಏಟಿನ ನೋವನ್ನು ನುಂಗಿ ಕೆಲಸವಲ್ಲಿ ತೊಡಗಿದಳು.

ಮಲ್ಯಾ ತೋಪಿಗೆ ಬಂದು ಅಲ್ಲೆಲ್ಲಾ ಹುಡುಕಾಡಿದಳು. ಗಂಗನಾಯಕ ಸುಸ್ತಾಗಿ ಒಂದು ಮರದ ಬುಡದಲ್ಲಿ ಮಲಬಿಟ್ಟಿದ್ದ.

ಓಡಿ ಹೋಗಿ ಗಂಡನನ್ನು ಎತ್ತಿ ಕೂರಿಸಿದಳು, ಮಲ್ಯಾ "ಅಲ್ಲಾ ! ನಿನ್ನ ಕೈಲಿ ಆಗಾಕಿಲ್ಲ.... ಸೌದೆ ಸೊಪ್ಪಿಗೆ ವೋಗ್‌ಬ್ಯಾಡಾ.... ಮನೆ ತಾವೇ ಸುಧಾರಿಸಿಕೋ, ಅಂತ ಏಟ್‌ಸಲ ನಿನ್ ತಾವ್ ಬಡ್‌ಕೋಣೋದು ? ನೀನೆಲ್ಲಿ ಕೇಳ್ತೀಯಾ ? ಈ ಕಾಡ್ನಾಗೆ ನೀನು ಪ್ರಾಣ ಬಿಟ್ರೆ ಕೇಳೋವ್ರು ಯಾರವ್ರೆ ? ಎಂದು ಗಳ - ಗಳ ಅತ್ತಳು ಮಲ್ಯಾ.

ಅವಳನ್ನು ಒರಗಿಕೊಂಡಂತೆಯೇ ಅವನು ಪ್ರೀತಿಯಿಂದ ಅವಳ ಬೆನ್ನ ಮೇಲೆ ಕೈ ಆಡಿಸುತ್ತಾ ಅಯ್ಯೋ !.... ನನ್ನ ಮುದ್ದು ಮಲ್ಲಾ ! ನಾನು ಪಾಪಿ, ನಿನ್ನನ್ನು ಒಂದು ದಿನಕ್ಕಾದರೂ ಸುಖವಾಗಿ ಮಡಗಲಿಲ್ಲ. ಇರುವ ಒಂದೇ ಒಂದು ಗಿಣಿಯಂಥಾ ಮೊಗ ! ಅದಕ್ಕೆ ಹೊಟ್ಟೆ ತುಂಬಾ ಊಟಕ್ಕಿಕ್ಕಲೂ ನಮಗೆ ಚೇತನ್ಯ ಇಲ್ಲ.... ಎಂದು ಕಣ್ಣೀರಿಟ್ಟ.

ಸಧ್ಯ....ನೀನು ಹುಷಾರಾದ್ರೆ ಎಲ್ಲಾ ಮಾಡಿದ ಹಂಗೆ. ಬಾ. ಮನೆಗೆ ಹೋಗಾನ. ಎಂದು ಅವನನ್ನು ಮೆಲ್ಲನೆ ಎಬ್ಬಿಸಿದಳು. ಅವನು ಕಡಿದಿದ್ದ ಸೌದೆಯನ್ನು ಕಂತೆಗಳಾಗಿ ಕಟ್ಟಿ ಮಲ್ಯಾ ತಾನೇ ತಲೆ ಮೇಲೆ ಹೊತ್ತು ಒಂದು ಕೈಯಿಂದ ಗಂಡನ ತೋಳನ್ನು ಹಿಡಿದು ನಡೆಸಿಕೊಂಡು ಬಂದಳು.

ಆ ಬಡವರ ಬಾಳು ದಿನ ನಿತ್ಯ ಹೀಗೆಯೇ ಕಷ್ಟದಿಂದ ನಡೆಯುತ್ತಿತ್ತು. ಆದರೆ ಅವರ ಅನ್ಯೋನ್ಯ ದಾಂಪತ್ಯ ಪ್ರೇಮ ಎಲ್ಲವನ್ನು ಸಹಿಸುವ ಶಕ್ತಿಯನ್ನು ಕೊಟ್ಟಿತ್ತು.

ತಮ್ಮ ಬಾಳ ಬೆಳಕಾಗಿದ್ದ ಆ ಒಂದು ಮಗು ಲಕ್ಕಿಯನ್ನು ಚೆನ್ನಾಗಿ ಸಾಕಲು ಇಬ್ಬರು ಹೆಣಗುತ್ತಿದ್ದರು

ಆದರೆ ಅವರ ದುರಾದೃಷ್ಟ ಗಂಗನಾಯಕನ ಖಾಯಿಲೆಯಿಂದಾಗಿ ಅವರ ಸಂಸಾರ ಬಿರುಗಾಳಿಯ ಬಡಿತಕ್ಕೆ ಸಿಕ್ಕಿದ ಹಡಗಿನಂತಾಗಿತ್ತು.

ತನ್ನ ಪ್ರೀತಿಯ ಗಂಡ ಹೇಗಾದರೂ ಉಳಿದರೆ ಸಾಕೆಂದು ಮಲ್ಯಾ; ಸೌದೆ-ಸೊಪ್ಪು, ಮಾರಿ ಬಂದ ನಾಲ್ಕು ಪುಡಿಕಾಸನ್ನೂ ಅವನ ಔಷಧಿ

ಪಥ್ಯಕ್ಕಾಗಿ ಇಟ್ಟು ತಾವು ತಾಯಿ ಮಗಳು ಅದೆ ಹೊಟ್ಟೆ ಉಂಡು ಮಲಗುತ್ತಿದ್ದರು.

ಇವರು ವಾಸವಾಗಿದ್ದ, ಬ್ಯಾಡರಹಳ್ಳಿ, ಸುಮಾರು 50-60 ಮನೆಗಳ ಸಣ್ಣ ಹಳ್ಳಿ. ಮನೆಗಳೆಂದರೆ ತೀರಾ ಗುಡಿಸಲುಗಳೇ ಹೆಚ್ಚು.

ಅಲ್ಲಲ್ಲೇ ಕಲ್ಲು-ಗುಡ್ಡಗಳಿಂದ ಕೂಡಿದ ತಗ್ಗು-ದಿನ್ನೆಯಭೂಮಿ. ಸಮತಲವಲ್ಲದ ಆ ಪ್ರದೇಶದಲ್ಲಿ ಒಂದರ ಸಂದಿಯಲ್ಲೊಂದು ಒತ್ತಾಗಿ ಗುಡಿಸಲುಗಳನ್ನು ಕಟ್ಟಿಕೊಂಡು ಬಡ ಕುಟುಂಬಗಳು ವಾಸವಾಗಿದ್ದುವು.

ಸುತ್ತ ಮುತ್ತಲೂ ಕಾಡು ಪ್ರದೇಶವಿದ್ದುದರಿಂದ ಆ ಬಡ ಕುಟುಂಬಿಗಳು ಸೌದೆ-ಸೊಪ್ಪು ಮಾರಿ ಬದುಕುತ್ತಿದ್ದರು.

ಲಕ್ಕವಳ್ಳಿಯ ಜಲಾಶಯದಿಂದ ಒಂದು ಸಣ್ಣ ಕಾಲುವೆಯು ಆ ಹಳ್ಳಿಯ ಮಗ್ಗುಲಿಂದ ಹರಿದು ಹೋಗಿದ್ದುದರಿಂದ ಆ ಸುತ್ತ ಮುತ್ತಲ ಪ್ರದೇಶದಲ್ಲಿ ಯಥೇಚ್ಛವಾಗಿ ಗಿಡಮರಗಳು ಬೆಳೆದು ಹಚ್ಚ ಹಸುರಿನ ವನಶ್ರೀಯು ಎಲ್ಲರ ಮನಸ್ಸನ್ನು ಸೆಳೆಯುತ್ತಿತ್ತು.

ಲಂಬಾಣಿ ಮಲ್ಯಾ ಮನೆ ಅಲ್ಲೇ ಗುಡ್ಡದ ಬುಡದಲ್ಲೊಂದು ಗುಡಿಸಲು ಆ ಗುಡಿಸಲಾದರೂ ಎಲ್ಲಾ ಕಿತ್ತು ಹೋಗಿ ಮಳೆ ಬಿಸಿಲು ಧಾರಾಳವಾಗಿ ಒಳಗೆ ಬರಬಹುದಾಗಿತ್ತು.

ಗುಡಿಸಲ ಮುಂದೆ ಕುರಿಗಳನ್ನು ಕೂಡುವ ಕೊಪ್ಪಲು ಮಗ್ಗುಲಲ್ಲಿ ಕೋಳಿಗೆ ಕವುಚುವ ಮಕ್ಕರಿ. ಒಂದು ಸೋರೆ ಗಿಡದ ಬಳ್ಳಿ ಗುಡಿಸಲ ಮೇಲೆ ಹಬ್ಬಿ ಹೂ ಬಿಟ್ಟಿತ್ತು. ಚಳಿಗಾಲ ಬಿಸಲಿಗೆ ಬೆನ್ನೊಡ್ಡಿ, ಗುಡಿಸಲ ಮುಂಭಾಗದ ಕಲ್ಲು ಹಾಸಿನ ಮೇಲೆ ಮಲ್ಯಾ ಕುಳಿತುಕೊಂಡು ಬಣ್ಣ-ಬಣ್ಣದ ಬಟ್ಟೆಯ ಚೂರುಗಳನ್ನು ಕೂಡಿಸಿ ರವಿಕೆ ಹೊಲಿಯುತ್ತಿದ್ದಳು.

ಅವಳು ಉಟ್ಟಿದ್ದ ಮಾಸಿದ ಕೆಂಪು ಲಂಗ ತೀರಾ ಹಳೆಯದಾಗಿ ಹರಿದಿತ್ತು. ಎದೆಯ ಮೇಲೆ ಮುಚ್ಚಿದ್ದ ದಟ್ಟದಂತಹ ತೇಪೆ ರವಿಕೆಯನ್ನು ಬೆನ್ನಿಗೆ ಬಿಗಿದಿದ್ದಳು.

ಅವಳ ಕೈಯ್ಯ ಮೂಳೆ ಬಳೆಗಳು ಹಿಂದಕ್ಕೂ ಮುಂದಕ್ಕೂ ಆಡುತ್ತಾ ಗೊಳ—ಗೊಳ ಶಬ್ದ ಮಾಡುತ್ತಿದ್ದುವು.

ಹಟ್ಟೀ ಮುಂದೆ ಕಿಚ-ಪಚನೆ ಓಡಾಡುತ್ತಿದ್ದ ಕೋಳಿ ಪಿಳ್ಳೆಗಳು ಅವಳ

ಕಣ್ಣಿಗೆ ಕಾಣಲಿಲ್ಲ.

ಬಿಸಿಲಿಗೆ ಬೆನ್ನೊಡ್ಡಿ ಕುಳಿತಿದ್ದ ಮಲ್ಯಾ; ಮಗಳನ್ನು "ಏಯ್ ಲಕ್ಕೀ.... ಬಾರವ್ವ ಇಲ್ಲೀ" ಎಂದು ಕೂಗಿದಳು. ಕುರಿ ಕೊಟ್ಟಿಗೆಯನ್ನು ಗುಡಿಸುತ್ತಿದ್ದ ಲಕ್ಕಿ ; ಹಂಗರ ಕಡ್ಡಿ ಪರಕೆ ಕೈಯಲ್ಲಿ ಹಿಡಿದೇ ಹೊರಕ್ಕೆ ಬಂದು "ಏನವ್ವಾ" ? ಎಂದಳು.

ನೋಡು ಮೊಗಾ ! ಕೋಳಿ ಪಿಳ್ಳೆಗಳು ದೂರ ದೂರ ಚದರಿ ಹೋಗ್ಯೆತೆ. ಅವನೆಲ್ಲಾ ಕೂಡಿಸಿ ಮುಕ್ಕರಿ ಕವಿಚಿಡು ಹಂಗೇ ಅವಕ್ಕೆ ಒಸಿ ಕಾಳು ಹಾಕಿ ಬಿಡು" ಅಂದಳು ಮಲ್ಯಾ.

ದೂರದ ತಿಪ್ಪೆಯ ಮೇಲೆ ಕೆದುಕುತ್ತಿದ್ದ ಕೋಳಿ ಪಿಳ್ಳೆಗಳನ್ನು ಒಂದು ಗೂಡಿಸಿ ಅವಕ್ಕ ಮುಕ್ಕರಿ ಕವಿಚಿದಳು ಲಕ್ಕಿ.

ಬಟ್ಟೆ ಹೊಲಿಯುತ್ತಾ ಕುಳಿತಿದ್ದ ತಾಯಿಯನ್ನು ನೋಡಿ "ಅದ್ಯಾಕವ್ವಾ ! ಬೆಳಗಾಗೆದ್ದು ಒಲೀತಾ ಕುಂತಿದ್ದೀ ? ಸೌದೆಗೆ ಓಗೋದು ಬ್ಯಾಡವಾ ? ಬಿಸಿಲೇರುತ್ತೈತೆ ! ನಡಿಯವ್ವಾ ಹೋಗಾನ" ಎಂದಳು ಲಕ್ಕಿ.

5 -6 ವರ್ಷದ ಹಸು ಕಂದ ತಿಂದು ಉಂಡು ಆಡಿಕೊಂಡಿರಬೇಕಾದ ಮಗುವಿಗೆ ಮನೆಯ ಕಷ್ಟದ ಚಿಂತೆ ನೋಡಿ ತಾಯಿಯ ಕರುಳು ಚುರುಕ್ .... ಎಂದಿತು.

ಅಯ್ಯೋ ! ನನ್ನ ಕಂದಾ ! ನಿನಗೆ ಉಣ್ಣೋಕೆ ಕೊಡಲಿಲ್ಲ ಉಡೋಕೆ ಕೊಡಲಿಲ್ಲ, ನಿನ್ನ ಕೈಲೂ ದುಡಿಸಿಕೊಳ್ಳುವುದೇ ಆಗ್ಯೆತೆ ! ನನ್ನ ಹಣೇಬರಹ. ಒಂದೆ ಕಣವ್ವ. ಒಸಿ ಗಂಜಿಮಾಡಿ ನಿಮ್ಮಪ್ಪನಿಗೆ ಕೊಟ್ಟು ಸೌದೆಗೆ ಹೋಗಾನ. ಎಂದು ಎದ್ದಳು ಮಲ್ಯಾ.

ಇಂತಹ ಕಷ್ಟ ಕಾರ್ಪಣ್ಯದಲ್ಲಿಯೂ ಲಕ್ಕಿ ಲಾವಣ್ಯಮಯಿಯಾಗಿ " ಕೆಸರಿನಲ್ಲರಳಿದ ಕಮಲದಂತೆ ಶೋಭಿಸುತ್ತಿದ್ದಳು ನೋಡಿದವರ ಕಣ್ - ಮನಗಳನ್ನು ಸೆಳೆಯುತ್ತಿದ್ದಳು.

೪

ವಿಶೂ ... ಏಳಪ್ಪಾ ! ಎಂಟು ಗಂಟೆ ಆಯ್ತಲ್ಲೋ ಏಳೋ ಎಂದು ಮಗನನ್ನೆಬ್ಬಿಸಲು ಮೂಗಳಿ ವಿಶೂ ಮಲಗಿದ್ದ ಕೊಠಡಿಗೆ ಬಂದಳು.

ವಿಶ್ವನಾಥ ಮಂಚದಲ್ಲಿ ಮೆತ್ತನೆಯ ಸುಪ್ಪತ್ತಿಗೆಯ ಮೇಲೆ ಆರಾಮವಾಗಿ ನಿದ್ರಿಸುತ್ತಿದ್ದ. ಅವನಿಗೆ ಯಾತರ ಚಿಂತೆ ? ತಾಯಿ ಅಷ್ಟು ಕೂಗಿದರೂ ಅವನಿಗೆ ಎಚ್ಚರವೇ ಇಲ್ಲ.

ಸೊಳ್ಳೆ ಪರದೆಯನ್ನು ಸರಿಸಿ ಅವನ ಹತ್ತಿರ ಬಂದು ಅಲುಗಾಡಿಸಿ " ಏಳೋ ವಿಶೂ ! ಸ್ಕೂಲಿಗೆ ಹೊತ್ತಾಗುತ್ತೆ. ಅಂದಳು ಮೃದುವಾಗಿ.

ಬೆಚ್ಚಗೆ ರಗ್ಗು ಹೊದ್ದು ಮಲಗಿದ್ದ ವಿಶ್ವನಾಥ ಈ ಮಗ್ಗುಲಿನಿಂದ ಆ ಮಗ್ಗುಲಿಗೆ ತಿರುಗಿ ನಿದ್ದೆ ಕಣ್ಣಿನಲ್ಲಿಯೇ "ಯಾಕಮ್ಮ ! ಇಷ್ಟು ಬೇಗ ಎಬ್ಬಿಸ್ತೀ ? ಚಳಿ ಕಣಮ್ಮ" ಎಂದು ಹೇಳಿ ರಗ್ಗನ್ನು ಮುಸುಕೆಳೆದು ಪುನಃ ಮಲಗಿದ.

ಎಲ್ಲರ ಮುದ್ದಿನಿಂದ ಸೋಮಾರಿಯಾಗುತ್ತಿರುವ ಮಗನನ್ನು ನೋಡಿ ಮಂಗಳೆಗೆ ರೇಗಿ ಹೋಗುತ್ತಿತ್ತು. "ಅತೀಮುದ್ದು ಗತೀಕೆಡಿಸಿತು" ಅನ್ನುವ ಹಾಗೆ ತಾನೊಂದು ಮಾತು ಅಂದರೆ ಎಲ್ಲರೂ ವಹಿಸಿಕೊಂಡು ಬಂದು ಅವನನ್ನು ಏರಿಸಿ ಬಿಟ್ಟಿದ್ದಾರೆ.

ಈಗ ತಾಯಿ ಅನ್ನುವುದೇ ಅವನಿಗೆ ಲಕ್ಷ್ಯವಿಲ್ಲದಾಗಿದೆ. ಇನ್ನು ಮೇಲೆ ಅವನ ಸುದ್ದಿಗೆ ಯಾರಾದರೂ ಬರಲಿ, ಆಗ, ಮಾತು, ಎಂದು ನಿರ್ಧಾರ ಮಾಡಿದಳು ಮಂಗಳೆ.

ಲೋ .... ವಿಶೂ .... ಏಳೋ ; ಹೊತ್ತಾಯ್ತು ಅಂತಿದ್ರೆ ತಿರಗಾ ಮಲಗಿದೆಯೇನೋ ! ಇದೇ ಸೋಮಾರಿತನ ಅಭ್ಯಾಸವಾಗೋಯ್ತು ನಿನಗೆ ! ಎಂದು ಅವನು ಹೊದ್ದಿದ್ದ ರಗ್ಗನ್ನು ಎಳೆದು ಅವನನ್ನು ಎಬ್ಬಿಸಿ ಕೂರಿಸಿದಳು.

ಇನ್ನೂ ಬೆಚ್ಚಗೆ ಮಲಗಿರಬೇಕೆಂದಿದ್ದ ವಿಶೂಗೆ ತಾಯಿ ಬಲವಂತವಾಗಿ ಎಬ್ಬಿಸಿದ್ದು ಅಸಮಾಧಾನವಾಯಿತು. " ಹೋಗಮ್ಮ ನಾನು ಏಳೋದು ಇಲ್ಲ ! ಇವತ್ತು ಸ್ಕೂಲಿಗೆ ಹೋಗೋದು ಇಲ್ಲ " ಎಂದು ಸಿಡುಕುತ್ತಾ ಪುನಃ ಮಲಗಿದನು

ಮಂಗಳೆಯ ಮನಸ್ಸಿನಲ್ಲಿ ಮೊದಲೇ ಮಗ ತನ್ನ ಮಾತು ಕೇಳುವುದಿಲ್ಲವೆಂಬ ಕೋಪ ಇತ್ತು. ಅವನ ಮೊಂಡಾಟ ನೋಡಿ ಇದ್ದದ್ದೂ ರೇಗಿತು " ಅಲ್ಲ ಕಣೋ ಪರದೇಸಿ ; ಈ ಮನೇಲಿ ತಿಂದು ಕೊಬ್ಬೇನೋ ನಿನಗೆ ? ನನ್ನ ಮಾತೂ ಅಂದ್ರೆ ಲಕ್ಷ್ಯಾನೇ ಇಲ್ಲ. ಇವತ್ತು ನೋಡ್ತೀನಿ ಏಳೋಲ್ವೇನೋ ? ಏಳೋಲ್ವೇ ? ಅಂದು ಪಟ - ಪಟನೆ ಅವನ ಬೆನ್ನಿಗೆ ಎರಡೇಟು ಹಾಕಿದಳು ಮಂಗಳೆ.

ಆ ವೇಳೆಗೆ ಎಲ್ಲಿದ್ದರೋ ಮಂಗಳೆಯ ಅತ್ತೆ ದುಡ-ದುಡನೆ ಬಂದು ಏನೇ ಮಂಗಳಾ ! ಬೆಳಗಾಗ ಏಳೋದಕ್ಕೆ ಮೊದಲೇ ಮಗೂನ ಹೊಡೀತಾ ಇದ್ದೀಯಲ್ಲೇ ! ನಿನಗೇನು ಬಂತು ? ಎಂದು ಕೂಗಾಡುತ್ತಾ ರೂಮಿನೊಳಕ್ಕೆ ಬಂದರು.

ವಿಶೂಗೆ ಪಕ್ಕಬಲ ಬಂದಂತಾಯಿತು, ಗಟ್ಟಿಯಾಗಿ ಅಳುತ್ತಾ "ಅಜ್ಜಿ ! ಅಮ್ಮ ಹೊಡೆದುಬಿಟ್ಳೂ" ಎಂದು ಇನ್ನೂ ಅಳು ಜೋರು ಮಾಡಿದ.

ಹೊಡೆಯೋದ್ಬಿಟ್ಟೆ ನೋವಂತೆ ಇವತ್ತು ! ಎದ್ದು ಬಾರೋ ಮುಖಾ ತೊಳೆದು ಕೊಂಡು ಸ್ನಾನ ಮಾಡು. ಎಂದು ಅವನ ರಟ್ಟೆ ಹಿಡಿದು ಎಬ್ಬಿಸಿದಳು ಮಂಗಳೆ.

ಬಿಡೇ! ಮಗೂನ ಏನ್ ಗೋಳ್‌ಗುಟ್ಟಸ್ತೀಯಾ ? ಅವನೇನು ಇನ್ನೂ ಎಳೇ ಮಗೂನೇ ? ಹಾಗ್ ಹೋಡಿತೀಯಲ್ಲಾ ! ಬಾಪ್ಪಾ! ವಿಶೂ!" ಎಂದು ಮೊಮ್ಮಗನ ಪರ ವಹಿಸಿದರು; ಪಾರ್ವತಮ್ಮ.

ಮಂಗಳೆಯ ಕೋಪ ನೆತ್ತಿಗೇರಿತು. "ಹೌದು! ಇನ್ನೂ ಏಳೇ ಮಗು ನೀವೆಲ್ಲಾ ಹೀಗೆ ಮುದ್ದು ಮಾಡೀ. ಮಾಡೀನೇ ಅವನು ಮೊದ್ದಾಗಿ ಕೂತಿರೋದು. ಹೊತ್ತಿಗೆ ಮುಂಚೆ ಎದ್ದು ಓದಿ ಬರೆದು ಮಾಡಿ ಕೊಳ್ಳೋದಕ್ಕೇನು ? ಇವನಿಗೆ ಧಾಡಿ ? ಪುಸ್ತಕ ಹಿಡಿಯೋದು ಅಂದ್ರೆ ಪ್ರಾಣ ಸಂಕಟ. ಇನ್ನೇನು ನಾಯೀನ ತೆಗೆದು ಕೊಂಡು ಹೋಗಿ ಉಪ್ಪರಿಗೆ ಮೇಲೆ ಕೂರ್ಸಿದ್ರೇ ಅದರ ಚಾಲ್ ಹೋಗುತ್ಯೇ ? ಎಂದು ಕೂಗಾಡಿದಳು.

ತಮ್ಮ ಆಫೀಸ್ ರೂಮಿನಲ್ಲಿ ಏನೋಬರೆಯುತ್ತಾ ಕುಳಿತಿದ್ದ, ಮೂರ್ತಿಗೆ ಇವರುಗಳ ಗಲಾಟೆಯಿಂದ ತಲೆ ಚಿಟುಗುಟ್ಟುವಂತಾಯಿತು ಅಲ್ಲಿಂದ ರೇಗಿಕೊಂಡೆ ಬಂದರು; "ಏನೇ ಇದೂ ರಾಮಾಯಣ ? ನಾನೇನು ಈ ಮನೆಯಲ್ಲಿ ಇರಬೇಕೊ ಎಲ್ಲಾದರೂ ಹಾಳಾಗಿ ಹೋಗಬೇಕೋ ? ನಿಮ್ಮ ಅವಾಂತರದಲ್ಲಿ ಆಫೀಸ್ ಕೆಲಸ ಒಂದೂ ಮಾಡೋಹಾಗೇ ಇಲ್ಲ ಗೋಳು ! ಯಾಕೋ ಕತ್ತೆ ಅಳ್ತಾ ಇದ್ದಿಯಾ ? ಎಂದು ಮಗನನ್ನು ಗದರಿದರು.

ವಿಶು ಬಿಕ್ಕುತ್ತಲೇ ಅಮ್ಮಾ ಹೊಡದ್ಲೂ ! ಅಂದ. " ಇನ್ನೇನು ಮೊದ್ಲಿಂದ್ಲೂ ಈ ಮಗೂ ಅಂದ್ರೆ ಅವಳಿಗಾಗೋಲ್ಲಪ್ಪ. ಎದ್ದ ಮಗ್ಗುಲಲ್ಲೆ ಬಾರ್ಸಿದಾಳೆ! ಪಾಪ! ಅವನೇನು ಮಾಡಿದ ? ಇನ್ನು ಇವಳ ಕೈಲೇ ಬೆಳೆಯೋಕೆ

ಬಿಟ್‌ಬಿಟ್ರೆ ಅವನ ಗತಿ ನಾನ್‌ಕಾಣೆ ಅಂದರು ಪಾರ್ವತಮ್ಮ.

ಈಗಂತೂ ಮಂಗಳೆ ಸುಮ್ಮನಿರದಾದಳು "ನೀವೇ ನೋಡೀಂದ್ರೆ ಹೀಗೆ ಅವನಿಗೆ ವಹಿಸಿಕೊಂಡೇ ನನ್ನ ಮಾತೂ ಅಂದ್ರೆ ಅವನಿಗೆ ಲಕ್ಷ್ಯವೇ ಇಲ್ಲ ಅಂದಳು ಸಿಟ್ಟಿನಿಂದ.

ಮಂಗಳೆಯ ಮನಸ್ಸು ಉದ್ರೇಕವಾದರೆ ಅದರ ಪರಿಣಾಮ ತುಂಬಾ ಕಷ್ಟವೆಂದು ಮೂರ್ತಿಗೆ ಗೊತ್ತು. ಇನ್ನು ಹೆಚ್ಚಿಗೆ ಪರಿಸ್ಥಿತಿ ಬಿಗಡಾಯಿಸಲು ಅವಕಾಶ ಕೊಡದೆ ತಾಯಿಯನ್ನೇ "ಅಮ್ಮಾ! ನೀನು ಸುಮ್ಮನಿರು. ಅವನು ತೀರಾ ಹೆಚ್ಚಿಹೋಗಿದ್ದಾನೆ. ಎಷ್ಟೊತ್ತ್ತೀ ಮಲಗೋದು! ಎಲ್ಲಾ ಮಕ್ಕಳಂತೆ ಹೊತ್ತಿಗೆ ಮುಂಚೆ ಎದ್ದು ಓದ್ಕೋ ಬೇಡ್ವನೋ! ಈಸಲ ಪಬ್ಲಿಕ್ ಪರೀಕ್ಷೆ ಅನ್ನೋದು ಜ್ಞಾನ ಬೇಡ್ವೇ ಎಂದು ಮಗನನ್ನೇ ಗದರಿದರು.

ಪಾರ್ವತಮ್ಮನಿಗೆ ಮಗ ಹೆಂಡತಿ ಪರ ವಹಿಸಿಕೊಂಡನಲ್ಲಾ! ಎಂದು ಸಿಟ್ಟುಬಂದಿತ್ತು "ಹೌದು ಕಣೋ ಮೂರ್ತಿ! ನಂದೇ ತಪ್ಪು! ಏನೋ ಕಡೆಗಾಲಕ್ಕೆ ಒಂದು ಕುಡಿ ಕಂಡೆನಲ್ಲಾ! ಅಂತ ಅದಕ್ಕಾಗಿ ಒದ್ದುಕೋತೇನಿ. ಅದೂ ತಪ್ಪು ಅಂದ್ರೆ ಇನ್ನು ನಿಮ್ಮ-ನಿಮ್ಮ ಸಂಸಾರ ನಿಮಗೆ ಅಪ್ಪಾ! ಅಣ್ಣ ಕಾಶಿಗೆ ಬರಹೇಳುತ್ತಲೇ ಇದ್ದಾನೆ. ಕಡೆಗಾಲ ಅಲ್ಲಾದ್ರೂ ಕಳೆದರೆ ಪುಣ್ಯಬರುತ್ತೆ. ಇನ್ನು ಈ ಮನೇಲಿ ಇರ್ಬಾರ್ದು ಕಣೋ ಎಂದು ಅಳತೊಡಗಿದರು.

ಅಯ್ಯೋ! ದೇವರೇ ......... ಒಳ್ಳೆ ಪ್ರಾಣಸಂಕಟ ಅಯ್ತಲ್ಲಾಮ್ಮ ಈಗ ನಿನಗೇನಮ್ಮ ಅಂದದ್ದು? ನೋಡಮ್ಮ ಯಾವ ಮಕ್ಕಳೇ ಆಗಲಿ! ತಪ್ಪು ಮಾಡಿದಾಗ ತಿದ್ದಬೇಕು. ಹಾಗೆ ಬುದ್ಧಿ ಕಳಿಸೋದಕ್ಕೆ ಒಬ್ಬರು ಒಂದೇಟು ಹಾಕಿದರೆ ಆ ಮನೆಯಲ್ಲಿ ಇನ್ನೊಬ್ಬರು ಆ ಮಗುವಿನ ಪರ ವಹಿಸಿಕೊಂಡರೆ ಆಯಿತು ಆ ಮಕ್ಕಳು ಕೆಟ್ಟು ಕೇಡಾಗ್ತಾರೆ.

ಮಕ್ಕಳ ಮನಸ್ಸು ಬಹಳ ಸೂಕ್ಷ್ಮ ಅವರಿಗೆ ತಾವು ತಪ್ಪು ಮಾಡಿದ್ದೇ ಸರಿ ಅನ್ನಿಸಿ ಬಿಡುತ್ತೆ. " ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ? ಅಂತ ಮುಂದೆ ದೊಡ್ಡವರಾದ ಮೇಲೆ ಅವರನ್ನು ತಿದ್ದುವುದು ಕಷ್ಟಾಮ್ಮ ಹೊತ್ತಿಗೆ ಮುಂಚೆ ಏಳು! ಅಂತ ಅವನನ್ನು ಎಬ್ಬಿಸಿದರೆ ಅವಳ ಮಾತು ಕೇಳಬೇಕೋ ಬೇಡವೋ ನೀನೇ ಹೇಳಮ್ಮ " ಅಂದರು ಶಾಂತವಾಗಿ ಮೂರ್ತಿ.

"ಅಪ್ಪಾ ! ಸೆಕೆಂಡ್ ಡೋಸ್ ಕಾಫಿ ಆರೋಯ್ತು ಎಲ್ಲಾ ಇಲ್ಲೇನು ಮಾಡ್ತಿದೀರಪ್ಪಾ ! ಎಂದು ಸುಶೀಲ ಕಾಫಿ ಲೋಟಗಳನ್ನೂ ಕೆಟ್ಲನ್ನೂ ಕೈಯ್ಯಲ್ಲಿ ಹಿಡಿದೇ ಅಲ್ಲಿಗೆ ಬಂದಳು.

ಅಲ್ಲಿಯ ಪರಿಸ್ಥಿತಿ ನೋಡಿ ಏನೋ ರಾದ್ಧಾಂತ ಆಗಿದೆ ಅನ್ನಿಸಿತು. ಅವಳಿಗೆ ವಿಶೂ ಅಂದರೆ ಅವಳಿಗೆ ತುಂಬಾ ಪ್ರೀತಿ. ಅವನನ್ನು ಮುದ್ದು ಮಾಡುವುದರಲ್ಲಿ ಅಜ್ಜಿಗಿಂತ ಒಂದು ಕೈ ಮೇಲು.

ಲೋಟಕ್ಕೆ ಕಾಫಿ ಬಗ್ಗಿಸಿ ಅಪ್ಪನಿಗೆ ಕೊಡುತ್ತಾ ! ಯಾಕಪ್ಪಾ ವಿಶೂ ಅಳುತ್ತಿದ್ದಾನೆ ? ಅಂದಳು.

" ಇಲ್ಲಿ ಒಂದಂಕ ನಾಟಕ ಮುಗೀತು ಕಣೇ ಸುಶೀ ! ನೀನೆಲ್ಲಿ ಹೋಗಿದ್ದೆ ? ಅಲ್ಲಾಮ್ಮ ನೀನು ಏಳೋವಾಗ್ಲೇ ವಿಶೂನೂ ಎಬ್ಬಿಸಿ ಓದೋದಕ್ಕೆ ಕೂರಿಸು ಅಂತ ಎಷ್ಟು ದಿವಸ ನಿನಗೆ ಹೇಳೋದು ? " ಎಂದು ಮಗಳನ್ನು ಆಕ್ಷೇಪಿಸಿದರು ಮೂರ್ತಿ.

ಅಲ್ಲಾಪ್ಪ ! ನಾನು ಅಡಿಗೇ ಮನೇಲಿ ಕಾಫಿ ತಯಾರಿಕೆಗೆ ಕೂತಿದ್ದೆ. ಈ ಮನೇಲೋ ಇದೇ ಒಂದೂರು ಅಡಿಗೇಮನೇನೆ ಒಂದೂರು ಇಲ್ಲೇನಾಯ್ತು ಅಂತ ನನಗೇನು ಗೊತ್ತು ? ಒಟ್ಟಿನಲ್ಲಿ ವಿಶೂಗೆ ಪಾಪ. ಒದೆ ಬಿದ್ದಿರಬಹುದೂಂತ ಕಾಣುತ್ತೆ ! ಅದೂ .... ಅಮ್ಮನಿಂದ ! ಅಲ್ವೇನಪ್ಪ ವಿಶೂ ? ಅಂದಳು ಸುಶೀ.

ಆ ವೇಳೆಗೆ ಪಾರ್ವತಮ್ಮನೂ, ಮಂಗಳೆಯೂ ಅಲ್ಲಿರಲಿಲ್ಲ. ತಮ್ಮ ತಮ್ಮ ಕೆಲಸಕ್ಕೆ ಹೊರಟು ಹೋಗಿದ್ದರು. ಮೂರ್ತಿ ಬಂದು ಮಂಚದಮೇಲೆ ಮಗನ ಪಕ್ಕದಲ್ಲಿ ಕುಳಿತು ಕಾಫಿ ಕುಡಿಯುತ್ತಾ ಮಗನ ಬೆನ್ನಿನ ಮೇಲೆ ಕೈಯಾಡಿಸಿದರು ಪ್ರೀತಿಯಿಂದ

ಅಲ್ಲಾ ಕಣೋ ವಿಶೂ ! ನೀನಿನ್ನೂ ಎಳೀ ಮಗೂನೇ ? ಎಂಟು ಗಂಟೇವರೆಗೂ ಮಲಗೋದಕ್ಕೆ ? ಹನ್ನೆರಡು ವರ್ಷದೋನು ಇನ್ನೂ L.S. ಸ್ಟಾಂಡರ್ಡ್‌ನಲ್ಲೇ ಇದ್ದೀಯಪ್ಪ. ಸುಶೀ ನೋಡು ಹೇಗ್ ಓದ್ತಾಳೆ, ನಿನಗಿಂತ ಎರಡುವರ್ಷ ದೊಡ್ಡೋಳು ಅಷ್ಟೇ ಆಗ್ಲೇ ಕಾಲೇಜಿನಲ್ಲಿ ಓದ್ತಿದಾಳಲ್ಲೋ ! ಗಂಡು ಹುಡುಗ ನೀನು ಹೀಗೆ ಸೋಮಾರಿ ಆದರೆ ನಾಚಿಗ್ಗೇಡಪ್ಪ. ಅಂದರು

ವಿಶೂ ತಂದೆ ಮಾತನ್ನೆಲ್ಲಾ ಕೇಳಿಸಿಕೊಂಡು ತಲೆ ತಗ್ಗಿಸಿ ಸುಮ್ಮನೆ ಕುಳಿತಿದ್ದ.

ಸುಶೀಲನೇ " ಸರೀಪ್ಪಾ ! ಇನ್ನು ಮೇಲೆ ವಿಶೂನೂ ಬೆಳಗಿನ ಜಾವ ನನ್ನ ಜೊತೇಗೇ ಎದ್ದು ಓದಿ ಕೊಳ್ಳುತ್ತಾನಪ್ಪಾ ! ಎಂದಳು. ಅವನ ಪರವಾಗಿ.

" ನೋಡು ಸುಶೀ ನಿನಗೆ ಒಂದು ಮಾತು ಹೇಳಬೇಕೂ ಅಂತಿದ್ದೆ. ನೆನ್ನೆ ಇವನ ಕಾನ್ವೆಂಟ್ ಸಿಸ್ಟರ್ ಸಿಕ್ಕಿದ್ದರು ಅವರು ಅದೇ ಹೇಳಿದರು "ನಿಮ್ಮ ಮಗನ ಓದಿನ ಕಡೆ ಸ್ವಲ್ಪ ನಿಗಾಕೊಡಿ ! ಇಲ್ಲಿವರೆಗೂ ನಮ್ಮ ಕೈಯ್ಯಲ್ಲೇ ಇತ್ತು ಪಾಸ್ ಮಾಡಿದೆವು. ಈಸಲ **L.S.** ಪಬ್ಲಿಕ್ ಪರೀಕ್ಷೆ ನಾವೇನೂ ಮಾಡೋಹಾಗಿಲ್ಲ. ಅಂದರು ಸುಶೀ, ಲೆಕ್ಕ ಇಂಗ್ಲಿಷ್ ಅವನ ತಲೆಗೇ ಹತ್ತೋಲ್ಲಾಮ್ಮ. ನೀನು ಸ್ವಲ್ಪ ನಿಗಾ ಕೊಡಬೇಕು " ಎಂದು ಹೇಳಿ ಮೂರ್ತಿ ತಮ್ಮ ಕೊಠಡಿಗೆ ಹೋದರು

ಸುಶೀ ತಮ್ಮನನ್ನು ಮುದ್ದು ಮಾಡುತ್ತಾ " ಏ .... ಎದ್ದು ಬಾರೋ ವಿಶೂ. ನಮಗೆಲ್ಲಾ ಎರಡು ಸಲ ಕಾಫಿ ಆಯಿತು. ನೀನಿನ್ನೂ ಮುಖಾನೇ ತೊಳೀಲಿಲ್ಲಾಪ್ಪ ; ಪೇಸ್ಟು ಬ್ರಷ್ಷು ಅಲ್ಲೇ ಇಟ್ಟಿದೀನಿ ಬಿಸಿ ನೀರಿನಲ್ಲಿ ಮುಖ ತೊಳೆದು ಬಾ ! ಏಳು, ಕಾಫಿ ಆರ್ಹೋಗುತ್ತೆ. ಅಂದಳು.

ವಿಶೂ ಸ್ವಭಾವ ಸ್ವಲ್ಪ ಮೊಂಡೇ, ಅವನು ಹಟಮಾಡಿದರೆ ಯಾರ ಮಾತನ್ನೂ ಕೇಳುತ್ತಿರಲಿಲ್ಲ. ಆದರೆ ಸುಶೀ ಮಾತು ! ಎಂದರೆ ವೇದಃ ವಾಕ್ಯ ಅವಳು ಹೇಳದಂತೆ ಕೇ ; ಬಿಡುತ್ತಿದ್ದ.

ವಿಶ್ವನಾಥ ಓದುತ್ತಿದ್ದ ಕಾನ್ವೆಂಟಿಗೆ ಮೂರ್ತಿಯವರಿಂದ ಬೇಕಾದಷ್ಟು ಸಹಾಯ ದೊರಕಿತ್ತು.

ದೊಡ್ಡ ಇಂಜಿನಿಯರ್ ಆಗಿದ್ದ ಅವರು ತಮ್ಮ ಅಧಿಕಾರದಲ್ಲಿ ಒಂದು ವಿಶಾಲ ಕಟ್ಟಡವನ್ನೇ ಕಟ್ಟಿಸಿ ಕೊಟ್ಟಿದ್ದರು. ಮಗನನ್ನು ಕ್ಲಾಸಿಗೆ ಸೇರಿಸುವಾಗ ಎಲ್ಲರಿಗಿಂತ ಹೆಚ್ಚಿಗೆ ಡೊನೇಷನ್ ಕೊಟ್ಟಿದ್ದರು.

ಅಲ್ಲದೆ ಆಗಾಗ ನಡೆಯುವ ಸಮಾರಂಭ ಸಂದರ್ಭಗಳಲ್ಲಿಯೂ, ವಿದ್ಯಾರ್ಥಿ ಮಕ್ಕಳಿಗೆ ಹಂಚುವುದಕ್ಕಾಗಿ ವಿವಿಧ ಬಹುಮಾನಗಳನ್ನೂ ತಾವೇ ತೆಗೆದು ಕೊಡುತ್ತಿದ್ದರು.

ಕಾನ್ವೆಂಟಿನವರು ಉಪಾಯವಾಗಿ ಸಹಾಯ ಪಡೆಯುವುದರಲ್ಲಿ ಬಹಳ ಗಟ್ಟಿಗರು. ಉದಾರವಾದ ಸಹಾಯವನ್ನು ಸ್ಮರಿಸಿ ತಮ್ಮ ಕೃತಜ್ಞತೆಯನ್ನು ತೋರಿಸಲು ಒಂದು ಸನ್ಮಾನ ಸಮಾರಂಭವನ್ನೇರ್ಪಡಿಸಿ ಮೂರ್ತಿಯವರನ್ನು ಹೊಗಳಿ ಹೊಟ್ಟೆ ತುಂಬಿಸಿ ಒಂದು ಹೂವಿನ ಹಾರ ಹಾಕಿ ಗೌರವಿಸಿದ್ದರು.

ಇನ್ನು ಅವರ ಮಗನ ವಿಷಯದಲ್ಲಿ ಕೇಳಬೇಕೆ ? ಅವನು ಓದಿ ಬರೆಯದೇ ಇದ್ದರೂ ಪ್ರತಿ ವರ್ಷ ಪಾಸಾಗುತ್ತಿದ್ದ. ಪ್ರತಿಯೊಂದು ಆಟ ಪಾಟಗಳಲ್ಲಿಯೂ ವಿಶ್ವನಾಥನ ಪಾತ್ರ ಇದ್ದೇ ಇರುತ್ತಿತ್ತು.

ಆಟದಲ್ಲೀನೋ ವಿಶು ತಪ್ಪದೆ ಪ್ರೈಜ್ ತೆಗೆಯುತ್ತಿದ್ದ. ಆರೋಗ್ಯ ದೃಢಕಾಯನಾಗಿ ಬೆಳೆದಿದ್ದ ಅವನು ರನ್ನಿಂಗ್ ರೇಸ್, ಹೈ ಜಂಪ್, ಲಾಂಗ್ ಜಂಪ್, ಕಬಡ್ಡೀ ಎಲ್ಲಾ ಆಟಗಳಲ್ಲಿಯೂ, ಮೊದಲಿಗನಾಗಿ ಬರುತ್ತಿದ್ದ.

ಸಭೆಯಲ್ಲಿ ಮಗ ಬಹುಮಾನ ತೆಗೆದುಕೊಂಡಾಗ ಮೂರ್ತಿಯವರಿಗೆ ಹಿಡಿಸಲಾರದ ಹಿಗ್ಗು. ವಿಶು ಸುಂದರನಾದ ಹುಡುಗ. ವಯಸ್ಸಿಗೆ ಮೀರಿದ ಬೆಳವಣಿಗೆ, ತನ್ನ ತಂದೆಯ ದೊಡ್ಡಸ್ತಿಕೆ ಬಗ್ಗೆ ಅವನಿಗೆ ಬಹಳ ಹೆಮ್ಮೆ ಇತ್ತು. ಒಂದು ಬಗೆಯ ಠೀವಿಯಿಂದ ನಡೆಯುತ್ತಿದ್ದ. ನೀಟಾಗಿ ಡ್ರೆಸ್ ಮಾಡಿಕೊಂಡು ಕಾನ್ವೆಂಟಿನ ಸಮಾರಂಭಗಳಲ್ಲಿ ಓಡಾಡುತ್ತಿದ್ದರೆ ನಕ್ಷತ್ರಗಳ ಮಧ್ಯೆ ಶೋಭಿಸುವ ಚಂದ್ರನಂತೆ ಎಲ್ಲಾ ಮಕ್ಕಳಲ್ಲಿ ಎದ್ದು ಕಾಣುತ್ತಿದ್ದ ವಿಶ್ವನಾಥ.

ಮಗನ ವಿದ್ಯಾಭ್ಯಾಸದ ವಿಚಾರದಲ್ಲಿ ಅಪಾರ ಆಸೆಯನ್ನಿಟ್ಟು ಕೊಂಡಿದ್ದರು ಮೂರ್ತಿ. ಮಗ ತನಗಿಂತಲೂ ದೊಡ್ಡ ಇಂಜಿನೀಯರ್ ಆಗಬೇಕೆಂದು ಅವರ ಆಸೆ. ಮಗ **L. S.** ಪಬ್ಲಿಕ್ ಪರೀಕ್ಷೆಗೆ ಕುಳಿತು ಕೊಳ್ಳುತ್ತಾನೆಂದು ಅವನಿಗೆ ಎಲ್ಲಾ ಸೌಕರ್ಯಗಳನ್ನೂ ಒದಗಿಸಿ ಮುದ್ದು ಮಾಡಿ ಓದಿಸುತ್ತಿದ್ದರು.

ಆಯಿತು ಪರೀಕ್ಷೆಯೂ ಮುಗಿಯಿತು. ಮಗ ಫಸ್ಟ್ ಕ್ಲಾಸ್ ಬಂದೇ ಬರುತ್ತಾನೆಂದು ಮೂರ್ತಿ ನಂಬಿದ್ದರು.

ಆದರೆ ರಿಜಲ್ಟ್ ಬಂದ ದಿವಸ ಅವರಿಗೆ ಬಹಳ ನಿರಾಸೆಯಾಯಿತು. ವಿಶೂ ಫೇಲಾಗಿದ್ದ.

ಸುಶೀ ಇಂಟರ್‌ಮೀಡಿಯಟ್‌ನಲ್ಲಿ ಸೆಕೆಂಡ್ ರ್‍ಯಾಂಕ್ ಬಂದಿದ್ದಳು. ಮಗಳು ರ್‍ಯಾಂಕ್ ಬಂದ ಸಂತೋಷಕ್ಕಿಂತಲೂ ಮಗ ಫೇಲಾದ ದುಃಖ ಮೂರ್ತಿಯವರನ್ನು ಕೊರೆಯುತ್ತಿತ್ತು.

ಇರುವ ಒಬ್ಬ ಮಗ ವಿದ್ಯದಲ್ಲಿ ಅವನಿಗೆ ಆಸಕ್ತಿಯಿಲ್ಲವಲ್ಲಾ ! ಹೆಣ್ಣು

ಮಕ್ಕಳು ಬೇಡ-ಬೇಡವೆಂದರೂ ಓದುತ್ತಾರೆ. ಅವರಿಗಾಗಿ ನಾವು ಯಾವ ಆಸಕ್ತಿಯನ್ನೂ ವಹಿಸುವುದಿಲ್ಲ. ಎಲ್ಲಾ ಕರ್ಮ. ಎಂದುಕೊಂಡು ಮೂರ್ತಿಯವರು ಮನೆಯಲ್ಲಿ ಪಾಠ ಹೇಳಲೂ ಮಗನಿಗೆ ಒಬ್ಬ ಮೇಷ್ಟ್ರನ್ನು ಗೊತ್ತುಮಾಡಿದರು.

ಸಾಮಾನ್ಯವಾಗಿ ಮನುಷ್ಯನು ಅನೇಕ ಆಶೋತ್ತರಗಳನ್ನಿಟ್ಟು ಕೊಂಡು ಅವುಗಳ ಪ್ರಾಪ್ತಿಗಾಗಿ ಸತತ ಪ್ರಯತ್ನ ಪಡುತ್ತಾನೆ. ತಾನು ನೆನೆಸುವುದೆಲ್ಲಾ ನೆರವೇರಬೇಕೆಂದು ಪ್ರತಿಯೊಬ್ಬನೂ ಆಸೆಪಡುತ್ತಾನೆ. ಆ ಆಸೆಯೇ ಅವನಿಗೆ ಸ್ಫೂರ್ತಿ.

ಆದರೆ ಮನುಷ್ಯ ಪ್ರಯತ್ನಕ್ಕೆ ಮೇಲೆ ದೈವದಾಟ ಒಂದು ಅದೃಶ್ಯ ವಾಗಿ ನಡೆಯುತ್ತಲೇ ಇರುತ್ತದೆ. ಅನೇಕ ಆಕಸ್ಮಿಕ ಘಟನೆಗಳು ಮನುಷ್ಯನ ಇಚ್ಛೆಯಿಲ್ಲದೆಯೇ ನಡೆದು ಹೋಗುತ್ತದೆ. ಆಗ ಅವನ ಪ್ರಯತ್ನವೆಲ್ಲಾ ವ್ಯರ್ಥ.

ದೈವೇಚ್ಛೆಯು ಒಳ್ಳೆಯದಾಗಿದ್ದರೆ ಯಾವ ಪ್ರಯತ್ನವಿಲ್ಲದೆಯೇ ಅದೃಷ್ಟವು ಅವನ ಮನೆ ಬಾಗಿಲಿಗೆ ಹುಡುಕಿಕೊಂಡು ಬರುತ್ತದೆ.

ತನಗೆ ಅಹಿತವಾದ ವಿಷಯವು ಮನುಷ್ಯನಿಗೆ ತಿಳಿಯದಿರುವುದರಲ್ಲಿ ಒಂದು ವಿಧವಾದ ನೆಮ್ಮದಿ ಇರುತ್ತದೆ. ಮೂರ್ತಿಯವರು ವಿಶ್ವನಾಥನನ್ನು ತಮ್ಮ ವಂಶೋದ್ಧಾರಕನೆಂದು ಅವನ ಭವಿಷ್ಯದಲ್ಲಿ ಆಶಾ ಕೋಟೆಯನ್ನು ಕಟ್ಟಿ ಮಗನ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು.

ಆದರೆ ! ವಿಷಯವನ್ನರಿತ ಮಂಗಳೆ ಹೇಗೆ ನೆಮ್ಮದಿಯಿಂದಿದ್ದಾಳು ? ವಿಶ್ವನಾಥನಿಗೆ ವಿದ್ಯೆದಲ್ಲಿ ಆಸಕ್ತಿಯಿಲ್ಲದಿರುವುದಕ್ಕೆ ಕಾರಣ ಅವಳಿಗೆ ಚೆನ್ನಾಗಿ ಗೊತ್ತು.

ರಾಜೀ, ಸುಮೀ, ಸುಶೀ ಇವರೆಲ್ಲಾ ಬೇಡ - ಬೇಡವೆಂದರೂ ತಾವು ಓದಿಯೇ ತೀರಬೇಕೆಂಬ ಆಸೆಯಿಂದ ಪರೀಕ್ಷೆಗಳಲ್ಲಿ ರ್‍ಯಾಂಕ್ ಬರುತ್ತಿದ್ದರು.

ಅವರ ಅಪ್ಪನ ಮೇಧಾಶಕ್ತಿ ಹೆಣ್ಣು ಮಕ್ಕಳಿಗೆ ತಾನಾಗಿಯೇ ರಕ್ತ ಗತವಾಗಿ ಬಂದಿತ್ತು. ಆದರೆ ಇವನ ರಕ್ತವೇ ಬೇರೆ. "ಬೇವಿನ ಮರಕ್ಕೆ ಹಾಲೆರೆದರೆ ಮಾವಿನ ಹಣ್ಣು ಬಿಡಲು ಸಾಧ್ಯವೇ" ?

ವಿದ್ಯೆದ ಗಂಧವೇ ಇಲ್ಲದ ಲಂಬಾಣಿಗಳ ಸಂತಾನವಾದ ಇವನಿಗೆ ವಿದ್ಯೆ

ಹೇಗೆ ಹತ್ತಲು ಸಾಧ್ಯ ? ಎಂದು ಮಂಗಳೆಯ ಮನಸ್ಸು ಕೊರೆದು ಕೊರೆದು ಕೇಳುತ್ತಿತ್ತು.

ಆದರೆ !.... ಹಾಗೆಂದು ಯಾರ ಮುಂದೆ ಹೇಳುವುದು ಸಾಧ್ಯ ? ತಾನು ತುಳಿದ ತಪ್ಪು ದಾರಿಯಲ್ಲಿ ಬಹಳ ದೂರ ಮುಂದೆ ಹೊರಟು ಹೋಗಿಯಾಗಿತ್ತು. ಇನ್ನು ಹಿಂತಿರುಗುವಂತಿಲ್ಲ. ಅದು ಒಪ್ಪುಲ್ಲಿಗೆ ಮುಟ್ಟಬೇಕು.

ಮಗನೆಂದು ಇಷ್ಟು ಕಾಲ ರಹಸ್ಯವನ್ನು ಬಚ್ಚಿಟ್ಟಿದಾಯಿತು. ಇನ್ನು ಹೊರಗೆಡಹುದರಿಂದ ಇಲ್ಲದ ರಾದ್ಧಾಂತ. ಮನೆಯವರೆಲ್ಲರಂತೆ ತಾನೂ ಅವನನ್ನೇ ತನ್ನ ಮನೆಯ ಬೆಳಕೆಂದುಕೊಳ್ಳಬೇಕು.

ಎಂದು ಮಂಗಳೆ ತನ್ನಷ್ಟಕ್ಕೆ ತಾನೇ ಸಮಾಧಾನ ಮಾಡಿಕೊಳ್ಳುತ್ತಿದ್ದಳು. ಆದರೆ ಒಂದು ಬಾರಿ ತನ್ನ ಕಣ್ಣು ಮುಂದೆ ಸುಳಿದು ಮಾಯವಾದ ಮಗಳನ್ನು ಮರೆಯದಾದಳು.

ಮುದ್ದಾದ ಮುಖ, ಕರಿ ದುಂಬಿಯಂತಹ ಕಣ್ಣುಗಳು, ಕೆದರಿದ ಕೂದಲು, ಕೊಳಕು ಬಟ್ಟೆಯಾದರೂ, ಮಗು ಹತ್ತು ಮಕ್ಕಳಲ್ಲಿ ಎತ್ತಿ ಕಾಣುವಂತಿತ್ತು. ಅದರ ಚೆಲುವು ಮನ ಸೆಳೆಯುತ್ತಿತ್ತು.

ತನ್ನ ಆ ಮುದ್ದು ಮಗು ಸೌದೆಯನ್ನು ಹೊತ್ತು ನಿಂತ ಅಂದಿನ ದೃಶ್ಯ ಮಂಗಳೆಯ ಚಿತ್ತ ಫಲಕದ ಮೇಲೆ ಮಾಸದೆ ಅಚ್ಚೊತ್ತಿತ್ತು.

ಮತ್ತೊಂದಾದರೂ ಮಗಳನ್ನು ಕಂಡೇನೇ ? ಎಂಬ ಕಾತುರದಿಂದಲೇ ದಿನಗಳನ್ನು ದೂಡುತ್ತಿದ್ದಳು ಮಂಗಳೆ.

ಮೂರ್ತಿ ಅವರು ಲಕ್ಕವಳ್ಳಿಯನ್ನು ಬಿಟ್ಟು ಬಂದು ಏಳು - ಎಂಟು ವರ್ಷಗಳಾದುವು. ಅವರ ಸಂಸಾರದಲ್ಲಿ ಎಷ್ಟೋ ಬದಲಾವಣೆಗಳಾಗಿದ್ದುವು. ತಂಗಿ ದೇವಕಿಗೆ ಉತ್ತಮವಾದ ವರನನ್ನು ನೋಡಿ ಮದುವೆ ಮಾಡಿದ್ದರು. ಅವಳ ಗಂಡ ಪೂನಾದಲ್ಲಿ ಇಂಜಿನೀಯರ್ ಆಗಿದ್ದ. ಅಷ್ಟು ದೂರ ಮಗಳನ್ನು ಕಳುಹಿಸಿಬಿಡಬೇಕಲ್ಲಾ ಎಂಬುದೊಂದೇ ಪಾರ್ವತಮ್ಮನವರ ಪೇಚಾಟವಾಗಿತ್ತು.

ಆದರೆ ವರ್ಷಕ್ಕೊಂದು ಬಾರಿ ಬಂದಾಗ ಮಗಳ ಸುಖ ಸಂತೋಷ, ಐಶ್ವರ್ಯಗಳನ್ನು ನೋಡಿ ಪಾರ್ವತಮ್ಮನು ನೆಮ್ಮದಿಯಿಂದಿದ್ದರು. ಮೂರ್ತಿ

ಯವರು ತಮ್ಮ ಹೆಣ್ಣು ಮಕ್ಕಳಾದ ರಾಜೇಶ್ವರಿ ಸುಮಿತ್ರ, ಇಬ್ಬರಿಗೂ ಮದುವೆ ಮಾಡಿ ಕಳುಹಿಸಿಕೊಟ್ಟಿದ್ದರು. ಅವರೂ ಕೂಡ ಗಂಡನ ಮನೆಯಲ್ಲಿ ಸುಖವಾಗಿ ಬದುಕುತ್ತಿದ್ದರು. ಮಂಗಳೆಗೆ ಸಂಸಾರದಲ್ಲಿ ಮತ್ತಾವ ಚಿಂತೆಯಿಲ್ಲದಿದ್ದರೂ, ಈ ಎಲ್ಲಾ ಹೆಣ್ಣು ಮಕ್ಕಳಂತೆ ತನ್ನ ಮತ್ತೊಂದು ಕುಡಿ ಸುಖವಾಗಿ ಬಾಳಲು ಈ ಮನೆಯಲ್ಲಿ ಋಣವಿಲ್ಲದೇ ಹೋಯಿತಲ್ಲಾ ! ಎಂಬ ಕೊರಗು ಇದ್ದೇ ಇತ್ತು.

ಅಕ್ಕಂದಿರು ಹೊರಟು ಹೋದ ಮೇಲೆ ಸುಶೀಲೆಗೆ ತುಂಬಾ ಬೇಸರವೆನ್ನಿಸುತ್ತಿತ್ತು. ಈಗ ವಿಶೂವೇ ಅವಳಿಗೆ ಎಲ್ಲಾದಕ್ಕೂ ಜೊತೆ ಅಕ್ಕ,—— ತಮ್ಮ ಒಂದರಗಳಿಗೆ ಬಿಟ್ಟಿರುತ್ತಿರಲ್ಲಿಲ್ಲ.

ಸುಶೀಲ ಕಾಲೇಜಿಗೆ ಹೋಗುತ್ತಿದ್ದಳು ಆದರೆ ವಿಶು ಎಸ್ ಎಸ್ ಎಲ್ ಸಿ. ಫೇಲಾಗಿ ಮತ್ತೆ ಓದುವುದರ ಗಮನವಿಲ್ಲದೆ ಕ್ರಿಕೆಟ್ ಆಟದ ಆಸಕ್ತಿಯಲ್ಲಿ ತೊಡಗಿರುತ್ತಿದ್ದ.

ಮನೆಗೆ ಬಂದ ಕೂಡಲೇ, ಸುಶೀ ಬಾರೇ ಒಂದಾಟ ಕ್ರಿಕೆಟ್ ಆಡೋಣ ನಿನಗೂ ಚೆನ್ನಾಗಿ ಕಲಿಸಿ ಬಿಡ್ತೀನಿ ಅಂತಿದ್ದ, ಅಕ್ಕ ತಮ್ಮ ಮನೆಯ ಕಾಂಪೌಂಡಿನಲ್ಲಿ ಪ್ರತಿ ದಿನ ಸಂಜೆ ಆಡುತ್ತಿದ್ದರು.

ಸುಶೀಲ ಎಂದೂ ತಮ್ಮನನ್ನು ಬಿಟ್ಟು ಊಟ ಮಾಡುತ್ತಿರಲಿಲ್ಲ ಕಾಲೇಜಿಗೆ ಹೋಗುವ ಅವಸರದಲ್ಲಿಯೂ, ''ಬಾರೋ ಉಂಡಾಡಭಟ್ಟ ತಿಂದು ಹೋಗು'' ಅವನನ್ನು ಕೀಟಲೆ ಮಾಡಿಕೊಂಡು ತಿಂದರೇ ಅವಳಿಗೆ ಸಮಾಧಾನ.

ಒಂದು ದಿನ ಬೆಳಗ್ಗೆ ಮನೆಯ ಮುಂದೆ ಚಪ್ಪರಕ್ಕೆ ಹಬ್ಬಿಸಿದ್ದ ಜಾಜೀ ಬಳ್ಳಿಯಲ್ಲಿ ಸುಶೀಲ ವಿಶ್ವನಾಥ ಇಬ್ಬರೂ ಹೂ ಬಿಡಿಸುತ್ತಿದ್ದರು ಸುಶೀಯ ಕೈಗೆ ಎಟುಕದೇ ಇದ್ದುದನ್ನು ವಿಶೂ ಕಾಂಪೌಂಡು ಗೋಡೆಯ ಮೇಲೆ ಹತ್ತಿ ಬಿಡಿಸಿ ಕೊಡುತ್ತಿದ್ದ ಸುಶೀ ಬುಟ್ಟಿಗೆ ತುಂಬಿಸಿಕೊಳ್ಳುತ್ತಿದ್ದಳು.

ಬುಟ್ಟೀತುಂಬ ಆಯ್ತಲ್ಲೇ !—ಇನ್ನೂ ಸಾಲ್ದೇನೆ ಸುಶೀ ? ಅಂದ ವಿಶ್ವನಾಥ.

ಹೇಗೋ ಸಾಕು ? ಅರ್ಧ ಬುಟ್ಟಿ ಹೂವು ಅಮ್ಮನ ದೇವರ ಪೂಜೆಗೆ ಇಟ್ಟುಬಿಡಬೇಕು. ಇನ್ನರ್ಧದಲ್ಲಿ ಕಟ್ಟಿದರೆ ಒಂದು ಗೇಣೂ ಆಗೋಲ್ಲ. ಪಿನ್ ಹಾಕಿ ತಲೆಗೆ ಸಿಕ್ಕಿಸೋಕೆ ಅಷ್ಟುದ್ದ ಸಾಕೇನೊ ? ಇನ್ನೂ ನನ್ನ ಸ್ನೇಹಿತೆ ಸೀತಾ ಬಾಯ್ ಬಾಯ್ ಬಿಡ್ತಿರ್ತಾಳೆ ಈ ಘಂ ಅನ್ನೋ ಜಾಜಿ ಹೂವು ಎಂದರೆ

ಅವಳಿಗೆ ಪ್ರಾಣ, ನೀನು ಜಾಣ ಇನ್ನೂ ಸ್ವಲ್ಪ ಬಿಡಿಸಪ್ಪ. ಎಂದು ತಮ್ಮ ನನ್ನು ಗೋಗರೆದಳು. ಸುಶೀ.

ದಿನಾ ನನಗೆ ಇದೊಂದು ಚಾಕರಿ ಕಣೆ, ಏನ್ ಆಸೆನೋಪ್ಪ : ಹೆಣ್ಣು ಹುಡಿಗಿಯರಿಗೆ ? ಹೂವು ಅಂದ್ಬಿಟ್ರೆ ಆಯ್ತು ನೆಗೆದು ನೇಣ್ ಹಾಕಿ ಕೊಂಡಾದರೂ ಕಿತ್ಕೋಬೇಕು ಅಂತಾರೆ.... ಎಂದು ಗೊಣಗುಟ್ಟಿಕೊಂಡೇ ಹೂ ಬಿಡಿಸಿ ಕೊಡುತ್ತಿದ್ದ ವಿಶ್ವನಾಥ.

ಅದೇ ಸಮಯಕ್ಕೆ “ ಬುಡು ಬುಡು ಕಣ್ಣ ” “ ಬುಡು ಬುಡು ಕಣ್ಣ ” ಎಂದು ಒಬ್ಬ ಬುಡು ಬುಡುಕೆಯವನು ಗೇಟಿನ ಬಳಿ ನಿಂತು ಬುಡು ಬುಡುಕೆ ಅಳ್ಳಾಡಿಸತೊಡಗಿದ.

“ಹೋಗಪ್ಪಾ ಹೋಗು, ಮುಂದೆಹೋಗು ” ಎಂದು ಅವನನ್ನು ಗದರಿದಳು ಸುಶೀ.

ಅವನು ಒಂದು ಇಂಚೂ ಹಿಂದಕ್ಕೆ ಸರಿಯಲಿಲ್ಲ ಬುಡು ಬುಡಿಕೆಯನ್ನು ಅಲ್ಲಾಡಿಸುತ್ತಲೇ ಸುಶೀ ಕಡೇ ನೋಡುತಾ ! “ ಅವ್ವಾ ವಿದ್ಯಾವಂತೆ ಸರಸೋತವ್ವ ! ನೀಹೋಗು ಎಂದರೆ ಹೋಗಾಕಿಲ್ಲ. ಕೊಡೋ ವರ್ಗೂ ಬಿಡಾಕಿಲ್ಲ, ಹಾಲೆಹಕ್ಕಿ, ನುಡಿದೈತೆ, ನುಡಿದೈತೆ, ಹೇಳೋವರ್ಗೂ ಹೋಗಾಕಿಲ್ಲ ಬುಡು ಬುಡು ಕಣ್ಣ–ಅಂದ.

ಏನೋ ಅದು– ಹಾಲೆಹಕ್ಕಿ ನುಡಿದಿರೋದು? ಎಲ್ಲಾ ಬರೀ ಸುಳ್ಳುಸುಳ್ಳೇ ಅವನ ವೇಶ ನೋಡು ಸುಶೀ, ಒಳ್ಳೆ ಪರಕೆ ಮೀಸೆ ಬಿಟ್ಟುಕೊಂಡು ಊರಗಲ ಕುಂಕುಮ ಇಟ್ಟುಕೊಂಡಿದಾನೆ. ಯಾರೋ ಕೊಟ್ರೂ ? ನಿನ್ನ ಹೆಗಲ್ ಮೇಲಿರೋ ಇಷ್ಟು ರಾಶಿ ಬಟ್ಟೇನ ? ನಾವೇನೂ ಕೊಡೋಲ್ಲ ನಡೀತಿರು ಇಲ್ಲಿಂದ, ಎಂದು ಗದರಿದ ವಿಶು.

ಬುಡು ಬುಡು ಕಣ್ಣ ಬುಡು ಬುಡು ಕಣ್ಣ, ನಿಮ ಗ್ಯಾಕ್‌ಸಾಮಿ ! ಈ ಮನೆ ಪಾರು ಪತ್ಯ ? ನಿಮುಗೂ ಈ ಮನೆಗೂ ಸಂಬಂಧವಿಲ್ಲ. ಬುಡು ಬುಡು ಕಣ್ಣ, ಹಾಲೆ ಹಕ್ಕಿ ನುಡಿದೈತೆ, ಎಂದ.

ಸುಶೀಗೆ ಕೋಪ ನೆತ್ತಿಗೇರಿತು. ಎನೋ ಅದು ತಲೆಯೆಲ್ಲಾ ಹರಟ್ತೀಯಾ! ಎಂದು ರೇಗಿಕೊಂಡಳು.

ಮುದ್ದು ಲಕ್ಷ್ಮಿ ದೇವಿ ನಿನಗ್ಯಾಕವ್ವಾ ! ಸಿಟ್ಟು ! ನಿನ್ನ ಬೆನ್ನಾಗೆ ಬಿದ್ದೋವ್ನಲ್ಲ, ನಿಮ್ಮ ಮನ್ಯಾಗೆ ನಿಲ್ಲೋವ್ನಲ್ಲ ಹಾಲಿ ಹಕ್ಕಿ ನುಡಿದೈತೆ, ಬುಡು ಬುಡು ಬುಡುಕಣ್ಣ ಎಂದು ಬುಡು ಬುಡುಕೆಯನ್ನು ಅಲ್ಲಾಡಿಸಿದ.

ಈ ಮಾತನ್ನು ಕೇಳಿಸಿ ಕೊಂಡೇ ಮಂಗಳೆ ಹೊರಕ್ಕೆ ಬಂದಳು. ಮಂಗಳೆಯನ್ನು ನೋಡಿದ್ದೇ ತಡ, ಬುಡು ಬುಡು ಬುಡುಕೆಯವನು " ಈ ಮನೆಯ ಲಕ್ಷ್ಮಿದೇವಿ ಬಾರವ್ವ ಹಾಲಿಹಕ್ಕಿ ನುಡಿದೈತೆ, ನಿನ್ನ ಮನಸಿನಾಗೆ ಒಂದು ಕೊರಗೈತೆ " ಅಷ್ಟು ಹೇಳಿ ಬುಡು ಬುಡುಕೆಯನ್ನು ಅಲ್ಲಾಡಿಸಿದ.

ಮಂಗಳೆಗೆ ಅತೀವ ಆಶ್ಚರ್ಯವಾಯಿತು. ಕನ್ನಡಿಯಲ್ಲಿ ಪ್ರತಿಬಿಂಬ ವನ್ನು ನೋಡುವಂತೆ ತನ್ನ ಮನಸ್ಸಿನೊಳಗಿದ್ದ ವಿಷಯ ಇವನಿಗೆ ಹೇಗೆ ಕಂಡಿತು ? ಎಂದು ಒಂದು ನಿಮಿಷ ಚಿಂತಿಸಿ ಆ ಮೇಲೆ " ಏನೋ ಅದು ನಿನ್ನ ಮಾತು ? ನನಗೆ ಯಾವ ಕೊರಗು ಇಲ್ಲ , ನಡಿಯೋ " ಎಂದು ಗದರಿದಳು.

ಅವ್ವಾ ! ತಾಯಿ ಮನಸ್ಸಿನಾಗ ಒಂದು ಮಡಗಿ ನಾಲಿಗೆಯಾಗ ಒಂದು ನುಡಿಬ್ಯಾಡ ತಾಯಿ ; ನಿನ್ನ ಒಂದು ಕುಡಿಗಾಗಿ ನಿನ್ನ ಕರುಳು ತುಡಿತೈತೆ. ಬಂಗಂತ ಹಾಲಿಹಕ್ಕಿ ನುಡಿದೈತೆ. ಬುಡು ....ಬುಡು....

ಮಂಗಳೆಗೆ ಅವನ ಮಾತು ನಂಬಿಕೆ ತಂದಿತು. ಅವಳು ಕಾತುರಳಾಗಿ ಕೇಳಿದಳು " ಏನೋ ! ಬುಡು-ಬುಡುಕೆ ನನ್ನ ಕುಡಿ ನನಗೆ ಯಾವಾಗ ಸಿಕ್ಕುತ್ತೋ ?

ನಿನ್ನ ಕುಡಿ ಚೆಂದಾಗಿ ಚಿಗುರಿ ಬೆಳೀತೈತೆ ನಿನ್ನ ಚಿಂತೆ ದೂರವಾಗುತ್ತೈತೆ, ಬುಡು ....ಬುಡು ಅಂದ.

ಅಮ್ಮಾ ! ಅವನು ತಲೆಯಲ್ಲ ಹರಟ್ತಾನೆ. ಒಂದು ಹೊಸಾ ಅಂಗೀನೋ, ಶ್ಯಾಲೂನೋ ಗಿಟ್ಟಿಸೋಣ " ಅಂತ. ನೀನು ನಡಿಯಮ್ಮ ಒಳಕ್ಕೆ ಅಂದ ವಿಶು.

ಕೂಡಲೇ ಬುಡು ಬುಡುಕೆಯನ್ನು ಅಲ್ಲಾಡಿಸುತ್ತಾ ಅಪ್ಪಾ ! ಮಗನೇ ನಿನ್ನ ಪಾರು ಪತ್ಯ ಇಲ್ಲಿಲ್ಲ. ಬೇರೆ ಕಡೆಯಾಗೆ ಐತೆ, ಹಾಲಿ ಹಕ್ಕಿ ನುಡಿದೈತೆ. ಬುಡು .... ಬುಡು .... ಅಂದ.

ಇದೆಲ್ಲಾ ಹೇಗೋ ನಿನಗೆ ಗೊತ್ತಾಗುತ್ತೆ ? ಎಂದು ಮಂಗಳೆ

ಕೇಳಿದಳು.

ಅವ್ವಾ ! ನಾವು ಸರಿ ರಾತ್ರಿನಾಗ ಊರಿಂದಾಚೆ ಗಿಡದತಾವ ಹೋಗ್ತೀವಿ ಕಣವ್ವ. ಅಲ್ಲಿ ಹಾಲಕ್ಕಿ ಶಕುನ ಕೇಳ್ ಕೋತೀವಿ ಕಣವ್ವ ಅದು ಹೇಳಿದ್ದು ನವ ಗೆ ತಿಳೀತೈತೆ.

ತಾಯಿ, ನಮಗೆ ತಿಳಿದ ಮಾತು ನಾವು ಅವರವರಿಗೆ ಹೇಳಿಬಿಡಬೇಕು ಕಣವ್ವ. ಹೇಳದೆ ಹೋದರೆ ನಮಗೆ ಕೆಡಾಗ್ತೈತೆ. ನಿಮ್ಮ ಮೈ ಮೇಲಿನಾಗಿನ ಒಂದು ಶಾಲೆ ಕೊಟ್ಟು ಬಿಡವ್ವ ! ನಿಮ್ಮ ಕಷ್ಟ ಪರಿಹಾರವಾಗುತೈತೆ ಅಂದ.

ಇವನ ಮಾತು ಸುಶೀ .... ವಿಶೂ ಅವರಿಗೆ ಏನೇನೂ ಅರ್ಥವಾಗಲಿಲ್ಲ. ಏನೇನೋ ಬುರುಡೆ-ಬೂಸಿ ಹೇಳಿ ಸೀರೆ ಗಿಟ್ಟಿಸೋಕೆ ನೋಡ್ತಾನೆ. ಬಾರಮ್ಮ ನೀನು, ಎಂದು ಅಮ್ಮನನ್ನು ಒಳಕ್ಕೆ ಕರೆದರು.

ಅವನು ಇನ್ನೂ ಏನೇನು ಹೇಳುತ್ತಾನೋ ಕೇಳಿ ತಿಳಿದುಕೊಳ್ಳಬೇಕೆಂಬ ಕಾತುರ ಮಂಗಳೆಗೆ ಹೆಚ್ಚಿತು ಒಳಕ್ಕೆ ಹೋಗಿ ಒಂದು ಸುಮಾರಾಗಿ ಚೆನ್ನಾಗಿದ್ದ ತನ್ನ ಸೀರೆಯನ್ನೇ ತಂದು ಬುಡು ಬುಡುಕೆಯವನಿಗೆ ಕೊಟ್ಟು ಬಿಟ್ಟಳು.

ಆ ಮೇಲೆ ಮುಂದೆ ಏನಾಗುತ್ತೆ ? ಹೇಳೋ ! ಬುಡು....ಬುಡುಕೆ ; ಅಂದು ಅಲ್ಲಿಯೇ ನಿಂತಳು.

ಅವನು ಮತ್ತೆ ಹೇಳಿದ್ದನ್ನೇ ಒಗಟಿನಂತೆ ಹೇಳುತ್ತಿದ್ದ.

"ನಿನ್ನ ಮನಸಿನಾಗಿನ ಚಿಂತೆ ದೂರವಾಗ್ತೈತೆ. ಅಮ್ಮಣ್ಣಿ ಈ ಮನೆಯ ಸುಖ ಸಂತೋಷ ಹೆಚ್ಚುತ್ತೈತೆ" ಎಂದು ಹೇಳಿ ಹೊರಟು ಹೋದ.

ಮಂಗಳೆಗೆ ಒಂದೂ ಸರಿಯಾಗಿ ಅರ್ಥವಾಗಲಿಲ್ಲ. ಅವನು ಹೇಳಿದ ಎರಡು ಮಾತು ಮಾತ್ರ ಗಟ್ಟಿಯಾಗಿ ಮನಸ್ಸಿನಲ್ಲಿ ಚೆನ್ನಾಗಿ ನಿಂತಿತು.

"ನಿನ್ನ ಬೆನ್ನಾಗೆ ಬಿದ್ದೋನ್ನಲ್ಲ ನಿಮ್ಮ ಮನ್ಯಾಗೆ ನಿಲ್ಲೋನ್ನಲ್ಲ" ಅಬ್ಬ ....ಎಂತಹ ರಹಸ್ಯ ವಿಚಾರವನ್ನು ಹೆಗೆ ಇದ್ದದು ಇದ್ದಂತೆ ಹೇಳಿ ಬಿಡುತ್ತಾನೆ ಈ ಬುಡು ಬುಡುಕೆಯವನು? ಈ ಮಾತು ಏನಾದರೂ ಸುಶೀಗೆ ಅರ್ಥವಾಗಿ ಬಿಟ್ಟಿದ್ದರೆ ಗತಿಯೇನು?

"ನಿಮ್ಮ ಕರುಳಿನ ಕುಡಿ ಚೆನ್ನಾಗಿ ಬೆಳಿತಾ ಐತೆ" ಎಂದು ಹೇಳಿದನಲ್ಲವೇ ಅಪ್ಪಾ ! ದೇವರೇ .... ನನ್ನ ಕಂದ ಎಲ್ಲಾದರೂ ಸುಖವಾಗಿರಲಿ" ಎಂದು

ಯೋಚಿಸುತ್ತಾ ಅಲ್ಲಿಯೇ ಕುಳಿತುಬಿಟ್ಟಳು ಮಂಗಳೆ.

ತಾಯಿ ಸೀರೆಯನ್ನೇ ಬುಡು ಬುಡುಕೆಯವನಿಗೆ ಕೊಟ್ಟಿದ್ದನ್ನು ನೋಡುತ್ತಾ ಅಲ್ಲಿಯೇ ನಿಂತಿದ್ದ ವಿಶು "ಅಲ್ಲಕಣೇ! ಸುಶೀ! ಈ ಅಮ್ಮನಿಗೆ ಏನೇ ಹುಚ್ಚು? ಎಷ್ಟು ಒಳ್ಳೆ ಸೀರೇನೆ ಕೊಟ್ಟು ಬಿಟ್ಟಳು ಆ ಬುಡು ಬುಡುಕೆಯುವನಿಗೆ ಇವತ್ತೇನಾದ್ರೂ ಅಪ್ಪ ಇರ್ಬೇಕಾಗಿತ್ತು ಮನೇಲೀ ಆಗ್ತಿತ್ತು ಅಮ್ಮನಿಗೆ, ಅಂದ.

ಸುಶೀ ಅವನನ್ನು ಬೇರೆ ಕಡೆಗೆ ಕರೆದು ಕೊಂಡು ಹೋಗಿ "ಸುಮ್ಮನಿರಪ್ಪ ನೀನು! ಅಮ್ಮನನ್ನು ಹಾಗೆಲ್ಲಾ ಅನ್ನಬಾರ್ದು, ಅಮ್ಮನಿಗೆ ಮೊದಲಿನಿಂದಲೂ ಭಿಕ್ಷುಕರನ್ನು, ಬಡವರನ್ನು ಕಂಡರೆ ಹಾಗೇ, ಏನೂ ಅನ್ನೋಲ್ಲ ಕಣೋ! ನೀನು ಅಮ್ಮನ ಮನಸ್ಸಿಗೆ ಬೇಜಾರು ಆಗೋಹಾಗೆ ಏನೂ ಹೇಳಬೇಡಪ್ಪ" ಎಂದು ಹೇಳಿ

ಅಮ್ಮನ ಬಳಿ ಬಂದು " ಬಾಮ್ಮ ! ಆ ಬುಡು ಬುಡುಕೆಯವನ ಮಾತಿಗೆ ಯಾಕೆ ಯೋಚನೆ ಮಾಡ್ತೀಯ ? ನಮ್ಮ ವಿಶು ನಮ್ಮ ಮನೆ ಬಿಟ್ಟು ಇನ್ನೆಲ್ಲಿ ಹೋಗ್ತಾನೆ ? ಅವನ ಬುಡು-ಬುಡುಕೆ ಮಾತೆಲ್ಲಾ ಬರೀ ಬುರಡೇ " ಅಂದಳು.

ಸದ್ಯ ಮಕ್ಕಳಿಗೆ ಏನೂ ಅರ್ಥವಾಗಲಿಲ್ಲವಲ್ಲಾ! ಎಂದು ಮಂಗಳೆಗೆ ಸ್ವಲ್ಪ ಸಮಾಧಾನವಾಯಿತು. ಆದರೆ "ತಿಳಿಕೊಳಕ್ಕೆ ಕಲ್ಲೆಸೆದಂತೆ ಮನಸ್ಸು ಕಲಕಿ ತೆರೆಗಳೆದ್ದುವು.

## ೫

ತೆರೆ ತೆರೆಯಾಗಿ ಬರುವ ಕಷ್ಟವನ್ನು ತಳ್ಳಿಕೊಂಡೇ ಮುಂದೆ ಸಾಗ ಬೇಕಾಗಿತ್ತು ಮಲ್ಯಾ .... ಯಾವುದಕ್ಕಾಗಿ ಅವಳು ಭಯಪಡುತ್ತಿದ್ದಳೋ ! ಅದನ್ನೇ ಅಪ್ಪಿಕೊಳ್ಳುವಂತೆ ಕ್ರೂರ ವಿಧಿ ತಂದೊಡ್ಡಿತು.

ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತಿದ್ದ ಪತಿಯು ತನ್ನನ್ನು ಮಗುವನ್ನೂ ಅನಾಥರನ್ನಾಗಿ ಮಾಡಿ ಮತ್ತೆ ಬರದಂತೆ ಹೊರಟು ಹೋಗಿದ್ದ. ಅವನನ್ನು ಉಳಿಸಿಕೊಳ್ಳಲು ಮಲ್ಯಾ ಪಟ್ಟಪಾಡೆಲ್ಲಾ ವ್ಯರ್ಥವಾಯಿತು. ಈ ದುಃಖದಿಂದ ಚೇತರಿಸಿಕೊಳ್ಳಲು ಮಲ್ಯಾಗೆ ಇದ್ದುದು ಒಂದೇ ದಾರಿ ಮಗಳ ಮುಖವನ್ನು ನೋಡಿಕೊಂಡು ದಿನ ಕಳೆಯುವುದು.

ತನ್ನ ಗಂಡ, ಸಾಯುವಾಗಲೂ ಕಡೆಯಲ್ಲಿ ಹೇಳಿದ ಮಾತು ಅದೇ ಗಂಗ ನಾಯಕನಿಗೆ ಕಡೆಯುಸಿರು ಎಳೆಯುತ್ತಿತ್ತು. ಹಾಸಿಗೆ ಪಕ್ಕದಲ್ಲಿ ಹೆಂಡತಿ ಕುಳಿತು ಕಣ್ಣೀರು ಸುರಿಸುತ್ತಿದ್ದಳು, ತನ್ನ ಮುದ್ದು ಮಗಳು "ಅವ್ವಾ! ಯಾಕವ್ವಾ ಅಳ್ತೀ; ಅಪ್ಪನಿಗೆ ನಾಳೆಪೊತ್ತಿಗೆ ವಾಸಾಗ್ತೈತೆ. ಒಳ್ಳೆ ಔಸ್ತಿ ತರಾನ ಕಣವ್ವ, ಆ ಪಂಡಿತರ ಮನ್ಯಾಗೆ. ಅವರ ಮನೆಗೆ ದಿನಾ ನಾವು ಸೌದೆ ಹೊರೆ ಹಾಕಿದ್ದೀವಿ. ದುಡ್ಡೇ ಇಸ್ಕೊಂಡಿಲ್ಲಾ: ಅದಕ್ಕೇಂತ ಒಳ್ಳೆ ಔಸ್ತಿ ಕೊಡ್ತಾರೆ ಕಣವ್ವ! ಎಂದು ಅಮ್ಮನನ್ನು ಸಮಾಧಾನ ಮಾಡುತ್ತಿದ್ದಳು, ಆ ಮುಗ್ಧ ಬಾಲಿಕೆ.

ಹೌದು ನಿಜ.... ಬಿಸಿಲು-ಮಳೆಯೆನ್ನದೆ ಗಿಡ-ಗೆಂಟೆಗಳಲ್ಲಿ ಅಲೆದಲೆದು ಮೈ ಮುರಿಯ ಸೌದೆ ಹೊತ್ತು ತಂದು ಆ ಸೋಮಯಾಜಿ ಪಂಡಿತರ ಮನೆಗೆ ಋಣ ತೆತ್ತು ಬರೀ ಕೈಲಿ ಮನೆಗೆ ಹಿಂತಿರುಗುತ್ತಿದ್ದರು ತಾಯಿ ಮಗಳು. ಮನೆಗೆ ಬಂದರೆ ಗಂಜಿಗೂ ಗತಿಯಿಲ್ಲ. ಆ ಪಂಡಿತ ಎಂದಾದರು ಒಂದೊಂದು ದಿನ ಒಂದಿಷ್ಟು ಎಂಥದೋ ಭಸ್ಮ, ಚೂರ್ಣ ಎಂದು ಏನೋ ಒಂದಿಷ್ಟು ಪುಡಿ ಕೊಟ್ಟು ಕಳುಹಿಸುತ್ತಿದ್ದ ಅವರಿಂದ ತನ್ನ ಗಂಡನಿಗೆ ಗುಣವಾಗಬಹುದೆಂದು ನಂಬಿ ಬೆವರು ಬಸಿದು ದುಡಿದ ಸೌದೆ ಹೊರೆಯನ್ನು ತೆತ್ತು ಬರುತ್ತಿದ್ದಳು.

ಈಗ ಗಂಡ ಇನ್ನೇನು ಸಾಯುವ ಸ್ಥಿತಿಯಲ್ಲಿದ್ದಾನೆಂದು ತಿಳಿದಾಗ ಅಯ್ಯೋ!.... ತನ್ನ ಕಷ್ಟವೆಲ್ಲಾ ವ್ಯರ್ಥವಾಯಿತೇ... ಎಂದು ಗೋಳಾಡ ಹತ್ತಿದಳು.

ದಿಕ್ಕು ದೆಸೆಯಿಲ್ಲ ತನ್ನ ಸಂಸಾರ ಮುಳುಗಿ ಹೋಗುವುದಲ್ಲಾ! ಎಂದು ಗಂಗನಾಯಕನಿಗೆ ಪ್ರಾಣ ಹೋಗುವ ಸಮಯದಲ್ಲೂ ಹೆಂಡತಿ ಮಗಳದೇ ಚಿಂತೆ.

ತನ್ನ ಪ್ರೀತಿಯ ಹೆಂಡತಿ ಕೈಯ್ಯನ್ನು ಬಿಗಿಯಾಗಿ ಹಿಡಿದುಕೊಂಡು "ಮಲ್ಯಾ! ಮುದ್ದುಮೊಗ-ಲಕ್ಕಿಯನ್ನು ಚಂದಾಗಿ ಸಾಕು" ಎಂದ. ಹೇಳಿದವನೇ ಪ್ರಾಣಬಿಟ್ಟ.

ಹೇಗೆ ಚೆಂದಾಗಿ ಸಾಕುತ್ತಾಳೆ! ಬಡವಿ ಮಲ್ಯಾ! ಒಂದು ದಿನ ಸೌದೆಗೆ ಹೋಗದಿದ್ದರೆ ತಾಯಿ-ಮಗಳು ಉಪವಾಸ ಮಲಗಬೇಕಾಗುತ್ತಿತ್ತು.

ಯಥಾ ಪ್ರಕಾರ ಆ ಮಗಳನ್ನೂ ಕಟ್ಟಿಕೊಂಡು ಕಾಡುಮೇಡು ಅಲೆದು ಸೌದೆ ಹೊತ್ತು ತಂದು, ಮಾರಿ ಜೀವನ ಸಾಗಿಸುತ್ತಿದ್ದಳು ಮಲ್ಯಾ.

ವಣಿದು ಬಂದಾಗ ತನ್ನನ್ನು ಅಕ್ಕರೆಯಿಂದ ಮಾತನಾಡಿಸುತ್ತಿದ್ದ ತನ್ನ ಪ್ರೀತಿಯ ಗಂಡ ಇನ್ನಿಲ್ಲ ಮನೆ ಬೀಳು ಬಿಕೋ ಅನ್ನುತ್ತಿತ್ತು.

ಗಂಗನಾಯಕ ಖಾಯಿಲೆಯಿಂದ ಮಲಗಿದ್ದರೂ ಅವನ ಹೃದಯ ಹೆಂಡತಿಯ ದುಡಿಮೆಗಾಗಿ ಮರುಗುತ್ತಿತ್ತು. ಎಂದು ತಾನು ಎದ್ದು ಓಡಾಡು ವಂತಾಗಿ ದುಡಿದು ಹೆಂಡತಿ ಮಗುವನ್ನು ಸುಖವಾಗಿ ಇಟ್ಟೇನೋ! ಎಂದು ಹಂಬಲಿಸುತ್ತಿದ್ದ.

ಆ ಒಂದು ಪ್ರೇಮಪಾಶವೇ ಮಲ್ಯಾಗೆ ನವ ಚೈತನ್ಯವನ್ನು ನೀಡುತ್ತಿತ್ತು, ಅವನು ಗುಣಮುಖನಾಗಲೆಂದು ಹನ್ನೆರಡು ದೇವರಿಗೆ ಹರಕೆ ಹೊತ್ತಳು, ಅಕ್ಕರೆಯಿಂದ ಆರೈಕೆ ಮಾಡಿದಳು ಆದರೆ ಅವೆಲ್ಲಾ ಬೂದಿಯಲ್ಲಿ ಹೋಮ ಮಾಡಿದಂತೆ ವ್ಯರ್ಥವಾಯಿತು.

ಬಡತನದ ಬಾಳಿನಲ್ಲಿಯೂ ಪ್ರೇಮವೆಂಬ ಫಲವನ್ನು ಸವಿದು ಸಂತೋಷ ದಿಂದಿದ್ದ ಆ ದಂಪತಿಗಳನ್ನು ವಿಧಿ ಕಾಡಿ ಕೊಂದಿತು.

ಈಗ ಉಳಿದಿರುವ ಆಶಾತಂತುವೆಂದರೆ ತಮ್ಮಿಬ್ಬರ ಪ್ರೀತಿಯ ಕುರುಹಾಗಿ ಮೂಡಿಬಂದ ಆ ಮುಗ್ಧ ಬಾಲಕಿ ಲಕ್ಕಿ.

ಹೌದು, ಲಕ್ಕಿ ತಿಪ್ಪೆಯ ಮೇಲೆ ಎಸೆದ ವಜ್ರದಂತೆ, ಆ ಬಡವರ ಗುಡಿಸಲಿ ನಲ್ಲಿಯೂ ಎಲ್ಲರ ಕಣ್ಮನ ಸೆಳೆಯುವ ಸೌಂದರ್ಯ ನಿಧಿಯಂತಿದ್ದಳು.

ಆ ಮಗುವನ್ನು ಸರಿಯಾಗಿ ಬೆಳೆಸಿ ಒಂದು ಒಳ್ಳೆಯ ವರನಿಗೆ ಕೊಟ್ಟು ಮದುವೆ ಮಾಡುವ ಚೈತನ್ಯ ತನಗಿದೆಯೇ? ಎಂದು ಮಲ್ಯಾ ಹಂಬಲಿಸಿ ಹಲುಬುತ್ತಿದ್ದಳು

ಒಳ್ಳೆಯ ರಸವತ್ತಾದ ಮಾಕಳೀ ಬೇರನ್ನು ಅಗೆದು ತಂದಾಗ ಮಲ್ಯಾ, ರಂಗನಾಯಕಮ್ಮನ ಮನೆಗೆ ತೆಗೆದುಕೊಂಡು ಹೋಗಿ ಕೊಡದೇ ಇರುತ್ತಿರಲಿಲ್ಲ,

ರಂಗನಾಯಕಮ್ಮ ದೊಡ್ಡ ಸಂಸಾರಿ, ಆರು ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು. ಅವರ ಗಂಡ ಶಾಮರಾಯರು ತಾಲ್ಲೂಕು ಆಫೀಸಿ ನಲ್ಲಿ ಗುಮಾಸ್ತರು.

ದೊಡ್ಡ ಸಂಸಾರಿಗಳು, ಬಡತನವಾದರೂ ಉದಾರ ಹೃದಯ ಆ ದಂಪತಿ ಗಳದ್ದು, ಮಲ್ಯಾ ಬಂದರೆ ಅವಳ ಮಾಕಳೀ ಬೇರನ್ನು ತೆಗೆದುಕೊಂಡು ಅವಳಿಗೆ ಊಟಕಿಟ್ಟು, ಒಂದೆರಡು. ಒಳ್ಳೆ ಮಾತಾಡಿ ತಮ್ಮ ಮಕ್ಕಳ ಹಳೇ ಬಟ್ಟೆಗಳನ್ನು ಕೊಟ್ಟು ಕಳುಹಿಸುತ್ತಿದ್ದರು.

ಹೀಗಾಗಿ ಮಲ್ಯಾ, ತನಗೇನು ಕಷ್ಟ ಸುಖ ಬಂದರೂ ರಂಗನಾಯಕಮ್ಮ ನವರಲ್ಲಿ ಬಂದು ಹೇಳಿಕೊಂಡರೇ ಅವಳಿಗೆ ಸಮಾಧಾನ.

ಮಲ್ಯಾ, ಲಕ್ಕಿಯನ್ನೂ ಕರೆದುಕೊಂಡು ಆ ದಿನ ಮಾಕಳೀ ಬೇರು ಹೊತ್ತು ರಂಗನಾಯಕಮ್ಮನ ಮನೆಗೆ ಬಂದಿದ್ದಳು.

ಅಮ್ಮಾ ! ಯಾಡಿ ಬಂದಿದ್ದಾಳಮ್ಮ ಎಂದು ಅವರ ೮ ವರ್ಷದ ಮಗಳು ಪದ್ಮಶ್ರೀ ಒಳಕ್ಕೆ ಓಡಿ ಹೋಗಿ ತಾಯಿಗೆ ಹೇಳಿದಳು.

ಒಳಗೆ ಅಡಿಗೆ ಮಾಡುತ್ತಿದ್ದ ರಂಗನಾಯಕಮ್ಮ "ಹೌದೇನೇ ! ಯಾವ ಕಾಲವಾಯ್ತು ಅವಳು ಬಂದು" ಎಂದು ಹಾಗೆಯೇ ಹೊರಕ್ಕೆ ಬಂದರು,

ಅವಳ ತಲೆಯ ಮೇಲಿದ್ದ ಮಂಕರಿಯನ್ನು ನೋಡಿ ಏನೇ ಯಾಡೀ ! ನೀನು ಬಂದು ಎಷ್ಟು ವರ್ಷಗಳಾಯ್ತು, ಇನ್ನು ನಾವು ಮಾಕಳೀ ಬೇರಿನ ಉಪ್ಪಿನಕಾಯಿ ಹಾಕುವುದೇ ಇಲ್ಲವೇನೋ ? ಎಂದಿದ್ದೆವು , ನಮ್ಮನೆ ಗಂಡಸರಿಗೆ ಮಾಕಳೀ ಬೇರೆಂದರೆ ಪ್ರಾಣ, ನಿಂಬೇಹಣ್ಣು ತೆಗೆದರೆ ಮಾಕಳೀ ಬೇರು ಆಗಲೇ ಬೇಕೆನ್ನುತ್ತಾರೆ. ಸದ್ಯ ತಂದ್ಯಲ್ಲ ಯಾಡೀ—ಮಕ್ಕರಿ ಇಳಿಸು—ಎಂದು ಒಂದೆ ಸಮ ವಾಂಛಲ್ಯದಿಂದ ಮಾತನಾಡಿದರು.

ಮಲ್ಯಾ ಮಕ್ಕರಿಯನ್ನು ತಲೆಯಮೇಲಿಂದ ಕೆಳಗಿಳಿಸಿ ಹಣೆಯ ಮೇಲಿನ ಬೆವರನ್ನೊರಸಿಕೊಳ್ಳುತ್ತಾ "ಹೌದು ಕಣ್ರವ್ವಾ ! ನಾನು ಇತ್ತ ಬಂದು ಎರಡು ವರ್ಸದ ಮೇಲಾಗಿ ಬಿಟ್ಟೈತೆ, ಎಂದು ಕಾಣುತ್ತೆ. ನಿಮ್ಮ ಮನೆಯಲ್ಲಿ ಎಲ್ಲಾ ಚಂದಾಕಿದಾರೇನವ್ವಾ ! ಎಂದಳು.

ಹೂಂ. ಕಣೇ ಯಾಡೀ! ಎಲ್ಲಾ ಚೆನ್ನಾಗಿದಾರೆ. ಇವಳು ನಿನ್ನ ಮಗಳೇನೇ ! ಆಗ ನೀನು ಮಗುವನ್ನು ಕರೆದುಕೊಂಡು ಬರುತ್ತಿದ್ದೆಯಲ್ಲಾ ಅದೇನೇ ? ಎಂದು ಲಕ್ಕಿಯನ್ನು ನೋಡಿ ಕೇಳಿದರು.

ಹೌದು ಕಣವ್ವಾ ಅದೇ ಮೊಗ ಲಕ್ಕಿ ನನ್ನ ಮಗಳು ಎಂದಳು.

ಲಕ್ಕಿ ಗಂಭೀರವಾಗಿ ತನ್ನ ತಾಯಿಯ ಪಕ್ಕದಲ್ಲಿ ನಿಂತು ತನ್ನ ವಿಶಾಲ ನೇತ್ರವನ್ನು ನೊಡ್ಡದಾಗಿ ತೆರೆದು ಅವರುಗಳನ್ನು ನೋಡುತ್ತಿದ್ದಳು. ಬಿಸಿಲಿನಲ್ಲಿ ನಡೆದು ಬಂದಿದ್ದುದರಿಂದ ಅವಳ ಬಿಳುಪಾದ ಮುಖ ಕೆಂದಾವರೆಯಂತೆ ಕೆಂಪಾಗಿದ್ದಿತು.

ಆ ಮುಗ್ಧ ಮನೋಹರ ಮುಖವನ್ನು ರಂಗನಾಯಕಮ್ಮ ಎವೆಯಿಕ್ಕದೆ ನೋಡಿದರು. ಮೊದಲೇ ಆಕೆ ದಯಾಮಯಿ ಮಕ್ಕಳೊಂದಿಗರಾದ ಅವರ ಹೃದಯ ಕರಗಿತು.

ಅಲ್ಲಾ ! ಯಾಡೀ ಈ ಉರಿಬಿಸಿಲಿನಲ್ಲಿ ನೀನು ಸಾಯೋದಲ್ಲದೆ, ಆ ಹುಡುಗಿಯನ್ನೂ ಯಾಕೆ ಅಲೆಸುತ್ತೀ ಮನೆಯಲ್ಲಿ ಬಿಟ್ಟು ಬರಬಾರದೇ ಅಂದರು.

ಅವ್ವಾ ! ಅವಳ ಕರ್ಮ ಒಳ್ಳೆಯದಲ್ಲ ಕಣವ್ವಾ ಪ್ರೀತಿಯಿಂದ ಸಾಕೋ ಅಪ್ಪನ್ನ ತಿಂದುಕೊಂಡಳು. ಇನ್ನೂ ದಿನವೆಲ್ಲಾ ನನ್ನ ಜೊತೆ ಕಾಡು, ಬೆಟ್ಟ ಗುಡ್ಡ ಅಲೆದು ಸೌದೆ-ಸೊಪ್ಪು ಹೊತ್ತು ಜೀವನ ಸಾಗಿಸಬೇಕು. ನಾನೇನು ಮಾಡಲವ್ವಾ ಅವಳ ಹಣೇ ಬರಹ, ಎಂದು ಕಣ್ಣಿನಲ್ಲಿ ನೀರು ಹಾಕಿದಳು. ಮಲ್ಯಾ.

ಹೌದೇನೇ ಯಾಡೀ ನಿನ್ನ ಗಂಡ ತೀರಿಕೊಂಡನಾ ! ಅಯ್ಯೋ ! ಪಾಪ ! ಈ ಲಕ್ಕಿ ಎಷ್ಟು ಮುದ್ದಾಗಿದ್ದಾಳೆ. ಇವಳನ್ನು ಸುಖವಾಗಿ ಬೆಳೆಸಿದರೆ ಇನ್ನೂ ಚೆನ್ನಾಗಿ ಆಗುತ್ತಾಳೆ ಕಣೇ.

ಹೋಗಲೀ ಒಂದು ಕೆಲಸ ಮಾಡು ಈ ಹುಡುಗಿಯನ್ನೂ ನಮ್ಮ ಮನೆಯಲ್ಲಿಯೇ ಬಿಟ್ಟು ಹೋಗು ನಮ್ಮ ಪದ್ಮಶ್ರೀ, ರಾಗಿಣಿ ಅವರ ಜೊತೆಯಲ್ಲಿ ಆಡಿಕೊಂಡು ಬೆಳೆಯುತ್ತಾಳೆ. ಹತ್ತು ಮಕ್ಕಳಲ್ಲಿ ಅವಳೊಂದು ನನಗೆ ಭಾರವಲ್ಲ ಕಣೇ ಯಾಡೀ ! ಎಂದು ತುಂಬು ಹೃದಯದಿಂದ ಹೇಳಿದರು.

ಅವರ ಉದಾರ ಮನಸನ್ನು ನೋಡಿ ಯಾಡಿ ಅಲ್ಲೇ ಕರಗಿ ಹೋದಳು ಅವ್ವಾ ! ನಿಮ್ಮಂತೆ ಪುಣ್ಯಾತ್ಮರು ಇನ್ನೂ ಭೂಮಿ ಮ್ಯಾಗೆ ಇರುವುದರಿಂದಲೇ ನಮ್ಮಂತೋರು ಜೀವಿಸಿದೀವಿ ತಾಯಿ.

ನಿಮ್ಮ ದಯೆ ಒಂದಿದ್ದರೆ ಸಾಕು ಬಿಡವ್ವ ಹೆಂಗೋ ಬದಿಕೋತೀವಿ. ಎಂದು ಹೇಳಿದವಳೇ ಲಕ್ಕಿಯ ಮುಖವನ್ನು ತನ್ನ ಕಡೆಗೆ ತಿರುಗಿಸಿಕೊಂಡು "ಏನೇ ಲಕ್ಕೀ ಅಮ್ಮಾವರ ಮನೆಯಾಗೆ ಅವರು ಹೇಳಿದ ಕೆಲಸ

ಮಾಡಿಕೊಂಡು ಇರ್ತೀಯೇನೇ" ? ಎಂದು ಕೇಳಿದಳು.

ಲಕ್ಕೀ ಅಷ್ಟೇ ಚಿಕ್ಕವಳಾದರೂ ತುಂಬ ಅಭಿಮಾನಿ. ಒಂದು ತುತ್ತು ಕೂಳಿಗಾಗಿ ಕಂಡವರ ಮನೆಯಲ್ಲಿ ಬಿದ್ದಿರುವುದು ಅವಳಿಗೆ ಸ್ವಲ್ಪವೂ ಒಪ್ಪಲಿಲ್ಲ

ಕೂಡಲೇ " ಯಾಕಮ್ಮಾ ನನ್ನನ್ನು ಸಾಕುವುದಕ್ಕೆ ನಿನ್ನ ಕೈಲಿ ಆಗಾಕಿಲ್ವಾ! ನಾನೂ ಸೌದೆ ಹೊತ್ತು ತತ್ತೀನಿ ಬಿಡವ್ವ ಅಪ್ಪಾನೂ ತೀರೋದ, ನೀನೂ ನನ್ನನ್ನ ದೂರ ಮಾಡಿಬಿಡ್ತೀಯಾ? " ಎಂದು, ಧೈರ್ಯದಿಂದ ಮಾತನಾಡಿದಳು.

ಆ ಮಗುವಿನ ಮಾತನ್ನು ಕೇಳಿ ರಂಗನಾಯಕಮ್ಮನಿಗೆ ಆಶ್ಚರ್ಯವಾಯಿತು ಯಾಡೀ ನಿನ್ನ ಮಗಳು ಸಾಮಾನ್ಯ ಅಲ್ಲ ಕಣೇ ! ಬಲೆ ಚಾಲೂಕು ! ಏನೋ ಕಷ್ಟ ಬಿದ್ದು ಚೆನ್ನಾಗಿ ಸಾಕು. ಮುಂದೆ ಅವಳೇ ನಿನಗೆ ದಿಕ್ಕು ಎಂದು ಹೇಳಿದವರೇ ಒಳಗೆ ಹೋಗಿ ಲಕ್ಕಿಯ ಅಳತೆಯ ಕೆಲವು ಹಳೆಯ ಲಂಗ ಫ್ರಾಕು ಅವೆಲ್ಲಾ ತಂದು ಕೊಟ್ಟು, ಹೋಗಲಿ, ಆ ಹಳೆಯ ಹರಕು ಬಟ್ಟೆ ಬಿಚ್ಚಿ ಈ ಒಳ್ಳೆ ಬಟ್ಟೆಗಳನ್ನು ಹಾಕು. ಮಗು ನೋಡುವುದಕ್ಕೇ ಒಂದು ಲಕ್ಷಣ ಎಂದರು.

ಅವರ ಮನೆ ಅಂಗಳದಲ್ಲಿದ್ದ ನಲ್ಲಿಯಲ್ಲಿ ಲಕ್ಕಿ ಮುಖ ಕೈ ಕಾಲು ತೊಳೆದು ಕೊಂಡು ಬಂದಳು. ಮಲ್ಯಾ ಅವಳ ಹಳೇ ಬಟ್ಟೆ ಬಿಚ್ಚಿ ಅವರು ಕೊಟ್ಟಿದ್ದ ಒಂದು ರೋಜಾ ಬಣ್ಣದ ಫ್ರಾಕು ಹಾಕಿದಳು. ಆ ಕೆದರಿದ್ದ ಗುಂಗುರು ಕೂದಲಿಗೂ ಆ ಫ್ರಾಕಿಗೂ ಲಕ್ಕಿ ತುಂಬಾ ಮುದ್ದಾಗಿ ಕಂಡಳು.

ಅವರ ಮನೆಯ ಹೆಣ್ಣು ಮಕ್ಕಳೆಲ್ಲಾ ಒಬ್ಬೊಬ್ಬರಾಗಿ ಬಂದು ಲಕ್ಕಿಯನ್ನು ನೋಡಿ, ಲಂಬಾಣಿ ಮಗುವಾದರೂ ಎಷ್ಟು ಚೆನ್ನಾಗಿದೆ ಎಂದು ಮಾತಾಡಿಕೊಂಡರು. ತಾಯಿ-ಮಗುವಿಗೆ ಹೊಟ್ಟೆ ತುಂಬ ಊಟ ಇಟ್ಟು, ಮಾಕಳೀ ಬೇರಿಗೆ ಕೈತುಂಬಾ ದುಡ್ಡು ಕೊಟ್ಟು ಕಳುಹಿಸಿದರು. ಹೀಗೆ ಕೆಲವು ಪುಣ್ಯಾತ್ಮರ ದಯೆಯಿಂದ ಮಲ್ಯಾ ಮಗಳೊಡನೆ ಜೀವನ ಸಾಗಿಸುತ್ತಿದ್ದಳು.

ಅರೆ ಹೊಟ್ಟೆಗೆ ತಿಂದು ಅಲೆದರೂ ಹುಟ್ಟನಿಂದಲೇ ಅಂಗ ಸೌಷ್ಟವವನ್ನು ಪಡೆದು ಬಂದಿದ್ದ ಲಕ್ಕಿ ಪ್ರಾಯವು ತುಂಬಿದಂತೆಲ್ಲಾ ರಸವತ್ತಾದ ಹಣ್ಣಿನಂತೆ ಶೋಭಿಸಿದಳು.

ಈಗ ಲಕ್ಕಿ ಹದಿನಾರರ ಹರೆಯದವಳಾದಳು, ತಾಯಿಗೆ ಎಲ್ಲಾ ಕೆಲಸದಲ್ಲಿಯೂ ನೆರವಾಗುತ್ತಿದ್ದಳು. ಇವಳು ದೊಡ್ಡವಳಾದಂತೆಲ್ಲಾ ಅವಳ

ಸ್ವಾಭಿಮಾನದ ಸ್ವಭಾವವೂ ಹೆಚ್ಚುತ್ತಿತ್ತು.

ತಾಯಿಯ ದೀನತೆಯನ್ನು ಕಂಡು ಬೇಸರ ಪಡುತ್ತಿದ್ದಳು. ಮನೆಯಲ್ಲಿ ಬೇಯಿಸಲು ಕಾಳು ಕಡ್ಡಿ ಏನೂ ಇಲ್ಲದಿದ್ದಾಗ ನೆರೆ-ಹೊರೆಯವರಲ್ಲಿ ತಾಯಿ ಏನಾದರು ಬೇಡಿ ತರುತ್ತಿದ್ದಳು.

ಹಾಗೆ ಬೇಡಿ ತಂದುದನ್ನು ತಿರಿಕೆಯವಳಂತೆ ತಿನ್ನಲು ಲಕ್ಕಿಯ ಮನಸ್ಸು ಒಪ್ಪುತ್ತಿರಲಿಲ್ಲ.

ಮಳೆಗಾಲ, ಒಂದು ಬಾರಿ ಒಟ್ಟಿಗೆ ಮೂರು ದಿನ ಜಿಡಿಮಳೆ ಹಿಡಿಯಿತು. ಆ ಸುರಿ ಮಳೆಯಲ್ಲಿ ಹೊರಗೆ ತಲೆಯಿಡಲೂ ಸಾಧ್ಯವಾಗುತ್ತಿರಲಿಲ್ಲ. ಇದ್ದ ಜೋಳದ ಕಾಳನ್ನು ಬೀಸಿ ಎರಡು ದಿನ ರೊಟ್ಟಿ ಬೇಯಿಸಿ ಅರೆ ಹೊಟ್ಟೆಗೆ ತಿಂದು ಮಲಗಿದರು ತಾಯಿ ಮಗಳು.

ಹರೆಯದ ಮಗಳು ಅರೆ ಹೊಟ್ಟೆ ಉಂಡು ಮಲಗುವುದು ಮಲ್ಯಾ ಮನಸ್ಸಿಗೆ ದುಃಖವನ್ನುಂಟು ಮಾಡಿತು.

ಮಾರನೆಯ ದಿನ ತಮ್ಮ ನೆರೆಯವರಲ್ಲಿ ಬೇಡಿ ಒಂದಿಷ್ಟು ರಾಗಿ ಹಿಟ್ಟು ತಂದಳು ಮಲ್ಯಾ.

ಅದನ್ನು ನೋಡಿದ್ದೇ ಲಕ್ಕಿಗೆ ತಾಯಿಯ ಮೇಲೆ ಸಿಟ್ಟು ಬಂದಿತು. “ಅವ್ವಾ! ನಾನು ಉಪವಾಸ ಸತ್ತರೂ ಸರಿ ಆ ತಿರುಕೆ ಹಿಟ್ಟನ್ನು ತಿನ್ನಾಕಿಲ್ಲ ಕಣವ್ವ ಅಂದಳು.

ಆ....ಹಾ....ಹಾ! ಈ ರಾಣಿ ಸಾಹೇಬರಿಗೆ ಮನೇಲಿ ತುಂಬಿ ಮುಡಗೈತೆ ನೆನ್ನೆಯಿಂದ ಉಪವಾಸ ಬಿದ್ದವ್ಳೆ ಜೋರು ಬೇರೆ ಮಾಡ್ತಾ ಅವ್ಳೆ; !

ಅವ್ವಾ ! ಇವತ್ತೊಂದು ದಿವಸ ಒಟ್ಟೇಗೆ ಇಲ್ಲದಿದ್ರೆ ಪ್ರಾಣ ಹೊರಟೋಗುತ್ತೈತಾ? ಮಕ್ಕರಿ ತುಂಬ ಮಾಕಳೀಬೇರು ಐತೆ ಹೆಂಗಿದ್ರೂ. ರವಷ್ಟು ಮಳೆ ನಿಂತ್ರೆ ಹೋಗಿ ಮಾರಿಕೊಂಡು ಬತ್ತಿನ್ನಿ. ರಾಗಿ ತಂದು ರಾತ್ರಿಗೆ ಹಿಟ್ಟು ಬೇಸಿದರೆ ಆಗಾಕಿಲ್ವಾ! ಲಕ್ಕಿ ಕುಳಿತಿದ್ದ ಕಡೆಯಿಂದಲೇ ತಾಯಿಗೆ ಉತ್ತರ ಕೊಟ್ಟಳು.

ಹಂಗೆ ಮಾಡು ಬಾ ಲಕ್ಕೀ ಈಗ ವಸಿ ಉಂಡುಬಿಡು. ಎಂದು ತಟ್ಟೆಯಲ್ಲಿ ಒಂದು ಮುದ್ದೆ ಹಿಟ್ಟು ಹಾಕಿ ಮಗಳ ಮುಂದೆ ಇಟ್ಟಳು.

ಲಕ್ಕಿ ಮುಟ್ಟಲೂ ಇಲ್ಲ. “ ಏನಾದ್ರೂ ಆ ತಿರುಕೆ ಹಿಟ್ಟು ನನಗೆ

ಬೇಡವ್ವಾ ! ಎಂದು ಅಲ್ಲಿಂದ ಎದ್ದು ಹೋದಳು. ಮಕ್ಕರಿಯಲ್ಲಿದ್ದ ಮಾಕಳೀ ಬೇರನ್ನು ವಿಂಗಡಿಸಿ ಕಂತೆಗಳಾಗಿ ಕಟ್ಟುತ್ತಾ ಕುಳಿತಳು.

ಮಗಳ ಘನತೆ, ಗಾಂಭೀರ್ಯಕ್ಕೆ ಸರಿತೂಗುವುದೆಂದರೆ ಮಲ್ಯಾಗೆ ಸಾಕಾಗಿ ಹೋಗುತ್ತಿತ್ತು. ನಮ್ಮಂಥ ಬಡವರ ಮನೇಲಿ ಯಾಕಾಗಿ ಹುಟ್ಟಿತೋ! ಈ ಹುಡುಗಿ ? ಎಂದು ಹಲುಬುತ್ತಿದ್ದಳು. ಮಲ್ಯಾ.

ಹರೆಯದಲಕ್ಕಿ ನೋಡುವವರ ಕಣ್ಣನ್ನು ಕುಕ್ಕುತ್ತಿದ್ದಳು. ಕಾಡು ಮೇಡೆನ್ನದೆ ಬಿಸಿಲು ಗಾಳಿಯಲ್ಲಿ ಅಲೆದರೂ ಮಾಸದಂತಹ ಮೈ ಬಣ್ಣ, ದಂತದ ಮೈಯ್ಯವಳು.

ಸೌದೆ ಕಡಿದು ಹೊತ್ತು ಕಷ್ಟ ಕೆಲಸದಿಂದಲೇ ಬೆಳೆದಿದ್ದ ಮೈ ಸ್ವಲ್ಪ ಒರಟಾಗಿದ್ದರೂ ಮಾಟವಾದ ಮೈ. ಆ ಮೈ ಕಟ್ಟಿಗೆ ತಕ್ಕ ನಿಲುವು.

ಸ್ವಾಭಾವಿಕವಾದ ಅವಳ ಚಲುವನ್ನು ಹೆಚ್ಚಿಸಲು ಚಂಚಲತೆಯಿಂದ ಕೂಡಿದ ಬೊಗಸೆಗಣ್ಣುಗಳು, ಅವಳಿಗೆ ದೇವರು ಕೊಟ್ಟ ಕೊಡಿಗೆಯಾಗಿದ್ದುವು

ಅವಳು ನಕ್ಕಾಗ ಕೆಂದುಟಿಗಳ ನಡುವೆ ಹೊಳೆಯುವ ಸುಳಿಹಲ್ಲುಗಳು ಯಾರನ್ನಾದರೂ ಆಕರ್ಶಿಸದೆ ಬಿಡುತ್ತಿರಲಿಲ್ಲ.

ಲಂಬಾಣಿಯರ ಗುಂಗಿಗೇ ರತಿಯಂತಿದ್ದಳು ಲಕ್ಕಿ. ರೂಪವತಿಯಾದ ಮಗಳನ್ನು ಅಲಂಕರಿಸಿ ನೋಡಲು ಮಲ್ಯಾಗೆ ತುಂಬಾ ಆಸೆ.

ಕಾಸು ಕಾಸಿಗೆ ಕೂಡಿಸಿ ಲಂಬಾಣಿಗಳು ಅಲಂಕರಿಸಿಕೊಳ್ಳುವ ಬೆಳ್ಳಿ ಒಡವೆಗಳನ್ನು ಮಾಡಿಸಿದ್ದಳು.

ಮುಂದಲೆಯ ಸರಪಣಿ, ಗೆಜ್ಜೆ. ಬೈತಲೆ ಬೊಟ್ಟು, ಕೆನ್ನೆಯಬಳಿ ಕೂದಲನ್ನು ಕೂಡಿಸುವ ಬೆಳ್ಳಿಯ ಕುಪ್ಪಿ. ಕಿವಿಯಿಂದ ಹಿಂದೆ ತಲೆಗೆ ಸೇರಿಸಿ ತೂಗಾಡುವ ಬೆಳ್ಳಿ ಸರಪಣಿ.

ಕಾಲಿಗೆ ಅಲ್ಯೂಮಿನಿಯಂ ಲೋಹದ ಕಡಗ , ಗೆಜ್ಜೆ , ಮೊಳಕೈಯಿಂದ ಮುಂಗೈವರೆಗೆ ದಂತದ ಬಳೆಗಳು , ಬೆರಳುಗಳಿಗೆ ಬೆಳ್ಳಿಯ ಉಂಗುರ. ಇವೆಲ್ಲಾ ಮುದ್ದಿನ:ಮಗಳಿಗೆ ಮಾಡಿಸಿದ್ದಳು ಮಲ್ಯಾ.

ಕೆಂಪಿನ ದಪ್ಪಲಂಗಕ್ಕೆ ಅಂಚಿಗೆಲ್ಲಾ ಕನ್ನಡಿ ಚೂರನ್ನು ಇಟ್ಟು ಹೊಲಿದು ಲಕ್ಕಿಯೇ ಅವಳ ಲಂಗವನ್ನು ಅಲಂಕರಿಸಿದ್ದಳು.

ಬಣ್ಣ ಬಣ್ಣದ ಬಟ್ಟೆ ಚೂರುಗಳನ್ನು ಸೇರಿಸಿ ರವಿಕೆ ಹೊಲಿದು

ಅದರ ತೋಳಿನ ಅಂಚಿಗೆ ಅಲ್ಯೂಮಿನಿಯಂ ಗೆಜ್ಜೆ ಹೊಲಿದು ಅಲಂಕರಿಸಿದ್ದ ರವಿಕೆಯನ್ನು ಬೆನ್ನಿಗೆ ಬಿಗಿದಿದ್ದಳು.

ಮೇಲು ಹೊದಿಕೆಯಿಲ್ಲದ ಎದೆಯ ಭಾಗವು ಅವಳ ಯೌವ್ವನದ ಚಲುವಿಗೆ ಕಲಶವಿಟ್ಟಂತೆ ರವಿಕೆಯನ್ನು ತಳ್ಳಿಕೊಂಡು ಉಬ್ಬಿ ನಿಂತಿದ್ದವು.

ಎರಡೆಳೆ ಕವಡೆಯ ಸರವನ್ನು ತೂಗಾಡುವಂತೆ ಸೊಂಟಕ್ಕೆ ಸುತ್ತಿದ್ದಳು. ಅಮೃತ ಶಿಲೆಯಲ್ಲಿ ಕಡೆದ ಶಿಲಾ ಬಾಲಿಕೆಯಂತಿದ್ದ ಅವಳ ಮಾಟಕ್ಕೆ ಈ ಎಲ್ಲಾ ಉಡಿಗೆ ತೊಡಿಗೆಗಳೂ ಅಂದವಾಗಿಯೇ ಕಾಣುತ್ತಿದ್ದುವು.

ಅವಳು ಹೊರಕ್ಕೆ ಹೊರಟಳೆಂದರೆ ಯಾರಾದರೂ ಸರಿ ಬಿಟ್ಟ ಕೆಲಸವನ್ನು ಬಿಟ್ಟು ನೆಟ್ಟ ಕಣ್ಣಿನಿಂದ ನೋಡುತ್ತಾ ಅವಳ ರೂಪಕ್ಕೆ ಮಾರು ಹೋಗುತ್ತಿದ್ದರು.

ಈಗ ಲಂಬಾಣಿ ಜನರು ಆ ತಾಯಿ ಮಕ್ಕಳಿಗೆ ನೆರವು ನೀಡಲು ನಾನು ತಾನೆಂದು ಮುಂದೆ ಬರುತ್ತಿದ್ದರು. ಲಕ್ಕಿಯ ಒಂದು ಕಡೆಗಣ್ಣಿನ ನೋಟಕ್ಕಾಗಿ ಹಾ .... ತೊರೆಯುತ್ತಿದ್ದರು, ಲಂಬಾಣಿ ಯುವಕರು.

" ಲಚುಮನಾಯಕ-ಇಪ್ಪತ್ನಾಲ್ಕರ ಹರೆಯದ ಕಟ್ಟಾಳು ಲಂಬಾಣಿಗಳ ಗುಂಪಿಗೇ ಸಿರಿವಂತ ಮನೆತನದವನು. ಹೊಲ ಮನೆಯುಳ್ಳ ಆಸ್ತಿವಂತನೆಂದರೆ ಆ ಹಳ್ಳಿಗೆಲ್ಲಾ ಅವರ ಮನೆಯೊಂದೇ.

ಅವನ ಅಪ್ಪ ರಾಮನಾಯಕ ಲಂಬಾಣಿಗಳ ಮುಖಂಡನಾಗಿದ್ದನು. ಅವನೆಂದರೆ ಲಂಬಾಣಿಗಳಿಗೆ ಅಪಾರ ಗೌರವ ಅವರ ಕಷ್ಟಸುಖದಲ್ಲಿ ರಾಮ ನಾಯಕನು ಪಾಲುಗೊಂಡು ಅವರಿಗೆ ಸಹಾಯ ಮಾಡುತ್ತಿದ್ದನು.

ತಮ್ಮಲ್ಲಿ ಜಗಳ ಕದನಗಳಾದರೆ ರಾಮನಾಯಕನ ಬಳಿ ಒಪ್ಪಿಸುತ್ತಿದ್ದರು ಆ ಲಂಬಾಣಿಗಳು.

ಅವನು ಯಾರಿಗೂ ಅನ್ಯಾಯವಾಗದಂತೆ ತೀರ್ಪು ಕೊಡುತ್ತಿದ್ದ. ಅವನ ತೀರ್ಪಿಗೆ ಯಾರೂ ಎದುರಾಡುತ್ತಿರಲಿಲ್ಲ. ಒಟ್ಟಿನಲ್ಲಿ ರಾಮನಾಯಕ ಲಂಬಾಣಿ ಗಳಿಗೆ ತಂದೆಯೋಪಾದಿಯಲ್ಲಿದ್ದ.

ಆದರೆ ತಂದೆಯ ಹಿರಿತನವನ್ನು ಮಗ ದುರುಪಯೋಗಪಡಿಸಿಕೊಳ್ಳ ತೊಡಗಿದ. ಲಚುಮನಾಯಕನೆಂದರೆ ಆ ಬಡ ಲಂಬಾಣಿಗಳು ಹೆದರುತ್ತಿದ್ದರು.

ಹೊಲದ ಕೆಲಸ ಬಿದ್ದಾಗ ಆ ಜನರಿಂದ ದುಡಿಸಿಕೊಳ್ಳುತ್ತಿದ್ದ ಆದರೆ ಅವರ ಕಷ್ಟಕ್ಕೆ ತಕ್ಕ ಕೂಲಿಯನ್ನು ಕೊಡದೆ ತಾನು ಅವರ ಒಡೆಯನೆಂಬ ಠೀವಿಯಿಂದ

ಗದರಿ ಕಳುಹಿಸುತ್ತಿದ್ದ.

"ದುಷ್ಟರನ್ನು ಕಂಡರೆ ದೂರ ಇರು" ಎಂಬ ಗಾದೆಯಂತೆ ಅವನು ಕೊಡುವ ತೊಂದರೆಗಳನ್ನು ಸಹಿಸಿಕೊಂಡು ದಿನವಿಡೀ ದುಡಿಯುತ್ತಿದ್ದರು ಆ ಲಂಬಾಣಿಗಳು.

ರಾಮನಾಯಕ ಹಣವಂತನಾದರೂ ದುರಹಂಕಾರಿಯಾಗಿರಲಿಲ್ಲ ಬಡವರ ಕಷ್ಟವನ್ನು ನೋಡಿ ಮರುಗುತ್ತಿದ್ದ.

ಬೆಳೆ ಬೆಳೆದು ಕಣಜ ತುಂಬಿದ್ದರೆ ಬೇಡಲು ಬಂದವರನ್ನು ಬರಿ ಕೈಲಿ ಕಳುಹಿಸುತ್ತಿರಲಿಲ್ಲ.

ಪ್ರತಿ ವರ್ಷ ಹೋಳಿ ಹುಣ್ಣಿಮೆ ಅವರಿಗೆ ದೊಡ್ಡ ಹಬ್ಬ. ಆ ಹಬ್ಬಕ್ಕೆ ತನ್ನ ಜಾತಿಯ ಬಡವರಾದ ಪ್ರತಿ ಕುಟುಂಬಕ್ಕೂ ಒಂದೊಂದು ಕೊಳಗ ದಿನಸಿ ಕೊಟ್ಟು ಕಳುಹಿಸುತ್ತಿದ್ದ. ಪಾಪ! ಆ ಬಡಪಾಯಿ ಲಂಬಾಣಿಗಳು ಅವನನ್ನು ಹೊಗಳಿ, ಹರಿಸಿ, ಸಂತೋಷವಾಗಿ ಅವನು ಹೇಳಿದ ಕೆಲಸವನ್ನು ಮಾಡುತ್ತಿದ್ದರು.

ಆದರೆ ರಾಮನಾಯಕನಿಗೆ ವಯಸ್ಸಾದಂತೆಲ್ಲಾ ಹೊಲ-ಮನೆಯ ಆಡಳಿತವನ್ನು ಮಗನಿಗೆ ಒಪ್ಪಿಸುತ್ತಾ ಬಂದ. ಹೊರಗೆ ಹೋಗಿ ದುಡಿಯಲು ಶಕ್ತಿಯಿಲ್ಲದಂತಾಗಲು ದಿನಸೀ ಧಾನ್ಯದ ಜವಾಬ್ದಾರಿಯೆಲ್ಲಾ ಮಗ ಲಚುಮ ನಾಯಕನೇ ವಹಿಸಿಕೊಂಡ.

ತಾವು ಬೆಳೆದ ದಿನಸಿಯನ್ನು ಬೇರೆಯವರಿಗೆ ಏಕೆ ಕೊಡಬೇಕು ಎಂದು ಅಪ್ಪನ ಧಾರಾಳತನವನ್ನು ಖಂಡಿಸಿ ದಾನ ಧರ್ಮವನ್ನೇ ನಿಲ್ಲಿಸಿದ. ರಾಮ ನಾಯಕನ ಕೈ ನಡೆಯದಾಯಿತು.

ಮುದುಕನಾದ ಅವನು ದಿನ ದಿನಕ್ಕೆ ಮೆತ್ತಗಾದ. ಆಡಳಿತವನ್ನೆಲ್ಲಾ ಮಗನಿಗೇ ವಹಿಸಿ ತಾನು ಮನೆಯ ಬಳಿಯೇ ಇರುತ್ತಿದ್ದ.

ಬರ ಬರುತ್ತಾ ಲಚುಮನಾಯಕನ ದಬ್ಬಾಳಿಕೆಗೆ ಇತಿ ಮಿತಿಯೇ ಇಲ್ಲದಾಯಿತು.

ಹರೆಯದ ವಯಸ್ಸು. ತಾನೇ ನಾಯಕನೆಂಬ ಅಹಂಕಾರ, ತಾನು ಹೇಳಿದಂತೆ ತಮ್ಮ ಜನರೆಲ್ಲಾ ಕೇಳುತ್ತಾರೆಂಬ ಜೋರು. ಇನ್ನು ತಮ್ಮ ಗುಂಪಿಗೇ ರೂಪವತಿಯಾಗಿದ್ದ ಲಕ್ಷ್ಮಿಯನ್ನು ತನಗೆ ಸೇರಿದ ಸ್ವತ್ತೆಂದು ಬಗೆದಿದ್ದ.

ಈ ದುಷ್ಟ ಲಚುಮನಾಯಕ ಹರೆಯದ ಲಕ್ಕಿಯ ಮೇಲೆ ಕಣ್ಣಿಟ್ಟ.

ಗದ್ದೆ ಕೊಯ್ಲಿಗೆ ಬಂದಿತ್ತು, ಕೊಯ್ಯುವ ಕೆಲಸಕ್ಕೆ ತಮ್ಮ ಜಾತಿ ಜನಕ್ಕೆಲ್ಲಾ ಹೇಳಿ ಕಳುಹಿಸಿದ. ಲಚುಮನಾಯಕ ಹೆಣ್ಣು-ಗಂಡು ಆಳುಗಳೆಲ್ಲಾ ಬರಬೇಕೆಂದು.

ಮಲ್ಯಾ ಮನೆಗೆ ಹೇಳಲು ತಾನೇ ಹೊರಟ ನೆಪವಿಲ್ಲದ ನೆಪದಲ್ಲಿ ಲಕ್ಕಿಯ ರೂಪರಾಶಿಯನ್ನು ಕಣ್ಣುಗಳಲ್ಲಿ ತುಂಬಿಕೊಳ್ಳಲು ಹಾತೊರೆಯುತ್ತಿದ್ದ.

ಆದರೆ ಲಕ್ಕಿ ಮಾತ್ರ ಅವನು ಬಂದಾಗ ಅವನ ಕಣ್ಣಿಗೂ ಬೀಳುತ್ತಿರಲಿಲ್ಲ ಅವನು ಮುಖಂಡನೆಂದು ಅವನಿಗೆ ಯಾವ ಗೌರವವನ್ನೂ ಕೊಡುತ್ತಿರಲಿಲ್ಲ. ಬದಲಾಗಿ ಅವನನ್ನು ನಿಕೃಷ್ಟವಾಗಿ ಕಾಣುತ್ತಿದ್ದಳು. ಅವನ ದುಷ್ಟ ಪ್ರವೃತ್ತಿಯು ಅವಳಿಗೆ ಸರಿಬೀಳುತ್ತಿರಲಿಲ್ಲ.

ಅಂದು-ತಾಯಿ ಮಗಳು ಮನೆಯ ಅಂಗಳದಲ್ಲಿ ಕಡ್ಡಿ ಸೌದೆಗಳನ್ನು ಜೋಡಿಸಿ ಹೊರೆಕಟ್ಟುತ್ತಿದ್ದರು.

ಆಗ ಲಚುಮನಾಯಕ ಮೆಟ್ಟಿದ್ದ ಜೋಡನ್ನು ಕಿರ....ಕಿರ ಸದ್ದು ಮಾಡುತ್ತಾ ಠೀವಿಯಿಂದ ನಡೆದು ಬಂದ, ಹೋಸ್ತಿಲ ಬಳಿ ಸೊಂಟದ ಮೇಲೆ ಕೈ ಇಟ್ಟು ನಿಂತು ಜೋರಿನಿಂದ "ಏಯ್....ಯಮ್ಮೋ!....ಮಲ್ಯಾ! ಏನು ಮಾಡುತ್ತಿದ್ದೀಯಮ್ಮೋ? ಎಂದು ಕೂಗು ಹಾಕಿದ.

ಮಲ್ಯಾ ಸೌದೆ ಕಟ್ಟುವುದನ್ನು ಬಿಟ್ಟು ಮರ್ಯಾದಿಯಿಂದ "ಬಾರಪ್ಪೋ ನಾಯಕ! ಒಳೀಕ್ ಬಾ...... ಇದೇನು ಮನೆಗಂಟ ಬಂದು ಬುಟ್ಟೀ?" ಅಂದಳು.

ಲಕ್ಕಿ ಅವನ ಕಡೆಗೂ ತಿರುಗಿ ನೋಡದೆ ಮಚ್ಚಿನಿಂದ ಸೌದೆ ಕತ್ತರಿಸುತ್ತಲೇ ಇದ್ದಳು.

ಅವಳ ಕೆಂದಾವರೆಯಂತಹ ಮುಖದ ಮೇಲೆ ಮುತ್ತಿನ ಮಣಿಯಂತೆ ಬೆವರಿನ ಹನಿಗಳು ಮೂಡಿದ್ದುವು.

ಅವಳ ಮೈ ಮಾಟದಲ್ಲಿ ರಾಣಿಯ ಠೀವಿಯಿತ್ತು. ಬಾಗಿ ಸೌದೆಯನ್ನು ಕತ್ತರಿಸುತ್ತಿದ್ದ ಅವಳ ನಿಲುವು ವೀರ ರಮಣಿಯರ ಶೌರ್ಯವನ್ನು ನೆನಪಿಗೆ ತರುತ್ತಿತ್ತು.

ಅವಳ ಸುಕೋಮಲವಾದ ಶರೀರಕ್ಕೆ ಒಂದು ಬಗೆಯ ಸೊಬಗನ್ನು

ಉಂಟು ಮಾಡಿತ್ತು.

ಲಚುಮನಾಯಕ ನೆಟ್ಟ ನೋಟದಿಂದ ಲಕ್ಕಿಯ ಠೀವಿಯನ್ನು ನೋಡಿದ. "ಭಲೇ ಲಕ್ಕಿ ನೀನು ಸೌದೆ ಕಡಿಯುತ್ತಿದ್ದರೂ ಅದೂ ಸೊಗಸಾಗೈತೆ ಅಂದ.

ಲಕ್ಕಿ ನೆಟ್ಟಗೆ ನಿಂತು ಸೊಂಟದ ಮೇಲೆ ಎರಡು ಕೈಗಳನ್ನೂ ಇಟ್ಟು ಠೀವಿಯಿಂದಲೇ "ಏಯ್ ನಾಯಕ! ಏನಿದ್ರೂ ನಮ್ಮನೆ ತಾವ ನೀನು ಬರಬೇಡ! ಅಂತ ಅವತ್ತೇಯೇಳಲಿಲ್ವಾ? ಮತ್ತೆ ಈವತ್ಯಾಕ್ಬಂದೆ? ಅಂದಳು, ಅವನ ಕಡೆ ದುರ-ದುರನೆ ನೋಡುತ್ತಾ.

ನೀನು ಯಾವ ದೊಡ್ಡ ಮನಸೀ ಅಂತ ನೀನು ಏಳ್ದಂಗೆ ಕೇಳ್‌ಬೇಕೇ, ಹುಡಿಗೀ?

ನೀನು ಮಹಾ ದೊಡ್ಡ ಮನ್ಸ ಆದರೆ ನಿನ್ನ ಮನ್ಯಾಗೆ, ನಮಗೇನು? ಇಟ್ಟೊ-ಬಟ್ಟೆ ಕೊಟ್ಟು ಸಾಕಿದ್ದೀಯಾ? ನಮ್ಮೇಕೆ ಜೋರು ಮಾಡಕೆ?

ಲೇ.... ಇಲ್ಲೀಗಂಟ ಸಾಕದಿದ್ರೆ ಇನ್ನು ಮುಂದೆ ನಾನೇ ತಾನೇ ಸಾಕೋದೂ;

ಆ ಹಾ....ಹಾ! ಭಲೆ ಗಂಡಸು!....ನಿನ್ನ ಹಂಗಿನಲ್ಲಿ ನಾವ್ಯಾಕ್ ಬಿದ್ದಿರಾನ?

ಏಯ್ ಲಕ್ಕಿ ನಿನ್ನ ಜೋರೆಲ್ಲಾ ಕಟ್ಟೆ ಮಡಗು. ನಿನ್ನಂಥ ಚೆಂದುಳ್ಳಿ ಹೆಣ್ಣಿಗೆ ನಮ್ಮ ಜಾತೀಲಿ ನನಗಿಂತ ಗಂಡು ಬೇರೆ ಯಾರೇ ಸಿಕ್‌ತಾರೇ? ಅನ್ನುತ್ತಾ ನಾಯಕ ಇನ್ನೂ ಎರಡು ಹೆಜ್ಜೆ ಮುಂದೆ ಇಟ್ಟು, ಲಕ್ಕೀ .. ಲಕ್ಕೀ .... ನೀನು ಸೌದೆ ಕಡಿಯೋದು ನಾನು ನೋಡಲಾರೆ. ಇಲ್ಲಿ ತತ್ತಾ ಮಚ್ಚು. ಒಂದ್ ನಿಮಿಸಕ್ಕೆ ಕತ್ತರ್‌ಸ್ ಕೊಡ್ತೀನಿ; ಎಂದು ಲಕ್ಕಿ ಕೈಯ್ಯಲ್ಲಿದ್ದ ಮಚ್ಚನ್ನು ತೆಗೆದುಕೊಳ್ಳುವ ನೆಪದಿಂದ ಅವಳ ಕೈ ಹಿಡಿದ.

ಲಕ್ಕಿಯ ಕೋಪ ನೆತ್ತಿಗೇರಿತು. ಏಯ್ ನಾಯಕ! ಉಷಾರ್, ನನ್ನ ತಾವ ನಿನ್ನಾಟ ಎಲ್ಲಾ ನಡೆಯಾಕಿಲ್ಲ, ನಿನ್ನ ಉಪಕಾರ ನಮಗೆ ಯಾವುದೂ ಬೇಕಾಗಿಲ್ಲ. ಇಲ್ಲಿಂದ ಮೊದಲು ಹೊರಡು. ಎಂದು ಮಚ್ಚನ್ನು ಹಿಡಿದು ಕಾಳಿಕಾ ದೇವಿಯಂತೆ ನಿಂತಳು.

ಅವರ ಮ ತುಗಳನ್ನು ಕೇಳುತ್ತಿದ್ದ ಮಲ್ಯಾ ಭಯದಿಂದ ನಡುಗಿ ಹೋದಳು.

ಏಯ್ ಲಕ್ಕೀ ನಿನಗೇನಾಗೈತೆ? ನಮ್ಮ ಮನೆ ಬಾಗಿಲ ಗಂಟ ನಾಯಕ

ಬಂದ್ರೆ ಹಿಂಗೆಲ್ಲಾ ಸಿಕ್ಕಾಪಟ್ಟೆ ಮಾತಾಡ್ತೀಯೇನೇ ? ತತ್ತಾ, ಇಲ್ಲಿ ಮಚ್ಚ, ಒಳೀಕ್ ನಡಿ" ಎಂದು ಮಗಳನ್ನು ಕಳುಹಿಸಿ, "ಬಾರಪ್ಪ ನಾಯಕ, ಅವಳ ಮಾತೇನು ಕಟ್ಟಿ ಕೋತೀಯಾ ! ಒಳೀಕ್ ಬಂದು ಕುಂತ್ಕೋ" ಅಂದಳು.

ಇವಳ ಜೋರೆಲ್ಲಾ ನಾಸೀಳಿಸ್ತೀನಿ ಮಲ್ಲವ್ವಾ ! ಒಂದು ಕೈ ನೋಡ್ಕೋತೀನಿ. ನಾಳೆ ನಮ್ ಗದ್ದೆ ಕುಯ್ಯಾಕೆ ಹೊತ್ನಂತೆ ಇಬ್ರೂ ಬನ್ನಿ, ಎಂದು ಲಕ್ಕಿಯನ್ನು ದುರ ದುರನೆ ನೋಡಿ ಹೊರಟು ಹೋದ.

ಅವನು ಹೊರಟು ಹೋದ ಮೇಲೆ ಮಲ್ಯಾ ಮಗಳಿಗೆ ತರಾಟೆಗೆ ತೆಗೆದು ಕೊಂಡಳು.

ಏಯ್ ! ಲಕ್ಕೀ ನಿನಗೇನು ಮೈ ಮೇಲೆ ದೆವ್ವ ಕುಂತೈತ ? ನಾಯಕನ ಮನೆಗೆ ಸೊಸೆಯಾಗೋದು ಏನು ಸಾಮಾನ್ಯ ಅಂತ ತಿಳ್ಕೊಂಡ್ಯಾ ? ಅಂದಳು ವ್ಯಸನದಿಂದ.

ತಾಯಿಯ ಮಾತು ಲಕ್ಕಿಗೆ ಅಸಹ್ಯವಾಗಿ ತೋರಿತು. ಅವ್ವಾ ! ಇನ್ನೊಂದು ಸಾರಿ ಆ ನಾಯಕನ ಸುದ್ದಿ ಎತ್ತಬೇಡ ಕಣವ್ವಾ ! ಆ ಪುಂಡು ನಾಯಕನ್ನ ಮದುವೆ ಆಗಾಕ್ಕಿಂತ ಬಾವೀಗೆ ಮಗುಚಿಕೊಳ್ಳೋದು ವಾಸಿ" ಅಂದಳು.

"ನೀನು ಯಾವ ದೊಡ್ಡ ಮನಸೀ ಹೊಟ್ಟೆಯಾಗೆ ಹುಟ್ಟಿದೀನಿ ಅಂತ ಹಿಂಗೆ ಜೋರು ಮಾಡ್ತೀಯೇ ? ನನ್ನವ್ವ ! ಹೊಲ, ಮನೆ, ಎಲ್ಲಾ ಐತೆ, ಅಂಥಾ ನಾಯಕನ ಮನೆಯವರು ತಿನ್ನಾಕೆ ಗತಿ ಇಲ್ಲದ ನಮ್ಮಂಥ ಬಡವರ ಮನೆ ಹೆಣ್ಣು ತಂದ್ಕೋತೀವಿ ಅಂದರೆ ಮೂದೇವಿ ನೀನು ಹಿಂಗಾಡ್ತೀಯಲ್ಲಾ ! ಎಂದು ಕಣ್ಣೀರಿಟ್ಟಳು ಮಲ್ಯಾ.

ಲಕ್ಕಿ ನಿಜವಾಗಿಯೂ ದೊಡ್ಡ ಮನೆತನದವಳ ಬಸುರಿನಿಂದ ಬಂದವಳು ಎಂದು ಮಲ್ಯಾಗೆ ಹೇಗೆ ತಿಳಿಯಬೇಕು ? ಲಕ್ಕಿಯ ನರನಾಡಿಗಳಲ್ಲಿ ಆ ಸುಸಂಕೃತಿಯ ರಕ್ತ ಪ್ರವಹಿಸುತ್ತಿದೆ ಎಂಬುದು ಮಲ್ಯಾಗೆ ಗೊತ್ತಾಗುವ ಬಗೆಯಾದರೂ ಹೇಗೆ ?

ಅಷ್ಟೈಶ್ವರ್ಯದ ಮಧ್ಯೆ ರಾಜಕುಮಾರಿಯಂತೆ ಬೆಳೆಯಬೇಕಾದವಳು ವಿಧಿ ವಶಾತ್ ತನ್ನ ಕುಟುಂಬದಲ್ಲಿ ಬಂದು ಬಿದ್ದಿರುವುದಾದರೂ ಮಲ್ಯಾಗೆ ಹೇಗೆ ತಿಳಿಯಬೇಕು ?

ತಮ್ಮ ಜಾತಿಯ್ಲೇಲಿ ಅಂತಹ ಹೆಣ್ಣು ಹುಟ್ಟಿಲ್ಲವೆಂದೂ ಆ ರೂಪರಾಶಿ ಲಕ್ಕಿ ತನ್ನ ಮಗಳೆಂದೇ ನಂಬಿ ಹೆಮ್ಮೆ ಪಡುತ್ತಿದ್ದಳು.

ಇಂತಹ ಮಗಳಿಗೆ ಲಚುಮನಾಯಕನಂತಹ ಸಿರಿವಂತಿಕೆಯ ಗಂಡು ಕಟ್ಟುಮಸ್ತಾದ ಆಳು ಗಂಡನಾಗುವನೆಂದರೆ ನಿಜವಾಗಿಯೂ ಮಲ್ಯಾ ಹಿಗ್ಗಿದ್ದಳು.

ತಮ್ಮ ಜಾತಿಯಲ್ಲಿ ಅವನಿಗಿಂತ ಉತ್ತಮ ವರ ಇಲ್ಲ ಅಂದಮೇಲೆ ಈ ಹುಚ್ಚು ಹುಡುಗಿ ಏನು ದಿಮಾಕು ಮಾಡುತ್ತಾಳೆ ? ತಮ್ಮ ಜಾತಿಗೇ ಮುಖಂಡ ನಾಯಕ ಮನೆ ಬಾಗಿಲಿಗೆ ಬಂದರೆ ಇವಳು ಸ್ವಲ್ಪವಾದರೂ ಭಯದಿಂದ ನಡೆಸು ಕೊಳ್ಳುವುದಿಲ್ಲವಲ್ಲಾ ! ಎಂದು ತಲ್ಲಣಿಸಿದಳು.

ತನ್ನ ಗಂಡನ ಕಡೇ ಆಸೇ "ಒಬ್ಬಳೇ ಮುದ್ದು ಮಗಳು ಅಂತಹ ಸಿರಿವಂತರ ಮನೆಸೇರಿ ಸುಖವಾಗಿ ಬಾಳಬೇಕೆಂಬುದು" ಅದನ್ನು ಕಣ್ಣಾರೆ ಕಾಣಲು ಕಾತರಿಸಿದಳು ಮಲ್ಯಾ.

ಮಗಳ ಈ ರೀತಿಯ ನಡವಳಿಕೆಯಿಂದ ಆ ಸಂಬಧವು ಎಲ್ಲಿ ತಪ್ಪಿ ಹೋಗುವುದೋ, ಎಂದು ಕಳವಳ ಒಂದು ಕಡೆಯಾದರೆ ಮತ್ತೊಂದು ಕಡೆ ತಮ್ಮ ಜಾತಿಗೇ ಮುಖಂಡ ನಾಯಕ, ಸಿಟ್ಟಿಗೆದ್ದು ತಮ್ಮನ್ನು ಏನು ಸತಾಯಿಸುವನೋ? ಎಂಬ ಭಯ ಒಂದು ಕಡೆ.

ಈ ರೀತಿಯ ಚಿಂತೆಯಿಂದ ಮಲ್ಯಾ ಮಗಳ ಮನವೊಲಿಸಿ ಹೇಗಾದರೂ ಅವಳನ್ನು ಒಪ್ಪಿಸಲು ಪ್ರಯತ್ನಿಸುತ್ತಿದ್ದಳು.

ಆದರೆ ಲಕ್ಕಿ ಮಾತ್ರ ತನ್ನ ಮನವೊಲ್ಲದ ಆ ಹೇಸಿ ಮನುಷ್ಯನನ್ನು ತೃಣ ಸಮಾನವಾಗಿ ಕಾಣುತ್ತಿದ್ದಳು.

ಪ್ರತಿ ಬಾರಿಯೂ ಹೊಲದ ಕೆಲಸ ಬಿದ್ದಾಗ ಲಚುಮನಾಯಕ ಆ ಬಡ ಜನರ ಕೈಲಿ ದುಡಿಸಿಕೊಂಡು ಅವರಿಗೆ ಕೂಲಿಯನ್ನೂ ಕೊಡದೆ ಬೈದು ಅಟ್ಟುತ್ತಿದ್ದ.

ಆ ಲಂಬಾಣಿಗಳು ಅವನನ್ನು ಎದುರಿಸಿ ನಿಲ್ಲಲು ಧೈರ್ಯವಿಲ್ಲದೆ ಮನಸ್ಸಿನಲ್ಲಿಯೇ ನೊಂದು ಅವನಿಗೆ ಹಿಡಿಶಾಪ ಹಾಕುತ್ತಿದ್ದರು.

ಈ ಬಾರಿ ಮಲ್ಯಾ ಅವನ ಕಣದ ಕೆಲಸ ಮಾಡಿ ಬರಿಗೈಯ್ಯಲ್ಲಿ ಮನೆಗೆ ಬಂದಾಗ ಲಕ್ಕಿ ತಾಯಿಯನ್ನು ಕೇಳಿದಳು.

"ಅವ್ವಾ ! ಕಣದ ಕೆಲಸ ಮಾಡಿದ್ದಕ್ಕೆ ಏನವ್ವಾ ಕೂಲಿಕೊಟ್ಟ ನಾಯಕ?

ಮಲ್ಯಾ ಗಾಬರಿಯಿಂದ ಅಯ್ಯೋ ! ಮಾರಾಯ್ತಿ....ಕೂಲಿ ಕಂಡೆ ಸದ್ಯ! ನೀನು ಕೆಲಸಕ್ಕೆ ಬರ್ಲಿಲ್ಲಾ ಅಂತ ರೇಗಿ ರೇಗಿ ಬೀಳ್ತಿದ್ದ ನಾನು ಅವಳಿಗೆ ಮೈಯ್ಯಲ್ಲಿ ಚಂದಾಕಿಲ್ಲ" ಅಂತ ಸಮಾಧಾನ ಹೇಳಿದೆ. ಇಲ್ಲ ಕಣೇ ನಮ್ಮ ಒಡೆಯನ ತಾವೇ ನಾವು ಕೂಲಿ ಇಸ್ಕೋಣಾಕೆ ಆಗ್ತೈತಾ ? ಅಂದಳು.

ಹಂಗಾದ್ರೆ ದುಡಿದೋರೆಲ್ಲಾ ಹಂಗೇ ಬರೀ ಕೈನಾಗೆ ಮನೇಗೆ ಹೋದ್ರಾ? ಅಂದಳು ಲಕ್ಕಿ.

"ಮತ್ತಿನ್ನೇನು ? ನಮ್ಮ ದಣಿಯೋರ್ ತಾವ ನಾವು ಕೂಲಿ ಇಸ್ಕೋಣಾಕೆ ಆಯ್ತದಾ ? ನಿಂದೊಳ್ಳೆಮಾತು ಬುಡು " ಅಂದಳು ಮಲ್ಯಾ.

ತಾಯಿಯ ಮೂಢತನಕ್ಕೆ ಲಕ್ಕಿಗೆ ತುಂಬಾ ಸಿಟ್ಟು ಬಂತು "ಅವ್ವಾ ! ಈ ನಾಯಕನ ಈ ಪುಂಡಾಟ ಎಲ್ಲಾ ಇನ್ನು ಮ್ಯಾಲೆ ನಡೆಯಾಕಿಲ್ಲ ಬಡವರ ಹೊಟ್ಟೇಮ್ಯಾಕೆ ಹೊಡೆದು ತಾನು ದಿಮಾಕು ಮಾಡ್ತಾನಾ ? ಇವತ್ತು ಅವನಿಗೆ ಸರಿಯಾಗಿ ಬುದ್ಧೀ ಕಲಿಸ್ತೀನಿ " ಅಂದವಳೇ ಮನೆಯಿಂದ ಹೊರಟಳು.

ಏಯ್ ಲಕ್ಕಿ ........ ಎಲ್ಲಿಗ್ ಹೋಯ್ತೀಯೇ " ಅವನ ಸುದ್ದಿ ನಮಗ್ ಬ್ಯಾಡ, ಬಾರವ್ವ ಇಲ್ಲೀ ... ಎಂದು ತಾಯಿ ಕೂಗುತ್ತಲೇ ಇದ್ದಳು, ಲಕ್ಕಿ ಬಿರ ಬಿರನೆ ಹೋಗುತ್ತಲೇ ಇದ್ದಳು.

ಮುಂದೇನು ಗತಿ ? ಎಂದು ಮಲ್ಯಾ ತಲೆಯ ಮೇಲೆ ಕೈ ಹೊತ್ತು ಅಲ್ಲಿಯೇ ಕುಳಿತಳು,

ಲಕ್ಕಿ ಆ ಲಂಬಾಣಿಗಳ ಮನೆ ಮನೆಗೆ ಹೋಗಿ ಅವರಿಗೆಲ್ಲಾ ಧೈರ್ಯ ಹೇಳಿ " ನೀವೆಲ್ಲಾ ಒಟ್ಟಾಗಿ ನನ್ನ ಜೊತೆ ಬನ್ನಿ , ನಿಮ್ಮ ಕೈಲಿ ದುಡಿಸಿ ಕೊಂಡು ಆ ನಾಯಕ ನಿಮಗೆ ಹೆಂಗೆ ಕೂಲಿ ಕೊಡಾಕಿಲ್ಲಾ ? ನೋಡ್ತೀನಿ" ಎಂದು ಅವರನ್ನೆಲ್ಲಾ ಒಟ್ಟು ಗೂಡಿಸಿ ತಾನೇ ಅವರ ಮುಂದಾಳಾಗಿ ನಾಯಕನ ಮನೆಯ ಬಳಿ ಹೋದಳು.

ಆ ಹಳ್ಳಿಯಲ್ಲಿ ಕೆಂಪು ಹೆಂಚಿನ ಎತ್ತರದ ಮನೆಯೆಂದರೆ ರಾಮನಾಯಕನ ದೊಂದೇ. ಎರಡೆಮ್ಮೆ, ನಾಲ್ಕು ಹಸು, ಜೋಡೆತ್ತಿನ ಗಾಡಿ, ಇವೆಲ್ಲದರ ಒಡೆಯ ಅಂದಮೇಲೆ, ಬಡ ಲಂಬಾಣಿಗಳು ಅವನನ್ನು ಹೇಗೆ ದೈರ್ಯವಾಗಿ ಎದುರಿಸಿ ನಿಂತಾರು.

ಈಗ ಚೋಟುದ ಹುಡಿಗಿ ಲಕ್ಕಿ, ನಾಯಕನನ್ನು ಎದುರಿಸಲು ಮುಂದಾಗಿ

ಎದೆಗಾರಿಕೆಯಿಂದ ಬಂದದ್ದು ನೋಡಿ ಅವರಿಗೆಲ್ಲಾ ನಾಚಿಕೆಯೆನಿಸಿತು, ಅಲ್ಲದೆ ಗಾಬರಿಯೂ ಆಯಿತು, ಮುಂದೆ ಏನಾಗುವುದೋ ? ಎಂದು.

ಲಕ್ಕಿ ಅವರ ಮನೆಯ ಬಾಗಿಲಲ್ಲಿ ನಿಂತು ಓ ...ಒಡೆಯಾ !.... ದೊಡ್ಡ ದಣಿಯೋರಾ ! ಎಂದು ಕೂಗಿದಳು.

ರಾಮನಾಯಕ ಒಳಗೆ ಕುಳಿತು ತಂಬಾಕಿನ ಗುಡಿ-ಗುಡಿ ಸೇದುತ್ತಿದ್ದ. ಅವನಿಗೆ ಅಷ್ಟಾಗಿ ಕಿವಿ ಕೇಳಿಸುತ್ತಿರಲಿಲ್ಲ.

ಲಚುಮನಾಯಕ ಬೆಳಗಿನ ತಿಂಡಿ ತಿನ್ನುತ್ತಾ ಒಳಗೆ ಕುಳಿತ್ತಿದ್ದ. ಲಕ್ಕಿಯ ಧ್ವನಿ ಅವನಿಗೆ ಚೆನ್ನಾಗಿ ಪರಿಚಯ. ಇದೇನು ? ಲಕ್ಕಿ ತಾನಾಗಿಯೇ ನಮ್ಮ ಮನೆ ಬಳಿ ಬಂದಿದ್ದಾಳೆ ? ಎಂದು ಆಶ್ಚರ್ಯದಿಂದ ರೊಟ್ಟಿಯ ತಟ್ಟೆ ಕೈಯ್ಯಲ್ಲಿ ಹಿಡಿದೇ ಹೊರಕ್ಕೇ ಬಂದ.

ತಮ್ಮ ಹಟ್ಟಿಯ ಮುಂದೆ ನೂರಾರು ಜನ ಗುಂಪಾಗಿ ನಿಂತಿದ್ದಾರೆ ಲಕ್ಕಿ ಬಾಗಿಲ ಬಳಿಯೇ "ಕಿತ್ತೂರು ಚೆನ್ನಮ್ಮರಾಣಿಯಂತೆ" ಠೀವಿಯಿಂದ ನಿಂತಿದ್ದಾಳೆ. ಕಾರಣ ತಿಳಿಯದೆ ಲಚುಮನಾಯಕ ಬೆರಗಾಗಿ ಬಾ ಲಕ್ಕೀ....ಒಳೀಕ್ ಬಾ.... ಇದೇನು ಇದ್ದಕ್ಕಿದ್ದಂತೆ ನೀನೇ ಬಂದು ಬಿಟ್ಟಿದ್ದಿಯಲ್ಲಾ ! ಇವರೆಲ್ಲಾ ಯಾಕ್ ಬಂದಿದ್ದಾರೆ" ? ಎಂದು ಒಂದೇ ಬಾರಿಗೆ ಎಲ್ಲಾ ಕೇಳಿಬಿಟ್ಟ.

ಏಯ್ ! ನಾಯಕ........ನಿನ್ನ ಹತ್ರ ನಮ್ಮ ಮಾತೇನೂ ಇಲ್ಲ. ನಮ್ಮ ದೊಡ್ಡ ದಣಿಯೋರನ್ನ ಕಾಣಬೇಕು. ಅವರೆಲ್ಲಿ ?

ನನ್ನ ತಾವ್ ಹೇಳದೇ ಇರೋದು ಏನೈತೆ ? ಈಗ ನಾನೇ ಒಡೆಯ ಅನ್ನೋದು ಗೊತ್ತಿಲ್ಲವಾ ? ಲಕ್ಕೀ ...

ಲಕ್ಕಿ ಸಿಡುಕಿನಿಂದ ನಿನ್ಯಾರು ಕೇಳಿದರು ಈಗ ? "ಎಲ್ಲಿ ಎಲ್ಲರೂ ಗಟ್ಟಿಯಾಗಿ ಕೂಗಿ ನಮ್ಮ ದೊಡ್ಡ ದಣಿಯೋರನ್ನ" ಅಂದಳು.

ಎಲ್ಲರೂ ಒಟ್ಟಿಗೆ ಓ....ದೊಡ್ಡ ದಣಿಯೋರಾ ! — ಎಂದು ಕೂಗಿದರು ಅವರ ಕೂಗು ಪ್ರತಿಧ್ವನಿಸಿತು.

ರಾಮನಾಯಕ ಮನೆಯಿಂದ ಹೊರಕ್ಕೆ ಬಂದ ಅವರ ಮನೆಯವರೂ ಇದೇನೆಂದು ನೋಡಲು ಹೊರಕ್ಕೆ ಬಂದರು.

ಮನೆಯ ಮುಂದೆ ತಮ್ಮ ಜನವೆಲ್ಲಾ "ಘೇರಾವೋ"—ನಡೆಸುತ್ತಿರುವುದನ್ನು ನೋಡಿ ರಾಮನಾಯಕ ಏನೋ ನ್ಯಾಯ ಮಾಡಲು ಜನ ಬಂದಿರುವುದಾಗಿ ತಿಳಿದ

"ಯಾಕ್ರಪ್ಪೋ ಈಟೊಂದು ಜನ ಬಂದಿದ್ದೀರಿ ? ಏನಾಗಬೇಕಾಗ್ಯೆತೆ ? ಅಂದ.

ಮುಂದಾಳಾಗಿ ನಿಂತಿದ್ದ ಲಕ್ಕಿಯೇ ಕೈಯನ್ನು ಜೋಡಿಸಿ "ಕೈಮುಗಿದೆ ನನ್ನೊಡೆಯಾ ! ನೀನು ಧರ್ಮದ ದಣಿ, ಇದುವರೆಗೂ ನಮ್ಮ ಜಾತಿಗೆಲ್ಲಾ ಹಿರಿಯನಾಗಿ ಕಾಪಾಡ್ಕೊಂಡು ಬಂದಿದ್ದಿಯಾ ! ಈಗ ನಿನ್ನ ಮಗ ನಿನ್ನ ಹೆಸರಿಗೇನೆ ಮಸಿ ಒಳೀತಾ ಅವ್ನೆ ...

ಅವಳ ಮಾತನ್ನು ಅಷ್ಟಕ್ಕೇ ತಡೆದು ಅಲ್ಲೇ ನಿಂತಿದ್ದ ಲಚುಮನಾಯಕ ಲಕ್ಕಿಯ ಮೇಲೆ ಕಿಡಿಗಣ್ಣು ಕಾರುತ್ತಾ ಕೋಪದಿಂದ ಲಕ್ಕಿಯನ್ನು ಒಂದು ಹೆಜ್ಜೆ ಹಿಂದೆ ತಳ್ಳಿ "ಏಯ್ ಭಿಕಾರಿ ಹೆಣ್ಣೇ ! .... ಎಷ್ಟೇ ನಿನಗೆ ಗರ್ವ ? ಮುಚ್ಚು ಬಾಯಿ ! ಎಂದ.

ಲೋ ! ನಾಯಕ ! ಹುಷಾರ್ ನೀನು ಬಾಯಿ ಮುಚ್ಚಿಕೊಂಡು ಅತ್ತ ನಡೀ. ಭಿಕ್ಷೆ ಬೇಡೋಕೆ ನಿನ್ನ ಮನೆ ಬಾಗಿಲಿಗೆ ಬಂದಿಲ್ಲ ನಾವು ಇವರಿಗೆ ಕಣದ ಕೆಲಸ ಮಾಡಿದ ಕೂಲಿ ಬಿಸಾಕು ಮೊದಲು" ಅಂದಳು ಲಕ್ಕಿ ರೋಷದಿಂದ.

"ಕೊಡದಿದ್ದರೆ ಏನ್ ಮಾಡ್ಬುಡ್ತೀಯಾ ? ಎಂದು ಸವಾಲು ಹಾಕಿದ ನಾಯಕ.

ಮಾಡೋದ್ ನೋಡೀವಂತೆ ! ಓ ದೊಡ್ಡ ದಣಿಯೋರಾ ನೀವಾರ ನ್ಯಾಯ .... ಅನ್ನುತ್ತಿದ್ದಂತೆಯೇ ಲಚುಮನಾಯಕ ಲಕ್ಕಿಯನ್ನು ದೂರ ತಳ್ಳಿ "ಅಲ್ಲ ಕಣ್ರೋ ! .... ಮನೆಯ ಬಾಗಿಲಿಗಂಟ ಬಂದು ಗಲಾಟೆ ಎಬ್ಸೋ ಹಂಗಾದ್ರೇನೋ ನೀವೇಲ್ಲಾ ! ಇವತ್ತು ನಿಮ್ಮ ತಿಥಿ ಮಾಡ್ಬುತ್ತೀನಿ ನೋಡ್ತೀರಿ" ಎಂದವನೇ ಬಾರುಗೋಲನ್ನು ಕೈಗೆತ್ತಿಕೊಂಡು ಅವರಿಗೆಲ್ಲ ಬಾರಿಸತೊಡಗಿದ.

ಏಟು ತಿಂದ ಲಂಬಾಣಿಗಳು ಕೆಣಕಿದ ಸರ್ಪದಂತಾದರು ' ಎಲ್ಲಿಲ್ಲದ ಆಕ್ರೋಷ, ಧೈರ್ಯ, ಬಂದು ಬಿಟ್ಟಿತು ಅವರಿಗೆ. ಅಲ್ಲ ಕಣಪ್ಪೋ ! ನಾಯಕ ! ನಮ್ಮನ್ನು ದನ ಬಡಿಯೋ ಹಂಗೆ ಬಡೀತೀಯಾ ? ನಾವು ಒಂದು ಕೈ ನೋಡ್ಕೋತೀವಿ " ಅಂದದ್ದೇ ಮುಂದೆ ಹೆಜ್ಜೆ ಇಟ್ಟರು.

ಲಕ್ಕಿಯು ಮುಂದಾಳಾಗಿ ಬಂದು "ಏನ್ ನೋಡ್ತೀರೋ ಎರಡು ಬಿಗಿದು ಅತ್ತ ತಳ್ಳಿ. ಆ ಪುಂಡನನ್ನು" ಅಂದಳು.

ಲಚುಮನಾಯ್ಕನನ್ನು ಎಲ್ಲರೂ ಸುತ್ತುಗಟ್ಟಿ ನಾಲ್ಕು ಬಿಗಿದರು.

ಪರಿಸ್ಥಿತಿ ಇಷ್ಟರ ಮಟ್ಟಿಗೆ ಏರುತ್ತೆ ಅಂದುಕೊಂಡಿರಲಿಲ್ಲ ಲಚುಮನಾಯಕ. ತಾನು ಹೇಳಿದ ಹಾಗೆ ಕೇಳಿಕೊಂಡು ಬಿದ್ದಿದ್ದ ಈ ಬೇವಾರ್ಸಿಗಳು ಈ ಚೋಟುದ್ದ ಹುಡುಗಿಯ ಚಿತಾವಣೆಯಿಂದ ತನ್ನನ್ನೇ ಹೊಡೆಯುವಂತಾದರೇ ? ಇರಲಿ ಎಂದುಕೊಂಡು, ಲೇಯ್ ! ಭಿಕಾರಿ ಬೇವಾರ್ಸಿಗಳಾ ! ಇವತ್ತು ನಿಮ್ಮ ಹುಟ್ಟಿಲ್ಲಾ,ಅನ್ನಿಸಿ ಬಿಡುತ್ತೇನೆ.... ಬನ್ರೋ ! ಎಂದು ಹಲ್ಲು ಕಡಿಯುತ್ತಾ ಅವರ ಮೇಲೆ ನುಗ್ಗಿದ.

ರಾಮನಾಯಕ ಅವರ ಮಧ್ಯೆ ಬಂದು ನಿಲ್ಲದಿದ್ದರೆ ಲಚುಮನಾಯಕನಿಗೆ ಇನ್ನೂ ಒದೆ ಬೀಳುತ್ತಿತ್ತು. ಅಷ್ಟರಲ್ಲಿ ಮುದುಕ ಹತ್ತಿರ ಬಂದಕೂಡಲೇ ಎಲ್ಲರೂ ಭಯ-ಭಕ್ತಿಯಿಂದ ಸರಿದು ನಿಂತರು.

ಮುದುಕನಿಗೆ ತನ್ನ ಮಗನ ಮೇಲಿನ ಪ್ರೀತಿಗಿಂತ ಒಂದು ಕೈ ಮೇಲಾಗಿತ್ತು ಆ ಲಂಬಾಣಿ ಜನಗಳ ಮೇಲೆ.

ಯಾಕ್ರಪ್ಪಾ ! ನಿಮಗೆ ಏನಾಗ್ಬೇಕಿತ್ತು ? ಹಿಂಗ್ಯಾಕೆ ಗಲಭೆ ಎಬ್ಬಿಸ್ತಿದೀರಾ ? ' ಎಂದು ನಿಧಾನವಾಗಿ ಅವರನ್ನು ವಿಚಾರಿಸಿದ.

ಲಕ್ಕಿಯೇ ಮುಂದೆ ಬಂದು ದಣಿಯೋರಾ ! ಇವರೆಲ್ಲಾ ಮೂರು ದಿನದಿಂದಲೂ ನಿಮ್ಮ ಕಣದ ಕೆಲಸ ಮಾಡವ್ರೆ. ಇವರಿಗೆ ಕೂಲಿನೂ ಕೊಡಲಿಲ್ಲ ಅಥವಾ ದಿನಸಿನಾರ ಕೊಡಲಿಲ್ಲ. ಮನೆಯಾಗೆ ಮಕ್ಕಳು ಮರಿ ಉಪವಾಸ ಸಾಯ್ತಾ ಅವ್ರೆ ದಣಿಯೋರಾ ! ಕೂಲಿ ಕೇಳಿದ್ರೆ ಚಿಕ್ಕದಣಿಯೋರು ಬಾರು ಕೋಲಿನಿಂದ ಬಡೀತಾರೆ. ದುಡಿದೋರಿಗೆ ಹೊಟ್ಟೆಮ್ಯಾಗೆ ಹೊಡೀಬ್ಯಾಡಿ ದಣಿಯೋರಾ ! ಅವರ ಕೂಲಿ ಕೊಡಿಸಿ ನಾವು ಹೊಂಟೋಗ್ತೀವಿ ಅಂದಳು.

ಲಚುಮನಾಯಕ ರೋಷದಿಂದ ಅಪ್ಪಾ ! ಈ ಪುಂಡರಿಗೆ ಮೂರುಕಾಸು ಕೊಡೋದಿಲ್ಲಾಪ್ಪ ಇವರು ಏನುಮಾಡ್ತಾರೋ ನಾನು ನೋಡ್ತೀನಿ. ಮೊದಲು ಈ ಲೌಡಿಯನ್ನು ಮರಕ್ಕೆ ಕಟ್ಟಿ ಚಾವಟಿಯಿಂದ ಚರ್ಮ ಸುಳಿದರೆ ಅವರೆಲ್ಲಾ ತಾನಾಗಿಯೇ ಓಡಿ ಹೋಗುತ್ತಾರೆ, ಎಂದು ಘರ್ಜಿಸಿದ.

ಏಯ್ ಲಚುಮ ! ನೀನು ಮೊದಲು ಇಲ್ಲಿಂದ ಹೊರಡೋ ! ನೀನು ... ನನ್ನ ಮಗನಲ್ಲ ನನ್ನ ಶತ್ರು. ನಿನ್ನಿಂದ ನನಗೆ ಮಾನ ಮರ್ಯಾದೆ ಉಳಿಯಾಕಿಲ್ಲ. ಅವರ ಕೈಲಿ ಕೆಲಸಾ ತೆಗೆಸ್ಕೊಂಡು ಅವರನ್ನು ಬರೀ ಕೈನಾಗೆ ಮನೆಗೆ ಕಳಿಸ್ತೀಯೇನೋ ಪಾಪಿ ! ಎಂದು ಮಗನನ್ನು ಚೆನ್ನಾಗಿ ಬೈದು, ತಮ್ಮ

ಮನೆ ಆಳು ದ್ಯಾವನನ್ನು ಕರೆದು “ ನಡುಮನೆಯಲ್ಲಿ ಮೂಟೆ ಕಟ್ಟಿ ಹಾಕಿರುವ ರಾಗಿ ಜೋಳಗಳನ್ನು ಈಚೆ ತತ್ತಾರೊ ! ಹಂಗೇ ಕೊಳಗವನ್ನೂ ತತ್ತಾ” ಅಂದ ಮುದುಕ.

ದ್ಯಾವ ತಂದಿಟ್ಟ ಮೂಟೆಗಳಿಂದ ಅಲ್ಲಿ ಬಂದಿದ್ದ ಆ ಲಂಬಾಣಿ ಜನಕ್ಕೆಲ್ಲಾ ಎರಡೆರಡು ಕೊಳಗ ರಾಗಿ ಜೋಳಗಳನ್ನು ಹಂಚಿಸಿದ. ಅವರೆಲ್ಲರೂ ಸಂತೋಷದಿಂದ “ತಣ್ಣಾಗಿರು ನನ್ನೊಡೆಯಾ ” ಎಂದು ಹರಸಿ ಹೋದರು.

ಲಚುಮ ಬುಸುಗುಟ್ಟುತ್ತಾ ಲಕ್ಕಿಯನ್ನು ದುರದುರನೆ ನೋಡುತ್ತಿದ್ದ. ಮುದುಕ ಲಕ್ಕಿಯ ಬೆನ್ನುತಟ್ಟಿ ಭಲೇ ! ಹುಡಿಗಿ ನೀನೀಗ ನ್ಯಾಯಸ್ಥೆ ಧೈರ್ಯಮಾಡಿ ದುಡಿದ ಜನರಿಗಾಗಿ ಮುಂದೆ ನಿಂತೆ, ನಿಜವಾಗಿಯೂ ನೀನು ರಾಣಿಯಾಗಿರಬೇಕಾದವಳು. ನೂರು ವರ್ಷಕಾಲ ಚಂದಾಕಿರು ಮಗಳೇ ! ”

ಎಂದು ಹರಸಿ ಎರಡು ಕೊಳಗ ಧಾನ್ಯವನ್ನು ಕೊಟ್ಟು ಬರುವಂತೆ ಲಕ್ಕಿಯ ಜೊತೆ ದ್ಯಾವನನ್ನೂ ಕಳುಹಿಸಿ ಕೊಟ್ಟ ರಾಮನಾಯಕ.

ಲಕ್ಕಿ, ತಾನು ಬಂದ ಕೆಲಸ ಯಶಸ್ವಿಯಾಯಿತೆಂಬ ಹಿಗ್ಗಿನಿಂದ ತನಗೆ ನ್ಯಾಯ ದೊರಕಿಸಿಕೊಟ್ಟ ರಾಮನಾಯಕನನ್ನು ಕೃತಜ್ಞತೆಯಿಂದ ನೋಡಿದಳು.

ದೊಡ್ಡ ದಣಿಯೋರಾ ! ದೇವರು ನಿಮ್ಮನ್ನು ಚೆಂದಾಗಿ ಮಡಗಲಿ, ನಾವು ಹೊಯ್ತೀವಿ. ಇದೋ ಕೈ ಮುಗಿದೆ ” ಎಂದು ಹೇಳಿ ಲಕ್ಕಿ ಕೈ ಮುಗಿದು ಹೊರಟು ಹೋದಳು. ಹೋಗುವಾಗ ಲಚುಮನಾಯಕನ್ನು ಅಲಕ್ಷ್ಯವಾಗಿ ನೋಡುತ್ತಾ ಹೋದಳು.

ತಂದೆಯನ್ನು ಎದುರಿಸಿ ಏನೂ ಮಾಡಲಾರದೆ ಲಚುಮ ಎಲ್ಲವನ್ನೂ ನೋಡುತ್ತಾ ಹಲ್ಲು ಮುಡಿಕಚ್ಚಿ ಸರ್ಪದಂತೆ ಬುಸುಗುಟ್ಟುತ್ತಾ ನಿಂತಿದ್ದ.

ಈ ಪ್ರಕರಣದಿಂದ “ ಲಕ್ಕೀ.... ಎಂದರೆ ತಮ್ಮೆಲ್ಲರ ದೇವತೆ ” ಎಂಬ ಭಾವನೆ ಆ ಬಡ ಲಂಬಾಣಿಗಳಲ್ಲಿ ಮೂಡಿತು.

ಲಚುಮನಾಯಕನಾದರೋ ಅವತ್ತಿನಿಂದ ಲಕ್ಕಿಯ ಮೇಲೆ ಸರ್ಪ ಮತ್ಸರವನ್ನಿಟ್ಟು, ಅವಳಿಗೆ ಯಾವುದಾದರೂ ವಿಧದಲ್ಲಿ ತೊಂದರೆ ಕೊಡಲು ಬದ್ಧ ಕಂಕಣನಾಗಿ ನಿಂತ.

೩

ಮೈಸೂರು ರಾಜ್ಯದಲ್ಲಿ ಶರವತಿಯ ಜಲವಿದ್ಯುದುತ್ಪಾದನಾ ಯೋಜನೆಯು ಪ್ರಾರಂಭವಾದಾಗ ಅನೇಕ ತಜ್ಞರ ಆವಶ್ಯಕತೆ ಇದ್ದಿತು.

ಭಾರತ ರತ್ನ ಡಾ|| ವಿಶ್ವೇಶ್ವರಯನವರ ಕನಸನ್ನು ನೆನೆಸಾಗಿಸಲು ಭಾರತ ಸರ್ಕಾರ ಸರ್ವಸಾಹಸವನ್ನು ಕೈಗೊಂಡಿತು.

ಭಾರತವಲ್ಲೆಲ್ಲಾ ಪ್ರಥಮ ಜಲವಿದ್ಯುತ್ ಉತ್ಪಾದನಾ ಕೇಂದ್ರವೆನಿಸಿದ್ದ ಶಿವನ ಸಮುದ್ರದ ವಿದ್ಯುತ್ ಉತ್ಪಾದನೆಗಿಂತ 30 ರಷ್ಟು ಹೆಚ್ಚು ಉತ್ಪಾದನೆಯನ್ನು. ಶರಾವತಿಯ ಪೂರ್ಣ ಉಪಯೋಗದಿಂದ ಪಡೆಯಬಹುದೆಂದು ಸರ್ "ವಿಶ್ವೇಶ್ವರಯ್ಯನವರು ಸಲಹೆ ಮಾಡಿದ್ದರು.

ಈ ಪ್ರಕೃತಿದತ್ತವಾದ ಅಮೂಲ್ಯ ಸಂಪತ್ತನ್ನು ಉಳಿಸಿ ಕೊಳ್ಳದೇ ವ್ಯರ್ಥ ಮಾಡುತ್ತಿರುವುದು ನಮ್ಮ ಭಾರತಕ್ಕೆ ಅಪಾರ ನಷ್ಟ. ಇಷ್ಟು ಕಾಲ ನಾವು ಇವನ್ನು ಉಪಯೋಗಿಸಿಕೊಳ್ಳಲಿಲ್ಲವಲ್ಲಾ ! ನಮ್ಮ ಸಂಪತ್ತು ವ್ಯರ್ಥವಾಗಿ ಹರಿದು ಹೋಗುತ್ತಿದೆ. ಎಂದು ಅವರು ಚಿಂತಿಸುತ್ತಿದ್ದರು.

"ಭಾರತ ರತ್ನ" ಎಂದರೆ ಭಾರತ ಮಾತೆಯ ಪುತ್ರ ರತ್ನ, ಎನ್ನಬಹುದಾದ ವಿಶ್ವೇಶ್ವರಯ್ಯನವರ ಸಲಹೆಯೆಂದರೆ ಅತ್ಯಮೂಲ್ಯವಾದದ್ದು.

ಅವರ ಸಲಹೆಗಳಿಗೆ ಬೆಲೆ ಕಂಡಿದ್ದ ಭಾರತ ಸರ್ಕಾರವು ಶರಾವತೀ ಯೋಜನೆಗಾಗಿ ಕೋಟ್ಯಾಂತರ ಹಣವನ್ನು ವೆಚ್ಚಮಾಡಲು ಹಿಂತೆಗೆಯಲಿಲ್ಲ.

ಈ ಒಂದು ಯೋಜನೆ ಕಾರ್ಯಗತವಾಗುವ ಸಂದರ್ಭದಲ್ಲಿ ಕುಶಲಮತಿಗಳಾದ ನೂರಾರು ಇಂಜಿನಿಯರುಗಳೂ ಹತ್ತಾರು ಸಹಸ್ರ ಸ್ತ್ರೀ ಪುರುಷರೂ, ಕಷ್ಟಕರವಾದ ವಾತಾವರಣದಲ್ಲಿ ತಮ್ಮ ಆನು-ಮನಗಳ ಶಕ್ತಿಯನ್ನು ಧಾರೆಯೆರೆದು ಶರಾವತಿಯ ಪ್ರಥಮ ಘಟ್ಟದ ಕಾರ್ಯವನ್ನು ಪೂರ್ಣಗೊಳಿಸಿದ್ದಾರೆ.

ಆ ಸಂದರ್ಭದಲ್ಲಿ ಅಮೋಘ ಸೇವೆಯನ್ನು ಸಲ್ಲಿಸಿದವರಲ್ಲಿ ಸಾಂಬಮೂರ್ತಿಯೂ ಒಬ್ಬರು. ಭಾರತದಲ್ಲೇ ಹೆಸರು ವಾಸಿಯಾದ ಇಂಜಿನಿಯರ್ "ಎಂದರೆ ಮೂರ್ತಿ".

ಇದಕ್ಕೆ ಮೊದಲೇ ವಿದ್ಯುತ್ ಯಂತ್ರಗಳ ಜೋಡಣೆಯ ವಿಷಯವಾಗಿ ಹೆಚ್ಚು ತರಬೇತಿ ಪಡೆಯಲು ಭಾರತ ಸರ್ಕಾರವು ಮೂರ್ತಿಯವರನ್ನೇ ಚುನಾ

ಯಿಸಿ ಅಮೇರಿಕಕ್ಕೆ ಕಳುಹಿಸಿ ಕೊಟ್ಟಿದ್ದಿತು.

ಅಲ್ಲಿಂದ ಯಶಸ್ಸುಗಳಿಸಿ ಬಂದ ಮೂರ್ತಿಯವರು ಶರಾವತಿಯ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವಾಗ ತಮ್ಮ ಅಮೋಘ ಬುದ್ಧಿ ಶಕ್ತಿಯನ್ನು ಉಪ ಯೋಗಿಸಿ ಯಂತ್ರಗಳ ಪರಿಶೀಲನೆಯನ್ನು ನಡೆಸಿದರು.

ಇದರಿಂದಾಗಿ ಸರ್ಕಾರವು ಅವರಿಗೆ ಉನ್ನತ ಅಧಿಕಾರವನ್ನು ಕೊಟ್ಟಿತು. ಲಿಂಗನಮಕ್ಕಿ ಅಣೆಕಟ್ಟಿನ ಕಾರ್ಯದಲ್ಲಿಯೂ ಇವರ ಪಾತ್ರ ಮುಖ್ಯವಾಗಿದ್ದಿತು.

ಈಗ ಅತಿ ಸುಂದರವಾಗಿ ಕಾಣುವ ಪ್ರೇಕ್ಷಕರ ಮನವನ್ನು ಆಕರ್ಶಿಸುವ ಈ ಪ್ರದೇಶವು ಆಗ ಘೋರಾರಣ್ಯವಾಗಿದ್ದಿತು.

ಈ ದುರ್ಗಮವಾದ ಮಲೆನಾಡಿನಲ್ಲಿ, ಆನೆ, ಹುಲಿ, ಹಾವು, ಲೆಕ್ಕವಿಲ್ಲ ದಷ್ಟು ಇದ್ದುವು. ಆ ಸ್ಥಳವಾಸಕ್ಕೆ ಯೋಗ್ಯವಾಗಿರಲಿಲ್ಲ.

ಅದರಿಂದಾಗಿ ಮೂರ್ತಿಯು ತಮ್ಮ ಸಂಸಾರವನ್ನು ಅಲ್ಲಿಗೆ ಹತ್ತಿರವಾಗಿದ್ದ ಶಿವಮೊಗ್ಗದಲ್ಲಿ ಇಟ್ಟಿದ್ದರು ವಾಸಮಾಡಲು ಸುಂದರವಾದ ಭವ್ಯ ಭವನ, ಆಳು-ಕಾಳು, ಕಾರು, ಈ ಎಲ್ಲಾ ಸಮಸ್ತ ಸೌಲಭ್ಯಗಳೂ ಇದ್ದುವು. ಕೆಲಸದಲ್ಲಿ ಬಿಡುವು ದೊರೆತಾಗ ಮೂರ್ತಿಯವರು ಬಂದು ಹೋಗುತ್ತಿದ್ದರು.

ಇಷ್ಟೆಲ್ಲಾ ಸಂಪತ್ತಿದ್ದರೂ ಅವರ ಒಬ್ಬನೇ ಮಗ ವಿಶ್ವನಾಥ ವಿದ್ಯೆಯಲ್ಲಿ ಮುಂದುವರಿಯಲಿಲ್ಲ, ಎಸ್. ಎಸ್. ಎಲ್. ಸಿ. ವರೆಗೆ ಅವನು ಬರಬೇಕಾದರೆ ಸಾಹಸವಾಯಿತು, ಈ ವಿಚಾರ ಮೂರ್ತಿಯ ಮನಸ್ಸನ್ನು ಕೊರೆಯುತ್ತಿತ್ತು.

ಈಗ ವಿಶು ಹದಿನೆಂಟರ ಪ್ರಾಯದ ಸುಂದರ ಯುವಕನಾಗಿದ್ದ. ಸುಖ ದಲ್ಲಿಯೇ ಬೆಳೆದಿದ್ದ ಅವನ ಅಂಗಾಂಗಗಳು ದಷ್ಟ-ಪುಷ್ಟವಾಗಿದ್ದುವು. ಆಜಾನು ಬಾಹು, ಆರು ಅಡಿ ಎತ್ತರ, ಠೀವಿಯ ನಡಿಗೆ, ಅತಿ ಬಿಳುಪಾದ ಅವನ ಮುಖವು ಆಂಗ್ಲೀಯರ ಬಣ್ಣಕ್ಕೆ ಹೋಲುತ್ತಿತ್ತು.

ಒಂದೊಂದು ಸಲ ಸುಶೀಲ ತಮ್ಮನ ಸೌಂದರ್ಯವನ್ನು ನೋಡಿ "ಲೋ! ವಿಶೂ ನೀನು ಸಿನಿಮಾದಲ್ಲಿ ಪಾರ್ಟ್ ಮಾಡೋಕೆ ಚೆನ್ನಾಗಿದ್ದೀಯಾ, ಸೇರಿ ಬಿಡೋ" ಅನ್ನುತ್ತಿದ್ದಳು.

ಮೂರ್ತಿಗೂ ಮಗನ ಅಂಗಸಾಂಷ್ಟವದ ಬಗ್ಗೆ ಬಲು ಹೆಮ್ಮೆ. ವಿಶ್ವನಾಥ ಧೃಡಕಾಯನಾಗಿ ಬೆಳೆಯಲು ಮುಖ್ಯ ಕಾರಣ ಅವನ ವ್ಯಾಯಮ.

ಅವನ ಅಭಿರುಚಿ ಆಟದಲ್ಲಿ ಕ್ರಿಕೆಟ್, ಬ್ಯಾಡ್‌ಮೆಂಟನ್, ವಾಲಿಬಾಲ್, ಈ

ಎಲ್ಲಾ ಆಟಗಳಲ್ಲಿಯೂ, ಅವನು ಹೆಸರು ವಾಸಿಯಾಗಿದ್ದ.

ಬೆಂಗಳೂರು, ಕಲ್ಕತ್ತಾ, ಮದ್ರಾಸ್, ಆಸ್ಟ್ರೇಲಿಯ ಮೊದಲಾದ ಪಂಗಡದವರೊಡನೆ ಸ್ಪರ್ಧಿಸಿ ತಮ್ಮ ಪಂಗಡಕ್ಕೆ ಜಯಗಳಿಸಿ ಕೊಡುತ್ತಿದ್ದ ಕೀರ್ತಿ ವಿಶ್ವನಾಥನಿಗೇ ದೊರಕುತ್ತಿತ್ತು, ಅವನಿದ್ದ ಪಂಗಡಕ್ಕೆ ಜಯ ಸಿದ್ಧ.

ಅವರ ಮನೆಯಲ್ಲಿ ಒಂದು ಗಾಜಿನ ಬೀರು ತುಂಬಾ ವಿಶ್ವನಾಥನಿಗೆ ಬಹುಮಾನವಾಗಿ ಬಂದಿದ್ದ ಬೆಳ್ಳೀ ಕಪ್ಪುಗಳು ಜೋಡಿಸಿಟ್ಟಿದ್ದುವು. ವಿಶು ಬ್ಯಾಟ್ ಹಿಡಿದು ನಿಂತರೇ ಒಂದು ಚಂದ.

ಆಟದಲ್ಲಿ ಗೆದ್ದಾಗ ಅನೇಕ ಭಂಗಿಗಳಲ್ಲಿ ನಿಂತು ತೆಗೆಸಿಕೊಂಡ ಪೋಟೋ ಪೇಪರಿನಲ್ಲಿ ಬರುತ್ತಿತ್ತು. ಮಗ ಇದರಲ್ಲಾದರೂ ಹೆಸರುಗಳಿಸಿದನಲ್ಲಾ! ಎಂಬ ಸಮಾಧಾನ ಮೂರ್ತಿಗೆ ಇತ್ತು.

ಆದರೆ ಮಂಗಳೆಯ ಅಂತರಂಗ ಅವಿದ್ಯಾವಂತ ಮಗನಿಗಾಗಿ ಕೊರಗುತ್ತಿತ್ತು. ಹೇಗೋ ಮಗನೆಂದು ಅವನನ್ನು ಆದರಿಸೋಣವೆಂದು ಮಾಡಿಕೊಂಡಿದ್ದ ನಿರ್ಧಾರ ಇದರಿಂದ ಸಡಿಲವಾಗುತ್ತಿತ್ತು.

ಮನಸ್ಸಿನಾಳದಲ್ಲಿ ಅಡಗಿಸಿಟ್ಟಿದ್ದ ವೇದನೆಯು ಮತ್ತೆ ಕೋಪ ರೂಪದಲ್ಲಿ ಹೊರಬೀಳುತ್ತಿತ್ತು. "ಇನ್ನೇನ್ನು ? ಕತ್ತೇನ ತೆಗೆದುಕೊಂಡು ಹೋಗಿ ಕುದುರೆ ಮಾಡಿಟ್ಟರೆ ಅದರ ಬುದ್ಧಿ ಎಲ್ಲಿ ಹೋಗುತ್ತೆ ? "ಎಂದು ಆಗಾಗ ಮಗನನ್ನು ಮೂದಲಿಸುತ್ತಿದ್ದಳು.

ಮಂಗಳೆಗೆ ಚೆನ್ನಾಗಿ ಗೊತ್ತು ತಂದೆ ತಾಯಿಯರ ಸಂಸ್ಕೃತಿಯು ಮಕ್ಕಳಲ್ಲಿ ಹುಟ್ಟನಿಂದಲೇ ಅನುಸರಿಸಿ ಬರುತ್ತದೆ. ವಿದ್ಯೆ....ಕಲೆ ..ಖಾಯಿಲೆ, ಇವು ಮೂರೂ ಆನುವಂಶೀಯವಾಗಿ ಬರತಕ್ಕ ರಕ್ತಗತವಾದ ಗುಣಗಳು.

ಅವಿದ್ಯಾವಂತ ಮೂಢ ಲಂಬಾಣಿಗಳ ಹೊಟ್ಟೆಯಲ್ಲಿ ಜನಿಸಿದ ಇವನಿಗೆ ಎಷ್ಟೇ ಸೌಲಭ್ಯಗಳು ಇದ್ದರೆ ತಾನೇ ಏನು ? ವಿದ್ಯೆ ತಲೆಗೆ ಹತ್ತುತ್ತದೆಯೇ?

ಇವನೇ ತಮ್ಮ ವಂಶೋದ್ಧಾರಕನೆಂದು, ಅವನ ಭವಿಷ್ಯದಲ್ಲಿಯೇ ಆಶಾ ಕೋಟೆಯನ್ನು ಕಟ್ಟಿರುವ ಅವರಿಗೆ ಪಾಪ ! "ಇವನು ನಿಮ್ಮ ಮಗನಲ್ಲ" ಎಂದು ಹೇಗೆ ಹೇಳಲಿ ? ಆಗ ನಮ್ಮ ಸಂಸಾರ ಎಷ್ಟು ನಗೆ ನಾಟಕೆಯಾಧೀತು ?

ಇವನು ಇಷ್ಟು ದೊಡ್ಡವನಾಗಿ ಬೆಳೆದರೂ ಮಗನೆಂದು ಅಕ್ಕರೆ ತೋರಲು ನನ್ನ ಮನ ಒಪ್ಪುವುದಿಲ್ಲವಲ್ಲಾ ; ಎಷ್ಟೇ ಮಕ್ಕಳಿದ್ದರೂ ಕಳೆದುಕೊಂಡ ಒಂದು

ಮಗುವಿಗಾಗಿ ಕರುಳು ಕುಡಿಯುತ್ತದೆ.

ನನ್ನ ಮಗುವೂ ಇಷ್ಟರ ವೇಳೆಗೆ ಹದಿನೆಂಟರ ಪ್ರಾಯದ ಚಲುವೆಯಾಗಿ ಬೆಳೆದಿರಬಹುದು. ಹುಂ "ಅವಳ ಭವಿಷ್ಯ ಹೇಗಿದೆಯೋ ಯಾವ ಲಂಬಾಣಿ ಯನ್ನು ಮದುವೆಯಾಗಿ ಸೌದೆ ಹೊತ್ತು ಜೀವಿಸುತ್ತಿದ್ದಾಳೋ" ಎಂದು ಮಂಗಳೆ ಒಳ ಗೊಳಗೇ ಕೊರಗುತ್ತಿದ್ದಳು.

ಯಾರಿಗಾದರೂ ಅಷ್ಟೆ ಇರುವ ವಸ್ತುವಿಗಿಂತ ಕಳೆದು ಹೋದ ವಸ್ತುವಿನ ಮೇಲೆ ಮಮತೆ ಹೆಚ್ಚಾಗಿರುತ್ತದೆ. ಯೇಸುಕ್ರಿಸ್ತನು ಹೇಳಿರುವ "ಲಾಸ್ಟ್ ಷಿಪ್, ಅಂಡ್, ಲಾಸ್ಟ್ ಕಾಯಿನ್, ಕತೆಯಂತೆ, ಕಳೆದು ಹೋದ ವಸ್ತುವಿಗಾಗಿ ಹೆಚ್ಚು ಹೆಚ್ಚು ಹುಡುಕುವುದು ಮಾನವನ ಸ್ವಭಾವ.

ಮಂಗಳೆಯೂ ಆ ಲಂಬಾಣಿ ಮತ್ತೆ ಎಲ್ಲಾದರೂ ಕಾಣುವಳೋ ಎಂಬ ಒಂದು ಆಶಾ ಅಂಕುರವನ್ನಿಟ್ಟು ಕೊಂಡೇ ದಿನವನ್ನು ದೂಡುತ್ತಿದ್ದಳು.

ಕಡೆಯ ಮಗಳು ಸುಶೀಲ ತುಂಬಾ ಚುರುಕು ಬುದ್ಧಿಯವಳು. ಅವಳಿಗೆ ಓದಿನಲ್ಲಿ ಅಪಾರ ಆಸಕ್ತಿ ಬಿ. ಎಸ್. ಸಿ. ನಲ್ಲಿ ಸೆಕೆಂಡ್ ರ್‍ಯಾಂಕ್ ಬಂದಿದ್ದಳು.

ಎಮ್. ಎಸ್. ಸಿ. ಗೆ ಸೀಟು ಸಿಕ್ಕುವುದರಲ್ಲಿ ಸಂದೇಹವೇ ಇರಲಿಲ್ಲ, ತಂದೆಯ ಒಪ್ಪಿಗೆಯನ್ನು ಪಡೆದು ಎಮ್. ಎಸ್. ಸಿ, ಗೆ ಸೇರಿಬಿಡಬೇಕೆಂದು ಕಾತುರಳಾಗಿದ್ದಳು.

ಮಂಗಳೆ ಮಾತ್ರ ಅದಕ್ಕೆ ಒಪ್ಪಲಿಲ್ಲ. ಅದಕ್ಕೆ ಕಾರಣ ತನ್ನ ತೌರು ಮನೆಯ ಆಶಾಕಿರಣವಾಗಿದ್ದ ಒಬ್ಬನೇ ಒಬ್ಬ ತಮ್ಮನಿಗೆ ಸುಶೀಯನ್ನು ಕೊಡ ಬೇಕೆಂಬ ಆಸೆ ಇದ್ದಿತು. ವಯಸ್ಸಾದ ಅವಳ ತಂದೆ ತಾಯಿಯರೂ ಕೂಡ, ತಮ್ಮ ಒಬ್ಬನೇ ಮಗನಿಗೆ ಯಾವುದೋ ದೂರದ ಸಂಬಂಧ ಮಾಡುವುದಕ್ಕಿಂತ ತಮ್ಮ ಮೊಮ್ಮಗಳನ್ನೇ ತರಬೇಕೆಂದು ತೀರ್ಮಾನ ಮಾಡಿದ್ದರು.

ಮಗ ತಮ್ಮ ಮಾತಿಗೆ ಎಂದೂ ಎದುರಾಡದವನಾದ್ದರಿಂದ ಮುದ್ದಾಗಿದ್ದ ಸುಶೀಲ ತಮ್ಮ ಸೊಸೆಯೆಂದೇ ಅವರ ಭಾವನೆಯಿತ್ತು.

ಆದಷ್ಟು ಬೇಗ ಮಗನಿಗೆ ಮದುವೆ ಮಾಡಿ ಕಣ್ಣಲ್ಲಿ ನೋಡಬೇಕೆಂದು ಕಾತರಿಸುತ್ತಿದ್ದರು.

ಹೀಗಿರುವಾಗ ಅವರನ್ನು ಒಂದು ಮಾತು ಕೇಳದೇ ಮಗಳನ್ನು ಇನ್ನು ಮುಂದೆ ಓದಿಸಲು ಮಂಗಳೆ ಇಷ್ಟಪಡಲಿಲ್ಲ.

ಸಾಂಬಮೂರ್ತಿ ಬಿಡುವಿದ್ದಾಗ ಕಾರಿನಲ್ಲಿ ವಾರಕ್ಕೆ ಒಂದೆರಡು ಬಾರಿ ಬಂದು ಹೋಗುತ್ತಿದ್ದರು, ಅಪ್ಪನು ಬಂದು ಬಿಟ್ಟರೆ ಸುಶೀಗೆ ಎಲ್ಲಿಲ್ಲದ ಸಂಭ್ರಮ.

ಅಪ್ಪನಿಗೆ ಇಷ್ಟವಾದ ಅಡಿಗೆ ತಿಂಡಿಗಳನ್ನು ಅಡಿಗೆಯವನಿಗೆ ಹೇಳಿ ಅವಳೇ ನಿಂತು ಮಾಡಿಸುತ್ತಿದ್ದಳು.

ಸುಶೀ ಹಾಸ್ಯ ಸ್ವಭಾವದವಳು, ಮನೆಯಲ್ಲಿ ಎಲ್ಲರನ್ನು ನಕ್ಕು ನಗಿಸುವ ಕಲೆ ಅವಳಿಗೆ ಬಗ್ಗಿ ಬಂದಿತ್ತು. ಮೂರ್ತಿಗೂ ಈ ಮಗಳ ಮೇಲೆ ತುಂಬಾ ಮಮತೆ.

ದೀಪಾವಳೀ ಹಬ್ಬ, ಮೂರ್ತಿಯವರು ಮೊದಲು ದಿನವೇ ಹಬ್ಬಕ್ಕಾಗಿ ಬಂದರು. ಮನೆಯಲ್ಲಿ ಸಂಭ್ರಮವೋ ಸಂಭ್ರಮ.

ವಿಶ್ವನಾಥ ದೀಪಾವಳೀ ಪಾಡ್ಯದ ದಿನವೇ ಹುಟ್ಟಿದ್ದು. ಅವನ ಹುಟ್ಟಿದ ಹಬ್ಬ ಆಚರಿಸುವುದೆನೆಂದರೆ ಸುಶೀಗೆ ಎಲ್ಲರಿಗಿಂತ ಹೆಚ್ಚು ಸಂಭ್ರಮ ಅವನು ಅವಳಿಗೆ ಪ್ರೀತಿಯ ತಮ್ಮ ಅವನನ್ನು ಕೀಟಲೆ ಮಾಡಿ ರೇಗಿಸುವುದೆಂದರೆ ಸುಶೀಗೆ ತುಂಬಾ ಇಷ್ಟ.

ವಿಶೂ, ಗಾದರೂ ತಾಯಿಯಲ್ಲಿ ದೊರಕದ ಮಮತೆ ಅಕ್ಕನಲ್ಲಿ ದೊರಕುತ್ತಿತ್ತು.

ದೀಪಾವಳೀ ಹಬ್ಬ ಮತ್ತು ವಿಶೂ ಹುಟ್ಟಿದ ಹಬ್ಬ ಎರಡೂ ಒಟ್ಟಿಗೆ ಸೇರಿದೆ. ಆದ್ದರಿಂದ ತಮ್ಮನಿಗೆ ಒಳ್ಳೊಳ್ಳೆ ಬಟ್ಟೆ ತೆಗೆಯಬೇಕು" ಎಂದು ಸುಶೀ ಅಪ್ಪ ಬಂದಕೂಡಲೇ ಸ್ವಲ್ಪ ಪೇಟೆಗೆ ಹೋಗಿ ಬರಬೇಕೆಂದು ಕೇಳಿದಳು.

ಮೂರ್ತಿ ಮಕ್ಕಳನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಅವರು ಏನು ಕೇಳಿದರೂ ಇಲ್ಲವೆನ್ನುತ್ತಿರಲಿಲ್ಲ.

ಮಗಳ ಕೋರಿಕೆಯನ್ನು ಕೇಳಿದ್ದೆ ತಡ, "ನಡಿಯಮ್ಮ ಹೀಗೆ ಕಾರಿನಲ್ಲಿಯೇ ಹೋಗಿದ್ದು ಬಂದು ಬಿಡೋಣ ಅಂದರು.

ವಿಶೂವನ್ನೂ ಕರೆದು ಕೊಂಡು ಅಪ್ಪನ ಜೊತೆ ಸುಶೀ ಹೊರಟಳು. ಪೇಟೆಯಲ್ಲಿ ಅವನಿಗೆ ಒಪ್ಪುವ ಬಣ್ಣವನ್ನು ಹೊಂದಿಸಿ, ಕಾಲ ಚೀಲ ಇವೆಲ್ಲವನ್ನೂ ಎರಡೆರಡು ಜೊತೆ ಕೊಂಡು ಕೊಂಡಳು.

ಇದನ್ನು ನೋಡಿ ಮೂರ್ತಿ " ಏನಮ್ಮ ! ಎಲ್ಲಾ ತಮ್ಮನಿಗಾಗಿಯೇ ಆಯಿತಲ್ಲ ! ನಿನಗೆ ಎಲ್ಲಿ ? ಏನುಬೇಕೋ ತೆಗೆದುಕೋ " ಅಂದರು

ಅಪ್ಪಾ ! ನನಗೆ ಬೇಕಾದ್ದು ದೀಪಾವಳೀ ಹಬ್ಬಕ್ಕೆ ಮತಾಪು-ಪಟಾಕಿ, ನಾನು ತುಂಬ ಹಚ್ಚಬೇಕು ತೆಗೆದು ಕೊಟ್ಟು ಬಿಡಪ್ಪಾ ! ಅಂದಳು.

ಹುಂ .. ಹುಚ್ಚು ಹುಡುಗಿ ! ಇನ್ನೂ ಎಳೀ ಮಗು ಆಡಿದ ಹಾಗೆ ಆಡ್ತೀಯಮ್ಮ. ಎಂದು ಹೇಳಿ ಹೂಬಾಣ, ಪಟಾಕಿಗಳನ್ನು ಕಟ್ಟಿಸಿ ಕೊಟ್ಟರು.

ಮನೆಗೆ ಬಂದದ್ದೇ ತಡ, ತಾಯಿಯ ಮುಂದೆ ವಿಶ್ವನಾಥನಿಗೆ ತಂದಿದ್ದ ಬಟ್ಟೆಗಳನ್ನೆಲ್ಲಾ ಹರಡಿದಳು ಸುಶೀಲ ನೋಡಮ್ಮಾ ! ನಮ್ಮ ವಿಶೂಗೆ ಈ ಸ್ನಫ್‌ಕಲರ್ ಸೂಟು ಚೆನ್ನಾಗಿ ಒಪ್ಪುತ್ತೆ ಅಲ್ವೇನಮ್ಮ? ಅಂದಳು

ಮಂಗಳೆ ಸುಮ್ಮನಿದ್ದಳು. ವಿಶೂ ಸಂತೋದಿಂದ ಅಮ್ಮಾ ನನಗೂ ಆ ಬುಷ್‌ಕೋಟು ಕಲರ್ ಇಷ್ಟ ಆಯಿತಮ್ಮಾ ! ಎಂದು ಆ ಬುಷ್‌ಕೋಟನ್ನು ತನ್ನ ಮೈ ಮೇಲೆ ಹಿಡಿದು ತಾಯಿಗೆ ತೋರಿಸಿದ.

ಆಗಲೂ ಮಂಗಳೆ ಯಾವ ಒಂದು ಅಭಿಪ್ರಾಯವನ್ನೂ ಹೇಳಲಿಲ್ಲ. ಅಲ್ಲಿಯೇ ಇದ್ದ ಮೂರ್ತಿ "ಏನೇ ! ಸುಮ್ಮನೆ ಕಲ್ ಬಂಡೆ ಹಾಗೆ ಕುಳಿತ್ತಿದ್ದೀ? ಮಕ್ಕಳು ಸಂತೋಷವಾಗಿ ಇಷ್ಟು ಒಳ್ಳೆಯ ಬಟ್ಟೆಗಳನ್ನು ಆರಿಸಿ ತಂದಿದ್ದಾರೆ ಚೆನ್ನಾಗಿದೆಯೋ? ಇಲ್ಲವೋ ? ಎಂದು ಒಂದು ಮಾತು ಹೇಳೋದೂ ನಿನಗೆ ಕಷ್ಟವೇ ? ಅಂದರು. ಏನೂ ಕೇಳಿಸದಂತೆ, ಮಂಗಳೆ ಏನೋ ಯೋಚಿಸುತ್ತಾ ಕುಳಿತೇ ಇದ್ದಳು.

ವಿಶೂ ಹುಟ್ಟಿದ ಹಬ್ಬ ಬಂದರೆ ಸಾಕು, ಅವನು ಹುಟ್ಟಿದ ಆಸ್ಪತ್ರೆಯ ಜ್ಞಾಪಕ ಬಂದು ಬಿಡುತ್ತಿತ್ತು ಮಂಗಳೆಗೆ. ಅವಳ ಮನಸ್ಸು ಅಲ್ಲೋಲ ಕಲ್ಲೋಲವಾಗಿ ಬಿಡುತ್ತಿತ್ತು.

ತನ್ನ ಗಂಡನೂ, ಮಗಳೂ, ಅವನಿಗೆ ತೋರಿಸುತ್ತಿರುವ ಅಕ್ಕರೆಯನ್ನು ನೋಡಿ ಅಯ್ಯೋ! ಎನಿಸಿತು.

ತನ್ನ ಮನಸ್ಸಿನ ತೊಳಲಾಟವನ್ನು ಅಡಗಿಸಲಾರದೇ ಬೇಸರದಿಂದಲೇ " ಇನ್ನೇನು ಕತ್ತೆ ಬಲ್ಲುದೇ ಕಸ್ತೂರಿ ಗುಣಾನ " ಎಂದು ಈ ಭಿಕಾರಿಗೇಕೋ ಇಷ್ಟು ಬೆಲೆ ಬಾಳುವ ಬಟ್ಟೆ ? ಅಂದಳು.

ಮಂಗಳಾ ಸಾಕು, ಸುಮ್ಮನಿರು. ಅವನನ್ನು ಕಂಡರೆ ಅದ್ಯಾಕೆ ಹಾಗೆ ಆಡ್ತಿ ? ಅವನೇನು ಇನ್ನೂ ಎಳೀ ಮಗುನೇ ? ವಯಸ್ಸಿಗೆ ಬಂದ ಮಕ್ಕಳನ್ನು ಹೀಗೆಲ್ಲಾ ಅನ್ನಬಾರದು, ಎಂದು ಗದರಿದರು ಮೂರ್ತಿ.

ಸಂತೋಷದಿಂದ ಹೊಸ ಬಟ್ಟೆಯನ್ನು ತಾಯಿಗೆ ತೋರಿಸಲು ನಿಂತಿದ್ದ ವಿಶೂಗೆ, ಮಂಗಳೆಯ ಮಾತು ನೋವನ್ನುಂಟು ಮಾಡಿತು, ತಾನು ಕೈಯಲ್ಲಿ ಹಿಡಿದಿದ್ದ ಬುಷ್ ಕೋಟನ್ನು ಅವಳ ಮುಂದೆ ಎಸೆದು, ಅಮ್ಮಾ! ನಾನು ಭಿಕಾರಿಯಾಗೇ ಇದ್ರೂ ಸರಿ, ನೀನು ಹೀಗೆ ಮೂದಲಿಸ ಬೇಡವಮ್ಮಾ! ನನಗೆ ಹುಟ್ಟಿದ ಹಬ್ಬಾನೂ ಬೇಡ, ಹೊಸಬುಟ್ಟೇನೂ ಬೇಡ, ಎಂದ ಕೋಪದಿಂದ.

"ಹೌದು ಕಣೋ ನೀನು ಭಿಕಾರಿಯಾಗಿ ಬೀದಿಯಲ್ಲಿ ಬಿದ್ದಿರ ಬೇಕಾದವನೇ" ಅಂದವಳೇ ತನ್ನ ಬಾಯಿಯಲ್ಲಿ ದುಡುಕಿಬಂದ ಮಾತಿಗಾಗಿ ತುಟಿ ಕಚ್ಚಿದಳು ಮಂಗಳೆ.

" ಸಾಕು ಬಾಯಿ ಮುಚ್ಚೋ ಅವನ್ಯಾಕೇ ಭಿಕಾರಿ ಆಗಬೇಕು. ನಾನು ಸ್ಸಂಪಾದಿಸಿರುವ ಹಣ ಇನ್ನು ಮೂರು ತಲೇ ತಿಂದರೂ ಮುಗಿಯದಂತಿದೆ, ಇರೋ ಒಬ್ಬ ಮಗ, ಆಸೆ ಬೇಡ್ವೇನೆ ನಿನಗೆ, ಎಂದು ಬೈದರು ಮೂರ್ತಿ.

ಇನ್ನೇನು ನೀವು ಕಾಡು ಮೇಡು ಅಲೆದು ಸಂಪಾದಿಸಿ ಗಂಟು ನಡಿ ಈ ಸುಪುತ್ರನಿಗೆ, ಯಾರಿಗೂ ಇಲ್ಲದ ಹಕ್ಕು ಬಾಧ್ಯತೆ ಇವನಿಗೆ ಬಂದುಬಿಟ್ಟಿದೆ.... ಎಂದು ಸಿಡಿ....ಮುಡಿ ಗೊಳ್ಳುತ್ತಾ ಎದ್ದು ಮಂಗಳೆ ಒಳಕ್ಕೆ ಹೊರಟು ಹೋದಳು.

ತಾಯಿಯ ಮಾತಿನಿಂದ ವಿಶೂ ಮನಸ್ಸಿಗೆ ಬಹಳ ನೋವಾಗಿತ್ತು. " ನಾನು ಕಣ್ಣೆದುರಿಗಿದ್ದರೇನೇ ಅಮ್ಮನಿಗೆ ಆಗೋಲ್ಲ ಕಣೇ ಸುಶೀ....ನಾನು ಈ ಮನೆ ಬಿಟ್ಟು ಎಲ್ಲಾದರೂ ಹೊರಟು ಹೋಗ್ತೀನಿ. ಎಂದು ಬಿರ ಬಿರನೆ ರೂಮಿಗೆ ಹೋಗಿ ತನ್ನ ಬಟ್ಟೆಗಳನ್ನು ಜೋಡಿಸಿ ಕೊಳ್ಳ ತೊಡಗಿದ.

ಎಲ್ಲವನ್ನೂ ನೋಡತ್ತಿದ್ದ ಸುಶೀಲಾಗೆ ತುಂಬಾ ವ್ಯಸನವಾಯಿತು. ಇತ್ತ ತಾಯಿಯನ್ನು ಏನೂ ಅನ್ನುವಂತಿಲ್ಲ ಅತ್ತ ಪಾಪ! ತಮ್ಮ ಈ ಚುಚ್ಚು ಮಾತುಗಳನ್ನು ಎಷ್ಟೆಂದು ಸಹಿಸುತ್ತಾನೆ?

ಅವನ ಮನಸ್ಸಿನ ನೋವು ಸುಶೀಗೆ ಅರ್ಥವಾಗಿತ್ತು. ಈ ಸಲ ನಿಜವಾಗಿಯೂ ಮನೆಬಿಟ್ಟು ಹೊರಟು ಹೋದಾನೆಂದು ಗಾಬರಿಯಾಯಿತು.

ಅವನ ಹಿಂದೆಯೇ ರೂಮಿಗೆ ಹೋದಳು ಅವನ ಕೈಹಿಡಿದು ಹತ್ತಿರ ಕೂರಿಸಿ ಕೊಂಡು, ಅಲ್ಲಾ ವಿಶೂ ಅಮ್ಮ ಹೇಳಿದ್ರೆ ನಿಂಗೇನಾಯ್ತು? ಅಪ್ಪ, ಅಜ್ಜಿ, ನಾನು ಎಲ್ಲರೂ ನಿನ್ನನ್ನು ಪ್ರೀತಿಸೋಲ್ವೇ? ನಿನಗೆ ಯಾವುದಕ್ಕೇನು

ಕೊರತೆ? ಎಂದು ಸಮಾಧಾನ ಮಾಡಿದಳು.

ತಾಯಿಯ ಅನಾದರಣೆಯಿಂದ ನೊಂದ ವಿಶೂ ಸುಶೀಲೆಯ ಪ್ರೀತಿಯಿಂದ, ಚೇತರಿಸಿ ಕೊಳ್ಳುತ್ತಿದ್ದ.

ಈಗಲೂ ಸುಶೀ ತೊಡೆಯಮೇಲೆ ಮುಖವಿಟ್ಟು ಬಿಕ್ಕಿ ಬಿಕ್ಕಿ ಅತ್ತುಬಿಟ್ಟ.

ಸುಶೀಲೆಯ ಕಣ್ಣಲ್ಲೂ ನೀರು ಬಂತು.

" ಅಳಬೇಡ ವಿಶೂ! ನೀನತ್ತರೆ ನಂಗೂ ಅಳು ಬಂದು ಬಿಡುತ್ತೆ ನಾಳೆ ನಿನ್ನ ಹುಟ್ಟಿದ ಹಬ್ಬ. ದೀಪಾವಳೀ ಗ್ರಾಂಡಾಗಿ ಮಾಡೋಣ ಕಣಪ್ಪಾ ! ಎಂದು ಪ್ರೀತಿಯಿಂದ ಅವನ ತಲೆ ನೇವರಿಸಿದಳು.

ವಿಶು ತಲೆಯೆತ್ತಿ ಕೋಪದಿಂದಲೇ .... ಸುಶೀ .... ನೀನೇನಾದ್ರೂ ನನ್ನನ್ನು ಆ ಹೊಸಬಟ್ಟೆ ಹಾಕ್ಕೋ ಅಂದ್ಯೋ? ನೋಡ್ಕೋ ನಾನು ಮನೇಲೇ ಇರೋಲ್ಲ. ಈಗ್ಲೇ ಹೇಳಿದೀನಿ. ಅಂದ

ಮಕ್ಕಳ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ರೂಮಿನ ಬಾಗಿಲಲ್ಲಿ ನಿಂತಿದ್ದ ಮೂರ್ತಿಯವರು ಹಣೆ ಹಣೆ ಹೊಡೆದುಕೊಂಡು "ಹುಂ ಎಲ್ಲಾ ನನ್ನ ಕರ್ಮ" ನಾನು ಹಬ್ಬಕ್ಕೆ ಬರದೇ ಅಲ್ಲಿಯೇ ಇದ್ದರೆ ಚೆನ್ನಾಗಿತ್ತು" ಎಂದು ಬೇಸರದಿಂದ ತಮ್ಮ ರೂಮಿನಲ್ಲಿ ಹೋಗಿ ಮಲಗಿ ಕೊಂಡುರ.

ದೀಪಾವಳೀ ಸಂಭ್ರಮವೋ ಸಂಭ್ರಮವಾಗಿದ್ದ ಮನೆ ಹೀಗೆ ಒಬ್ಬೊಬ್ಬರು ಒಂದೊಂದು ಕಡೆ ಬೇಸರದಿಂದ "ಬಿಂ....ಎಂದು ಬೀಳು ಗರೆಯಿತು.

## ೭

ದೀಪಾವಳೀ ಹಬ್ಬವೆಂದರೆ ಲಂಬಾಣಿಗಳಿಗೆ ಬಲು ದೊಡ್ಡ ಹಬ್ಬ. ತಾವು ವಾಸ ಮಾಡುವುದು ಗುಡಿಸಲೇ ಆಗಲಿ, ಅದಕ್ಕೆ ಸುಣ್ಣ-ಬಣ್ಣವಾಡಿ ಹಸಿರು ಸೊಪ್ಪಿನಿಂದ ಮನೆಯೆಲ್ಲಾ ಅಲಂಕರಿಸುವರು.

ಮಣ್ಣಿನ ಹೊಸ ಮಡಿಕೆಗಳನ್ನು ತಂದು ಬಣ್ಣ-ಬಣ್ಣಗಳಿಂದ ಅದರ ಮೇಲೆ ಚಿತ್ರ ಬರೆದು, ಒಂದರ ಮೇಲೊಂದು ಜೋಡಿಸಿ ಪೂಜೆಗೆ ಇಡುತ್ತಾರೆ. ಮನೆ ದೇವರ ಹೆಸರಿನಲ್ಲಿ 21 ಕಾಯಿ ಒಡೆದು ತಂಬಿಟ್ಟು, ಕಜ್ಜಾಯ ಮುಂತಾದ ಸಿಹಿ ತಿಂಡಿಗಳನ್ನು ಮಾಡುತ್ತಾರೆ.

ಹೊಸ ಬಟ್ಟೆಗಳನ್ನು ಧರಿಸಿ ತಮಗೆ ಬೇಕಾದ ನಂಟರಿಷ್ಟರ ಮನೆಗೆ ಒಬ್ಬರಿಗೊಬ್ಬರು ಸಿಹಿ ತಿಂಡಿ ಹಂಚುತ್ತಾರೆ. ಸಂಜೆಯಾಗುತ್ತಲೇ ಒಬ್ಬರಿಗೊಬ್ಬರು ಮದ್ಯ ಕುಡಿಸುವುದು, ಯಾರು ತಮಗೆ ಹೆಚ್ಚು ಬೇಕಾದವರೋ ಅವರಿಗೆ ಹೆಚ್ಚು ಮದ್ಯ ಕುಡಿಸುವ ವಾಡಿಕೆ. ಆವತ್ತಿನ ದಿವಸ ಹೆಣ್ಣು-ಗಂಡು ಎಂಬ ಭೇದವಿಲ್ಲದೆ ಕೂಡಿ ಆಡಬಹುದು. ಸಂಜೆಯಾಗುತ್ತಲೇ ಪಂಜುಗಳನ್ನು ಹಚ್ಚಿ ಅಲ್ಲಲ್ಲೀ ಕವೆಗಳನ್ನು ನೆಟ್ಟು ಅದಕ್ಕೆ ಸಿಕ್ಕಿಸುತ್ತಾರೆ.

ಹೆಂಗಸರು - ಗಂಡಸರು ಎಲ್ಲಾ ಒಟ್ಟಿಗೆ ಕೋಲಿನ ಕುಣಿತ ರಾತ್ರಿಯೆಲ್ಲಾ ಕುಣಿಯುತ್ತಾರೆ.

ಲಕ್ಕಿ ದೊಡ್ಡವಳಾದ ಮೇಲೆ ಈ ಕುಣಿತದಲ್ಲಿ ಭಾಗವಹಿಸಲು ಅವಳ ಮನಸ್ಸು ಅಷ್ಟಾಗಿ ಒಗ್ಗುತ್ತಿರಲಿಲ್ಲ. ಆದರೂ ಅವರ ಜಾತಿ ಪದ್ಧತಿ ಬಿಡುವಂತಿರಲಿಲ್ಲ. ಈ ಸಲವೂ ದೀಪಾವಳೀ ಬಂದು.

ಈ ಅವಕಾಶವನ್ನು ಹೆಚ್ಚು ಉಪಯೋಗಿಸಿಕೊಂಡು ಲಚುಮನಾಯಕ ಲಕ್ಕಿಯೊಂದಿಗೆ ಮನಸ್ವೇಚ್ಛೆ ಕುಣಿಯಲು ತೊಡಗಿದ.

ಲಕ್ಕಿ ಅವನನ್ನು ನಿರಾಕರಿಸಿ ದೂರ - ದೂರ ತಳ್ಳಿದರೂ, ಅವನು ಕುಡಿದ ಅಮಲಿನಲ್ಲಿ ಅವಳ ಮೈ ಮೇಲೆ ಹೋಗಿ - ಹೋಗಿ ಬೀಳುತ್ತಿದ್ದ. ಇವರ ಸೆಣಸಾಟವನ್ನು ಎಲ್ಲರೂ ಆಸಕ್ತಿಯಿಂದ ನೋಡುತ್ತಿದ್ದರು.

ಅವಳೊಂದಿಗೆ ಕುಣಿಯುತ್ತಾ ಕುಣಿಯುತ್ತಾ ಬಹು ದೂರ ಮರಗಳ ಗುಂಪಿಗೆ ಕತ್ತಲಲ್ಲಿ ಎಳೆದುಕೊಂಡು ಹೊರಟು ಹೋದ ಲಚುಮನಾಯಕ.

ಅವನ ಬೀಮ ಶಕ್ತಿಯ ಮುಂದೆ ಲಕ್ಕಿ ನಿರಾಧಾರಳಾಗಿದ್ದಳು. ಆದರೂ ಅವನಿಗೆ ಮಣಿಯದೆ ತನ್ನ ಶಕ್ತಿಯನ್ನೆಲ್ಲಾ ಕೂಡಿಸಿ ಅವನೊಂದಿಗೆ ಸೆಣಸಿ ದೂರ ತಳ್ಳಿದಳು. ಅವನ ತಲೆ ಮರಕ್ಕೆ ಬಡಿದು ಗಾಯವಾಯಿತು. ಮುಖದ ಮೇಲೆ ರಕ್ತಧಾರೆ ಹರಿಯಿತು. ಹೆಚ್ಚು ಕುಡಿದಿದ್ದರಿಂದ ಜ್ಞಾನ ತಪ್ಪಿ ಅಲ್ಲಿಯೇ ಬಿದ್ದ.

ಲಕ್ಕಿಗೆ ಗಾಬರಿಯಾಯಿತು. ಆದರೂ ಅವನ ದುಷ್ಟತನಕ್ಕೆ ಸರಿಯಾದ ಶಿಕ್ಷೆಯಾಯಿತೆಂದು ಅಲ್ಲಿಂದ ಒಂದೇ ಉಸುರಿಗೆ ಓಡಿ ಬಂದು ಮನೆ ಸೇರಿದಳು.

ತಾಯಿಯು ಕುಡಿದು, ಕುಣಿದು ಸುಸ್ತಾಗಿ ಮನೆಯಲ್ಲಿ ಬಂದು

ಬಿದ್ದಿದ್ದಳು. ಯಾಕೋ ಈ ಹೇಸಿಕೆ ಜೀವನ ಲಕ್ಕಿಗೆ ಬಹಳ ಬೇಸರವನ್ನು ತಂದಿತು.

ಇನ್ನು ನಾಯಕನ ಎಡೆಯಲ್ಲಿ ಬಾಳಲಾಗುವುದಿಲ್ಲ ಇಲ್ಲಿಂದ ದೂರ ಎಲ್ಲಿಗಾದರೂ ಹೊರಟು ಹೋಗಬೇಕೆಂದು ತೀರ್ಮಾನಿಸಿದಳು. ಆದರೆ ?.... ಹೋಗುವುದೆಲ್ಲಿಗೆ ?

ಮಲ್ಯಾಗೆ ಒಬ್ಬ ಅಣ್ಣನಿದ್ದ, ಅವನ ಹೆಸರು ಸೋಮನಾಯಕ. ಅವನೂ ಮಕ್ಕಳೊಂದಿಗ. ಸಂಸಾರಿ. ಅವನು ಮಲೆನಾಡು ಪ್ರದೇಶದಲ್ಲಿ ವಾಸವಾಗಿದ್ದ. ಸೌದೆ - ಸೊಪ್ಪು ಮಾರಿ ಜೀವಿಸುತ್ತಿದ್ದುದರಿಂದ ಅವನೂ ಬಡತನದ ಜೀವನವನ್ನು ಸಾಗಿಸುತ್ತಿದ್ದ. ಎಷ್ಟೋ ವರ್ಷಗಳಿಂದ ತಂಗಿಯನ್ನು ನೋಡಲು ಬರುವುದಕ್ಕೆ ಆಗಿರಲಿಲ್ಲ.

ತಂಗಿಯ ಗಂಡನು ತೀರಿಹೋಗಿ ಒಬ್ಬಳೇ ಮಗಳು ಇರುವುದು ತಿಳಿದಿತ್ತು. ಒಂದು ಬಾರಿ ತಂಗಿಯನ್ನು ಮಾತನಾಡಿಸಿಕೊಂಡು ಬರಬೇಕೆಂದು ಯೋಚಿಸುತ್ತಲೇ ಇದ್ದ.

ಶರಾವತಿ ಯೋಜನೆಯಿಂದಾಗಿ ಲಿಂಗನ ಮಕ್ಕಿ ಅಣೆ ಕಟ್ಟು ಕೆಲಸ ಪ್ರಾರಂಭವಾದಾಗ ಅನೇಕ ಬಡ ಜನರಿಗೆ ಜೀವನ ದೊರಕಿತು. ದಟ್ಟವಾದ ಕಾಡನ್ನು ಕಡಿದು ಸರ್ವೇ ಮಾಡುವ ಕೆಲಸದಲ್ಲಿ ಸೋಮನಾಯಕನು ಕೂಲಿಗೆ ಸೇರಿಕೊಂಡ ಆಗ ಅವನ ಸಂಸಾರಕ್ಕೆ ಸ್ವಲ್ಪ ಅನುಕೂಲವಾಯಿತು. ಹೊಟ್ಟೆ ತುಂಬ ತಿಂದು ನಾಲ್ಕು ಕಾಸು ಕೈಯ್ಯಲ್ಲಿ ಓಡಾಡುವಂತಾಯಿತು.

ಆಗ ಒಂದೆರಡು ದಿನ ಬಿಡುವು ಮಾಡಿಕೊಂಡು ತಂಗಿಯನ್ನು ನೋಡಲು ಬಂದ. ಯಾವುದೋ ಕಾಲಕ್ಕೆ ಬಂದ ಅಣ್ಣನನ್ನು ನೋಡಿ ಮಲ್ಯಾಗೆ ತುಂಬಾ ಸಂತೋಷವಾಯಿತು. ಅಣ್ಣನ ಯೋಗ ಕ್ಷೇಮವನ್ನು ವಿಚಾರಿಸಿದಳು.

ಅವನು ಲಕ್ಕಿಯನ್ನು ತೀರಾ ಎಳೆಯ ಮಗುವಾಗಿದ್ದಾಗ ನೋಡಿದ್ದುದು. ಮನೆಯಲ್ಲಿ ಅವಳನ್ನು ಕಾಣದೆ "ಮಲ್ಯಾ ! ನಿನ್ನ ಮಗಳೆಲ್ಲವ್ವ ? ಎಂದು ಕೇಳಿದ.

ಇಲ್ಲೇ ನೀರು ತರಾಕೆ ಹೋಗವ್ಳೆ. ಇನ್ನೇನು ಬತ್ತಾಳೆ ನೋಡೀವಂತೆ ಇರಣ್ಣಾ ! ಅಯ್ಯೋ ! ದ್ಯಾವರೆ ! ನಮ್ಮಂಥಾ ಬಡವರ ಮನ್ಯಾಗೆಲ್ಲಾ

ಹುಟ್ಟ್ಯೋ ಮಗಳಲ್ಲ ಕಾಣಪ್ಪೋ !....ಅವಳ್ಳು ಬಲು ದಿಮಾಕುಗಾತಿ.

ಅಷ್ಟರಲ್ಲಿ ಲಕ್ಕಿ ನೀರು ತುಂಬಿದ ಗಡಿಗೆ ತಲೆಯ ಮೇಲೆ ಹೊತ್ತು ಹೊಸಲು ದಾಟಿ ಒಳಕ್ಕೆ ಬಂದಳು. ಆಗತಾನೆ ಮೂಡಿ ಬಂದಿದ್ದ ಸೂರ್ಯನ ಕೆಂಪು ಕಿರಣಗಳ ಛಾಯೆಯು ಕೆಂದಾವರೆಯಂತಿದ್ದ ಲಕ್ಕಿಯ ಕೆನ್ನೆಯ ಮೇಲೆ ಬಿದ್ದು ಅರುಣ ರಾಗದಿಂದ ರಂಜಿಸುತ್ತಿತ್ತು.

ಆರೋಗ್ಯ ಧೃಡಕಾಯವಾಗಿದ್ದ ಅವಳ ಶರೀರವು ಭಾರವಾದ ನೀರಿನ ಗಡಿಗೆಯನ್ನು ಹೊತ್ತಿದ್ದರೂ, ಹಗುರವಾಗಿ ತಾಳ ಬದ್ಧವಾದ ಹೆಜ್ಜೆಯನ್ನಿಡುತ್ತಾ ಅಮೃತಕಲಶವನ್ನು ಹೊತ್ತ ಮೋಹಿನಿಯಂತೆ ಒಳಕ್ಕೆ ಬಂದ ಲಕ್ಕಿಯನ್ನು ನೋಡಿ ಸೋಮನಾಯಕ ಬೆಕ್ಕಸ ಬೆರಗಾದ.

ಯ್ಯಾರೋ ಬಂದು ಕುಳಿತಿದ್ದಾರೆಂದು ತಿಳಿದು ಲಕ್ಕೀ ನೇರ ಒಳಕ್ಕೆ ಹೋದಳು.

ಇವಳೇನಾ ! ನಿನ್ನ ಮಗಳು ಲಕ್ಕೀ..? ....

ಹೂಂ ! ಕಣಣ್ಣಾ ! ಏಯ್ ಲಕ್ಕೀ ! ನೋಡೇ... ನಿನ್ನ ಮಾವ ಬಂದವ್ನೇ, ಈಚೆಗೆ ಬಂದು ಮಾತಾಡ್ಸು ಬಾರವ್ವಾ ! ಅಂದಳು ಮಲ್ಯಾ.

ಲಕ್ಕೀ ಹೊರಕ್ಕೆ ಬಂದು ನೋಡಿದಳು ವಯಸ್ಸಾದ ಸೋದರ ಮಾವನ ಮುಖದಲ್ಲಿ ಸಾತ್ವಿಕವಾದ ಕಳೆಯಿತ್ತು. ಅವನಲ್ಲಿ ಗೌರವ ಭಾವ ಮೂಡಿತು. ಸುಸಂಸ್ಕೃತಳಂತೆ ತಲೆಬಾಗಿ ಅವನ ಪಾದಮುಟ್ಟಿ ನಮಸ್ಕರಿಸಿದಳು.

ಏಳವ್ವ ಮಗಳೇ ! ದೇವರು ನಿನ್ನನ್ನು ಚಂದಾಗಿ ಮಡಗಲಿ. ಮಲ್ಲವ್ವಾ ನಿನ್ನ ಒಟ್ಟೇಲಿ ಒಳ್ಳೇ ಲಕ್ಷ್ಮಿದೇವಿನೇ ಹುಟ್ಟವ್ಳೆ ತಕೋ... ಎಂಥಾ ಚೆಂದುಳ್ಳ ಹೆಣ್ಣವ್ವ ನಿನ್ನ ಮಗಳು ?

ಎಲ್ಲಾ ಸರಿ ಕಣಣ್ಣಾ ! ಮದುವೆ ವಯಸ್ಸಿಗೆ ಬಂದ ಹುಡುಗಿ, ನಮ್ಮೂರಿನ ನಾಯಕ ಲಚುಮ, ಇವಳನ್ನು ಮದುವೆ ಆಗ್‌ಬೇಕೂ ಅಂತ ಇನ್ನಿಲ್ಲದಂಗೆ ಕೇಳ್‌ತಾ ಅವ್ನೆ, ಈ ದಿಮಾಕಿನ ವುಡಿಗಿ ಏನಾದ್ರೂ ಅವನ್ನ ಒಲ್ಲೆ ಅಂತದಪ್ಪಾ! ಅವನಿಗಿಂತ ಇನ್ಯಾವ ಗಂಡು ಅವ್ನೆ ಇವಳಿಗೆ? ನೀನೇ ಹೇಳಣ್ಣಾ

ನೋಡು ಮಲ್ಲವ್ವಾ ! ಮನಸ್ಸಿಗೆ ಒಲ್ಲದ ಗಂಡಿನ ಜೊತೇಲಿ ಹೆಣ್ಣು ಮಕ್ಕಳಿಗೆ ಮದುವೆ ಮಾಡಬಾರದು. ನೀನು ಏನೂ ತಿಳುವಳಿಕೆ ಇಲ್ಲದವಳು. ಅಲ್ಲಾ ! ಲಕ್ಕೀ ಅಂಥಾ ಹೆಣ್ಣಿಗೆ ಎಲ್ಲಾನ ಸರ್ಕಾರೀ ನೌಕರೀ ಮಾಡೋ ಸಾಹೇಬರು ಸಿಕ್ತಾರೆ....ಸುಮ್ಮಿಕಿರು.

ಮಾವನ ಒಳ್ಳೆಯ ಸ್ವಭಾವವನ್ನು ಒಂದೇ ನಿಮಿಷದಲ್ಲಿ ತಿಳಿದು ಕೊಂಡಳು. ಲಕ್ಕಿ. ಆತ್ಮೀಯತೆಯಿಂದ ಮಾವಯ್ಯಾ ! ಆ ಲಚುಮನಾಯಕನ ಕಾಟದಿಂದ ನಮಗೆ ಉಳಿಬಾಳಿಲ್ಲ. ದುಷ್ಟ ಒಳ್ಳೆ ರಾಕ್ಷಸ ಇದ್ದಂಗೆ ಅವ್ನೆ. ಅವನ್ನ ನಾನು ಮದುವೆ ಆಗಬೇಕಂತೆ. ನಿನ್ನ ದಮ್ಮಯ್ಯ ಮಾವಯ್ಯಾ ! ಅವನ ಕಾಟದಿಂದ ತಪ್ಪಿಸಿ ನಮ್ಮನ್ನ ಎಲ್ಲಿಗಾನ ಕರ್‌ಕೊಂಡು ಓಗ್‌ಬುಡು. ಎಂದು ಬಿಕ್ಕಿ ಬಿಕ್ಕಿ ಅಳಲು ಶುರು ಮಾಡಿದಳು.

ಸೋಮನಾಯಕನಿಗೆ ಅಯ್ಯೋ ! ಪಾಪ ! ಎನ್ನಿಸಿತು. ನೋಡು ಮಲ್ಲವ್ವ ! ಹೆಂಗಿದ್ರೂ ಇಲ್ಲೂ ಕೂಲಿ... ನಾಲೀನೇ ಮಾಡಿ ತಾಯಿ-ಮಗಳು ಜೀವಿಸ್ತೀರಾ. ಇಲ್ಲೇನ್ ಮಡಗ್ಯೆತೆ ನಿಮಗೆ ? ನನ್ ಜೊತೆಯಾಗೇ ಬಂದ್ ಬುಡಿ. ನನ್ನ ಮಕ್ಕಳೊಂದಿಗೆ ಮಕ್ಕಳಾಗಿ ಲಕ್ಕಿಯೂ ಇರ್ತಾಳೆ. ಅಲ್ಲಿ ಕೂಲಿ ಕೆಲಸಕ್ಕೇನೂ ಕಮ್ಮಿ ಇಲ್ಲ. ದುಡಿದು ತಿನ್ನುವವರಿಗೆ ಎಲ್ಲಾದರೇನು ?

ಅಂದ. ಅಣ್ಣನ ಅಕ್ಕರೆಯ ಮಾತು, ನೊಂದಿದ್ದ ಮಲ್ಯಾಗೆ ಎಷ್ಟೋ ತಂಪನ್ನು ನೀಡಿತು, ತನ್ನ ತೌರು, ತನನ್ನು ಕೈಬಿಟ್ಟಿಲ್ಲವೆಂದು ಸಮಾಧಾನವೇನೋ ಆಯಿತು. ಆದರೆ ಬಹುದಿವಸಗಳಿಂದ ವಾಸವಾಗಿದ್ದ ಸ್ಥಳ ಮನೆಯನ್ನು ಬಿಡಲು ಮಲ್ಯಾ ಸ್ವಲ್ಪ ಹಿಂಜರಿದಳು.

ಅದೆಂಗಣ್ಣಾ ಬರಾಕಾಯ್ತದೆ ? ದ್ಯಾವರು ಮಾಡಿದ ದಾರಿ ಆಗ್ತದೆ. ನಿನ್ನ ಸಂಸಾರಾನೇ ಸಾಕಾಗ್ಯೆತೆ ಇನ್ನು ನಾವು ಬೇರೆ ನಿನಗೆ ಹೊರೆ ಆಗಾನೇನಪ್ಪಾ !

ಬುಡು ಬುಡು ನಂಗೇನೂ ಭಾರ ಇಲ್ಲ. ಅಣ್ಣಾ ! ಅಂತ ಇದ್ದೂ ನಿನ್ನನ್ನ ಈ ಕಷ್ಟದಾಗೆ ಬಿಟ್ಟು ಹೋಗ್ಲೇನವ್ವಾ ! ನನಗೆ ಇತ್ತ ಬರೋಕಾಗಿದ್ರೆ ಆಗ್ಲೇ ಕರಕೊಂಡು ಹೋಗ್ಬಿಡೀವೆ, ಎಂದು ವಿಶ್ವಾಸದಿಂದ ಹೇಳಿದ.

ಲಕ್ಕಿಯಂತೂ ಒಂದೇ ಹಠ ಹಿಡಿದಳು. "ನಡಿಯವ್ವ ಮಾವಯ್ಯನ ಜೊತೆ ಹೋಗಿ ಬಿಡಾನ" ಎಂದು.

ಹರೆಯದ ಹೆಣ್ಣನ್ನಿಂಟ್ಟುಕೊಂಡು ಆ ಲಚುಮನಾಯಕನೊಂದಿಗೆ ದ್ವೇಷ ಕಟ್ಟಿಕೊಳ್ಳುವುದೇನೂ ಸಾಮಾನ್ಯವಲ್ಲ ಎಂದು ಮಲ್ಯಾಗೆ ಗೊತ್ತು. ಹೇಗೋ ಅಣ್ಣನ ಆಶ್ರಯದಲ್ಲಿ ಹೋಗಿ ಬೀಳವುದೇ ಒಳ್ಳೆಯದೆಂದು ಇರುವ ನಾಲ್ಕು ಒಡಕು ಪಾತ್ರೆ, ಎರಡು ಚಿಂದಿ ಬಟ್ಟೆ ಒಂದು ಮೂಟೆ ಕಟ್ಟಿಕೊಂಡು ಮಲ್ಯಾ

ಲಕ್ಕೀ, ಲಚುಮನಾಯಕನಿಗೆ ಸುಳಿವು ಕೊಡದಂತೆ, ಸೋಮನಾಯಕನೊಂದಿಗೆ ಪ್ರಯಾಣಮಾಡಿಬಿಟ್ಟರು.

೭

ಶರಾವತೀ ಯೋಜನೆಯಲ್ಲಿ ಎರಡು ಜಲಾಶಯಗಳನ್ನು ಮಾಡಲಾಗಿದೆ. ಇವುಗಳಲ್ಲಿ ಮುಖ್ಯವಾದುದು ಲಿಂಗನಮಕ್ಕಿ ಅಣೆಕಟ್ಟಿನ ಆಸರೆ ಪಡೆದಿದೆ. ಮತ್ತೊಂದು, ತಲಕಳಲೆ ಅಣೆಕಟ್ಟಿನ ಆಸರೆಯಿಂದ ನಿರ್ಮಿತವಾಗಿದೆ. ದಕ್ಷಿಣ ಭಾರತದಲ್ಲೇ ಲಿಂಗನಮಕ್ಕಿ ಜಲಾಶಯ ಬಲು ದೊಡ್ಡದು.

ಈಗ ಮನ ಮೋಹಕವಾಗಿ ಪ್ರವಾಸಿಗಳ ಆಕರ್ಷಣೀಯ ಸ್ಥಳವಾಗಿರುವ ಈ ಪ್ರದೇಶವು ಆಗ ದುರ್ಗಮವಾದ ಕಣಿವೆ, ದುಸ್ಸಹವಾದ ಹವೆ ದಟ್ಟವಾದ ಕಾಡಿನಿಂದ ಕೂಡಿತ್ತು. ವಾಹನಗಳು ಓಡಾಡುವಂತೆ ಮಾಡಲು ಮುಗಿಲೆತ್ತರದ ಮರಗಳನ್ನು ಕಡಿದು ಭೂಮಿಯಮೇಲೆ ಜಾಗ ಮಾಡಿಕೊಳ್ಳಬೇಕಾಗಿತ್ತು

ಅಂತಹ ಸ್ಥಳವನ್ನು ಸರ್ವೆ ಮಾಡಲು ನಟರಾಜನು ಸರ್ವೆ ಅಧಿಕಾರಿಯಾಗಿ ಸರ್ಕಾರದಿಂದ ನೇಮಿಸಲ್ಪಟ್ಟಿದ್ದನು.

ನಟರಾಜ ಧೃಢಕಾಯನಾದ ಉತ್ಸಾಹಿಯುವಕ.

ಅಂತಹ ದುರ್ಗಮವಾದ ಕಾಡಿನಲ್ಲಿ ಧೈರ್ಯವಾಗಿ ನಿಂತು ಕೆಲಸ ಮಾಡಿಸುವ ಎದೆಗಾರಿಕೆ ಅವನಿಗೆ ಮಾತ್ರ ಇತ್ತು ಎಂದು ಹೇಳಬಹುದು.

ನೂರಾರು ಜನರನ್ನು ಕೆಲಸಕ್ಕೆ ನಿಯಮಿಸಿ ಕೊಳ್ಳಲು ಸರ್ಕಾರ ಅವನಿಗೇ ಅಧಿಕಾರ ಕೊಟ್ಟಿತ್ತು. ಕಾಡನ್ನು ಕಡಿದು ಆ ಪ್ರದೇಶವನ್ನು ಸಂಚಾರಕ್ಕೆ ಯೋಗ್ಯವಾಗಿ ಮಾಡಲು ಬೇಕಾದಷ್ಟು ಹಣವನ್ನೂ ಪೂರ್ಣ ಜವಾಬ್ದಾರಿಯನ್ನು ನಟರಾಜನಿಗೆ ವಹಿಸಿತ್ತು.

ನಟರಾಜನೂ ತನ್ನ ತಂಡವರೊಂದಿಗೆ ಆ ಅರಣ್ಯಕ್ಕೆ ಸಮೀಪವಾದ ಒಂದು ಹಳ್ಳಿಯಲ್ಲಿ ಡೇರೆ ಹಾಕಿಕೊಂಡು ತಳವೂರಿದ. ಆ ಹಳ್ಳಿಯಲ್ಲಿ ಕೆಲವೇ ಮನೆಗಳಿದ್ದುವು.

ಆ ಮನೆಗಳ ಜನಗಳೂ ಕೂಡ ಕಾಡಿನ ಕ್ರೂರಮೃಗಗಳ ಕಾಟಕ್ಕಂಜಿ ಕತ್ತಲಾದರೆ ಹೊರಕ್ಕೇ ಬರುತ್ತಿರಲಿಲ್ಲ. ಇಂತಹ ಅಪಾಯಕಾರಿಯಾದ ಕಾಡಿನ ಮಧ್ಯೆ ಡೇರೆ ಹಾಕಿಕೊಂಡು ವಾಸಮಾಡಲು ಬಂದಿರುವ ತಂಡದವರನ್ನು

ಹಳ್ಳಿಯ ಜನರು ಕುತೂಹಲದಿಂದ ನೋಡಿದರು.

ನಟರಾಜನು ಆ ಹಳ್ಳಿಯ ಜನರನ್ನು ಕರೆದು ಕೂರಿಸಿಕೊಂಡು "ಕಾಡನ್ನು ಕಡಿದು ಸರ್ವೆ ಮಾಡುವ ಕೆಲಸಕ್ಕೆ ಯಾರು ಬೇಕಾದರೂ ಬಂದು ಸೇರಬಹುದು. ಹೆಚ್ಚು ಕೂಲಿ ಕೊಡುತ್ತೇವೆ". ಎಂದು ಹೇಳಿದ.

ಬಹು ಮಂದಿ ಆ ಹಳ್ಳಿಯ ಜನ ನಟರಾಜನ ಬಳಿ ಕೆಲಸಕ್ಕೆ ಸೇರಿದರು. ವಾಹನಗಳ ಓಡಾಟಕ್ಕೆ ಅವಕಾಶವೇ ಇಲ್ಲದ್ದರಿಂದ ಜನಗಳೇ ಮರಗಳನ್ನು ಕತ್ತರಿಸಿ ಸಾಗಿಸಬೇಕಾಗಿತ್ತು.

ಬೆಳಗ್ಗೆ ಎದ್ದ ಕೂಡಲೇ ನಟರಾಜನು ತಂಡದವರನ್ನು ಕರೆದುಕೊಂಡು ದಟ್ಟವಾದ ಕಾಡಿನೊಳಕ್ಕೆ ನುಗ್ಗಿ ಕಾಡನ್ನು ಕಡಿಯುವ ಕೆಲಸವನ್ನು ಪ್ರಾರಂಭಿಸುತ್ತಿದ್ದ. ಕಷ್ಟಪಟ್ಟು ಕೆಲಸ ಮಾಡುವ ಆ ಬಡ ಜನಗಳಿಗೆ ಧಾರಾಳವಾಗಿ ಕೂಲಿ ಕೊಡುತ್ತಿದ್ದ ನಟರಾಜ.

ಆ ಕೂಲಿ ಜನಗಳು ತೃಪ್ತಿಯಿಂದ ನಟರಾಜನನ್ನು "ನಮ್ಮ ದಣಿಗಳು ದೇವರಂಥವರು" ಎಂದು ಹೊಗಳುತ್ತಿದ್ದರು. ಮತ್ತು ತಮ್ಮ ಒಡೆಯನು ಹೇಳಿದ ಕೆಲಸವನ್ನು ಆಸಕ್ತಿಯಿಂದ ಮಾಡುತ್ತಿದ್ದರು.

ಹೀಗೆ ಕೆಲಸಕ್ಕೆ ಸೇರಿದವರಲ್ಲಿ ಮಲ್ಯಾ ಅಣ್ಣ, ಸೋಮನಾಯಕನೂ ಒಬ್ಬ. ಅವನು ಅದೇ ಹಳ್ಳಿಯಲ್ಲಿ ವಾಸಮಾಡುತ್ತಿದ್ದ.

ಸೋಮನಾಯಕನ ಹೆಂಡತಿಯೂ ಬಲು ಒಳ್ಳೆಯವಳು. ತನ್ನ ಗಂಡನು ಬರುವಾಗ ತಂಗಿಯನ್ನೂ ತಂಗಿಯ ಮಗಳನ್ನೂ ಜೊತೆಯಲ್ಲಿ ಕರೆದುಕೊಂಡು ಬಂದದ್ದು ನೋಡಿ ಬಲು ಸಂತೋಷಗೊಂಡಳು.

ಬಹಳ ದಿನಕ್ಕಾಗಿ ತಮ್ಮ ಮನೆಗೆ ಬಂದ ನಾದಿನಿ, ಅವಳ ಮಗಳನ್ನು ಅಕ್ಕರೆಯಿಂದ ಆದರಿಸಿದಳು. ಮಲ್ಯಾಗೂ ಅಣ್ಣ-ಅತ್ತಿಗೆಯ ಸಂಸಾರ ಮನಸ್ಸಿಗೆ ತಂಪನ್ನು ನೀಡಿತು.

ಲಕ್ಕಿಗಂತೂ ಈ ಕುಟುಂಬದವರ ಉತ್ತಮ ಮಟ್ಟದ ಸ್ವಭಾವ ತುಂಬಾ ಹಿಡಿಸಿತು.

ಎಲ್ಲದಕ್ಕಿಂತ ಅವಳ ಓರಿಗೆಯವಳೇ ಆದ ಮಾವನ ಮಗಳು "ಸೋನ್ಯಾ, ಇವಳೊಂದಿಗೆ ಬಹುಬೇಗ ಹೊಂದಿಕೊಂಡಳು. ಮಾವನ ಮಿಕ್ಕ ಮಕ್ಕಳೂ ಕೂಡ ಲಕ್ಕಿಯನ್ನು ಹೊಂದಿಕೊಂಡು ಅವಳನ್ನು ತುಂಬಾ ಪ್ರೀತಿಸುತ್ತಿದ್ದುವು.

ಈ ಸ್ಥಳ ಲಕ್ಕಿಗೂ ನೆಮ್ಮದಿಯನ್ನು ತಂದಿತು.

ಮನೆಯ ಕೆಲಸಕಾರ್ಯಗಳನ್ನು ತಾನೇ ಹೆಚ್ಚು ವಹಿಸಿಕೊಂಡು ಮಾಡಿ ಬಿಡುತ್ತಿದ್ದಳು. ಕೆಲಸದಲ್ಲಿ, ರೂಪಿನಲ್ಲಿ, ಗುಣದಲ್ಲಿ ಎಲ್ಲ ರೀತಿಯಲ್ಲೂ ಲಕ್ಕಿ ಆ ಮನೆಯವರಿಗೆ ಅಚ್ಚುಮೆಚ್ಚಿನವಳಾದಳು.

ಅವಳ ಸೋದರತ್ತೆಯಂತೂ, ತನ್ನ ನಾದಿನಿಯೊಂದಿಗೆ "ಮಲ್ಯಾ ನಿನ್ನ ಮಗಳಂತೂ ದೇವಲೋಕದ ಕನ್ಯೆ ಕಣವ್ವಾ" ಅವಳಿಗೆ ಸರಿಯಾದ ಗಂಡು ಈ ಭೂಮಿಮ್ಯಾಗೇ ಇಲ್ಲಾ ಅಂತ ಕಾಣ್ತದೆ, ಅನ್ನುವಳು.

ನಂಗೂ ಅದೇ ಚಿಂತೆ ಕಣ್ ಅತ್ತಿಗೇ !........ಇವಳ ದಿಮಾಕಿಗೆ ನಮ್ ಜನ್‌ಹಾಗೆ ಯಾವ ಗಂಡ್ ಐತೆ ? ಹೇಳ್ ಮತ್ತೀಗ ?

"ದೇವರೇ ತೋರಿಸ್‌ಬೇಕವ್ವ" ಎಂದು ಒಬ್ಬರಿಗೊಬ್ಬರು ಮಾತನಾಡಿ ಕೊಳ್ಳುತ್ತಿದ್ದರು.

ಮನಸ್ಸಿನ ಆತಂಕವನ್ನು ಕಳೆದುಕೊಂಡ ಲಕ್ಕಿ ಮಲೆನಾಡಿನ ನಿಸರ್ಗದ ಮಡಿಲಲ್ಲಿ ಹಾಯಾಗಿ ನಕ್ಕು ನಲಿದು ಮತ್ತೂ ಸೌಂದರ್ಯದ ಖನಿಯಾದಳು.

ನದಿ,-ಕಣಿವೆ ಯೋಜನೆಗಳ ನಿರ್ಮಾಣಕ್ಕೆ ಮೊದಲು ಕೈಕೊಳ್ಳುವ ಸರ್ವೆಕಾರ್ಯದಲ್ಲಿ ಅತಿ ಕಷ್ಟಕರವಾದ ಸಮಸ್ಯೆಗಳು ಉದ್ಭವಿಸುತ್ತವೆ.

ಅಲ್ಲಿಯ ಹವೆ ಮಲೇರಿಯಾದಿಂದ ಕೂಡಿರುತ್ತದೆ. ಸೊಳ್ಳೆಗಳ ಕಾಟ ವಂತೂ ಹೇಳತೀರದು. ಹಗಲಿನಲ್ಲಿಯೇ ಕತ್ತಲು ಕವಿದು ದಟ್ಟವಾಗಿರುವ ಕಾಡಿನ ಮಧ್ಯೆ ಕ್ರೂರ ಮೃಗಗಳ ಉಪಟಳವಂತೂ ಹೇಳತೀರದು.

ಆನೆಯ ಹಿಂಡುಗಳು ಘೀಂಕರಿಸುತ್ತಾ ಸ್ವೇಚ್ಛೆಯಾಗಿ ಓಡಾಡುತ್ತಿದ್ದ ಆ ಪ್ರದೇಶಕ್ಕೆ "ಆನೆ ಬೈಲು" ಎಂದೇ ಹೆಸರಿಟ್ಟರು.

ಇಂತಹ ಸನ್ನಿವೇಶದಲ್ಲಿ ನಟರಾಜನು ದಿನಂಪ್ರತಿ ಒಂದೊಂದು ಗಂಡಾಂತರ ವನ್ನು ಎದುರಿಸುತ್ತಾ, ಕಾರ್ಯತತ್ಪರನಾಗಿದ್ದ.

ಸರ್ಕಾರವೇ ಅವನಿಗೆ ಕೋವಿಯನ್ನೂ ಮದ್ದು-ಗುಂಡನ್ನೂ ಒದಗಿಸಿ ದ್ದಿತು.

ಒಂದು ದಿನ ಸಾಯಂಕಾಲ ಕೆಲಸ ಮುಗಿಸಿ ತಂಡದವರೆಲ್ಲರೂಹಿಂತಿರುಗು ತ್ತಿದ್ದರು. ದೂರದಲ್ಲಿ ಬ್ಯಾಟ್ರಿಯ ಬೆಳಕಿನಂತೆ ಹೊಳೆಯಿತು. ಆ ಬೆಳಕು ಇವರತ್ತಲೇ ಬರುತ್ತಿರುವಂತೆ ಕಂಡಿತು.

ನಟರಾಜ ಕೂಡಲೇ ಕೋವಿಯನ್ನು ಎತ್ತಿ ಗುರಿಯಿಟ್ಟು ಬೆಳಕು ಬಂದ ಕಡೆಗೆ ಗುಂಡು ಹಾರಿಸಿದ, ಅದು ಒಂದು ಭಾರಿ ಚಿರತೆಯಾಗಿದ್ದಿತು. ಗುಂಡಿನೇಟು ಹಣೆಗೆ ಸರಿಯಾಗಿ ಬಿದ್ದಿದ್ದರಿಂದ ಚೀತ್ಕರಿಸುತ್ತಾ ಅದು ಅಲ್ಲಿಯೇ ಬಿದ್ದು ವಿಲ ವಿಲನೇ ಒದ್ದಾಡುತ್ತಿದ್ದಿತು.

ನಟರಾಜ ಸ್ವಲ್ಪ ಮುಂದೆ ಹೋಗಿ ತನ್ನ ದೊಡ್ಡ ಬ್ಯಾಟ್ರಿ ಬೆಳಕನ್ನು ಬಿಟ್ಟು ನೋಡಿದ ಚಿರತೆ ಪ್ರಾಣ ಸಂಕಟದಿಂದ ಒದ್ದಾಡುತ್ತಿತ್ತು, ಆದರೂ ಅದರ ರೋಷ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸುವಂತಿತ್ತು.

ಕೂಡಲೇ ನಟರಾಜ ಇನ್ನೊಂದು ಗುಂಡನ್ನು ಅದರ ಎದೆಗೆ ಗುರಿಯಿಟ್ಟು ಹಾರಿಸಿದ ಅಲ್ಲಿಗೆ ಅದರ ಕತೆ ಮುಗಿಯಿತು.

ನಟರಾಜನ ಹಿಂದೆಯೇ ಜನಗಳ ಗುಂಪು ಚಿರತೆಯ ಬಳಿ ಬಂದು ನೋಡಿತು ಅಬ್ಬ ! ಎಷ್ಟು ಭಾರಿ ಚಿರತೆ ? ಸ್ವಲ್ಪ ಗುರಿ ತಪ್ಪಿದ್ದರೂ ರೋಷಗೊಂಡ ಚಿರತೆ ತಮ್ಮೆಲ್ಲರನ್ನೂ ತೀರಿಸಿಬಿಡುತ್ತಿತ್ತು. ಇಂತಹ ಗಂಡಾಂತರದಿಂದ ತಪ್ಪಿಸಿದ ತಮ್ಮ ದಣಿಯನ್ನು ತಂಡದವರು ಮನಸಾರ ಕೊಂಡಾಡಿದರು. ಅವರ ಗುರಿಯ ಸಾಧನೆಗೆ ಆಶ್ಚರ್ಯಪಟ್ಟರು.

ಸೋಮನಾಯಕ ಕೆಲಸ ಮುಗಿಸಿ ಮನೆಗೆ ಬಂದೊಡನೆ ತಮ್ಮ ದಣಿಯನ್ನು ಕೊಂಡಾಡದ ದಿನವೇ ಇಲ್ಲ.

ಈ ದಿನವಂತೂ ಚಿರತೆಯನ್ನು ಒಂದೇ ಏಟಿಗೆ ಕೊಂದ ತಮ್ಮ ದಣಿ "ರಾಜಾಧಿ ರಾಜನೇ ಸರಿ" ಎಂಬಂತೆ ಹೊಗಳಿದ. ಮನೆಯವರೂ ಅವನ ಒಂದೊಂದು ಮಾತನ್ನೂ ಕುತೂಹಲದಿಂದ ಕೇಳುತ್ತಿದ್ದರು. ಲಕ್ಕಿಯೂ ತನ್ನ ಮಾವನ ಹೊಗಳಿಕೆಯನ್ನು ಕೇಳಿ-ಕೇಳಿ ತಾನು ಎಂದಾದರೂ ಒಂದು ದಿನ ಆ ರಾಜನನ್ನು ನೋಡಬೇಕೆಂದು ಕುತೂಹಲಗೊಂಡಳು.

ಹಳ್ಳಿಯ ಮನೆ ವನೆಯಲ್ಲಿಯೂ, ಹೆಂಗಸರು ಮಕ್ಕಳು ಆದಿಯಾಗಿ ತಮ್ಮ ಭಾಗದ ದೈವವೇ ಈ ಹಳ್ಳಿಗೆ ಬಂದು ತಮ್ಮನ್ನು ಕಾಪಾಡುತ್ತಿದೆಯೆಂಬ ಭಾವನೆಯಿಂದ ಕೈಎತ್ತಿ ಮುಗಿಯುತ್ತಿದ್ದರು. ಕಾರಣ ಆ ಬಡ ಕುಟುಂಬಗಳಿಗೆ ಹೊಟ್ಟೆ ಬಟ್ಟೆಗೆ ಆಗುವಷ್ಟು ಧಾರಾಳವಾಗಿ ಕೂಲಿ ಕೊಡುತ್ತಿದ್ದ, ನಟರಾಜ. ಅವರ ಕಷ್ಟ ಸುಖಗಳನ್ನು ವಿಚಾರಿಸುತ್ತಿದ್ದ, ಅಲ್ಲದೆ ಯಾವುದಾದರೂ ವಿಶೇಷ ಹಬ್ಬಗಳಲ್ಲಿ ಒಂದು ದಿನದ ಕೂಲಿಯನ್ನು ಮುಪ್ಪತ್ತಾಗಿ ಕೊಡುತ್ತಿದ್ದ.

ಇಂತಹ ತಮ್ಮ ದಣಿಗೆ ಯಾವ ಕೊರತೆಯೂ, ಆಗದಂತೆ ನೋಡಿಕೊಳ್ಳು ತ್ತಿದ್ದರು ಆ ಹಳ್ಳಿಯ ಜನ.

ಹಸು ಕರೆಯುವವರ ಮನೆಯಿಂದ ಹಾಲನ್ನು ಕೊಟ್ಟು ಕಳುಹಿಸುತ್ತಿದ್ದರು ಮೊಸರು, ಬೆಣ್ಣೆ, ತುಪ್ಪ ಏನೇ ಇರಲಿ ಮಕ್ಕಳ ಬಾಯಿ ಕಟ್ಟಿಯಾದರೂ, ದೇವರಿಗೆ ಮೀಸಲಿಡುವಂತೆ ನಟರಾಜನಿಗೆ ಕೊಟ್ಟು ಕಳುಹಿಸುತ್ತಿದ್ದರು.

ಮಲೆನಾಡು ಪ್ರಾಂತಗಳಲ್ಲಿ ಮನೆಗಳು ವಿರಳ. ಒತ್ತಾಗಿ ಬೆಳೆದ ಮರ ಗಿಡಗಳ ಸಂದಿಯಲ್ಲಿ ಅಲ್ಲೊಂದು ಇಲ್ಲೊಂದು ಹುಲ್ಲಿನ ಚಾವಣಿಯ ಮನೆಗಳ ಜನ ಜಂಗುಳಿಯಿಲ್ಲ ಜಾಗದ ಅಭಾವವಿಲ್ಲ. ಪ್ರಕೃತಿದತ್ತವಾದ ನೀರು-ನೆರಳು ಯಥೇಚ್ಛವಾಗಿರುತ್ತದೆ.

ಅಂತಹ ಪ್ರದೇಶದಲ್ಲಿ ಡೇರೆಯನ್ನು ಹಾಕಿಕೊಂಡಿದ್ದ ನಟರಾಜ, ಅವನ ಡೇರೆಯ ಹಿಂಭಾಗದಲ್ಲಿಯೇ ಎತ್ತರವಾದ ಬಂಡೆಗಲ್ಲಿನ ದಿಣ್ಣೆಗಳು, ಆ ಬಂಡೆಗಳ ಮಧ್ಯದಲ್ಲಿ ನುಗ್ಗಿ ದಾರಿಯನ್ನು ಮಾಡಿಕೊಂಡು. ಝುಳ-ಝುಳನೆ ಮೆಟ್ಟಿಲು ಮೆಟ್ಟಿಲಾಗಿ ಇಳಿದು ಬರುತ್ತಿರುವ ತಿಳಿ ನೀರಿನ ನಿರಂತರ ಪ್ರವಾಹ. ಸುತ್ತಲೂ ಹಚ್ಚ ಹಸುರಿನ ವಾತಾವರಣ, ಈ ಪ್ರದೇಶವು ನಟರಾಜನಿಗೆ ಬಲು ಹಿಡಿಸಿತ್ತು

ಸೋಮನಾಯಕನ ಮನೆಯಲ್ಲಿ ಹಸು ಹಾಲು ಕೊಡುತ್ತಿದ್ದದರಿಂದ ಬೆಳಗ್ಗೆ ಹೊತ್ತಿಗೆ ಮುಂಚೆ ಹಾಲು ಕರೆದು ಮಕ್ಕಳ ಕೈಲಿ ನಟರಾಜನಿಗೆ ಪ್ರತಿ ದಿನ ಕೊಟ್ಟು ಕಳುಹಿಸುತ್ತಿದ್ದರು. ಹಾಲು ಬಂದನಂತರ ಎದ್ದು ನಟರಾಜ ತಾನೇ ಕಾಪಿ ಕಾಯಿಸಿಕೊಳ್ಳುತ್ತಿದ್ದ ವಾಡಿಕೆ.

ಆ ದಿನ ...... ಮಕ್ಕಳು ಯಾರೂ ಎದ್ದಿರಲಿಲ್ಲ. ಸೋಮನಾಯಕನು ಹೆಂಡತಿ ಹಾಲನ್ನು ಕರೆದು ಚೊಂಬಿನಲ್ಲಿ ತುಂಬಿ.

ಅಲ್ಲಿಯೇ ಇದ್ದ ಲಕ್ಕಿಯ ಕೈಗೆ ಕೊಟ್ಟು, "ಹೋಗವ್ವಾ ನೀನೆ ದಣಿ ಯೋರಿಗೆ ಹಾಲು ಕೊಟ್ಟುಬಾ" ಈ ಮಕ್ಕಳು ಬಿರೀನ ಎಳಾಕಿಲ್ಲ" ಅಂದಳು.

ತನ್ನ ಮಾವನಿಂದ ನಟರಾಜನ ಗುಣಗಾನವನ್ನು ಕೇಳಿದ್ದ ಲಕ್ಕಿಗೆ ಅವನ ಬಗ್ಗೆ ತುಂಬಾ ಅಭಿಮಾನ ಮೂಡಿತ್ತು. ಅವನನ್ನು ನೋಡುವ ಕುತೂಹಲ ಕೆರಳಿ ನಿಂತಿತ್ತು.

ಅಂದು ಒಂದು ದಿನ ಸೋನ್ಯಾ ಮತ್ತು ಇವಳೂ ಒಣಗಿದ ಕಟ್ಟಿಗೆ ಆರಿಸಿ

ತರಲು ಗಿಡಗಳ ನಡುವೆ ಸ್ವಲ್ಪದೂರ ಹೋಗಿದ್ದರು. ನಟರಾಜ ಅವನ ಡೇರೆಯಿಂದ ಹೊರಕ್ಕೆ ಬಂದು ಒಂದು ಬಾರಿ ವಿಷಿಲ್ ಊದಿ ಕೆಲಸಕ್ಕೆ ಹೊರಡಲು ತಂಡದವರಿಗೆ ಸೂಚನೆಯಿತ್ತು ತಾನು ಮುಂದೆ ಹೆಜ್ಜೆ ಹಾಕಿದ.

ವಿಷಿಲ್ ಶಬ್ಧ ಬಂದಕಡೆ ಲಕ್ಕಿ-ಸೋನ್ಯಾ ಇಬ್ಬರೂ ತಲೆಯೆತ್ತಿ ನೋಡಿದರು. ಠೀವಿಯಿಂದ ಅವನು ಹೋಗುತ್ತಿದ್ದ. ನಟರಾಜ ಸರ್ವೆ ಕೆಲಸಕ್ಕೆ ಹೊರಡುವಾಗ ಸೋಲ್ಜರಂತೆ ಕಾಕಿ ಉಡುಪು, ಹ್ಯಾಟು-ಬೂಟು ಹಾಕಿಕೊಂಡು ಕೋವಿಯನ್ನು ಹೆಗಲಿನಲ್ಲಿ ಹಾಕಿ ತಂಡದವರ ಮುಂದಾಳಾಗಿ ಠೀವಿಯಿಂದ ಹೋಗುತ್ತಿದ್ದರೆ ಯಾರಿಗಾದರೂ ಅವನಲ್ಲಿ ಗೌರವ ಭಾವನೆ ಮೂಡುತ್ತಿತ್ತು.

ಈಗ ನಟರಾನನ್ನು ನೋಡಿದ ಕೂಡಲೇ ಸೋನ್ಯಾ "ಎಯ್ ಲಕ್ಕೀ ಅಲ್ಲಿನೋಡು ನಮ್ಮ ದಣಿಯೋರು ಕೆಲಸಕ್ಕೆ ಹೊಂಟರು. ಹೇಗೆ ರಾಜಾಧಿರಾಜ ಇದ್ದಂಗೆ ಅವ್ರೆ ನೋಡು" ಎಂದು ಬೆಟ್ಟು ಮಾಡಿ ತೋರಿಸಿದಳು.

ಲಕ್ಕಿ ಕುತೂಹಲದಿಂದ ಎವೆಯಿಕ್ಕದೆ ಅವನನ್ನೇ ನೋಡುತ್ತಿದ್ದಳು.

ಏಯ್ ಏನೇ ಹಂಗ್ ನೋಡ್ತೀಯಾ. ದಣಿಯೋರನ್ನ ನೀನು ನೋಡೇ ಇರ್ಲಿಲ್ವಾ ? ಎಂದು ಅವಳ ಭುಜ ಹಿಡಿದು ಅಲುಗಾಡಿಸಿದಳು.

ಲಕ್ಕಿ ಬೆಚ್ಚಿದವಳಂತೆ "ಇಲ್ಲ ಸೋನ್ಯಾ ! ನಾನು ಇವತ್ತೇ ದಣಿಯವರನ್ನ ನೋಡಿದ್ದು. ಹೌದು ಕಣವ್ವಾ ; ಮಾವ ಹೇಳ್ದಂಗೆ ಒಳ್ಳೆ ರಾಜಕುಮಾರ ಇದ್ದಂಗೆ ಅವ್ರೆ" ಎಂದು ಹೇಳಿ ಅತ್ತಲೇ ನೋಡುತ್ತಿದ್ದಳು.

ಐ .. ಆದೇನು ಹಂಗ್ ನೋಡ್ತಾನೇ ಇದ್ದಿಯಾ, ಅವ್ರನ್ನೇನು ನೀನು ಮದ್ವೆ ಆಗಾಕಾಯ್ತದಾ ? ಬಾ ! ಹೋಗಾನ ಅಂದು ಕೀಟಲೆ ಮಾಡಿದಳು ಸೋನ್ಯಾ.

ಲೇ ಹಂದಿ... ಬಾಯಿಗೆ ಬಂದ್ದೇ ಮಾತನಾಡಬೇಡ ಕಣೇ ; ನೀನೇ ಮದ್ವೆ ಆಗು ಯಾರು ಬೇಡಾ ಅಂದವ್ರೆ ? ಎಂದು ಅವಳ ಕೆನ್ನೆ ಚಿವುಟಿದಳು ಲಕ್ಕಿ.

ಇವರು ಮಾತನಾಡುತ್ತಿದ್ದಂತೆಯೇ ನಟರಾಜ ಮರಗಳ ಮಧ್ಯೆ ಮರೆಯಾದ. ಲಕ್ಕಿ ಮನೆಗೆ ಬಂದರೂ ಅವಳ ಮನಸ್ಸು ಅವಳ ಸ್ವಾಧೀನದಲ್ಲಿಲ್ಲದಾಯಿತು. ಮತ್ತೆ ಪುನಃ ನಟರಾಜನನ್ನು ಯಾವಾಗ ನೋಡಲು ಸಾಧ್ಯ

ಎಂದು ಕಾತರಿಸುತ್ತಿತ್ತು.

ಅವನು ಸರ್ವೆ ಕೆಲಸಕ್ಕೆ ಹೊರಡುವ ಮುನ್ನ ವಿಶಿಲ್ ಊದುವ ಸೂಚನೆ ತಿಳಿದುಕೊಂಡಿದ್ದ ಲಕ್ಕಿ ಮನೆಯಲ್ಲಿ ಎಲ್ಲರ ಕಣ್ತಪ್ಪಿಸಿ, ಮನೆಯ ಹತ್ತಿರವಿದ್ದ ಒಂದು ದಿಣ್ಣೆಯಮೇಲೆ ನಿಂತು ನಟರಾಜ ಕಣ್ಮರೆಯಾಗುವ ವರೆಗೂ ದೂರ ದಿಂದಲೇ ನೋಡಿ ತೃಪ್ತಿ ಪಟ್ಟು ಕೊಳ್ಳುತ್ತಿದ್ದಳು.

ಹತ್ತಿರದಿಂದ ನೋಡಬೇಕೆನ್ನಿಸಿದರೂ ನಾಚಿಕೆ ಅವಳನ್ನು ತಡೆಯುತ್ತಿತ್ತು ಈಗ ಸೋದರತ್ತೆ "ಹಾಲನ್ನು ಕೊಟ್ಟು ಬಾ" ಅಂದಾಗ ಅವಳಿಗೆ ಕಸಿ-ವಿಸಿ ಯಾಯಿತು. "ದಣಿಯವರು ಒಬ್ಬರೇ ಇರುವ ಡೇರೆಗೆ ತಾನೊಬ್ಬಳೇ ಹೇಗೆ ಹೋಗುವುದು ? ಆದರೂ ನಟರಾಜನನ್ನು ಒಮ್ಮೆ ಹತ್ತಿರದಿಂದ ನೋಡುವ ಆಸೆ.

"ಅತ್ತೇ ... ಅತ್ತೇ.... ನನ್ನ ಜೋತ್ಯಾಗೆ ಸೋನ್ಯಾನೂ ಕಳಿಸು ಅತ್ತೇ" ಅಂದಳು.

ಹೋಗವ್ವ ; ಸೋನ್ಯಾಗೆ ಮಸ್ತಾಗಿ ಕೆಲಸ ಐತೆ. ನಿಮ್ಮ ಮಾವ ಕೆಲಸಕ್ಕೆ ಹೋಗೋ ಹೊತ್ತಿಗೆ ರೊಟ್ಟಿ ಬೇಯಿಸಬೇಕು, ದನ-ಕರ ನೋಡ್ ಬೇಕು. ನೀನೆ ಹೋಗಿ ಕೊಟ್ಟುಬಾ .. ಎಂದು ಹೇಳಿ ತನ್ನ ಕೆಲಸಕ್ಕೆ ತಾನು ಒಳಕ್ಕೆ ಹೊರಟು ಹೋದಳು.

ಲಕ್ಕಿ ಹಾಲಿನ ಚೊಂಬಿನೊಂದಿಗೆ ಮನೆಯಿಂದ ಹೊರಟಳು. ಅವರ ಮನೆಯಿಂದ ಎರಡು ಫರ್ಲಾಂಗ್ ದೂರದಲ್ಲಿ ತಗ್ಗಿನಲ್ಲಿ ನಟರಾಜನ ಡೇರೆ ಇದ್ದುದು, ಇವಳಿಗೆ ನಡಿಗೆಯಲ್ಲಿ ಏನೋ ಚುರುಕು ಮನಸ್ಸಿನಲ್ಲಿ ಏನೋ ಉತ್ಸಾಹ.

ಆಗ ತಾನೇ ಸುರ್ಯೋದಯವಾಗಿ ದಟ್ಟ ಮರಗಳ ಮಧ್ಯೆ ಕಿರಣಗಳು ತೂರಿ ಬಂದಿದ್ದವು. ಹಕ್ಕಿಗಳ ಇಂಚರ ಇಂಪಾಗಿತ್ತು, ಗಿಡಗಳ ಮಧ್ಯೆ ನಡೆಯು ವಾಗ ಕೈಗೆ ಸಿಕ್ಕಿದ ಕಾಡು ಹೂಗಳನ್ನು ಕಿತ್ತು ತಲೆಗೆ ಸಿಕ್ಕಿಸಿದಳು ಲಕ್ಕಿ.

ಹಕ್ಕಿಗಳ ಇಂಚರದೊಂದಿಗೆ ತನ್ನ ಧ್ವನಿಯನ್ನೂ ಕೂಡಿಸಿ ಮೇಲು ದನಿ ಯಲ್ಲಿ ಹಾಡುತ್ತಾ ನಡೆದಳು.

ಡೇರೆ ಬಳಿ ಬಂದು ಬಾಗಿಲಿನ ತೆರೆಯನ್ನು ಸರಿಸಿ ಒಂದು ಬಾರಿ ಹಣಿಕಿ ಒಳಗೆ ನೋಡಿದಳು.

ನಟರಾಜ ದಣಿದ ಮೈಯನ್ನು ಉದ್ದಕ್ಕೂ ಹಾಸಿಗೆಯ ಮೇಲೆ ಚೆಲ್ಲಿ ಸುಖ ನಿದ್ರೆ ಮಾಡುತ್ತಿದ್ದ. ಮೆತ್ತನೆಯ ದಿಂಬಿನಲ್ಲಿ ಹುದುಗಿದ್ದ ಅವನ ಸುಂದರವಾದ ಮುಖದಮೇಲೆ ಆಗತಾನೇ ಮೂಡಿದ್ದ ಸೂರ್ಯ ರಶ್ಮಿಯೊಂದು ಲಾಸ್ಯವಾಡುತ್ತಿತ್ತು.

ಕ್ರಾಪಿನ ಕಪ್ಪು ಕುರುಳುಗಳು ಹಣೆಯ ಮೇಲೆಲ್ಲಾ ಹರಡಿತ್ತು. ಏನೋ ಸುಖಸ್ವಪ್ನವನ್ನು ಕಂಡಿರಬಹುದು. ಅರೆ ತೆರೆದ ಬಾಯಿಂದ ಕಿರುನಗೆ ಸೂಸುತ್ತಿತ್ತು.

ಲಕ್ಕಿಯು ನೋಡಿದ ನೋಟವನ್ನು ಹಿಂತೆಗೆಯದಾದಳು. ಮೆಲ್ಲನೆ ಒಂದೊಂದೇ ಹೆಜ್ಜೆಯಿಟ್ಟು ಒಳಗೆ ಹೋದಳು. ಡೇರೆಯ ಒಳಗಡೆ ಸ್ಥಳ ವಿಶಾಲವಾಗಿತ್ತು. ಬಟ್ಟೆಯ ತೆರೆಯಿಂದಲೇ ನಿರ್ಮಿಸಲಾದ ಮತ್ತೊಂದು ಕೋಣೆಯಿತ್ತು. ಅದು ಅಡಿಗೆ ಮನೆಯಿರಬೇಕೆಂದು ಊಹಿಸಿದಳು ಲಕ್ಕಿ ನಟರಾಜನು ಮಲಗಿದ್ದ ಮಂಚದ ಪಕ್ಕಕ್ಕೆ ಒಂದು ಟೇಬಲ್, ಎರಡು ಕುರ್ಚಿ ಗಳನ್ನು ಹಾಕಲಾಗಿತ್ತು.

ಟೇಬಲಿನ ಮೇಲೆ ಹೂ ದಾನಿಯಲ್ಲಿ ಮಲೆನಾಡ ಬಗೆ-ಬಗೆಯ ಹೂ ಗುಚ್ಛವು ಅಂದವಾಗಿ ಜೋಡಿಸಲ್ಪಟ್ಟಿತ್ತು. ಟೇಬಲ್‌ಮೇಲೆ ರಾಧಾ-ಕೃಷ್ಣರ ಒಂದು ಫೋಟೋ ಇತ್ತು. ಒಂದು ಪ್ಲಾಸ್ಕ್, ಒಂದು ಟ್ರಾನ್‌ಸಿಸ್ಟರ್ ರೇಡಿಯೋ ಇವಿಷ್ಟು ಇದ್ದುವು.

ಇಷ್ಟು ಸಾಮಾನುಗಳಿದ್ದರೂ ಡೇರೆಯ ಬಾಗಿಲು ತೆರೆದೇ ಇತ್ತು. ನಿರಾಂತಕವಾಗಿ ನಿದ್ರಿಸುತಿದ್ದ ನಟಜರಾ. ಡೇರೆಯ ಒಳಗಿನ ಶಿಸ್ತು ಲಕ್ಕಿಯನ್ನು ಡಂಗು ಬಡಿಸಿತು.

ತಾನು ಬಂದು ೫ ನಿಮಿಷಗಳಾದರೂ ಈ ಮನುಷ್ಯನಿಗೆ ಎಚ್ಚರವಾದಂತೆ ಕಾಣಲಿಲ್ಲವಲ್ಲಾ ; ಹೇಗೆ ಎಬ್ಬಿಸುವುದು ? ಎಂದು ಲಕ್ಕಿ ಯೋಚನೆಗೊಳ ಗಾದಳು.

ತನ್ನ ಕೈಯನ್ನು ಹಿಂದೆ ಮುಂದೆ ಆಡಿಸಿದಳು. ಕೈಯ್ಯಲ್ಲಿದ್ದ ಮೂಳೆ ಬಳೆಗಳು ಗಳ-ಗಳ ಶಬ್ದ ಮಾಡಿದುವು. ಇದರಿಂದಲೂ ನಟರಾಜನಿಗೆ ಎಚ್ಚರ ವಾದಂತೆ ಕಾಣಲಿಲ್ಲ. ಒಂದೆರಡು ಹೆಜ್ಜೆ ಮುಂದೆ ಇಟ್ಟು ಕಾಲಿನ ಅಂದಿಗೆ ಗೆಜ್ಜೆ ಶಬ್ದ ಮಾಡಿದಳು. ಸ್ವಪ್ನ ಲೋಕದಲ್ಲಿದ್ದ ನಟರಾಜನಿಗೆ ಈ ಲೋಕದ

ಅರಿವೇ ಇಲ್ಲ.

ಆ ನಿಶ್ಶಬ್ಧ ವಾತಾವರಣದಲ್ಲಿ ಲಕ್ಕಿ ನಿಂತೇ ನೋಡುತ್ತಿದ್ದಳು. ಜೋರು ಗಾಳಿ ಬೀಸಿದ್ದರಿಂದ ಡೇರೆಯ ಬಟ್ಟೆ ಪಟ ಪಟನೆ ಶಬ್ಧ ಮಾಡಿತು. ಈ ಶಬ್ಧಕ್ಕೆ ನಟರಾಜನಿಗೆ ಎಚ್ಚರವಾಯಿತು. ತಟ್ಟನೆ ಎದ್ದು ಕುಳಿತು ಕಣ್ಣನ್ನು ಹೊಸಕಿ ವಾಡಿಕೆಯಂತೆ ರಾಧಾಕೃಷ್ಣನ ಫೋಟೋಗೆ ಕೈ ಮುಗಿದ.

ಲಕ್ಕಿ ಎರಡು ಹೆಜ್ಜೆ ಹಿಂದಿಟ್ಟಳು. ಆಗ ಅವಳ ಕಾಲಿನ ಅಂದಿಗೆ ಗೆಜ್ಜೆ ಜಲ್-ಜಲ್ ಎಂದಿತು. ನಟರಾಜ ಶಬ್ಧ ಬಂದತ್ತ ತಿರುಗಿ ನೋಡಿದ. ಮತ್ತೆ-ಮತ್ತೆ ಕಣ್ಣು ಹೊಸಕಿ ನೋಡಿದ. ಲಕ್ಕಿಯು ಅಮೃತ ಕಲಶವನ್ನು ಹಿಡಿದು ನಿಂತ ಮೋಹಿನಿಯಂತೆ ಅವನಿಗೆ ಕಂಡಳು. ತಟ್ಟನೆ ಎದ್ದು ನಿಂತ, ತಾನು ಯಾವುದೋ ಕನಸಿನ ಲೋಕದಲ್ಲಿಯೇ ಇನ್ನೂ ಇರುವಂತೆ ಅನ್ನಿಸಿತು.

ನೆಟ್ಟ ದೃಷ್ಟಿಯಿಂದ ಲಕ್ಕಿಯನ್ನು ನೋಡಿದ. ಆ ನೋಟವನ್ನು ಎದುರಿಸಲಾರದೇ ಲಕ್ಕಿ ತಲೆ ತಗ್ಗಿಸಿದಳು. ಅವಳೇ ಅಂದಳು "ದಣಿಯೋರಾ ಹಾಲು ತಂದಿವ್ನಿ.

ಲಕ್ಕಿಯ ಧ್ವನಿ ಕೇಳಿ ವಾಸ್ಥವ ಸ್ಥಿತಿಗೆ ಬಂದ ನಟರಾಜ "ಅಂ... ಯಾರು ....ನೀನು ? ಎಂದು ಎಚ್ಚೆತ್ತವನಂತೆ ಕೇಳಿದ.

ಲಕ್ಕಿ ತಲೆ ತಗ್ಗಿಸಿಯೇ ಉತ್ತರ ಕೊಟ್ಟಳು. "ನಾನು ದಣಿಯೋರಾ, ಲಕ್ಕಿ" ಹಾಲು ತಂದಿವ್ನಿ.

ಅವಳ ರೂಪಿನಷ್ಟೇ ಇನಿ-ದನಿ ಇಂಪಾಗಿತ್ತು. ನಟರಾಜನು ಇದುವರೆಗೂ ಆ ಹಳ್ಳಿಯಲ್ಲಿ ಇಂತಹ ರೂಪರಾಶಿ ಹೆಣ್ಣನ್ನು ನೋಡಿಯೇ ಇರಲಿಲ್ಲ. ಅವಳ ಅಡಿಯಿಂದ ಮುಡಿಯವರೆಗೂ ನೋಡುತ್ತಾ ಕೇಳಿದ "ಯಾರ ಮನೆಯವರು ? "

ನಟರಾಜನ ನೋಟಕ್ಕೆ ಲಕ್ಕಿ ನಾಚಿ ಮುದ್ದೆಯಾದಳು. ತಾನು ಯಾಕಾದರೂ ಬಂದೆನೋ ಅನ್ನಿಸಿತು. ಹಾಲಿನ ಚೊಂಬನ್ನು ಮುಂದೆ ನೀಡುತ್ತಾ "ನಾನು ಸೋಮನಾಯಕನ ಮನೆಯವಳು ಕೊಳ್ಳಿ ಹಾಲ".

ನಟರಾಜ ಒಳಗೆ ಹೋಗಿ ಒಂದು ಪಾತ್ರೆಯನ್ನು ತೆಗೆದುಕೊಂಡು ಬಂದು ಹಾಲು ಹಾಕಿಸಿಕೊಂಡ

ಹಾಲನ್ನು ಹಾಕುವಾಗ ಲಕ್ಕಿಯ ಕೈ ನಡುಗಿತು. ಸ್ವಲ್ಪ ಹಾಲು ಕೆಳಗೆ ಚೆಲ್ಲಿತು. "ಯಾಕೆ ನನ್ನನ್ನು ಕಂಡರೆ ಭಯವೇ ? ಅಂದ ನಟರಾಜ

"ಇಲ್ಲ" ಅನ್ನುವಂತೆ ತಲೆಯಾಡಿಸಿದಳು ಲಕ್ಷ್ಮಿ ಅವಳ ಬೈತಲೆ ಬೊಟ್ಟು ಮುಂದಲೆಯ ಸರಪಣಿ ಕಿವಿಯ ಜುಮುಕಿ ಎಲ್ಲಾ ಅಲುಗಾಡಿ ಅಪೂರ್ವ ಶೋಭೆಯನ್ನುಂಟು ಮಾಡಿತು.

"ಅಬ್ಬಾ ! ಎಂತಹ ಚಲುವೆ ಇವಳು ? ಲಂಬಾಣಿಯರಲ್ಲಿ ಇಂತಹ ಹೆಣ್ಣೂ ಉಂಟೇ" ? ಅನ್ನಿಸಿತು ನಟರಾಜನಿಗೆ, ಹಾಲು ಒಳಗಿಡುವುದನ್ನೂ ಮರೆತು ಮಂತ್ರ ಮುಗ್ಧನಂತೆ ನಿಂತೇ ಇದ್ದ.

ಲಕ್ಷ್ಮಿ ಹಾಲು ಹಾಕಿದ್ದೇ ತಡ, ದಡ-ದಡನೆ ಹೊರಟಳು. ಅವಳು ಹೊರಕ್ಕೆ ಹೊರಟು ಹೋದ ಮೇಲೆ ನಟರಾಜನೂ ಹಾಲಿನ ಪಾತ್ರೆ ಸಮೇತ ಡೇರೆಯ ಬಾಗಿಲವರೆಗೆ ಬಂದು ಲಕ್ಷ್ಮಿ ಹೋದ ಕಡೆಯೇ ನೋಡುತ್ತಾ ನಿಂತ.

ಲಕ್ಷ್ಮಿ ಎರಡು ಮಾರು ಹೋಗಿ ತಿರುಗಿ ನೋಡಿದಳು ನಟರಾಜನು ತನ್ನನ್ನೇ ನೋಡುತ್ತಾ ನಿಂತಿರುವುದು ಕಾಣಿಸಿತು.

ನೆಟ್-ಬನಿಯನ್ ಬಿಗಿಯುವಂತಿದ್ದ ಅವನ ವಿಶಾಲ ಎದೆಯೂ, ತೆರೆದ ತೋಳಿನ ಬಿಳುಪಾದ ಭಾಗವೂ, ಲಕ್ಷ್ಮಿಯ ಕಣ್ಣಿಗೆ ಕಟ್ಟಿದಂತಾಯಿತು. ಮತ್ತೆ ತಿರುಗಿ ನೋಡದೆ ಓಟದ ನಡಿಗೆಯಲ್ಲಿಯೇ ಮುಂದೆ ನಡೆದಳು.

ನಟರಾಜ ಅವಳತ್ತಲೇ ನೋಡುತ್ತಾ ನಿಂತಿದ್ದ. ದಟ್ಟವಾದ ಹಸುರಿನ ಮಧ್ಯೆ ದಂತದ ಪ್ರತಿಮೆಯಂತಿದ್ದ ಲಕ್ಷ್ಮಿ ಲೀನವಾಗಿ ನಟರಾಜನ ಕಣ್ಣಿನಿಂದ ಮರೆಯಾದಳು.

ಡೇರೆಯ ಒಳಕ್ಕೆ ಬಂದ ನಟರಾಜನಿಗೆ ಮುಂದೆ ಕೆಲಸ ಮಾಡಲು ತೋಚದಾಯಿತು. ಹಾಲಿನ ಪಾತ್ರೆಯನ್ನು ಟೇಬಲ್ ಮೇಲೆ ಇಟ್ಟು ಮತ್ತೆ ಹಾಸಿಗೆಯಲ್ಲಿ ಮಲಗಿ ಡೇರೆಯ ಚಾವಣಿಯತ್ತ ನಿಟ್ಟಿಸುತ್ತಾ ಮಲಗಿದ. ಲಕ್ಷ್ಮಿಯ ರೂಪ ರಾಶಿ ಮತ್ತೆ ಮತ್ತೆ ಮನದಲ್ಲಿ ಮೂಡಿತು. ತನ್ನ ಮನವನ್ನು ಸೂರೆಗೊಂಡ ಈ ಮೋಹಿನಿ ನಿಜವಾಗಿ ಲಂಬಾಣಿ ಹೆಣ್ಣೇ ? ಎಂದು ಯೋಚಿಸುತ್ತಾ ಮಲಗಿದ. ಮೊದಲ ಬಾರಿಗೆ ಹೆಣ್ಣಿನ ಆಕರ್ಷಣೆ ಏನೆಂಬುದರ ಅರಿವಾಯಿತು ನಟರಾಜನಿಗೆ.

ಇನ್ನೂ ಹಾಗೆಯೇ ಎಷ್ಟು ಹೊತ್ತು ಸ್ವಪ್ನಲೋಕದಲ್ಲಿರುತ್ತಿದ್ದನೋ ! ಅಷ್ಟರಲ್ಲಿ ಕೆಲಸದ ಆಳು ರಾಮಯ್ಯ ಬಂದು "ಏನು ದಣಿಯೋರು ಇನ್ನೂ ಮಲಗೇ ಇದ್ದೀರಲ್ಲಾ ! ಹುಷಾರಾಗಿದ್ದೀರೋ ಇಲ್ಲವೋ" ? ಎಂದ.

"ಓ.....ನೀನಾ ! ಹುಷಾರಾಗಿದ್ದೀನಿ ಬಾ ರಾಮಯ್ಯ ಆಗಲೇ ಎದ್ದಿದ್ದೆ.

ಯಾಕೋ ಬೇಜಾರಾಯಿತು ಸುಮ್ಮನೆ ಮತ್ತೆ ಮಲಗಿಕೊಂಡೆ, ಎಂದು ಎದ್ದವನೇ ನಟರಾಜ ಮುಖ ತೊಳೆಯಲು ಟವಲ್ ಹೆಗಲ ಮೇಲೆ ಹಾಕಿಕೊಂಡು ಹೋದ.

ಪ್ರತಿದಿನದಂತೆ ರಾಮಯ್ಯ ನಟರಾಜನ ಹಾಸಿಗೆಯನ್ನು ಸುತ್ತಿಟ್ಟು ಅಲ್ಲಿಲ್ಲಾ ಕಸ ಗುಡಿಸಿ ಬಾಗಿಲ ಮುಂದೆ ಗುಡಿಸಿ ಚೊಕ್ಕಟ ಮಾಡಿದ.

ನಟರಾಜ ಮುಖ ತೊಳೆದು ಕಾಫಿ ಮಾಡಿದ ಆ ವೇಳೆಗೆ ತಂಡದ ಕೂಲಿಯಾಳುಗಳು ಬಂದು ಹೊರಗಡೆ ನಿಂತಿದ್ದರು,

ಮೇಸ್ತ್ರಿಯ ಕೆಲಸಕ್ಕೆ ನೇಮಿಸಿಕೊಂಡಿದ್ದ ವಾಮನ ಭಟ್ಟ ಅತ್ತ ಉಡುಪಿ ಕಡೆಯವನೇ, ಗಿಡ್ಡ-ಗಿಡ್ಡಾಗಿ, ಬುಡ್ಡ-ಬುಡ್ಡಾಗಿ ಪೆದ್ದ ಅನ್ನಿಸಿಕೊಂಡಿದ್ದರೂ ನಂಬಿಕಸ್ತ. ಕೆಲಸದಾಳುಗಳಿಗೆ ಕೂಲಿ ಹಂಚಲು ಅವನ ಕೈಲಿ ಹಣ ಕೊಡುತ್ತಿದ್ದ ನಟರಾಜ ಕೂಡಿದ್ದನ್ನೇ ಕೂಡಿ ಕಳೆದದ್ದನ್ನೇ ಕಳೆದು ನಾಲ್ಕು ನಾಲ್ಕು ಸಲ ಹಣ ಎಣಿಸಿ ಕೊಡುತ್ತಿದ್ದ, ವಾಮನಭಟ್ಟ. ಇವನು ಉಡುಪಿ ಬ್ರಾಹ್ಮಣನಾದ್ದರಿಂದ ಅಡಿಗೆಯನ್ನು ಬಲು ರುಚಿಯಾಗಿ ಮಾಡುತ್ತಿದ್ದ. ಆದ್ದರಿಂದ ಅಡಿಗೆ ಕೆಲಸವನ್ನು ಅವನಿಗೆ ಒಪ್ಪಿಸಿದ ನಟರಾಜ,

ನಟರಾಜ ಕೆಲಸಕ್ಕೆ ಹೊರಟುಹೋದ ಮೇಲೆ ವಾಮನಭಟ್ಟ ರುಚಿಯಾಗಿ ಅಡಿಗೆ ಮಾಡಿ ಕ್ಯಾರಿಯರ್‌ನಲ್ಲಿ ಊಟ ತುಂಬಿಕೊಂಡು ನಟರಾಜ ಕೆಲಸ ಮಾಡುತ್ತಿದ್ದ ಕಡೆ ತೆಗೆದುಕೊಂಡು ಹೋಗಿ ಕೊಡುತ್ತಿದ್ದ. ಆದರೆ ಅವನ ಪ್ರೀತಿಯ ಹೆಂಡತಿಯನ್ನು ಬಿಟ್ಟಿರಲಾರದೆ ದಿನವೂ ಕೆಲಸ ಮುಗಿಸಿಕೊಂಡು ಅಲ್ಲಿಂದ ಐದು ಮೈಲಿ ಇದ್ದ ಬೇಳಾಲ ಹಳ್ಳಿಯ ತನ್ನ ಮನೆಗೆ ಹೊರಟು ಹೋಗುತ್ತಿದ್ದ. ಆದರೂ ತಾಯಿಯ ಕೈಯ್ಯಿನ ಊಟದಂತೆ ರುಚಿಯಾಗಿ, ಹಿತವಾಗಿ ಮಾಡಿಡುತ್ತಿದ್ದ ವಾಮನಭಟ್ಟನ ಮೇಲೆ ಅಪಾರ ಪ್ರೇಮ ನಟರಾಜನಿಗೆ.

ಲಕ್ಕಿ ಬಂದು ಹೋದ ಮೇಲೆ ಅವಳು ಹೇಳಿದ ಒಂದೊಂದು ಮಾತನ್ನೂ ಮೆಲುಕು ಹಾಕುತ್ತಿದ್ದ ನಟರಾಜ. "ನಾನು ಸೋಮನಾಯಕನ ಮನೆಯವಳು" ಎಂದಳಲ್ಲವೇ ? ...ಸೋಮನಾಯಕನಿಗೆ ಇಷ್ಟು ರೂಪವಂತೆ ಮಗಳಿರುವಳೇ ? ಎಂದು ಆಶ್ಚರ್ಯವಾಯಿತು.

ಈಗ ಸೋಮನಾಯಕನ ಮೇಲೆ ಹೆಚ್ಚು ಗಮನವುಂಟಾಯಿತು ನಟರಾಜನಿಗೆ. ಅವನು ಕೆಲಸ ಮಾಡುವ ಕಡೆ ಸ್ವಲ್ಪ ಹೊತ್ತು ನಿಂತು ಮಾತನಾಡಿಸಿ ಯೋಗಕ್ಷೇಮ ವಿಚಾರಿಸುತ್ತಿದ್ದ.

ಒಂದು ದೊಡ್ಡ ಮರವನ್ನು ಕಡಿದು ಉರುಳಿಸಿದ್ದ ಕಡೆ ಅದನ್ನು ಕೊಯ್ದು ತುಂಡುಗಳಾಗಿ ಮಾಡಬೇಕಾಗಿತ್ತು. ಸೋಮನಾಯಕನೂ, ಮತ್ತೊಬ್ಬನೂ ಗರಗಸದಿಂದ ಕೊಯ್ದು ತುಂಡುಹಾಕುತ್ತಿದ್ದರು.

ನಟರಾಜ ಅಲ್ಲಿಯೇ ಬಂದು ನಿಂತ. "ಏನು ಸೋಮನಾಯಕ ! ಬಹಳ ಹೊತ್ತಿನಿಂದ ಒಂದೇ ಸಮ ತುಂಡುಹಾಕುತ್ತಿದ್ದೀಯಪ್ಪಾ ! ಸ್ವಲ್ಪ ಸುಧಾರಿಸಿಕೊ ಊಟವಾದನಂತರ ಮಾಡಿದರಾಯಿತು"ಅಂದ.

ಇನ್ನೂ ಊಟ ಬಂದಿಲ್ಲ ದಣಿಯೋರ ! ಅದುವರೆಗೂ ಸುಮ್ಕೆ ಯಾಕ್ ಕಾಲ ಕಳಿಯೂನ ? ಮಾಡ್ತಾ ಇರ್ತೀವಿ.

ನಿಮ್ಮ ಹಳ್ಳಿಯಿಂದ ಬಲುದೂರ ಸರ್ವೆಮಾಡಿ ಬಿಟ್ಟಿದ್ದೀವಿ ಸೋಮಣ್ಣಾ ! ಈಗ ಎರಡು-ಮೂರು ಮೈಲಿ ಮೇಲಾಗುತ್ತದೆ. ಪಾಪ ! ಚಿಕ್ಕ ಮಕ್ಕಳು ನಡ್ಕೊಂಡು ಬರೋದು ಕಷ್ಟಾನೆ.

ಏನ್ ಮಾಡಾನ ಬುದ್ಧೀ ಇನ್ಮ್ಯಾಲೆ ಆ ಹೆಣ್ಣುಮಕ್ಕಳೇ ಬರಬೇಕು.

ಅಂದ ಹಾಗೆ ನಿನಗೆ ದೊಡ್ಡ ಹೆಣ್ಣು ಮಕ್ಕಳು ಇದ್ದಾರೇನಪ್ಪಾ ! ಸೋಮಣ್ಣಾ ನನ್ನ ಮಗಳೂ ಒಬ್ಬಳು ದೊಡ್ಡೋವ್ಳು ಅವ್ಳೆ ಬುದ್ಧೀ ಇನ್ನೊಬ್ಬಳು ನಮ್ಮ ತಂಗೆ ಮಗಳು, ಅವರಿಬ್ಬರೂ ಬಲು ಜೊತೆ ಕಣ್ ಬುದ್ಧೀ ..

ಹಾಲು ತಂದಿದ್ದ ಲಕ್ಕಿ ಸೋಮನಾಯಕನ ಮಗಳೋ ? ಅಥವಾ ಅವನ ತಂಗಿಯ ಮಗಳೋ ? ಎಂದು ಸಂದೇಹವಾಯಿತು ನಟರಾಜನಿಗೆ... ಈ ಅನುಮಾನವನ್ನು ಪರಿಹರಿಸಿ ಕೊಳ್ಳಬೇಕೆನ್ನಿಸಿತು. " ಯಾಕಪ್ಪಾ ! ಸೋಮಣ್ಣಾ ನಿನ್ನ ತಂಗಿ ಮಗಳನ್ನು ಇಲ್ಲೇ ಸಾಕ್ಕೊಂಡಿದೀಯಾ ?

ಇಲ್ಲ ಬದ್ಧಿ ! ಅವರು ಇಲ್ಲಿಗೆ ಬಂದು 2-3 ತಿಂಗಳಾಯತು ಅಷ್ಟೆ. ಪಾಪ! ನನ್ನ ತಂಗೆ ಗಂಡ ತೀರ್ಹೋಗ್ ಬುಟ್ಟು 7-8 ವರ್ಷವಾಯಿತು. ತಾಯಿ-ಮಗಳು ಬಲು ಕಷ್ಟ ಬೀಳ್ತಾ ಇದ್ರು ಇಲ್ಲೇ ಕರ್ ಕೊಂಡ ಬಂದ್ ಬುಟ್ಟೆಬುದ್ಧೀ....ಬುದ್ಧಿ ಹುಡುಗಿ ಅಂದ್ರೆ ಅಂಥಿಂಥಾ ಹುಡುಗಿ ಅಲ್ಲ ಬುದ್ಧೀ ಒಳ್ಳೆಲಕ್ಷ್ಮಿದೇವಿ ಇದ್ದಂಗೆ ಅವ್ಳೆ. ತುಂಬಾ ಘನ-ಗಂಭೀರದ ಹುಡುಗೀ ಬುದ್ಧೀ. ಇವತ್ತೇನಾರ ಆ

ಎಣ್ ಮಕ್ಳೇ ಊಟ ತಂದ್ರೂ ತರ್‌ಬೋದು, ಆಗ ನಮ್ ಲಕ್ಕೀನ ತೋರಿಸ್ತೀನಿ ತಡೀರಿ ಬುದ್ದೀ ...ಅಂದ.

ಸೋಮನಾಯಕನ ಮಾತಿನಿಂದ ಈ ದಿನ ಊಟ ಹೊತ್ತು ಲಕ್ಕಿಯೇ ಬಂದರೂ ಬರಬಹುದು ; ಎಂಬ ವಿಷಯ ತಿಳಿಯಿತು. ನಟರಾಜ ಮೈಯೆಲ್ಲಾ ಕಣ್ಣಾಗಿ ಕುತೂಹಲದಿಂದ ಹಳ್ಳಿಯ ಕಡೆಯ ದಾರಿಯತ್ತಲೇ ದೃಷ್ಟಿಯನ್ನು ಹಾಯಿಸಿದ.

ಹೌದು, ದೂರದಲ್ಲಿ ಕೆಂಪು ಉಡಿಗೆಯ ಹೆಣ್ಣು ತಲೆಯ ಮೇಲೆ ಕುಕ್ಕೆ ಹೊತ್ತು ಬರುವುದು ಕಾಣಿಸಿತು. ಜೊತೆಯಲ್ಲಿ ಇನ್ನೊಂದು ಹೆಣ್ಣು ಬರುತ್ತಿತ್ತು ತನ್ನ ಮನೆಗೆ ಲಕ್ಕಿ ಹಾಲು ತಂದ ದಿನದಿಂದ ನಟರಾಜನ ಮನಸ್ಸು ಅಲ್ಲೋಲ - ಕಲ್ಲೋಲವಾಗಿತ್ತು. ಮಾರನೆಯ ದಿನ ಪುನಃ ಲಕ್ಕಿಯೇ ಹಾಲು ತರಬಹುದೆಂದು ನಿರೀಕ್ಷಿಸಿದ, ಬದಲು ಸೋಮನಾಯಕನ ೬ ವರ್ಷದ ಮಗ ಚಾಂದು ಹಾಲನ್ನು ತಂದ. ಹೀಗೆ ಲಕ್ಕಿಯೇ ನಿರೀಕ್ಷಣೆಯಲ್ಲಿಯೇ ಒಂದುವಾರ ಕಳೆದಿದ್ದ ನಟರಾಜ.

ಈಗ ಊಟ ಹೊತ್ತು ಬರುವ ಹೆಣ್ಣು ಲಕ್ಕಿಯೆಂದು ತಿಳಿದಾಗ ತನ್ನನ್ನು ತಾನೇ ಮರೆತು ಆ ಕಡೆಯೇ ನೋಡುತ್ತಾ ನಿಂತ. ಬರಬರುತ್ತಾ ಹತ್ತಿರವಾದಂತೆಲ್ಲಾ ಲಕ್ಕಿಯ ನಡಿಗೆ ನಿಧಾನವಾಯಿತು. ಬಿಸಿಲಿನಲ್ಲಿ ನಡೆದು ಬಂದದ್ದರಿಂದ ಲಕ್ಕಿಯ ಮುಖ ಕೆಂದಾವರೆಯಂತಾಗಿದ್ದಿತು.

ಲಂಗವನ್ನು ಎತ್ತಿ ಮೇಲಕ್ಕೆ ಕಟ್ಟಿದ್ದುದರಿಂದ ಪಾದದಿಂದ ಮೊಣಕಾಲಿನವರೆಗಿನ ಭಾಗವು ಅಮೃತ ಶಿಲೆಯಲ್ಲಿ ಕಡೆದಂತೆ ಕಾಣುತ್ತಿತ್ತು. ನಟರಾಜನ ಕಣ್ಣಿಗೆ ಅಂದಿಗಿಂತ ಇಂದಿನ ಲಕ್ಕಿಯು ಇನ್ನೂ ಮನ ಮೋಹಕವಾಗಿ ಕಂಡಳು.

ಸೋಮನಾಯಕನು ಹೆಣ್ಣು ಮಕ್ಕಳು ಊಟ ತರುತ್ತಿರುವುದನ್ನು ಕಂಡು ಕೆಲಸವನ್ನು ನಿಲ್ಲಿಸಿ ಖುಷಿಯಿಂದ "ದಣಿಯೋರಾ ! ನಾ ಏಳ್ಲಿಲ್ವಾ ! ನಮ್ಮ ಹುಡಿಗೀರೇ ಊಟ ತರಬೋದು. ಎಂದು ಅದೋ ನೋಡಿ ಮಕ್ಕರೀ ಹೊತ್ತಿರೋಳೇ ನನ್ನ ತಂಗೆ ಮಗಳು ! ಲಕ್ಕೀ....ಎಂದು ಬೆಟ್ಟಿತ್ತಿ ತೋರಿಸಿದ. ತನ್ನ ಮಾವ ನಟರಾಜನೊಂದಿಗೆ ತನ್ನ ಕಡೆ ಕೈತೋರಿಸಿ ಏನೋ ಹೇಳುತ್ತಿರುವುದನ್ನು ನೋಡಿ ಲಕ್ಕಿಗೆ ಬಲು ಸಂಕೋಚವಾಯಿತು. ಅವಳು ನಿಂತಿದ್ದ

ಕಡೆಯಿಂದ ಮುಂದೆ ಹಾಸಿ ಒಂದು ದೊಡ್ಡ ಮರದ ನೆರಳಿನಲ್ಲಿ ಮುಕ್ಕರಿಯನ್ನು ಇಟ್ಟು "ಬಾರ್ ಮಾವ ! ಊಟಕ್ಕೆ" ಎಂದು ಕರೆದಳು.

ಸೋಮುನಾಯಕ ದಣಿಯರ ಕಡೆ ನೋಡಿ "ಇನ್ನು ನಮ್ಮ ಬುದ್ಧಿಯೋರಿಗೆ ಊಟನೇ ಬಂದಿಲ್ವಲ್ಲಾ ! ನಮಗೇನು ಉಣ್ಣಾಕೆ ಅವಸರ ? ಎಂದ.

ಸರಿ....ಹೋಗು....ಹೋಗು ಊಟ ಮಾಡು, ನೋಡಿಲ್ಲಿ ನಾನು ಫ್ಲಾಸ್ಕಿನಲ್ಲಿ ಕಾಫಿ ಹಾಕಿಕೊಂಡು ಬಂದಿರ್ತೀನಿ, ಆಗಾಗ ಕುಡೀತಾನೇ ಇರ್ತೀನಿ, ನೀವು ಊಟ ಮಾಡೀಪ್ಪಾ !....ಅಂದ ನಟರಾಜ.

ಸೋಮುನಾಯಕ ಕೈ ತೊಳೆದು ಊಟಕ್ಕೆ ಕೂತ, ಅವನ ಮಗಳು ಸೋನ್ಯಾ ಮುಕ್ಕರಿಯಿಂದ ತೆಗೆದು ಊಟಕ್ಕೆ ಇಡುತ್ತಿದ್ದಳು

ನಟರಾಜನು ಅವರಿಂದ ಒಂದು ಮಾರು ದೂರದಲ್ಲಿ ಹುಲ್ಲು ಹಾಸಿನಮೇಲೆ ಕಾಲು ನೀಡಿ ಅವರ ಕಡೆ ಬೆನ್ನು ಮಾಡಿ ಹೆಗಲಿಗೆ ತಗಲು ಹಾಕಿದ್ದ ಫ್ಲಾಸ್ಕಿನಿಂದ ಕಾಪಿ ಬಗ್ಗಿಸಿ ಕುಡಿದು ಎರಡು ಕೈಯನ್ನು ನೆಲಕ್ಕೆ ಊರಿ, ಹಿಂದಕ್ಕೆ ವಾಲಿ, ಆಕಾಶದತ್ತ ನೋಡುತ್ತಾ ಕುಳಿತ. ಲಕ್ಕಿಯನ್ನು ನೋಡುವ ಆಸೆಯಿದ್ದರೂ ಸಂಕೋಚದಿಂದ ಅತ್ತ ತಿರುಗಲಿಲ್ಲ.

ಲಕ್ಕಿ ತನ್ನ ಮಾವನಿಂದ ಮರೆಯಾಗಿ ಆ ದೊಡ್ಡ ಮರದ ಪಕ್ಕಕ್ಕೆ ಕುಳಿತು ಆಗಾಗ ನಟರಾಜನತ್ತ ನೋಡುತ್ತಿದ್ದಳು. ಅವಳೂ ನಟರಾಜನನ್ನು ಮತ್ತೊಮ್ಮೆ ಕಾಣುವ ಕಾತುರದಿಂದ ಮನೆಯಿಂದ ಹೊರಟು ಬಂದಿದ್ದಳು.

ನಟರಾಜ ಒಂದು ಬಾರಿಯಾದರೂ ತನ್ನತ್ತ ತಿರುಗಿ ನೋಡಬಾರದೇ ಅನ್ನಿಸಿತು ಅವಳಿಗೆ. ಇನ್ನೇನು ಮಾವನ ಊಟ ಆದಕೂಡಲೇ ಮುಂಕರಿ ಹೊತ್ತು ಹೊರಡಬೇಕು ಎಂದು ಕುತೂಹಲಳಾಗಿ ಅತ್ತಲೇ ನೋಡುತ್ತಿದ್ದಳು.

ಆಳುಗಳೆಲ್ಲಾ ದೂರ ದೂರ ಕುಳಿತು ಊಟ ಮಾಡುತ್ತಿದ್ದರು. ಅಕಸ್ಮಿಕವಾಗಿ ನಟರಾಜನ ಹಿಂದಿನಿಂದ ಭಾರಿ ಸರ್ಪ ಒಂದು ಹರಿದು ಬರುತ್ತಿದೆ. ಕೋಪದಿಂದ ಒಂದು ಬಾರಿ ಹೆಡೆ ಎತ್ತಿ ಬುಸುಗುಟ್ಟಿ ಮತ್ತೆ ನಟರಾಜನತ್ತಲೇ ಹರಿದು ಬರುತ್ತಿದೆ.

ಅವನು ಹಿಂದಕ್ಕೆ ಊರಿದ್ದ ಕೈ ಬಳಿ ಇನ್ನೇನು ಹಾವು ಬಂದಿತು ಎನ್ನುವಾಗ ಲಕ್ಕಿ ಮಿಂಚಿನ ವೇಗದಲ್ಲಿ ಓಡಿ ಬಂದು ಹಾವಿನ ತಲೆಯ ಭಾಗ

ವನ್ನು ತನ್ನ ಮುಷ್ಟಿಯಿಂದ ಬಿಗಿಯಾಗಿ ಹಿಡಿದು ಬಿಟ್ಟಳು. ಕತ್ತಿನ ಭಾಗವನ್ನು ಅಮುಕಿದ್ದುದರಿಂದ ಆ ಭಾರಿ ಹಾವು ವಿಲಿ ವಿಲಿ ಒದ್ದಾಡುತ್ತಾ ತನ್ನ ಶರೀರವನ್ನು ಪೂರಾ ಹಿಡಿದಿದ್ದ ಲಕ್ಕಿಯ ಕೈಗೆ ಸುತ್ತಿ ನುಲಿಯಿತು.

ಇಷ್ಟಾಗುವ ವೇಳೆಗೆ ಚಟ್ಟನೆ ನಟರಾಜನು ಎದ್ದು ನಿಂತು ಈ ಭಯಂಕರ ದೃಶ್ಯವನ್ನು ನೋಡಿದ. ಲಕ್ಕಿ ಹಿಡಿಯಲ್ಲಿದ್ದ ಆ ಭಾರಿ ಹಾವಿನ ತಲೆಯನ್ನು ನೋಡಿಯೇ ಅವನಿಗೆ ಮೂರ್ಛೆ ಬರುವಂತಾಯಿತು. ಅವನು "ಹೋ"…. ಎಂದು ವಿಕಾರವಾಗಿ ಕೂಗಿಕೊಂಡ. ಅಲ್ಲಿದ್ದವರೆಲ್ಲಾ ಬಂದು ನೆರೆದರು. ಹಾವಿನ ನುಲಿತದಿಂದ ಲಕ್ಕಿಯ ಕೈ ರಕ್ತ ಚಲನೆ ನಿಂತು ಬೆಂಡಾಗುತ್ತಾ ಬಂತು. ಕೈ ಸ್ವಲ್ಪ ಸಡಿಲಬಿಟ್ಟರೆ ಹಾವು ಲಕ್ಕಿಯನ್ನು ಕಚ್ಚಿ ಬಿಡುತ್ತದೆ. "ಬೇಗ ಹಾವನ್ನು ಕೊಲ್ಲಿ" ಎಂದು ಲಕ್ಕಿ ಕೂಗಿಕೊಂಡಳು.

ಆ ಕೆಲಸಗಾರರಲ್ಲಿ ಒಬ್ಬ ಬುದ್ಧಿವಂತ ಒಂದು ರೂಲು ದೊಣ್ಣೆಯಂಥ ಮರದ ತುಂಡನ್ನೆತ್ತಿಕೊಂಡು ಬಂದು ಹಾವಿನ ಬಾಯನ್ನು ಬಿಡಿಸಿ ಅದರೊಳಗೆ ಆ ದೊಣ್ಣೆಯನ್ನು ತೂರಿಸಿದ, ಗಂಟಲಿನವರೆಗೂ ಹೋಗುವಂತೆ ಚುಚ್ಚಿದ, ಈಗ ಹಾವು ಬಾಯನ್ನು ಮುಚ್ಚುವಂತೆಯೂ ಇಲ್ಲ, ಯಾರನ್ನೂ ಕಚ್ಚುವಂತೆಯೂ ಇಲ್ಲ. ಪ್ರಾಣಸಂಕಟದಿಂದ ಒದ್ದಾಡುವಂತಾಯಿತು.

ಲಕ್ಕಿಯ ಕೈಗೆ ಬಿಗಿದಿದ್ದ ಶರೀರ ಸಡಿಲವಾಯಿತು. ಲಕ್ಕಿ ಹಿಡಿಯನ್ನು ಬಿಟ್ಟಕೂಡಲೇ ಹಾವು "ದೊಪ್ಪೆಂದು" ನೆಲಕ್ಕೆ ಬಿತ್ತು. ಬಾಯೊಳಗೆ ದೊಣ್ಣೆಯನ್ನು ಚುಚ್ಚಿದ್ದುದರಿಂದ ಬಾಯಿ ಮುಚ್ಚಲಾರದೆ ಅಲ್ಲಿಯೇ ಹರಿದಾಡಿತು, ಎಲ್ಲರಿಗೂ ಇದೊಂದು ತಮಾಷೆಯಂತ್ತಿತ್ತು.

ಅಲ್ಲೇ ನೋಡುತ್ತಿದ್ದ ಸೋಮನಾಯಕ "ಏನು ತಮಾಸಿ ನೋಡ್ತೀರೋ ಒಂದೇಟು ಚಚ್ಚಿರೋ" ಅಂದ.

ಒಂದು ದೊಡ್ಡ ಮರದ ತುಂಡನ್ನೆತ್ತಿ ಹಾವಿನ ಮೇಲೆ ಹಾಕಿದರು, ಹಾವು ಸತ್ತಿತು, ಈಗ ಎಲ್ಲರೂ ಲಕ್ಕಿಯ ಕಡೆ ಗಮನಿಸಿದರು. ಹಾವಿನ ಬಿಗಿತದಿಂದ ಲಕ್ಕಿಯ ಬಿಳಿ ಕೈ ನೀಲಿ ಕಟ್ಟುಗಳನ್ನು ಹಾಕಿದಂತಾಗಿತ್ತು ಎಲ್ಲರೂ ಗಾಬರಿಯಿಂದ ಹಾವು ಕಚ್ಚಿಬಿಟ್ಟಿತೋ ?……. ಎಂದು ಶಂಕಿಸಿದರು.

ನಟರಾಜನಂತೂ ತನ್ನ ಮನಸ್ಸಿನ ಆತಂಕವನ್ನು ಹತ್ತಿಕ್ಕಲಾರದೇ ಲಕ್ಕಿಯ ಆ ಕೈಯನ್ನು ತನ್ನ ಕೈಗೆ ತೆಗೆದುಕೊಂಡು ನೋಡಿದ, ನೀಲಿಯ

ಕಟ್ಟು-ಕಟ್ಟಾಗಿರುವ ಆ ಕೈಯ್ಯನ್ನು ನೋಡಿ ಗಾಬರಿಯಿಂದ "ಅಯ್ಯೋ ಹಾವು ಕಚ್ಚಿಬಿಟ್ಟದೆ ಏನುಗತಿ ?" ಎಂದು ಕೂಗಿದ.

ಲಕ್ಕಿಯ ಕೈಯನ್ನು ಹಿಡಿದಿದ್ದ ನಟರಾಜನ ಕೈ ಕಂಪಿಸುತ್ತಿತ್ತು. ಲಕ್ಕಿಗೇನಾದರೂ ಅಪಾಯವಾಗಿಬಿಟ್ಟರೆ ? ಏನು ಗತಿ ? ಎಂಬ ಗಾಬರಿ ಮುಖದಲ್ಲಿ ಕಾಣುತ್ತಿತ್ತು.

ಆ ಹಿಡಿದಿದ್ದ ಕೈ ತನ್ನ ಯಾವುದೋ ಆತ್ಮೀಯ ಬಂಧುವಿನ ಸ್ಪರ್ಶದಂತೆ ಹೃದಯಂತರಾಳದಲ್ಲಿ ಮಮತೆಯನ್ನು ಮೂಡಿಸುತ್ತಿತ್ತು. ತನ್ನ ಪ್ರಾಣವನ್ನು ಉಳಿಸಲು ಹೋಗಿ ತಾನೇ ಮೃತ್ಯುವಿಗೆ ತುತ್ತಾದಳಲ್ಲಾ ! ಅಯ್ಯೋ !........ ಇವಳನ್ನು ಉಳಿಸುವುದಾದರೂ ಹೇಗೆ ? ಎಂದು ತಳಮಳಿಸುತ್ತಾ "ಬೇಗ ಯಾರಾದರೂ ಹಾವು ಕಚ್ಚಿದ್ದಕ್ಕೆ ಔಷಧಿ ತನ್ನಿ" ಎಂದು ಕೂಗಿಕೊಂಡ.

ಇಷ್ಟಾದರೂ ಲಕ್ಕಿ ಏನು ಆಗಿಲ್ಲದವಳಂತೆ ಸುಮ್ಮನೆ ಇದ್ದಳು. ನಟರಾಜನು ಹಿಡಿದಿದ್ದ ಕೈ ಮಾತ್ರ ರಕ್ತ ಚಲನೆಯಿಲ್ಲದೆ ಬೆಂಡಾಗಿ ಹೋಗಿತ್ತು ನಟರಾಜನ ಗಾಬರಿಯನ್ನು ನೋಡಿ ಲಕ್ಕಿಯೇ ಮೆಲ್ಲನೆ ಹೇಳಿದಳು" ನೀವು ಗಾಬರಿಯಾಗಬೇಡಿ ದಣಿಯೋರಾ ! ನನಗೆ ಹಾವು ಕಚ್ಚಿಲ್ಲ" ಎಂದು ತನ್ನ ಕೈಯ್ಯನ್ನು ಹಿಂದಕ್ಕೆ ತೆಗೆದುಕೊಂಡಳು.

ಲಕ್ಕಿಯ ಸಾಹಸಕ್ಕೆ ಅವಳನ್ನು ಎಲ್ಲರೂ ಕೊಂಡಾಡಿದರು. ಹಾವು ಬುಸ ಗುಟ್ಟುತ್ತಾ ರೋಷದಿಂದ ದಣಿಯರ ಕಡೆಗೇ ಬರುತ್ತಿತ್ತು. ಇನ್ನು ರವೆಷ್ಟು ಇದ್ದರೆ ದಣಿಯವರ ಕೈ ಕಚ್ಚಿ ಬಿಡುತ್ತಿತ್ತು, ಅದಕ್ಕೇನೋ ಸೇಡು ಮಡಗಿತ್ತು ಅಂತ ಕಾಣ್ತದೆ, ಸದ್ಯ ದೇವರೆ ಕಾಪಾಡಿದ. ಸದ್ಯ ನಾನು ಮಾಡಿದ್ದಾದರೂ ಏನು ? ಎಂದು ಗಂಭೀರವಾಗಿ ಹೇಳಿದಳು ಲಕ್ಕಿ.

ಅಲ್ಲಿದ್ದವರೆಲ್ಲಾ ಯೋಚಿಸಿದರು ಹಾವಿಗೆ ರೋಷ ಬರಲು ಕಾರಣವೇನು ಎಂದು. ಅವರಿಗೆ ಹೊಳೆಯಿತು. ಅಲ್ಲಿ ಕಡಿದು ಬಿದ್ದಿದ್ದ ದೊಡ್ಡ ಆಲದ ಮರದಲ್ಲಿ ಒಂದು ಆಳವಾದ ಪೊಟರೆಯಿತ್ತು, ಆ ಪೊಟರೆಯಲ್ಲಿ ಹಾವು ವಾಸ ಮಾಡುತ್ತಿತ್ತೆಂದು ಕಾಣುತ್ತೆ. ಅಲ್ಲಿಯೇ ನಿಂತು ಕಡಿಸುತ್ತಿದ್ದ ದಣಿಯವರ ಮೇಲೆ ಅದರ ಕಣ್ಣು ಬಿದ್ದಿರಬೇಕು. ಅಯ್ಯೋ ಬುದ್ಧಿ ! ಸರ್ಪ ಮತ್ಸರ ಮಡಗಿಬಿಟ್ಟರೆ ಆ ಮನುಷ್ಯನನ್ನ ಪೂರೈಸೋವರೆಗೂ ಬಿಡಾಕಿಲ್ಲ ಇವತ್ತು ಲಕ್ಕಿ ನೋಡದಿದ್ದರೆ ನಿಮ್ಮ ಕತೆ ಪೂರೈಸಿವೋಗ್ತಿತ್ತು" ಎಂದು ಹೇಳಿದರು ಆ

ಜನರು.

ಈ ಘಟನೆಯಾದಂದಿನಿಂದ ನಟರಾಜನಿಗೆ ಲಕ್ಕಿಯ ಮೇಲೆ ಇನ್ನೂ ಅಭಿಮಾನ ಹೆಚ್ಚಿತು. ತನ್ನ ಪ್ರಾಣವನ್ನೇ ಉಳಿಸಿದ ಆ ಹೆಣ್ಣನ್ನು ಹೇಗೆ ಗೌರವಿಸಬೇಕೆಂದು ತಿಳಿಯದಾಯಿತು.

ಕುಳಿತರೆ-ನಿಂತರೆ ಲಕ್ಕಿಯ ಚಿತ್ರವೆ ಕಣ್ಣುಮುಂದೆ ಸುಳಿಯುತ್ತಿತ್ತು. ಮತ್ತೆ-ಮತ್ತೆ ಅವಳನ್ನು ನೋಡಬೇಕೆಂಬ ಆಸೆ. ತಾನು ಇಷ್ಟು ದೊಡ್ಡ ಅಧಿಕಾರಿ ಆ ಲಂಬಾಣಿ ಹುಡುಗಿಯನ್ನು ಇಷ್ಟು ಹಚ್ಚಿಕೊಳ್ಳುವುದು ಅನುಚಿತವೆನ್ನಿಸುವುದು. ಆದರೆ ಅವನ ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ಅತ್ತಲೇ ಓಡುತ್ತಿತ್ತು.

ನಟರಾಜ ಪ್ರತಿದಿನ ತನ್ನ ಡೇರೆಯ ಹಿಂದೆ ಹರಿಯುವ ತಿಳಿ ನೀರಿನ ನದಿಯಲ್ಲಿ ಸ್ನಾನ ಮಾಡುವ ಪದ್ಧತಿ. ಮೇಲಿನಿಂದ ಇಳಿದ ಝರಿ ಹರಿದು ವಿಶಾಲವಾದ ಆ ಪ್ರದೇಶದಲ್ಲಿ ನಿಂತು ಒಂದು ಸರೋವರವನ್ನು ನಿರ್ಮಿಸಿ ಮುಂದೆ ಹರಿದು ಹೋಗುತ್ತಿತ್ತು.

ಆ ಸರೋವರದಲ್ಲಿ ನಟರಾಜ ಮನದಣಿಯ, ಮೈ ತಣಿಯ ಸ್ನಾನಮಾಡಿ ತೃಪ್ತಿಯಾಗುವ ವರೆಗೂ ಈಜಿ ಉತ್ಸಾಹದಿಂದ ಮನೆಗೆ ಬರುತ್ತಿದ್ದ.

ಅಂದು ನಟರಾಜ ಪ್ರತಿದಿನದಂತೆ ಸ್ನಾನಕ್ಕೆ ಇಳಿದಿದ್ದ ಆಗತಾನೇ ಸುರ್ಯೋದಯವಾಗಿ ಹೊಂಬಿಸಿಲು ಹರಡಿತ್ತು. ಹಕ್ಕಿ ಪಕ್ಷಿಗಳು ಮೈಕೊಡವಿ ರಕ್ಕೆ ಬಡಿದು ತಮ್ಮ ಭಾಷೆಯಲ್ಲಿ ಒಂದಕ್ಕೊಂದು ಆಹ್ವಾನವಿತ್ತು ಬಾನಿನತ್ತ ಹೊಸ ಹುರುಪಿನಿಂದ ಹಾರುತ್ತಾ ಹೊರಟವು.

ಆ ನಿಶಬ್ಧ ವಾತಾವರಣದಲ್ಲಿ ಇವುಗಳ ಇವಿ-ಧ್ವನಿ ಬಾನುಲಿಯಂತೆ ಪ್ರತಿಧ್ವನಿಸುತ್ತಿತ್ತು. ಅವುಗಳ ಗುಂಪು ಯಾವುದೋ ದಿಗ್ವಿಜಯಕ್ಕಾಗಿ ಹೊರಟಂತಿತ್ತು.

ನೀರಿಗಿಳಿದು ಮೈಗೆ ಸೋಪು ಹಚ್ಚಿ ಮೈ ಉಜ್ಜುತ್ತಿದ್ದ ನಟರಾಜ. ಆ ಹಕ್ಕಿಗಳ ಉತ್ಸಾಹವನ್ನು ತಲೆಯೆತ್ತಿ ನೋಡುತ್ತಾ ಹಾಗೆಯೇ ನಿಂತ. ಯಾರ ಅಧೀನವೂ ಇಲ್ಲದೇ, ಯಾರ ಅಡ್ಡಿಯೂ ಇಲ್ಲದೆ ತಾವೇ-ತಾವಾಗಿ ಸ್ವತಂತ್ರವಾಗಿ ಹಾರಾಡುವ ಹಕ್ಕಿಗಳ ಜೀವನವೇ ಮೇಲೆನ್ನಿಸಿತು.

ದೇವರು ಬಲು ರಸಿಕ, ಕಲೆಗಾರ. ಪ್ರಪಂಚವೆಂಬ ವಿಶಾಲ ಭೂಪಟದ

ಮೇಲೆ ತನ್ನ ಕುಂಚದಿಂದ ಬಣ್ಣವನ್ನು ಅದ್ದಿ ಚಿತ್ರ-ವಿಚಿತ್ರವಾದ ಚಿತ್ರಗಳನ್ನು ಬರೆದು ಅವಕ್ಕೆ ಜೀವ ಕೊಟ್ಟು ಆಡಿಸಿ ಪಾಡಿಸಿ ನೋಡಿ ಆನಂದ ಪಡುವ ಅವನ ಲೀಲಾ ವಿನೋದಕ್ಕೆ ನಟರಾಜ ಮಾರುಹೋದ. ದೈವದತ್ತವಾದ ಪ್ರಕೃತಿ ಸೌಂದರ್ಯವೇ ಚೆಂದವೆಂದು ಮೆಚ್ಚಿದ.

ಅವನ ಮನಸ್ಸಿನಲ್ಲಿಯೂ ಹರ್ಷ-ಉತ್ಸಾಹ ಮೂಡಿತು. ಲಕ್ಕಿಯ ನೆನೆಪು ನವ ಚೈತನ್ಯವನ್ನು ತಂದಿತು. ಅವಳನ್ನು ಧ್ಯಾನಿಸುತ್ತಲೇ ಸಣ್ಣ ಧನಿಯಿಂದ ಹಾಡಿದ, ಮೇಲಿನಿಂದ ಝಳ ಝಳನೆ ಧುಮುಕುತ್ತಿದ್ದ ತಿಳಿನೀರಿಗೆ ತಲೆಯೊಡ್ಡಿದ. ನೀರಿನಲ್ಲಿ ತೇಲಿ-ತೇಲಿ ಈಜಾಡಿದ.

ಅದೇ ಸಮಯ, ಆ ದಿನ ಹಾಲನ್ನು ಲಕ್ಕಿಯೇ ತಂದಿದ್ದಳು. ಡೇರೆ ಯಲ್ಲಿ ನಟರಾಜ ಇಲ್ಲದುದ್ದನ್ನು ನೋಡಿ, ಹೊರಕ್ಕೆ ಬಂದು ಅಲ್ಲಲ್ಲೇ ಹುಡು ಕಾಡಿದಳು.

ನದಿಯಲ್ಲಿ ನಟರಾಜ ಸ್ನಾನ ಮಾಡುತ್ತಿರುವುದು ದೂರದಿಂದ ಕಾಣಿಸಿತು ಲಕ್ಕಿಗೂ ನಟರಾಜನನ್ನು ಪದೇ ಪದೇ ನೋಡುವ ಆಸೆ. ಯಾವುದೋ ಕಣ್ಣಿಗೆ ಕಾಣದ ಕರುಳಿಗೆ ಹತ್ತಿರವಾದ ಆತ್ಮೀಯತೆ ಅವಳನ್ನು ಅವನತ್ತಲೇ ಸೆಳೆಯುತ್ತಿತ್ತು.

ಆ ದಿನ ನಟರಾಜ ತನಗಾಗಿ ಎಷ್ಟು ಗಾಬರಿ ಪಟ್ಟರು. ಹಾವು ಕಚ್ಚಿ ಬಿಟ್ಟಿತ್ತೇನೋ .. ಎಂಬ ಅನುಮಾನದಿಂದ ತನ್ನ ಕೈಯನ್ನು ಹಿಡಿದು "ಬೇಗ ಯಾರಾದರೂ ಔಷಧಿ ಹಾಕಿ" ಎಂದು ಹೇಗೆ ಕೂಗಿಬಿಟ್ಟರು ? ಅವರು ದಣಿ, ಒಬ್ಬ ಸಾಮಾನ್ಯ ಕೂಲಿಗಾರನ ಹೆಣ್ಣಿನ ಮೇಲೆ ಅವರಿಗೆ ಎಷ್ಟು ಮಮತೆ ? ಎಂದೆಲ್ಲಾ ಏನೇನೋ ಯೋಚಿಸಿದಳು ಲಕ್ಕಿ. ನಟರಾಜ ಹಿಡಿದಿದ್ದ ಆ ಕೈಯ್ಯನ್ನು ತನ್ನ ಕೆನ್ನೆಯ ಮೇಲೆ ಮೃದುವಾಗಿ ಸವರಿದಳು. ಏನೋ ಆನಂದದ ಅನುಭವವಾಯ್ತು. ನಟರಾಜ ತನ್ನ ಆತ್ಮೀಯ ನೆನಿಸಿತು.

ತಿಳಿನೀರಿನ ಮಧ್ಯೆ ಬಿಳಿ ಮೈಯ್ಯಿನ ನಟರಾಜ ಬಲು ಮೋಹಕವಾಗಿ ಕಂಡ. ತಾನು ಬಂದದ್ದು ಅವನಿಗೆ ತಿಳಿಯಬಾರದೆಂದು ಲಕ್ಕಿ ಒಂದು ಮರದ ಮರೆಯಲ್ಲಿ ನಿಂತು ನಟರಾಜನನ್ನು ನೋಡುತ್ತಾ ತನ್ನನ್ನು ತಾನೇ ಮರೆತಳು.

ನಟರಾಜ ಟವಲನ್ನು ಸುತ್ತಿಕೊಂಡು ಡೇರೆಯೊಳಕ್ಕೆ ಬಂದ. ಹಾಲಿನ ಚೊಂಬು ಮೇಜಿನ ಮೇಲಿಟ್ಟಿತ್ತು. ಆದರೆ ಯಾರು ತಂದದ್ದು ಎಂದು ಗೊತ್ತಾಗ

ಲಿಲ್ಲ. ಸೋಮನಾಯಕನ ಮಗನೇ ಬಂದಿರ ಬಹುದೆಂದು ಹಾಗೆಯೇ ಡೇರೆಯ ಹೊರಕ್ಕೆ ಬಂದು ಸುತ್ತಲು ನೋಡಿ ಲೋ !... ಚಂದೂ... ಚಂದೂ.... ಎಂದು ಎರಡು ಮೂರು ಬಾರಿ ಕೂಗಿದ.

ಯಾರ ಸುಳಿವೂ ಕಾಣಲಿಲ್ಲ ಒಳಕ್ಕೆ ಬಂದು ಪಂಚೆ ಉಟ್ಟು ನೆಟ್ ಬನಿನ್ ಹಾಕಿಕೊಂಡು ಕಾಫಿ ಮಾಡಲು ಒಳಗೆ ಸ್ಟೌವ್ ಹಚ್ಚಿದ. ಲಕ್ಕಿ ಮೆಲ್ಲನೆ ಡೇರೆ ಒಳಕ್ಕೆ ಬಂದಳು. ಹಾಗೂ ಅವಳ ಕಾಲಿನ ಗೆಜ್ಜೆ ಸದ್ದಾಯಿತು. ನಟರಾಜ ಹೊರಕ್ಕೆ ಬಂದು ನೋಡಿದ ಲಕ್ಕಿ ತಲೆ ತಗ್ಗಿಸಿ ನಿಂತಳು. ಒಂದು ನಿಮಿಷ ನಟರಾಜ ಸ್ಥಗಿತಗೊಂಡ, ನಂತರ "ಓ... ನೀನೇ ಬಂದಿದ್ದೀಯಾ ? ಕಾಲು ಚೊಂಬು ಇಟ್ಟು ಎಲ್ಲಿ ಹೋಗಿದ್ದೆ ? ಎಂದು ಅಲ್ಲಿಯೇ ಟೇಬಲ್ ಮೇಲೆ ಇದ್ದ ಟವಲನ್ನು ತೆರವಾಗಿದ್ದ ತನ್ನ ತೋಳಿನ ಮೇಲೆ ಹಾಕಿಕೊಂಡ.

ಲಕ್ಕಿ ಭೂಮಿಯನ್ನೇ ನೋಡುತ್ತಾ "ಒಳೀಕ್ ಬಂದು ನೋಡಿದೆ ನೀವು ಕಾಣ್‌ಲಿಲ್ಲ !... ಅದಕ್ಕೇ ಚೊಂಬು ಮಡಗಿ ಬುಟ್ಟು ಆಚೆ ಕಡೇನೇ ನಿಂತಿದ್ದೆ" ಅಂದಳು.

ನಟರಾಜನನ್ನು ಕಣ್ಣು ತುಂಬಾ ನೋಡಬೇಕೆಂಬ ಆಸೆಯಿಂದಲೇ ಬಂದಿದ್ದಳು ಲಕ್ಕಿ. ಆದರೆ ಅವನು ತೀರ ತನ್ನ ಸನಿಹ ನಿಂತಾಗ ತಲೆ ಎತ್ತದಾದಳು.

ಆಗತಾನೆ ಸ್ನಾನ ಮಾಡಿ ಬಂದಿದ್ದ ನಟರಾಜನ ಮೈಯ್ಯಿಂದ ಮೈಸೂರು ಗಂಧದ ಸೋಪಿನ ವಾಸನೆ ಘಂ.... ಎಂದು ಬರುತ್ತಿತ್ತು. ಲಕ್ಕಿಗೆ ಈ ರೀತಿಯ ವಾಸನೆ ಹೊಸ ಅನುಭವ. ಅವಳನ್ನು ಯಾವುದೋ ಸುಖ ಸ್ವಪ್ನದತ್ತ ಒಯ್ಯುವಂತ್ತಿತ್ತು.

ಅವಳು ಸ್ವಲ್ಪ ತಲೆಯೆತ್ತಿ ತನ್ನ ಬೊಗಸೆ ಗಣ್ಣುಗಳಿಂದ ನಟರಾಜನತ್ತ ನೋಡಿದಳು. ನಟರಾಜ ರೆಪ್ಪೆ ಬಡಿಯದೆ ಅವಳನ್ನೇ ನೋಡುತ್ತಿದ್ದುದರಿಂದ ಕಣ್ಣು-ಕಣ್ಣುಗಳು ಕೂಡಿದುವು.

ಹೆಣ್ಣಿಗೆ "ಮೃಗನಯನೆ" ಎಂಬ ವರ್ಣನೆ ಬಂದಿರುವುದು ಲಕ್ಕಿಯಿಂದಲೇ ಇರಬೇಕು ; ಎನ್ನಿಸಿತು ನಟರಾಜನಿಗೆ.

ಮೌನದಲ್ಲಿಯೇ ಎಷ್ಟು ನಿಮಿಷಗಳು ನಡಿಯಿತೋ ಇಬ್ಬರಿಗೂ ಅರಿವಿಲ್ಲ. ಲಕ್ಕಿಯೇ ಮೌನ ಮುರಿದು ಮಾತನಾಡಿದಳು. "ಹಾಲು ಬಗ್ಗಿಸಿಕೊಂಡು ಚೊಂಬು ಕೊಡೀ.... ದಣಿಯೋರಾ" ಅಂದಳು.

ನಟರಾಜ ಬೆಚ್ಚಿ "ಹಾಂ !.... ಹಾಂ.... ! ಇದೋ ಬಂದೆ" ಎಂದು ಒಳಗೆ ಹೋದ, ಸ್ಟೌವಿನಲ್ಲಿ ಕಾಫಿ ನೀರು ಎಷ್ಟೋ ಹೊತ್ತಿನಿಂದ ಮರಳುತ್ತಲೇ ಇತ್ತು "ತನಗೇನು ಮಂಕು ಬಡಿಯಿತು?"

ಅಂದುಕೊಂಡು ಪುಡಿಹಾಕಿ ನೀರು ಬಗ್ಗಿಸಿದ. ಹಾಲಿನ ಚೊಂಬಿಗಾಗಿ ಹೊರಗೆ ಬಂದ. ಲಕ್ಕಿ ತಲೆ ತಗ್ಗಿಸಿ ನಿಂತೇ ಇದ್ದಳು.

"ತಾನೆಂಥಾ ಅನಾಗರಿಕ ?...ಅನ್ನಿಸಿತು ನಟರಾಜನಿಗೆ. "ಬಾ ಲಕ್ಕೀ ಈ ಕಡೆ ; ಇಲ್ಲಿ ಕುಳಿತುಕೋ, ಕಾಫಿ ಮಾಡಿದೀನಿ, ಇವತ್ತು ನೀನೂ ಸ್ವಲ್ಪ ಕುಡಿದು ಹೋಗುವಿಯಂತೆ" ಅಂದ.

ಲಕ್ಕಿಗೆ ಮೈಯೆಲ್ಲಾ ಬೆವರಿಟ್ಟಂತಾಯಿತು. ಗಾಬರಿಯಿಂದ "ಬೇಡಿ.... ಬೇಡಿ ... ಬುದ್ಧೀ ನಾ ಹೋಯ್ತೀನಿ ಚೊಂಬು ಕೊಡಿ" ಎಂದು ಬಡಬಡಿಸಿದಳು.

ನಟರಾಜ ಅವಳ ಹತ್ತಿರ ಬಂದು "ಯಾಕೆ ಲಕ್ಕೀ ಅಷ್ಟು ಗಾಬರಿಯಾಗ್ತೀ ? ನನ್ನ ನೋಡಿದರೆ ಅಷ್ಟೊಂದು ಭಯ ಆಗುತ್ತಾ ? ಅಂ ?.... ಹೇಳು ... ಅಂದ.

ಲಕ್ಕಿ ಬಾಯಲ್ಲಿ ಮಾತನಾಡದೆ, "ಇಲ್ಲ" ಎನ್ನುವಂತೆ ತಲೆಯಾಡಿಸಿದಳು.

ಮತ್ತೆ ? ಬಾ ಇಲ್ಲಿ ಕುಳಿತುಕೋ ; ಎಂದು ಲಕ್ಕಿಯ ಕೈ ಹಿಡಿದು ಕರೆತಂದು ಮಂಚದ ಮೇಲೆ ಕುಳ್ಳಿರಿಸಿದ.

ಮಂತ್ರ ಮುಗ್ಧಳಂತೆ ಲಕ್ಕಿ ಸುಮ್ಮನೇ ಇದ್ದಳು. ನಟರಾಜನ ಸ್ಪರ್ಶದಿಂದ ಮೈ ಪುಳಕಿತವಾಯಿತು.

ಟೇಬಲ್ ಮೇಲಿದ್ದ ರೇಡಿಯೋವನ್ನು ಆನ್ ಮಾಡಿ ಕಾಫಿ ತರಲು ಒಳಗೆ ಹೋದ ನಟರಾಜ.

ಲಕ್ಕಿಗೆ ಇವೆಲ್ಲಾ ಅಪೂರ್ವ ಅನುಭವ. ತಾನು ಯಾವುದೋ ಸ್ವರ್ಗ ಲೋಕದಲ್ಲಿರುವಂತೆ ತೋರಿತು. ಆದರೂ ಗಾಬರಿ ! ಇದೇನು ? ಅವರು ದಣಿಗಳು, ತಾನು ಕೂಲಿಯಾಳ ಮನೆ ಹೆಣ್ಣು ! ಅವರ ಮಂಚದ ಮೇಲೆ ಕುಳಿತುಕೊಳ್ಳುವುದು ಸರಿಯೇ ? ಎನ್ನಿಸಿತಟ್ಟನೆ ಎದ್ದು ನಿಂತಳು.

ನಟರಾಜ ಎರಡು ಲೋಟದಲ್ಲಿ ಕಾಫಿ ಹಾಕಿ ತಂದ, ಲಕ್ಕಿಯ ಕೈಗೆ ಒಂದು ಲೋಟ ಕೊಡುತ್ತಾ "ಕುಳಿತುಕೊಂಡು ಕುಡಿ" ಅಂದ. ತಾನು ಬಿಸಿ ಬಿಸಿಯಾದ ಕಾಫಿಯನ್ನು ಕುಡಿಯುತ್ತಾ ಅಲ್ಲೇ ಕುರ್ಚಿಯಲ್ಲಿ ಕುಳಿತ.

ಈಗ ಲಕ್ಕಿಗೆ ಉಭಯ ಸಂಕಟಕ್ಕಿಟ್ಟುಕೊಂಡಿತು. ಹೋಗುವಂತೆಯೂ ಇಲ್ಲ, ಇರುವಂತೆಯೂ ಇಲ್ಲ. ಆ ಬಿಸಿ ಕಾಫಿ ಲೋಟವನ್ನು ಅಲ್ಲೇ ಟೇಬಲ್ ಮೇಲೆ ಇಟ್ಟು "ನನಗೆ ಕಾಫಿ ಕುಡಿದು ಪಾಟಾನೇ ಇಲ್ಲ; ದಣಿಯೋರಾ ! ಬೇಡಿ ನಂಗೆ" ಸಂಕೋಚದಿಂದ ಅಂದಳು.

"ಇವತ್ತು ಕುಡಿದುನೋಡು ಏನಾಗುತ್ತೇ ಅಂತ ? ಲೋಟವನ್ನೆತ್ತಿ ಪುನಃ ಲಕ್ಕಿ ಕೈಗೆ ಕೊಟ್ಟು, ಹೂಂ ... ಕುಡಿದು ಬಿಡು ಮತ್ತೆ . ಎಂದು ಬಲವಂತ ಮಾಡಿದ.

ನಟರಾಜನ ಆತ್ಮೀಯತೆಗೆ ಲಕ್ಕಿಯ ಮನ ಮಾರು ಹೋಯಿತು. ನಿಂತೇ ಕಾಫಿ ಕುಡಿದಳು. ಹದವಾಗಿ ಪುಡಿ-ಸಕ್ಕರೆ ಹಾಲು, ಬೆರೆಸಿದ ಕಾಫಿಗೆ ನಟರಾಜನ ಅಕ್ಕರೆಯೂ ಸೇರಿ ಬಲು ರುಚಿಯನ್ನು ಕೊಟ್ಟಿತು.

ಕುಡಿದ ಲೋಟವನ್ನು ತೊಳೆದಿಡಲು ನೀರಿಗಾಗಿ ಅತ್ತಿತ್ತ ಹುಡುಕಾಡಿದಳು. ಅವಳ ಇಂಗಿತವನ್ನರಿತ ನಟರಾಜ "ನೀನು ತೊಳೆಯಬೇಕಾಗಿಲ್ಲ, ಅಲ್ಲಿಡು, ನಮ್ಮ ರಾಮಯ್ಯ ಬಂದು ತೊಳ್ಕೋತಾನೆ. ಎಂದು ಹೇಳಿ ತಾನು ಕುಡಿದ ಲೋಟವನ್ನೂ ಅವಳ ಕೈಯ್ಯಲ್ಲಿದ್ದ ಲೋಟದೊಳಕ್ಕೇ ಹಾಕಿದ.

ಕೈಗೆ ಕೈ ಸೋಂಕಿ ಲಕ್ಕಿಯ ಎದೆ "ಝಲ್" ಎಂದಿತು. ಸಾವರಿಸಿಕೊಂಡು ಲೋಟವನ್ನು ಕೆಳಗಿಟ್ಟಳು. ಅವಳ ಘನತೆ-ಗಾಂಭೀರ್ಯವನ್ನು ನೋಡಿ ನಟರಾಜನಿಗೆ ಆಶ್ಚರ್ಯವಾಯಿತು.

ಇವಳ ಗ್ರಾಮೀಣ ಭಾಷೆಯೊಂದನ್ನು ಬಿಟ್ಟರೆ, ಉತ್ತಮ ಜಾತಿಯವರ ಮನೆತನದಲ್ಲಿ ಹುಟ್ಟಿ ಬೆಳೆದ ಸುಸಂಸ್ಕೃತಿಯ ಹೆಣ್ಣಿಗಿಂತ ಯಾತರಲ್ಲಿಯೂ ಕಡಿಮೆಯಿಲ್ಲ ಲಕ್ಕಿ, ಎಂದುಕೊಂಡ.

ಆ ನಿಶಬ್ಧ ವಾತಾವರಣದಲ್ಲಿ ನಟರಾಜನೆದುರಿಗೆ ತಾನು ಒಂಟಿಯಾಗಿರುವುದು ಅರಿವಾಗಿ ಲಕ್ಕಿ ಕಳ-ವಳಗೊಂಡಳು.

ಕೂಡಲೇ ಟೇಬಲ್‌ಮೇಲೆ ಇಟ್ಟಿದ್ದ ಹಾಲಿನ ಚೊಂಬು ಹಿಡಿದು ಹೊರಟು ನಿಂತಳು ಲಕ್ಕಿ.

ನಟರಾಜ ಏನೋ ಜ್ಞಾಪಿಸಿಕೊಂಡವನಂತೆ "ತಾಳು .. ತಾಳು ಲಕ್ಕೀ ! ಒಂದು ನಿಮಿಷ, ಇರು ಬಂದೆ" ಎಂದು ಹೇಳಿ ಒಳಗೆ ಹೋಗಿ ಟ್ರಂಕು ತೆಗೆದು ಅದರಿಂದ ಕೆಲವು ರೂಪಾಯಿ ನೋಟುಗಳನ್ನು ತಂದು "ಇದೋ ಲಕ್ಕೀ ಇದನ್ನು

ತೆಗೆದುಕೋ ನಿನಗೆ ಬೇಕಾದ ಸೀರೆಯನ್ನೋ...ಬಟ್ಟೆಯನ್ನೋ ತೆಗೆದುಕೋ ಅವತ್ತು ಹಾವಿನಿಂದ ಕಾಪಾಡಿ ನನ್ನ ಪ್ರಾಣವನ್ನೇ ಉಳಸಿದ್ದೀ....ಆವತ್ತಿನಿಂಧ ನಿನಗೆ ಕೊಡಬೇಕೂ ಅಂತಿದ್ದೆ" ಎಂದು ಮುಂದೆ ನೀಡಿದ.

ಈಗ ಲಕ್ಕಿಗೆ ತೀರಾ ಗಾಬರಿಯಾಯಿತು. ಅಯ್ಯೋ! ಅಯ್ಯೋ! ಈಟೊಂದು ದುಡ್ಡು ನನಗೆ ಯಾಕೆ? ನಾನು ಮುಟ್ಟೋಕೂ ಇಲ್ಲ. ಬೇಡಿ.... ಬೇಡಿ ಎಂದು ಹೊರಟಳು. ಲಕ್ಕಿಗೆ ಅಡ್ಡ ಬಂದು ನಟರಾಜ "ಇದೋ ನೋಡು, ಇದನ್ನ ತಕೋ ಪರವಾಗಿಲ್ಲ" ಅವತ್ತು ನನ್ನನ್ನು ಕಾಪಾಡಿದ್ದಕ್ಕೆ ಕೋಟಿ ಹಣ ಕೊಟ್ಟರೂ ಸಾಲದು ಇದು ಯಾವ ಮಹಾ? ಅಂದ.

ಯವ್ವಾ! ನಾ ಕೆಟ್ಟೆ. ನಿಮಗೋಸ್ಕರ ನಾನು ಪರಾಣನಾರ ಕೊಟ್ಟೇನು ಬುದ್ದೀ ಅದಕ್ಕಾಗಿ ಈ ಹಣಮಾತ್ರ ಮುಟ್ಟಾಕಿಲ್ಲಿ ಅಂದವಳೇ ಅಲ್ಲಿ ನಿಲ್ಲದೆ ಹೊರಟೆ ಬಿಟ್ಟಳು.

"ಭಲೇ! ಶರಾರತ್ತು ಹುಡುಗಿ" ಅಂದುಕೊಂಡ ನಟರಾಜ ಲಕ್ಕಿಯ ನಡೆ, ನುಡಿ, ಜಾಣ್ಮೆ, ಚೆಲುವು ಎಲ್ಲಾ ನಟರಾಜನಿಗೆ ಏನೋ ಮಧುರ ಬಾಂಧವ್ಯವನ್ನು ಕಲ್ಪಿಸಿಕೊಡುತ್ತಿತ್ತು. ಏನೋ ಮೋಡಿ ಹಾಕಿದಂತಿತ್ತು.

ಅವಳು ಹೊರಟು ಹೋದಮೇಲೆ ತನ್ನ ಮನೆ ಮನಸ್ಸು ಎಲ್ಲಾ ಶೂನ್ಯವಾದಂತೆ ಭಾಸವಾಗುತ್ತಿತ್ತು. ಮತ್ತೆ ಅವಳನ್ನು ಯಾವಾಗ ಕಂಡೇನೊ ಎಂಬ ಕಾತುರ! ಕೆಲಸದ ಕಡೆಗೆ ಮನಸ್ಸು ನಿಲ್ಲಲೊಲ್ಲದು. ಮನೆಗೆ ಬಂದರೂ ನೆಮ್ಮದಿಯಿಲ್ಲ. ಕಡೆಗೆ ರಾತ್ರಿಯೆಲ್ಲಾ ಎಚ್ಚೆತ್ತು ಅವಳ ಚಿಂತೆಯಲ್ಲೇ ಬೆಳಕು ಹರಿಸುತ್ತಿದ್ದ.

ತನ್ನ ಮನಸ್ಸನ್ನು ಸೆಳೆದ ಈ ಲಂಬಾಣಿ ಹುಡುಗಿಯ ಬಾಂಧವ್ಯ ಜನ್ಮ ಜನ್ಮಾಂತರದಿಂದ ಬಂದದ್ದೂ ಅನ್ನಿಸುತ್ತಿತ್ತು. ಅವಳನ್ನು ನೋಡಿದರೆ ಏನೋ ಒಂದು ವಿಧವಾದ ಆತ್ಮೀಯತೆ ಯುಂಟಾಗುತ್ತಿತ್ತು.

ಎಂದಾದರೂ ಯಾವ ಹೆಣ್ಣಿಗೂ ತಾನು ಮಾರು ಹೋದವನಲ್ಲ. ಅಷ್ಟೇಕೆ? ತನಗಾಗಿಯೇ ಹೆಸರಿಟ್ಟು ಕಾದು ಕುಳಿತಿರುವ ಮುದ್ದು ಸುಶೀಲಳನ್ನೂ ಕೂಡ ತಾನು ಕಣ್ಣೆತ್ತಿ ನೋಡಿದವನಲ್ಲ.

ಈಗ ಈ ಲಂಬಾಣಿ ಹುಡುಗಿ ನನ್ನ ಮನಸ್ಸನ್ನು ಪೂರಾ ಆಕ್ರಮಿಸಿ ಬಿಟ್ಟಳಲ್ಲಾ! ಎಂದು ಚಿಂತೆಗೊಳಗಾಗುತ್ತಿದ್ದ. "ಕಣ್ಣಿಗೆ ದೂರವಾಗಿದ್ದರೂ,

ಕರುಳಿಗೆ ಹತ್ತಿರ" ಎಂಬ ಗಾದೆಯಂತೆ, ಲಕ್ಕಿಯೂ ತನ್ನ ಅಕ್ಕನ ಕರುಳಿನ ಸಂಬಂಧ ಎಂಬುದು ನಟರಾಜನಿಗೆ ಹೇಗೆ ಅರಿವಾಗಬೇಕು ?

ನಟರಾಜ ಮಂಗಳೆಯ ಒಬ್ಬನೇ ಒಬ್ಬ ತಮ್ಮ. ನಟರಾಜನ ವಯಸ್ಸಾದ ತಂದೆ ತಾಯಿಯರು ಬೆಂಗಳೂರಿನಲ್ಲಿ ವಾಸವಾಗಿದ್ದರು ಅವರು ಮಗನಿಗೆ ಪ್ರತಿಯೊಂದು ಕಾಗದದಲ್ಲಿಯೂ ಅವನ ಮದುವೆಯ ಪ್ರಸ್ತಾಪವನ್ನೇ ಬರೆಯುತ್ತಿದ್ದರು. "ನಿನ್ನ ತಾಯಿಗೂ ವಯಸ್ಸಾಯಿತು. ಅವಳಿಗೆ ನಿನ್ನ ಮದುವೆಯದೇ ಹಂಬಲ. ವಯಸ್ಸಿಗೆ ಬಂದ ಹೆಣ್ಣು ಮಕ್ಕಳನ್ನು ಎಷ್ಟುದಿನ ಹಾಗೆಯೇ ಅವರು ತಾನೆ ಇಟ್ಟು ಕೊಳ್ಳಲು ಸಾಧ್ಯ ? ಸುಶೀಲಳನ್ನು ಮದುವೆ ಯಾಗುವುದರಲ್ಲಿ ನಿನಗೆ ಯಾವ ಅಭ್ಯಂತರವೂ ಇಲ್ಲವಷ್ಟೇ ? ಆದಷ್ಟು ಬೇಗ ಬಂಧು ಮಂಗಳೆಯ ಮನೆಯಲ್ಲಿ ಮದುವೆ ಮಾತು ಕತೆ ತೀರ್ಮಾನಮಾಡಿಕೊಂಡು ಹೋಗು ಎಂದು ತಂದೆ ಕಾಗದ ಬರೆದಿದ್ದರು.

ನಟರಾಜ ಮೊದಲಿನಿಂದಲೂ ತಂದೆ ತಾಯಿಯರಲ್ಲಿ ವಿಧೇಯ. ಅವರ ಮಾತಿಗೆ ಎದುರಾಡಿದವನೇ ಅಲ್ಲ. ಬಡತನದಲ್ಲಿ ಕಷ್ಟಪಟ್ಟು ತನ್ನನ್ನು ಓದಿಸಿ ಮುಂದೆ ತಂದಿದ್ದ ತಂದೆ ತಾಯಿಯರನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂಬ ಮಮತೆ ಇತ್ತು.

ತನ್ನ ಅಕ್ಕ ಮಂಗಳೆಯೆಂದರೆ ಅವನಿಗೆ ತುಂಬಾ ಅಕ್ಕರೆ. ಸುಶೀಲೆಯನ್ನು ತನಗೇ ಕೊಡಬೇಕೆಂದು ಅಕ್ಕ-ಭಾವ ಅಭಿಪ್ರಾಯ ವಿಟ್ಟಿರುವುದು ಅವನಿಗೆ ಗೊತ್ತು.

ಈ ವಿಚಾರವಾಗಿ ಮನೆಯಲ್ಲಿ ಮಾತು-ಕತೆ ನಡೆಯುತ್ತಿದ್ದಾಗ ನಟರಾಜ ಯಾವುದೊಂದಕ್ಕೂ ಬಾಯಿ ಹಾಕದೆ ತಟಸ್ಥನಾಗಿರುತ್ತಿದ್ದ. ರೂಪ, ವಿದ್ಯೆ, ಹಣ, ಎಲ್ಲದರಲ್ಲಿಯೂ ಸರಿಯಾಗಿದ್ದ ಸುಶೀಯನ್ನು ಮಾಡಿಕೊಳ್ಳುವುದರಲ್ಲಿ ಯಾವ ತೊಂದರೆಯೂ ಇಲ್ಲ. ಆ ಕಾಲ ಬಂದಾಗ ನೋಡಿಕೊಳ್ಳೋಣ, ಎಂದು ಸುಮ್ಮನಾಗಿದ್ದ ! ನಟರಾಜ.

ಈಗ ತಂದೆ ಮೇಲಿಂದ-ಮೇಲೆ ಕಾಗದ ಬರೆದಾಗ ಮನಸ್ಸಿನಲ್ಲಿ ಸುಶೀಯ ಜೊತೆಗೆ ಇನ್ನೊಂದು ಹೆಣ್ಣು ಬಂದು ನಿಲ್ಲುತ್ತಿತ್ತು. ಅದು ಲಕ್ಕಿಯ ರೂಪ.

ಎರಡು ಹೆಣ್ಣನ್ನೂ ತನ್ನ ಮನಸ್ಸಿನ ತಕ್ಕಡಿಯಲ್ಲಿಟ್ಟು ತೋಲನ ಮಾಡಿದಾಗ ಯಾವ ಕಡೆಗೆ ವಾಲುತ್ತದೆ ?

ಈ ಪ್ರಶ್ನೆಗೆ ಉತ್ತರ ಬಲು ಸುಲಭವಾಗಿ ದೊರಕುತ್ತಿತ್ತು ಲಕ್ಕಿಯ ಕಡೆಯೇ ವಾಲುತ್ತಿದೆ. ಸಂದೇಹವೇ ಇಲ್ಲ.

ಆದರೆ ? ಮನಸ್ಸು ವಾಲುವ ಕಡೆ ತಾನು ವಾಲುವಂತಿಲ್ಲ. ಲಕ್ಕಿಯೊಡನೆ ಜೀವನ ಸಾಗಿಸುವುದು ಕನಸಿನ ಮಾತು. ಅಂದ ಮೇಲೆ ಲಕ್ಕಿಯನ್ನು ಮರೆತು ಬಿಡಬೇಕು.

ಈ ಯೋಚನೆ ಬಂದ ಕೂಡಲೇ ನಟರಾಜನಿಗೆ ಪ್ರಪಂಚವೇ ಶೂನ್ಯವಾಗಿ ತೋರಿತು.

ಏಕೋ ಲಕ್ಕಿಯಿಲ್ಲದೇ ತನ್ನ ಜೀವನ " ಬರಡು " ಎನ್ನಿಸಿತು. ಮನಸ್ಸಿನಲ್ಲಿ ಆಂದೋಲನ ಎಟುಕದ ಹಣ್ಣಿಗೆ ಹಟ ಮಾಡುವ ಮಗುವಿನಂತೆ ಲಕ್ಕಿಗಾಗಿ ಮನಸ್ಸು ಮೊಂಡು ಮಾಡುತ್ತಿತ್ತು.

ಆದರೆ ಅವತ್ತಿನಿಂದ ನನಗಾಗಿ, ಸುಶೀಲಳನ್ನು ಮೀಸಲಾಗಿಟ್ಟು ಕಾದು ಕುಳಿತಿರುವ ಅಕ್ಕನ ಮನಸ್ಸನ್ನು ಹೇಗೆ ನೋಯಿಸಲಿ ? ಈ ಲಂಬಾಣಿಯನ್ನು ಮದುವೆಯಾಗುತ್ತೇನೆಂದು ಅಪ್ಪ-ಅಮ್ಮನ ಎದುರಿಗೆ ಹೇಳುವ ಧೈರ್ಯವಾದ್ದರೂ ತನಗೆಲ್ಲಿದೆ ? ಈ ರೀತಿ ಏನೇನೋ ಮನಸ್ಸು ಹೋದಂತೆ ಯೋಚಿಸುತ್ತಾ ನಟರಾಜ ಮಂಚದ ಮೇಲೆ ಮಲಗೇ ಇದ್ದ.

ಕೆಲಸಕ್ಕೆ ಹೋಗುವ ಹೊತ್ತಾದರೂ ಏಕೋ ಮನಸ್ಸು ಮುದುಡಿ ಕೊಂಡಿತ್ತು. ತಂಡದ ಆಳುಗಳು ಹೊರಗಡೆ ಬಂದು ಕಾದು ನಿಂತಿದ್ದರು. ಅವರ ಮುಂಖಿಡ ಬಗ್ಗಿ ನೋಡಿ, ಇನ್ನು ತಮ್ಮ 'ಯಜಮಾನ ಮಲಗಿರುವುದನ್ನು ಕಂಡು, ಅವರಿಗೆ ತೊಂದರೆ ಮಾಡಿ ಎಬ್ಬಿಸಬಾರದೆಂದು ನಿಶ್ಯಬ್ದವಾಗಿ ಕಾದು ಕುಳಿತ್ತಿದ್ದರು.

ಅಷ್ಟು ಹೊತ್ತಿಗೆ ವಾಮನ ಭಟ್ಟ, ಮಡಿ ಪಂಚೆಯುಟ್ಟು, ಹಣೆಗೆ ಮುದ್ರೆ ಅಂಕಿತ ಹಾಕಿ, ತನ್ನ ಗಿಡ್ಡ-ಗಿಡ್ಡ ಕಾಲನ್ನು ಬೀಸಿ-ಬೀಸಿ ಹಾಕುತ್ತಾ ಬಂದ.

ಅವನು ಪ್ರತಿದಿನ ೫ ಮೈಲಿ ಇದ್ದ ಅವನ ಹಳ್ಳಿಯಿಂದ ನಡೆದು ಎಂಟು ಗಂಟೆ ವೇಳೆಗೆ ಸ್ವಾಮಿ ಭಕ್ತ ಹನುಮನಂತೆ ತನ್ನ ಯಜಮಾನನಿಗೆ ಅಡಿಗೆ ತಯಾರಿಸಲು ಸಿದ್ಧನಾಗಿ ಬಂದು ಬಿಡುತ್ತಿದ್ದ.

ಬರುವಾಗ ಅಡಿಗೆಗೆ ಏನಾದರೊಂದು ತರಕಾರಿ ಕೈಯ್ಯಲ್ಲಿ ಹಿಡಿದೇ

ಬರುತ್ತಿದ್ದ. ಆ ಮಲೆನಾಡು ಪ್ರಾಂತ್ಯದಲ್ಲಿ ಬಾಳೆ ತೋಟ ಹೆಚ್ಚು. ಅಡಿಗೆಗೆ ಪ್ರತಿದಿನ ಬಾಳೆಕಾಯಿ ಬಳಸುತ್ತಾರೆ ಆ ಕಡೆಯವರು.

ವಾಮನ ಭಟ್ಟನೂ ಬಾಳೆಕಾಯಲ್ಲಿ ಬಗೆ-ಬಗೆ ಮಾಡುವುದನ್ನು ಕಲಿತ್ತಿದ್ದ. ಕೆಸುವು, ಹಲಸು, ಇವೂ ಅತ್ತ ಕಡೆ ಹೆಚ್ಚು ಬಳಕೆ. ಈ ಹೊಸ ಬಗೆಯ ಅಡಿಗೆಗಳು ನಟರಾಜನಿಗೆ ಬಲು ಇಷ್ಟವಾಗಿದ್ದುವು.

ಈ ದಿನ ವಾಮನ ಭಟ್ಟ ಕೈಯಲ್ಲಿ ಬಾಳೆಕಾಯಿ ಚಿಪ್ಸ ಒಂದು ಹಿಡಿದೇ ಬಂದಿದ್ದ. ತಂಡದವರು ಇನ್ನೂ ಕೆಲಸಕ್ಕೆ ಹೋಗದೆ ಅಲ್ಲಲ್ಲೇ ಕುಳಿತ್ತಿರುವುದನ್ನು ನೋಡಿ ವಾಮನ ಭಟ್ಟ ರೇಗಿದ. "ಯಾಕ್ರಪ್ಪಾ ! ಇನ್ನೂ ಕೆಲಸದ ಮೇಲೆ ಹೋಗಿಲ್ಲಾ ? ನಿಮಗೆಲ್ಲಾ ಇವತ್ತಿನ ಕೂಲಿ ಪೂರ್ತಿ ಕೊಡೋದಿಲ್ಲ ನೋಡ್ತಿರಿ" ಎಂದು ಒದರಿಕೊಂಡೇ ಡೇರೆ ಒಳಕ್ಕೆ ನಡೆದ.

ನಟರಾಜ ಇನ್ನೂ ಮಲಗಿರುವುದನ್ನು ನೋಡಿ ಓ....ಹೋ!....ಇನ್ನೂ ಯಜಮಾನರೇ ಎದ್ದಿಲ್ಲವೋ ? "ಯಥಾ ರಾಜಾ....ತಥಾ ಪ್ರಜಾಃ" ಇನ್ನೇನು ಅಂದ.

ಆ ಕೂಲಿಯಾಳುಗಳೆಲ್ಲಾ ನಟರಾಜನಲ್ಲಿ ಎಷ್ಟು ಭಯ-ಭಕ್ತಿಯಿಂದಿದ್ದರೋ :....ವಾಮನ ಭಟ್ಟ ಅಷ್ಟೂ ಸದರವಾಗಿದ್ದ. ಏಕೆಂದರೆ ನಟರಾಜ ಪೂರ್ಣ ಯೋಗಕ್ಷೇಮ ಅವನು ವಹಿಸಿಕೊಂಡಿದ್ದ. ಸರಿಯಾಗಿ ಊಟ ಮಾಡದಿದ್ದರೆ ನಟರಾಜನನ್ನು ಬೈದು, ಹಾಸ್ಯ ಮಾಡಿ, ನಕ್ಕು-ನಗಿಸಿ ಅವನಿಗೆ ಊಟ ಮಾಡಿಸುತ್ತಿದ್ದ. ಇಂತಹ ಆತ್ಮೀಯ ಬಂಧುವಿನ ಬಗ್ಗೆ ನಟರಾಜನಿಗೆ ಅಪಾರ ಗೌರವವಿತ್ತು.

ವಾಮನ ಭಟ್ಟ ಬಂದದ್ದು ನೋಡಿ ನಟರಾಜ ಥಟ್ಟನೆ ಎದ್ದ. ಏನು ಭಟ್ಟರೇ ಇವತ್ತಿನ ಕೂಲಿ ನನಗೂ ಪೂರ್ತಿ ಕೊಡಬೇಡಿ, ಸರಿತಾನೇ ? ಅಂದ.

ನೀವಾದರೆ ಮಾತ್ರ ಏನು ? ಹೀಗೆ ಪ್ರತಿದಿನ ಹೊತ್ತು ಮೀರಿ ಕೆಲಸಕ್ಕೆ ಹೋದರೆ ಇನ್ನು ಹತ್ತು ವರ್ಷವಾದರೂ ಇಲ್ಲಿಯ ಸರ್ವೆ ಕೆಲಸ ಮುಗಿಯೋ ಹಾಗಿಲ್ಲ. ನನಗೇನು ? ಇಲ್ಲಿಯೇ ಮುದುಕರಾಗುವಿರಂತೆ, ಅಷ್ಟು ಹೊತ್ತಿಗೆ ಅಲ್ಲಿ ಸುಶೀಲಮ್ಮನವರೂ ಮುದುಕಿಯಾಗಿರುತ್ತಾರೆ" ಎಂದು ಹಾಸ್ಯ ಮಾಡುತ್ತಲೇ ಒಳಕ್ಕೆ ಹೋದ.

ಎಲಾ !....ಇವನಾ !....ಮನೆಯಿಂದ ಬರುವ ಕಾಗದಗಳನ್ನು ಓದಿ-ಓದಿ

ಎಲ್ಲಾ ತಿಳಿದುಕೊಂಡುಬಿಟ್ಟಿದ್ದಾನೆ ಕುಳ್ಳ ಆಸಾಮಿ....ಎಲ್ಲರೂ ನನಗೆ ಸುಶೀಲೆಯನ್ನು ಗಂಟು ಹಾಕುವುದರಲ್ಲಿಯೇ ಇದ್ದಾರೆ. ಹುಂ ಇರಲಿ" ಎಂದುಕೊಂಡು ಎದ್ದು ಬಟ್ಟೆ ಬದಲಾಯಿಸಿದ, ಕೆಲಸಕ್ಕೆ ಹೋಗುವ ಉಡುಪನ್ನು ಧರಿಸಿ ಕೋವಿಯನ್ನು ಹೆಗಲೇರಿಸಿ ಹೊರಟ.

ಹೊರಟು ನಿಂತ ನಟರಾಜನನ್ನು ನೋಡಿ "ಧಣೀ ಬಾಳೆಕಾಯಿ ಉಪ್ಪೇರಿ ಮಾಡಲೇ " ಅಂದ ವಾಮನ ಭಟ್ಟ.

ಸಾಕಪ್ಪಾ ! ಸಾಕು, ನಿನ್ನ ಬಾಳೆಕಾಯಿ ತಿಂದು ತಿಂದು ಬೇಜಾರಾಗಿ ಬಿಟ್ಟಿದೆ. ತಿಳೀ ಸಾರು-ಅನ್ನ ಮಾಡು ಸಾಕು" ಅಂದ ನಟರಾಜ

ಇನ್ನೇನು ಮಳೆಗಾಲ ಹತ್ತಿರವಾಗುತ್ತಾ ಬಂದಿತ್ತು. ಮಲೆನಾಡಿನ ಕಡೆ ಮಳೆಯೆಂದರೆ ನಾಲ್ಕು ತಿಂಗಳು ಬಿಡುವಿಲ್ಲದೆ ಆಕಾಶ ಭೂಮಿ ಒಂದಾಗುವಂತೆ ಜಿರೋ ...ಎಂದು ಸುರಿಯುತ್ತದೆ ಆಗ ಹೊರಗಡೆ ತಲೆ ಇಡುವುದೂ ಅಸಾಧ್ಯ. ಸೂರ್ಯರಶ್ಮಿಯನ್ನು ಕಾಣುವುದೇ ಕಷ್ಟ.

ಮಳೆ ಪ್ರಾರಂಭವಾಗುವ ವೇಳೆಗೆ ಸರ್ವೆ ಕಾರ್ಯವನ್ನು ಪೂರೈಸಿ ಬಿಡಬೇಕೆಂದು ಆಜ್ಞೆಯಾಗಿತ್ತು ನಟರಾಜನಿಗೆ.

ಆದುದರಿಂದ ಇನ್ನೂ ಹೆಚ್ಚು ಕೆಲಸಗಾರರನ್ನು ಉಪಯೋಗಿಸಿಕೊಂಡು ಬಿಡುವಿಲ್ಲದೆ ಕೆಲಸದಲ್ಲಿ ತೊಡಗಿದ. ಇವರು ಮರಗಳನ್ನು ಕಡಿದ ಭೂಪ್ರದೇಶವು ಈಗ ಹಸನು ಮಾಡಲ್ಪಟ್ಟು ವಾಹನಗಳ ಓಡಾಟಕ್ಕೆ ಅನುಕೂಲ ಪಡಿಸಿತ್ತು. ಕಡಿದ ಮರಗಳನ್ನು ಸಾಗಿಸಲು ಲಾರಿಗಳು ಬಂದು ಹೋಗುತ್ತಿದ್ದವು.

ನಟರಾನಿಜಗೂ ಇಷ್ಟರಲ್ಲಿಯೇ ಬೆಂಗಳೂರಿಗೆ ಹೋಗಿ ತಂದೆ ತಾಯಿಯರನ್ನು ನೋಡಿ ಕೊಂಡು ಬರಬೇಕೆನ್ನಿಸಿತ್ತು.

ಆದರೆ ಯುಗಾದಿ ಹಬ್ಬ ಹತ್ತಿರವಾಗಿದ್ದರಿಂದ ಹಬ್ಬಕ್ಕೆ ಶಿವಮೊಗ್ಗಕ್ಕೆ ಖಂಡಿತ ಬರುವುದೆಂದು ಮಂಗಳೆ ತಮ್ಮನಿಗೆ ಹೇಳಿಕಳುಹಿಸಿದ್ದಳು.

ಅಕ್ಕನ ಸಂಸಾರ ಹತ್ತಿರದಲ್ಲಿಯೇ ಇದ್ದುದರಿಂದ ಆಗಾಗ ಶಿವಮೊಗಕ್ಕೆ ಜೀಪ್‌ನಲ್ಲಿ ಹೋಗಿಬರುತ್ತಿದ್ದ ನಟರಾಜ.

ನಟರಾಜ ಬರುವುದೆಂದರೆ ಎಲ್ಲರಿಗೂ ಸಂತೋಷ. ಅದರಲ್ಲೂ ಸುಶೀಲಳಿಗೆ ಎಲ್ಲಿಲ್ಲದ ಹಿಗ್ಗು, ಅವನ ಸ್ವಾಗತಕ್ಕೆ ಸಂಭ್ರಮದಿಂದ ಸಿದ್ಧಪಡಿಸುತ್ತಿದ್ದಳು.

ಮೊದ-ಮೊದಲು ಸೋದರ ಮಾವನೆಂದು ತುಂಬಾ ಸಲಿಗೆಯಿಂದ

ಅವನೊಂದಿಗೆ ನಡೆದು ಕೊಳ್ಳುತ್ತಿದ್ದಳು. ದೊಡ್ಡವಳಾದಂತೆಲ್ಲಾ "ಅವನೇ ತನ್ನ ಬಾಳ ಜೊತೆಗಾರ" ಎಂದು ತಿಳಿದ ಮೇಲೆ ಸಂಕೋಚ ತಾನಾಗಿಯೇ ಅಂಟಿ ಬಿಟ್ಟಿತು. ಮೊದಲಿನಂತೆ ವರ್ತಿಸುವುದು ಅವಳಿಂದಾಗುತ್ತಿರಲಿಲ್ಲ. ಆದರೂ ಅವನು ಬಂದಾಗ ಅವನಿಗೆ ಬೇಕಾದ ಎಲ್ಲಾ ಕೆಲಸ ಕಾರ್ಯಗಳನ್ನೂ ತಾನೇ ವಹಿಸಿ ಕೊಂಡು ಅಕ್ಕರೆಯಿಂದ ಮಾಡುತ್ತಿದ್ದಳು.

ಈಗಲೂ ನಟರಾಜ ಯುಗಾದಿ ಹಬ್ಬಕ್ಕೆ ಬರುವನೆಂದು ತಿಳಿದು ಅವನಿಗಾಗಿ ಒಂದು ರೂಮನ್ನು ಬಿಡುವು ಮಾಡಿಟ್ಟಳು. ಅದರಲ್ಲಿ ಮಂಚ, ಹಾಸಿಗೆ, ಕುರ್ಚಿ, ಎಲ್ಲಾ ಅಣಿ ಮಾಡಿದಳು.

ಹಾಸಿಗೆಯ ಮೇಲೆ ಅಗಸನಿಂದ ಬಂದಿದ್ದ ಬಿಳೀ-ಬೆಡ್‌ಷೀಟನ್ನು ಹಾಸಿ ಸುಕ್ಕಿಲ್ಲದಂತೆ ಸುತ್ತಲೂ ಮಡಿಸಿದಳು. ಕೈ ಒರಸಿಕೊಳ್ಳಲು ಟವೆಲ್, ತಲೆ ಬಾಚಿಕೊಳ್ಳಲು ಬಾಚಣಿಗೆ-ಕನ್ನಡಿ ಎಲ್ಲಾ ಸಿದ್ಧವಾಗಿಟ್ಟಳು. ಆ ಶುಭ್ರವಾದ ಹಾಸಿಗೆಯ ಮೇಲೆ ಒಂದು ಗಳಿಗೆ ಕುಳಿತು ಎಲ್ಲಾ ಸರಿಯಾಗಿದೆಯೇ ಎಂದು ಸುತ್ತಲೂ ನೋಡಿದಳು. "ಟೇಬಲ್ ಮೇಲೆ ಒಂದೆರಡು ಪುಸ್ತಕಗಳನ್ನಿಡ ಬೇಕಾಗಿತ್ತು" ಎಂದು ಕೊಂಡಳು.

ಕೂಡಲೆ ಎದ್ದು ಹೋಗಿ ಲೈಬ್ರೆರಿಯಂತೆ ಜೋಡಿಸಿಟ್ಟುಕೊಂಡಿದ್ದ ತನ್ನ ರೂಮಿನ ಅಲಮಾರಿನಿಂದ ಕೆಲವು ಪುಸ್ತಕಗಳನ್ನು ಆಯ್ದು ತಂದಿಟ್ಟಳು. ಅವಳಿಗೆ ಇಷ್ಟವಾದ ಬಂಗಾಳಿ ಕಥೆ ಕನ್ನಡ ಅನುವಾದ ಮಾಡಿದ "ದುರ್ಗೇಶ ನಂದಿನಿ, ಕಪಾಲ ಕುಂಡಲಾ, ನವಾಬ ನಂದಿನಿ" ಮೊದಲಾದ ಪುಸ್ತಕಗಳನ್ನು ಆರಿಸಿ ತಂದಿದ್ದಳು.

ಆ ವೇಳೆಗೆ ಸುಮಿತ್ರ ಲೇ ಸುಶೀ ! ಏನೇ ರೂಮಿನಲ್ಲಿ ಕುಳಿತು ಏನು ಮಾಡುತ್ತಿದ್ದೀ ? ... ಎಂದು ಕೂಗುತ್ತಾ ಅಲ್ಲಿಗೆ ಬಂದಳು.

ರೂಮಿನ ಸಜ್ಜು ನೋಡಿ ಗಟ್ಟಿಯಾಗಿ ನಕ್ಕು ಬಿಟ್ಟಳು. ಸುಮಿತ್ರ ಸುಶೀಲಳಿಗೆ ಆಶ್ಚರ್ಯವಾಯಿತು. ಅಕ್ಕ ಊರಿಂದ ಬಂದದ್ದು ತನಗೆ ಗೊತ್ತೇ ಆಗಲಿಲ್ಲವಲ್ಲಾ ! ಎಂದು

ಅಕ್ಕಾ ನೀನು ಯಾವಾಗ ಬಂದೇ ! ಭಾವಾನು ಬಂದ್ರೇನಕ್ಕಾ ? ಎಂದು ಸುಮಿತ್ರಳನ್ನಪ್ಪಿ ಕೇಳಿದಳು, ಸುಶೀ.

"ಅಲ್ಲಾ !....ನಾವ್ ಬಂದು ಎಷ್ಟೊತ್ತಾಯ್ತು. ನೀನೆಲ್ಲೂ ಕಾಣಿಸ್ಲಿಲ್ಲಾ !

ಅಮ್ಮನ್ನ ಕೇಳ್ದೆ. ಅವಳೆಲ್ಲೋ ಮಹಡೀಮೇಲೆ ರೂಮ್ ಕ್ಲೀನ್ ಮಾಡ್ತಾ ಇರಬಹುದು. ನಾಳೆ ನಟರಾಜ ಬರ್ತಾನೆಕಣೇ"... ಅಂದಳು.

"ಓ ಹೋ....ಹೋ ! ಅದಕ್ಕೆ ಇಷ್ಟೊಂದು ಸಂಭ್ರಮ." ಎಂದು ಅಣಕಿಸಿದಳು ಸುಮಿತ್ರ.

"ಸಂಭ್ರಮ ಏನೇ ? ನಾನು ಯಾವಾಗ್ಲೂ ಮನೆ ಕ್ಲೀನ್ ಮಾಡಿ ಎಲ್ಲಾ ಅಚ್ಚುಕಟ್ಟಾಗಿ ಜೋಡಿಸಿ ಇಡ್ತಿರೋದು ನಿಂಗೆ ಗೊತ್ತೇಇದೆಯಲ್ಲಾ ! ನಾಳೆ ಯುಗಾದಿ ಹಬ್ಬ, ನೀನು ಭಾವ, ಎಲ್ಲಾ ಬರ್ತೀರಾ ! ಅಂತ ಗೊತ್ತು. ನೀವೆಲ್ಲಾ ಬರೋಹೊತ್ಗೆ ಸ್ವಲ್ಪನಾದ್ರೂ ಮನೆ ಚೆನ್ನಾಗಿ ಕಾಣಲಿ ಅಂತ ಮಾಡಿದ್ದೀನಿ ಅಷ್ಟೇ."

ಸರಿ ಮಾವನ ರೂಮು ಇನ್ನಷ್ಟು ಸ್ಪೆಷಲ್ ಅಲ್ವಾ ಸುಶೀ ? ಎಂದು ಅವಳ ಕೆನ್ನೆ ಹಿಂಡಿದಳು ಸುಮಿತ್ರ.

ಹೋಗೀ....ಅದೇನಿಲ್ಲ, ನಿನಗೇ ಭಾವನಿಗೇ ಅಂತ ನೋಡು ಈ ಮಹಡೀ ಹಾಲೆಲ್ಲಾ ಅರೇಂಜ್ ಮಾಡಿದ್ದೀನಿ. ನಡಿಯೇ ಭಾವನ್ನ ಮಾತಾಡ್ಸ್ಕೊಂಡು ಬರೋಣ, ಎಂದು ಧಡ - ಧಡ ಮಹಡೀ ಮೆಟ್ಟಲು ಇಳಿದು ಇಬ್ಬರೂ ಬಂದರು.

ಯುಗಾದಿ ಹಬ್ಬಕ್ಕೆ ಖಂಡಿತ ಇಲ್ಲಿಗೇ ಬರಬೇಕೆಂದು ಅಕ್ಕ ಹೇಳಿದ್ದುದರಿಂದ ಹಬ್ಬದ ಮೊದಲ ದಿನ ನಟರಾಜನೂ ಬಂದ. ಅಕ್ಕನ ಮನೆಯೆಂದರೆ ಅರಮನೆಯೇ ! ಯಾವುದಕ್ಕೇನು ಕೊರತೆ ? ಹಬ್ಬಕ್ಕೆ ಸುಮಿತ್ರ, ಅವಳ ಗಂಡ, ಒಂದೇ ಮುದ್ದು ಮಗು ಬಾಬು, ಎಲ್ಲಾ ಬಂದಿದ್ದರು.

ನಟರಾಜ ಬಂದ ಸ್ವಲ್ಪ ಹೊತ್ತಿಗೆ ಮೂರ್ತಿಯೂ ಕಾರಿನಲ್ಲಿ ಬಂದಿಳಿದರು. ನಟರಾಜ ಆಗಲೇಬಂದಿರುವುದನ್ನು ನೋಡಿ ಅವರಿಗೆ ತುಂಬಾ ಸಂತೋಷವಾಯಿತು

ಅವನ ಕೈ ಕುಲುಕಿ ಬೆನ್ನುತಟ್ಟಿ ಏನಪ್ಪಾ ! ರಾಜಾ ! ಯಾವಾಗ ಬಂದೆ ? ಅಲ್ಲಿಯ ಹವಾ ನಿನಗೆ ಬಗ್ಗಿದೆಯೇ ? ನಿನ್ನ ಕೆಲಸ ಎಲ್ಲಿಯವರೆಗೆ ಬಂತು ? ಎಂದು ಒಟ್ಟಿಗೆ 3 - 4 ಪ್ರಶ್ನೆ ಕೇಳಿದರು.

ಇದೋ ನಾನೂ ಈಗ ತಾನೇ ಬಂದೆ ಭಾವ. ಅಲ್ಲಿ ಸೊಳ್ಳೆ ಕಾಟ ಅಂತೂ ಬಲು ಜಾಸ್ತಿ. ಮಲೇರಿಯಾದಿಂದ ಜನರು ನರಳುತ್ತಲೇ ಇದ್ದರು. ನಾನು ಹೋದಮೇಲೆ ಮಲೇರಿಯಾ ಔಷಧಿಗಳನ್ನು ಸ್ವಲ್ಪ ಹೆಚ್ಚಾಗಿಯೇ ತರಿಸಿ ಅವರಿಗೆಲ್ಲಾ ಕೊಟ್ಟೆ. ಸೊಳ್ಳೆಯನ್ನು ನಾಶಪಡಿಸುವ ಏರ್ಪಾಡುಗಳನ್ನು

ಮಾಡಿದ್ದೇನೆ, ಈಗ ಸ್ವಲ್ಪ ವಾಸಿ. ಅಂದ

ನಿನ್ನ ಸರ್ವೆ ಕೆಲಸ ಯಾವಾಗ ಮುಗಿಯುತ್ತೆ ? ಅಂದರು ಮೂರ್ತಿ.

"ಇನ್ನೇನು ಮಳೆ ಪ್ರಾರಂಭವಾಗುವ ವೇಳೆಗೆ ಮುಗಿಸಿಯೇ ತೀರಬೇಕು. ಅಣೆ ಕಟ್ಟಿನ ಏರ್ಪಾಡುಗಳು ಆಗಲೇ ಆಗುತ್ತಿವೆ. ನಾವು ಸರ್ವೆ ಮಾಡಿದ ಜಾಗದಲ್ಲಿ ಕಲ್ಲುಗಳನ್ನು ಲಾರಿಯಲ್ಲಿ ತಂದು ಹಾಕಿಸುತ್ತಿದ್ದಾರೆ" ಅಂದ. ಆ ವೇಳೆಗೆ ಮಂಗಳೆ ಅಲ್ಲಿಗೆ ಬಂದು "ಇದೇನೂಂದ್ರೇ ? ಊರಿನಿಂದ ಬಂದವರು ಇಬ್ಬರೂ ಹೀಗೆ ಮಾತಾಡ್ತಾ ಕೂತು ಬಿಟ್ಟರಿ. ಏಳಿ ಕೈಕಾಲು ತೊಳಕೊಂಡು ಊಟಕ್ಕೆ" ಅಂದಳು.

ಇವರು ಮಾತಾಡುತ್ತಿದ್ದ ಹಾಗೆಯೇ ಸುಮಿತ್ರ ಮಾವನನ್ನು ವಿಚಾರಿಸಲು ಬಂದಳು. "ಏನ್ ಮಾವ ಚೆನ್ನಾಗಿದ್ದೀಯಾ" ? ಅಂದಳು.

"ನೋಡಮ್ಮ ಹೀಗಿದ್ದೀನಿ. ಎಲ್ಲಿ ನಿನ್ನ ಕುಮಾರ ಕಂಠೀರವ" ?

"ಅಯ್ಯೋ ! ಅವನು ಬಲು ಲೂಟಿಕೋರ. ನೀನು ಬರೋದಕ್ಕೆ ಸ್ವಲ್ಪ ಮುಂಚೆ ತಾನೇ ಅವರ ಅಪ್ಪ ಎಲ್ಲೋ ಎತ್ಕೊಂಡು ಹೋದ್ರು."

"ಮಲ್ನಾಡು ಹೇಗಿದೆ ಮಾವಾ" ?

"ಅದೇನ್ ಕೇಳ್ತೀಯಾ ! ವಿಪರೀತ ಸೊಳ್ಳೆ ಕಾಟ".

"ಮತ್ತೆ ಅಲ್ಲಿಯ ಸೊಳ್ಳೆಗೆ ನಿನ್ನ ವೈರಕ್ತಾನ ಒಂದು ತೊಟ್ಟೂ ಕೊಡದಂತೆ ಜೋಪಾನ ಮಾಡಿದ್ದಿಯಾ ಅನ್ನೋದು ಕಾಣುತ್ತೆ " ಅಂದಳು ಸುಮಿತ್ರ.

ಅಲ್ಲೇ ಇದ್ದ ಮಂಗಳೆ ಅಭಿಮಾನದಿಂದ " ಸುಮೀ ! ಹಾಗೆಲ್ಲಾ ರಾಜನಿಗೆ ಕಣ್ಣು ಹಾಕಬೇಡ ಕಣೇ. ಬೆಂಗಳೂರಿನಲ್ಲಿದ್ದುದಕ್ಕಿಂತ ಈಗ ಚೆನ್ನಾಗಿದ್ದಾನೆ. ಬಾ ರಾಜ ಕೈ ಕಾಲು ತೊಳೆದುಕೋ ಟಿಫನ್ನಾದ್ರೂ ತೆಗೆದುಕೊಳ್ಳೋವಂತೆ.

"ಅಕ್ಕಾ ನಿನ್ನ ಮಗ ವಿಶೂ ಎಲ್ಲಿ ಕಾಣಲೇ ಇಲ್ಲ" ಅಂದ ನಟರಾಜ.

"ಅವನಿಗೆ ಕ್ರಿಕೆಟ್ ಆಟ ಅಂದರೆ ಪ್ರಾಣ ಅನ್ನೋದು ನಿನಗೆ ಗೊತ್ತೆ ಇದೆಯಲ್ಲಪ್ಪಾ ! ಇವತ್ತೇನೋ ಇಲ್ಲೇ ಮ್ಯಾಚಿದೆಯಂತೆ. ಹೋಗಿದ್ದಾನೆ. ಯಾವಾಗ್ಲೋ ಬರ್ತಾನೆ"... ಅಂದಳು ಮಂಗಳೆ ಉದಾಸೀನದಿಂದ.

ಅಷ್ಟೊತ್ತಿಗೆ ಸುಶೀಲ ಟ್ರೇನಲ್ಲಿ ಕಾಫಿಸೆಟ್ ಇಟ್ಟುಕೊಂಡು ಎಲ್ಲರೂ ಕುಳಿತಿದ್ದ ಕಡೆ ತಂದು ಟೇಬಲ್ ಮೇಲೆ ಇಟ್ಟಳು.

ಮೂರ್ತಿ ಮಗಳನ್ನು ನೋಡಿ ಮೆಚ್ಚುಗೆಯಿಂದ "ನಮ್ಮ ಸುಶೀನೇ ಸರಿಯಪ್ಪ. ಯಾವಾಗ ಯಾರಿಗೆ ಏನು ಬೇಕು ? ಎನ್ನುವುದು ಅವಳಿಗೇ ಚೆನ್ನಾಗಿ ಗೊತ್ತು ಈಗ ನಮಗೆ ಕೂತಿದ್ದ ಕಡೆಗೇ ಕಾಫಿ ಬಂದರೆ" ! ಅನ್ನಿಸು ತ್ತಿತ್ತು. ಅಲ್ಲವೇ ರಾಜು" ! ಅಂದರು

ನಟರಾಜ ಸುಶೀಯ ಕಡೆ ನೋಡಿ ನಕ್ಕ. ಇದನ್ನು ಕಂಡ ಸುಮಿತ್ರ "ಏನೇ ಸುಶೀ ! . ಆಗಲೇ ಇಬ್ಬರೂ ಏನೇನು ಮಸಲತ್ತು ಮಾಡಿ ಕೊಂಡಿ ದ್ದೀರಿ" ? ಎಂದು ಹಾಸ್ಯ ಮಾಡಿದಳು.

"ಅಲ್ಲ ಅಕ್ಕಾ ! ನಾನು ಇನ್ನೂ ಇದೇ ತಾನೇ ಹೊರಕ್ಕೆ ಬಂದು ನೋಡ್ತಾ ಇದ್ದೀನಿ. ಇನ್ನೇನು ಮಸಲತ್ತು ಮಾಡಿಬಿಟ್ಟೆ"? "ಸಾಕು ಸುಮ್ಮನಿರೇ" ಅಂದಳು. ಮೇಲೆ ಮಾತ್ರ, ಆದರೆ ಮನಸ್ಸಿನಲ್ಲಿ ಅವಳು ಮಾಡುವ ಹಾಸ್ಯವೆಲ್ಲಾ ಹಿತವಾಗಿತ್ತು. ನಟರಾಜನನ್ನು ಓರೆಗಣ್ಣಿನಿಂದ ನೋಡಿದಳು,

ಪ್ರತಿಯಾಗಿ ನಟರಾಜ ; "ಸುಮಿತ್ರೆ ತುಂಬ ಹೆಚ್ಚ್ಕೋಡ್ಲೂ ಕಣೆ ಸುಶೀ ಅವಳ ಗಂಡ ಅವಳನ್ನ ಶಿಖರಕ್ಕೇರಿಸಿ ಬಿಟ್ಟಿದ್ದಾನೆ. ಇನ್ನೇನು ? ಅವಳು ಆಡಿದ್ದೇ ಆಟ, ಹೋಗಲಿ ಕಾಫಿ ಆರಿ ಹೋಗುತ್ತೆ ಕೊಡಿಲ್ಲಿ" ಅಂದ.

ಸುಶೀಲ ಕೆಟ್ಲಿನಿಂದ ಕಾಫಿ ಬಗ್ಗಿಸಿ ಎಲ್ಲರಿಗೂ ಕೊಟ್ಟಳು ಅಷ್ಟರಲ್ಲಿ ವಿಶೂ ಬ್ಯಾಟ್ ತಿರಿಗಿಸುತ್ತಾ ಬಂದ. ವಿಶೂವನ್ನು ಕಂಡರೆ ನಟರಾಜನಿಗೂ ಪ್ರೀತಿ. ತನ್ನ ಅಕ್ಕನ ಏಕಮಾತ್ರ ಪುತ್ರ ವಿಶ್ವನಾಥ, "ಬಾ ! ವಿಶೂ.... ಕುಳಿತುಕೋ ಕಾಫಿ ತೆಗೆದುಕೋ ನೀನೂ. ಆಟ ಆಡಿ ದಣಿದಿದ್ದೀಯಾ. ಎಂದ ವಿಶೂ ಕೈ ಹಿಡಿದು ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡ ನಟರಾಜ.

ಸುಶೀ ಅವನಿಗೂ ಕಾಫಿ ಬಗ್ಗಿಸಿಕೊಟ್ಟಳು. ವಿಶು ಕಾಫಿ ಕುಡಿಯುತ್ತಾ "ಮಾವ ! ನೀನಿರೋ ಕಡೆ ವಾಸಕ್ಕೆ ಅನುಕೂಲವಾಗಿದೆಯೇ" ? ಅಂದ.

ಆ ಕಾಡಿನ ಮಧ್ಯೆ ಅನುಕೂಲ ಏನುಬಂತೋ ವಿಶೂ ; ಕ್ರೂರ ಮೃಗಗಳ ಭಯಂಕರ ಕೂಗನ್ನು ಕೇಳುತ್ತಾ ಜೀವ ಹಿಡಿಯಲ್ಲಿಟ್ಟು ಕೊಂಡು ಕೆಲಸ ಮಾಡಬೇಕಪ್ಪಾ ! ಅಲ್ಲಿ ಜನಾ ಅಂತೂ ತುಂಬಾ ಒಳ್ಳೆಯವರು. ಏನೇ ಆಗಲಿ ಮಲೆನಾಡಿನ ಪ್ರಕೃತಿ ಸೌಂದರ್ಯ ನನಗೆ ತುಂಬಾ ಇಷ್ಟವಾಯಿತಪ್ಪ.

"ಮಾವ ! ನಾನೂ ಈಸಲ ನಿನ್ನ ಜೊತೆಯಲ್ಲಿ ಬರ್ತೀನಿ ಆ ಕಾಡು ಕಣಿವೆಗಳಲ್ಲಿ ಓಡಾಡುವುದೆಂದರೆ ನನಗೆ ತುಂಬಾ ಆಸೆ".

"ಸರಿ ಸರಿ ಈ ತಿಂಡೀಪ್ತೋತನ್ನ ಕಟ್ಕೊಂಡ್ ಹೋಗಪ್ಪಾ ನಿನಗೆ ತುಂಬಾ ಸಹಾಯವಾಗುತ್ತೆ." ಅಂದಳು ಮಂಗಳೆ.

"ಅದೇನಕ್ಕಾ ಅವನ್ನ ಹಾಗಂತೀ ! ವಿಶೂ ಏನು ಎಳೇಮಗೂನೇ ? ಒಂದು ಸಲ ನನ್ನ ಜೊತೆಯಲ್ಲಿ ಬರಲಿ ಬಿಡು ಆ ಕಡೆಯೆಲ್ಲಾ ನೋಡಿಕೊಂಡು ಬರ್ತಾನೆ." ಅಂದ ನಟರಾಜ.

"ಯಾರು ಬೇಡಾ ಅಂದರು! ಮಹರಾಯನಾಗಿ ಕರೆದು ಕೊಂಡು ಹೋಗು"

ಹೀಗೆಯೇ ಒಬ್ಬರಿಗೊಬ್ಬರು ಮಾತಾಡುತ್ತಲೇ ಇದ್ದರು. ಮರುದಿನ ಯುಗಾದಿ ಹಬ್ಬ. ಹಬ್ಬಕ್ಕೆ ಅಣಿ ಮಾಡುವವಳೆಂದರೆ ಸುಶೀ ನಟರಾಜ ಬಂದಿರುವುದು ಅವಳಿಗೆ ರೆಕ್ಕೆ ಬಂದಂತಾಗಿತ್ತು ಬಹು ಉತ್ಸಾಹದಿಂದ ಕೆಲಸದಲ್ಲಿ ತೊಡಗಿದಳು.

ಮಾತನಾಡುತ್ತಾ ಕುಳಿತಿದ್ದವರನ್ನು ಗಡಿ-ಬಿಡಿ ಮಾಡಿ ಎಬ್ಬಿಸಿದಳು. "ಏಳಿ ಮತ್ತೆ ಎಲ್ಲಾ ಊಟಕ್ಕೆ. ಆಗಲೇ ರಾತ್ರಿ ಒಂಭತ್ತು ಗಂಟೆ ಆಯ್ತು. ಒಳಗೆ ಅಡಿಗೆ ಭಟ್ಟರು ತಟ್ಟೆಗಳನ್ನು ಹಾಕಿ ಕಾಯ್ತಾ ಇದಾರೆ. ನಾಳೆ ಹೊತ್ತಿಗೆ ಮುಂಚೆ ಏಳಬೇಕು". ಅಂದಳು.

ಕುಳಿತಿದ್ದ ನಟರಾಜ ಚಟ್ಟನೆ ಎದ್ದು ನಿಂತು ಕೈ ಕಟ್ಟಿ ತಲೆತಗ್ಗಿಸಿ ಇದೋ....ಹುಜೂರ್ ಅಪ್ಪಣೆಯಂತೆ ಅಂದ.

ಸುಶೀಲ ಮುಖ ತಿರುಗಿಸಿ ನಗುತ್ತಾ ತಂದೆಯ ರೂಮಿಗೆ ಹೋದಳು. ಬಾ ಅಪ್ಪಾ ! ಊಟ ಮಾಡಿ ಆಮೇಲೆ ನಿನ್ನ ಲೆಕ್ಕ ಪತ್ರ ನೋಡಿಕೊಳ್ಳುವೆ ಯಂತೆ ಎಂದು ಅವರನ್ನೂ ಎಬ್ಬಿಸಿ ಜೊತೆಯಲ್ಲಿ ಕರೆದುಕೊಂಡು ಬಂದಳು.

ನಟರಾಜ ತನ್ನ ಪರ ವಹಿಸಿ ಮಾತನಾಡಿದ್ದನ್ನು ಮೆಲುಕು ಹಾಕುತ್ತಲೆ ಹೊಂಗನಸಿನಲ್ಲಿ ಮೈ ಮರೆತಳು. ನಟರಾಜನ ಸಾನಿಧ್ಯ ಸಹವಾಸಕ್ಕಾಗಿ ಹಾ ತೊರೆಯುತ್ತಿದ್ದಳು. ಅವನ ರೂಪು, ನಿಲುವು, ಅವಳನ್ನು ತುಂಬಾ ಆಕರ್ಶಿಸಿತ್ತು. ಅವನ ದಟ್ಟವಾದ ಗುಂಗುರು ಕ್ರಾಪಿನಲ್ಲಿ ಕೈಯಾಡಿಸುವು ದೆಂದರೆ ತುಂಬಾ ಇಷ್ಟ ಅವಳಿಗೆ.

ಚಿಕ್ಕವಳಿದ್ದಾಗ ಮಾವ ಮನೆಗೆ ಬಂದಾಗಲೆಲ್ಲಾ ಕೀಟಲೆಮಾಡಿ ಅವನು ಬಾಚಿದ್ದ ಕ್ರಾಪನ್ನು ಕೆಡಿಸುತ್ತಿದ್ದಳು. ಈಗ ನಾಚಿಕೆ. "ಮೊದಲಿನಂತೆ ಈ ದಟ್ಟವಾದ ಕೂದಲಿನಲ್ಲಿ ನನ್ನ ಕೈಯನ್ನು ಹುದುಗಿಸಿದರೆ ?. " ಅನ್ನುವ

ಆ ಲೋಚನೆಯಿಂದಲೇ ಆನಂದಗೊಳ್ಳುತ್ತಿದ್ದಳು.

ನಟರಾಜ ಬಂದರೆ ಹೋಗುವವರೆಗೂ ಅವನ ರೂಪನ್ನು ಕದ್ದು ಕದ್ದು ನೋಡಿ ಕಣ್ಣುತುಂಬಿಸಿ ಕೊಳ್ಳುತ್ತಿದ್ದಳು. ತನ್ನ ಪತಿಯಾಗುವವನು ತನ್ನ ಆತ್ಮೀಯ ಮಾವ, ಸುಂದರ ಯುವಕ, ದೊಡ್ಡ ಅಧಿಕಾರಿ. ಇಂಥವರ ಜೊತೆ ಬಾಳುವೆ ನಡೆಸಲು ನಾನು ಎಷ್ಟು ಅದೃಷ್ಟಮಾಡಿದ್ದೇ ಎಂದು ಮನಸ್ಸಿನಲ್ಲಿಯೇ ಹಿಗ್ಗುತ್ತಿದ್ದಳು.

ಯುಗಾದಿ ಹಬ್ಬದ ದಿನ ಎಲ್ಲರೂ ಎರೆದುಕೊಂಡು ಹೊಸಬಟ್ಟೆಗಳನ್ನು ಹಾಕಿಕೊಂಡರು, ನಟರಾಜನೂ ಎರೆದುಕೊಂಡ. ಮಂಗಳೆ ಬೀರುವಿನಲ್ಲಿಟ್ಟಿದ್ದ ಹೊಸ ಪ್ಯಾಂಟು ಬುಷ್‌ಕೋಟು ತಂದು "ರಾಜಾ! ತಕೊಳ್ಳೋ ನಿಮ್ಮ ಭಾವ ನಿನಗಾಗಿ ಅಗಲೇ ಹೊಲಿಸಿಟ್ಟಿದ್ದರು. ಹಬ್ಬ ನೀನೂ ಹೊಸದು ಹಾಕ್ಕೋ" ಎಂದು ತಮ್ಮನಿಗೆ ಕೊಟ್ಟಳು.

ಏನಕ್ಕಾ ಇದೆಲ್ಲಾ? ಈಗ್ಯಾಕೆ ಇಷ್ಟು ಭಾರೀದು ಹೊಲಿಸೋಕೆ ಹೋದ್ರೂ ಭಾವ? ಅನ್ನುತ್ತಿರುವಂತೆಯೇ ಮೂರ್ತಿ ಅಲ್ಲಿಗೆ ಬಂದು.

"ಏನಪ್ಪಾ! ರಾಜಾ... ಮುಂದೆ ಅಳಿಯ ಆಗೋವ್ನು ಈಗಲೇ ಏನೋ ಆಕ್ಷೇಪಣೆ ಮಾಡುವಂತಿದೆಯಲ್ಲಾ! ಹೋಗಲಿ ಇದು ಚೆನ್ನಾಗಿಲ್ಲದಿದ್ದರೆ ಬೇಡ ಈ ಕೂಡಲೇ ಇನ್ನೊಂದು ಜೊತೆ ಫಸ್ಟ್‌ಕ್ಲಾಸಾಗಿ ಹೊಲಿಸಿ ಕೊಡ್ತೀನೀ ಬಿಡು" ಎಂದು ತಮಾಷಿ ಮಾಡಿದರು.

"ಹೋಗಿ ಭಾವ, ನಾನು ಅಳಿಯಾನು ಅಲ್ಲ. ಗೆಳೆಯಾನೂ ಅಲ್ಲ. ನಿಮ್ಮ ಹೆಂಡತಿ ತಮ್ಮ ಇಷ್ಟೆ. ಈಗ್ಯಾಕೆ ನನಗೆ ಇಷ್ಟು ಭಾರಿ ಸೂಟು ಅಂದೆ"?

"ಓ .. ಹೋ... ಹೋ ಆಗಲಿ... ಆಗಲಿ" ಅಳಿಯ ಆದಾಗ ಇನ್ನೂ ಭಾರೀ ಹೊಲಿಸಿ ಕೊಡೋಣ. ಹಬ್ಬದದಿನ ಇದನ್ನ ಹಾಕ್ಕೋ ಹೋಗು.... ಎಂದು ಪುನಃ ತಮಾಷಿ ಮಾಡಿದರು.

ಅವರ ಹಾಸ್ಯಕ್ಕೆ ಕೆಲಸ ಏನು? ಹೋಗೋ ರಾಜಾ ಹೊಸದು ಹಾಕಿ ಕೊಂಡುಬಂದು ಬೇವು-ಬೆಲ್ಲ ತಿನ್ನು" ಅಂದಳು ಮಂಗಳೆ.

ಸ್ನಪ್ ಕಲರ್ ಪ್ಯಾಂಟು, ಸ್ವಚ್ಛ ಬಿಳಿಯ ಟೆರಲಿನ್ ಬುಷ್ ಕೋಟು, ಅವನ್ನು ಹಾಕಿಕೊಂಡು ನಟರಾಜ ರೂಮಿನಲ್ಲಿ ನಿಲುಗನ್ನಡಿ ಮುಂದೆ ನಿಂತು ಕ್ರಾಪ್ ಬಾಚಿಕೊಳ್ಳುತ್ತಿದ್ದ.

ಸುಶೀಲ ಬೇವು-ಬೆಲ್ಲದ ಬಟ್ಟಲನ್ನು ಹಿಡಿದು ರೂಮಿನೊಳಕ್ಕೆ ಬಂದಳು. ನಟರಾಜನ ಮುಖ ಕನ್ನಡಿಯಲ್ಲಿ ಪ್ರತಿಬಿಂಬಿಸಿತ್ತು. ಅದರ ಜೊತೆಯಲ್ಲಿ ಸುಶೀಲೆಯ ಪ್ರತಿಬಿಂಬವೂ ಮೂಡಿತು.

ಆ ಜೋಡಿಯನ್ನು ಇಬ್ಬರೂ ನೋಡಿದರು. ಇಬ್ಬರಲ್ಲಿಯೂ, ಮಿಂಚು ಹೊಳೆದಂತಾಯಿತು. ಸುಶೀ ಕೂಡ ಎರೆದ ಕಲೆಯನ್ನು ಸಡಿಲವಾಗಿ ಜಡೆಹೆಣೆದು ಮಲ್ಲಿಗೆ ಹೂ ಮುಡಿದಿದ್ದಳು. ಲೈಟ್ ರೋಜ್ ಬಣ್ಣದ ರೇಷ್ಮೆ ಸೀರೆ ಉಟ್ಟಿದ್ದಳು. ಸ್ವಲ್ಪ ಕೆಂಪಾಗಿದ್ದ ಅವಳ ಬಣ್ಣಕ್ಕೆ ಆ ಸೀರೆ ತುಂಬಾ ಒಪ್ಪುತ್ತಿತ್ತು.

ಕಮಲ ದಳದಂತಿದ್ದ ಕಣ್ಣಿಗೆ ಕಾಡಿಗೆ ಹಚ್ಚಿದಳು. ಮಾಟವಾದ ಮೂಗು, ಬಾಯಿ, ಹವಳದ ಬಣ್ಣದ ತುಟಿಯಲ್ಲಿ ಕಿರುನಗೆ ಮೂಡಿತ್ತು. ಅವಳ ಮನಸ್ಸಿನ ಉತ್ಸಾಹ ಮುಖದಲ್ಲಿ ಮೂಡಿ ಹೊರ ಚೆಲ್ಲಿತ್ತು.

ಈ ರೂಪ ರಾಶಿಯನ್ನು ಕನ್ನಡಿಯಲ್ಲಿ ನೋಡಿ ನಟರಾಜ ಒಂದು ನಿಮಿಷ ಸ್ತಬ್ಧನಾದ.

" ಇದೋ....ತೆಗೆದುಕೊಳ್ಳಿ... ಬೇವು - ಬೆಲ್ಲ " ಎಂದು ಅವನ ಹತ್ತಿರ ಬಂದಳು.

ಬಾ ಸುಶೀ ಏನು ಇಷ್ಟೊಂದು ಅಲಂಕಾರವಾಗಿ ಬಿಟ್ಟಿದ್ದೀಯಲ್ಲಾ ! ಅಂದು ಕಣ್ಣು ಅಗಲಿಸಿ ಅವಳನ್ನೇ ನೋಡಿದ.

ಅವನ ನೋಟವನ್ನು ಎದುರಿಸಲಾರದೇ ತಲೆ ತಗ್ಗಿಸಿದಳು ಸುಶೀ.... ಅಲಂಕಾರ ಏನು ಬಂತು ? ಅಪ್ಪ ತಂದ ಹೊಸಸೀರೆ ಹಬ್ಬ ಅಂತ ಉಟ್ಟಿದ್ದೀನಿ ಅಷ್ಟೆ. ಅಂದಳು. ಅವಳ ಮುಖದಲ್ಲಿ ಮಂದಹಾಸ ಮಿನುಗುತ್ತಿತ್ತು.

ಅಂತೂ ಏನೋ ಹೊಸಾ ರೀತಿಯಿಂದ ಕಾಣ್ತೀಯಾ :

ನಿಮ್ಮ ಕಣ್ಣಿಗೆ ನಾನು ಯಾವಾಗಲೂ ಹೊಸಬಳೇ ; ಹಳಬಳಾದ ಮೇಲಾದರೂ ಗುರ್ತಿಸ್ತೀರೋ ಏನೋ ನೋಡಬೇಕು. ಅಂದಳು ನಟರಾಜನತ್ತ ಓರೆಗಣ್ಣಿನಿಂದ ನೋಡುತ್ತಾ.

ಸುಶೀ .. ನೀನು ಹಳಬಳಾಗುವುದೇ ಬೇಡ. ನಿತ್ಯ ನೂತನವಾಗಿರು.

ಅಂದರೆ ! ನೀವು ಹೀಗೆ ದೂರ - ದೂರವಾಗಿ ಹೊಸಬರಾಗಿಯೇ ಇರುವಿರೇನು ? ಅಂದಳು ಮೋಹಕವಾಗಿ ನಗುತ್ತಾ.

ನಟರಾಜ ಯಾವ ಭಾವನೆಯನ್ನೂ ತೋರದೆ " ಅಲ್ಲಾ ಸುಶೀ, " ನಾನು

ಇದ್ದೀನೆ. ಎಲ್ಲಿ ! ಬೇವು ಬೆಲ್ಲ ಕೊಡು'' ಅಂದ.

ಸುಶೀಲಳ ಉತ್ಸಾಹಕ್ಕೆ ತಣ್ಣೀರೆರಚಿದಂತಾಯಿತು. ಅವಳು ಏನೇನೋ ಭಾವನೆಗಳನ್ನು ಅವನಿಂದ ನಿರೀಕ್ಷಿಸಿದ್ದಳು. ತನ್ನಂತೆ ಅವನು ಮಾತನಾಡಲು ಕಾತುರನಾಗಿರಬಹುದು. ಇಬ್ಬರೇ ಸಂಧಿಸಿದಾಗ ತಮ್ಮ ಮುಂದಿನ ಮದುವೆ ವಿಚಾರ ಏನಾದರೂ ತಮಾಷಿ ಮಾಡಬಹುದು ; ಆಗ ತಾನು ನಾಚಿ ನಿಂತಾಗ ಮಲ್ಲಿಗೆ ಮುಡಿದ ತನ್ನ ನೀಳ ಜಡೆಯನ್ನು ಹಿಡಿದೆಳೆಯಬಹುದು...ತಾನಾಗ ಅಲ್ಲಿಂದ ಓಡಿಬಿಡಬೇಕು. ಎಂದು ಮನಸ್ಸಿನಲ್ಲಿಯೇ ಏನೇನೋ ಕಲ್ಪನೆ ಮಾಡಿ ಕೊಂಡು ಬಂದಿದ್ದಳು.

ಆದರೆ ನಟರಾಜನ ಸಾಮಾನ್ಯವಾದ ಮಾತು ರೀತಿ ಅವಳನ್ನು ತಲ್ಲಣಿ ಸುವಂತೆ ಮಾಡಿತು. ಕಿರುನಗೆಯಿಂದ ಅರಳಿದ್ದ ಮುಖ ಮುದುಡಿತು. ಬೇವು ಬೆಲ್ಲವನ್ನು ನಟರಾಜನ ಕೈಗೆ ಕೊಡಲು ಮುಂದೆ ನೀಡಿದಳು.

ಹಾಸ್ಯ ರಾಣಿ ಸುಶೀ ಈಗ ಮುಖ ಬಿಗಿದುಕೊಂಡು ನಿಂತಿರುವುದು ನಟರಾಜನಿಗೆ ಕೆಡುಕೆನಿಸಿತು.

''ಊಂ ಹುಂ... ಹಾಗೆ ಕೊಟ್ಟರೆ ನನಗೆ ಬೇಡ''.

''ಮತ್ತೆ ? ಇನ್ನು ಹೇಗೆ ಕೊಡಬೇಕು'' ?

''ನಿನ್ನ ಕೈಯಿಂದಲೇ ಬೇವು-ಬೆಲ್ಲವನ್ನು ತಿನ್ನಿಸಬೇಕು. ಆಂ''....ಎಂದು ಅವಳ ಮುಂದೆ ಬಾಯ ತೆರೆದ.

ತೀರ ಹತ್ತಿರ ಬಂದು ಬಾಯಿ ತೆರೆದ ನಟರಾಜನನ್ನು ನೋಡಿ ಈಗ ಸುಶೀಗೆ ತುಂಬಾ ನಾಚಿಕೆಯಾಯಿತು. ಆದರೂ ಅವಳ ಒಳ ಮನಸ್ಸು ಹಿಗ್ಗಿ ಹಗುರವಾಯಿತು. ''ಥೂ .. ತುಂಬ ತುಂಟ ಮಾವ'' ಎಂದು ಬೇವು-ಬೆಲ್ಲವನ್ನು ನಟರಾಜನ ಬಾಯಿಗೆ ಹಾಕಿದಾಗ ಇವಳದೊಂದು ಬೆರಳು ನಟರಾಜನ ಹಲ್ಲಿನ ನಡುವೆ ಸೇರಿಕೊಂಡಿತು.

''ಉಶ್ಶ್ .. ಹಾ... ಹೋಯಿತೂ ಬೆರಳು'' ಎಂದು ಕೂಗಿಕೊಂಡಳು.

''ಅಯ್ಯೋ ! ಪಾಪ ! ಎಲ್ಲಿ ನೋಡೋಣ ಏನಾಯಿತು'' ? ಎಂದು ಅವಳ ಕೈಯನ್ನು ಹಿಡಿದು ನೋಡಿ ಛೆ....ಛೆ....ಏನು ಕೆಟ್ಟ ಹಲ್ಲುಗಳಪ್ಪ'' ! ಅಂದು ಮೃದುವಾಗಿ ಕೈ ಸವರಿದ.

ಕೈ ಕೊಸರಿ ಕೊಂಡು ''ಹೋಗಲಿ ಬಿಡು ಮಾವ'' ! ಎಂದು ಅಭ್ಯಾಸ ಬಲ

ದಿಂದ ಹೇಳಿಬಿಟ್ಟಳು ಸುಶೀ.

"ಲೇ....ಸುಶೀ !... ಸಮಯ ಸಿಕ್ಕಿದ್ದೇ ಸಾಕು ಅಂತ ಇಬ್ಬರೂ ಹರಟೆ ಬಡೀತಾ ಕೂತ್‌ಬಿಟ್ರೆ ಟಿಫಿನ್ ತೆಕೊಳ್ಳೋಕೆ ಅಪ್ಪ - ಅಮ್ಮ ಎಲ್ಲಾ ಕಾಯ್ತಾ ಇದಾರೆ ಬಾರೇ" "ಬಾ... ಮಾವ, ಎಂದು ಕರೆಯುತ್ತಲೇ" ಬಂದಳು.

ಸುಶೀ ಮನಸ್ಸು ಸಮಾಧಾನಗೊಂಡು ಹಿಗ್ಗಿ ಹೂವಾಗಿತ್ತು. ನಟರಾಜ ಹಿಡಿದ ಕೈಯ್ಯನ್ನು ಮತ್ತೆ ಮತ್ತೆ ನೋಡಿ ಕೊಳ್ಳುತ್ತಾ ಒಂದೇ ಓಟಕ್ಕೆ ಒಳಕ್ಕೆ ಓಡಿದಳು.

ಆದ ಅವಳ ಕಲ್ಪನೆಯಂತೆ ನಟರಾಜನಿಗೆ ಮಾತ್ರ ಯಾವ ಭಾವೋದ್ವೇಗವೂ ಇರಲಿಲ್ಲ. ನಟರಾಜ ಮನಸ್ಸಿನಲ್ಲಿಯೇ ಅಂದುಕೊಂಡ "ಛೆ! ಪಾಪ ! ಹುಚ್ಚು ಹುಡುಗಿ ! ನನ್ನನ್ನು ಇಷ್ಟು ಹಚ್ಚಿಕೊಂಡುಬಿಟ್ಟಿದ್ದಾಳಲ್ಲಾ ! ನನ್ನ ಮನಸ್ಸಿನಲ್ಲಿರುವ ವಿಷಯ ತಿಳಿದರೆ ಇನ್ನೆಷ್ಟು ಆಘಾತವಾದಿತೋ, ಅವಳ ಮನಸ್ಸಿಗೆ ಅವಳಷ್ಟೇ ಏಕೆ ? ಈ ಮನೆಯಲ್ಲಿ ಪ್ರತಿಯೊಬ್ಬರೂ ನನಗಾಗಿಯೆ; ಸುಶೀಲ ಮೀಸಲು, ನಾನು ಈ ಮನೆ ಅಳಿಯ ! ಅನ್ನುವ ಅಭಿಪ್ರಾಯದಲ್ಲಿದಾರೇ. ನಾನೇನು ಮಾಡಲಿ ದೇವರ ಸಂಕಲ್ಪ ಇದ್ದ ಹಾಗೆ ಆಗಲಿ " ಎಂದು ಸುಮ್ಮನಾದ.

ಮಂಗಳೆ ಅಡಿಗೆ ಮನೆಯಲ್ಲಿ ಅಡಿಗೆ ಭಟ್ಟರಿಗೆ ಸೂಚನೆ ಕೊಡುತಿದ್ದಳು. "ಬಿಸಿ ಬೇಳೆಭಾತು, ಬೊಂಡ, ಒಂದಿಷ್ಟು ಮೈಸೂರು ಪಾಕುಮಾಡಿ ಬಿಡಿ." ಎಂದು.

ಸಿದ್ಧವಾಗಿದ್ದ ಇಡ್ಲಿ - ಚಟ್ನಿಯನ್ನು ಪ್ಲೇಟುಗಳಲ್ಲಿ ಇಟ್ಟು ಎಲ್ಲರಿಗೂ ಕೊಡಲು ಸುಮಿತ್ರ ಅಣಿಮಾಡುತ್ತಿದ್ದಳು.

ನಟರಾಜ ತನ್ನ ಅಕ್ಕನಿಗೆಂದು ತಂದಿದ್ದ ಯುಗಾದಿ ಉಡುಗೆರೆ, ಒಂದು ರೇಷ್ಮೆ ಸೀರೆಯನ್ನು ಕೈಯಲ್ಲಿ ಹಿಡಿದು "ಅಕ್ಕಾ" ! ಎಂದು ಕೂಗುತ್ತಾ ಅಡಿಗೆ ಮನೆ ಬಾಗಿಲ ಬಳಿ ಬಂದು ನಿಂತ.

ಬಾ ರಾಜಾ ! ಎಷ್ಟೊತ್ತೋ ಕೂಗೋದು ಇಡ್ಲಿಯಲ್ಲಾ ಆರಿಹೋಗುತ್ತಪ್ಪಾ ! ಅಂದಳು ಮಂಗಳೆ.

ಅಲ್ಲಿಯೇ ಇದ್ದ ಸುಮಿತ್ರ " ಇನ್ನೇನು ಮಾವನಿಗೆ ಸುಶೀ ಇದ್ದು ಬಿಟ್ರೆ. ನಾವೆಲ್ಲ ಮರ್ತೇ ಹೋಗ್ತೀವೆ, " ಅಂದಳು.

"ಅಂತಹದೇನೂ ಇಲ್ಲ. ಅದಿರಲಿ ನೋಡಕ್ಕಾ ಈ ಸೀರೆ ನಿನಗೆ ಇಷ್ಟವಾಯಿತೇ" ? ಅಕ್ಕನ ಕೈಲಿ ಸೀರೆ ಕೊಟ್ಟ ನಟರಾಜ.

ನವಿಲು ಬಣ್ಣ, ಅಂಚು ಸೆರಗು ಜರೀ ಇರೋ ಸೀರೆ ನೋಡಿ ಮಂಗಳೆ ಸಂತೋಷದಿಂದ "ತುಂಬಾ ಚೆನ್ನಾಗಿದೆ ರಾಜಾ ! ಯಾಕೋ ಇಷ್ಟು ಭಾರೀದು ತಂದೆ" ?

"ಏನು ಮಹಾ ಭಾರಿ ನಿನ್ನತ್ರ ಬೇಕಾದಷ್ಟು ಇಂತಹದೇ ಸೀರೆ ಇದೆ. ಅದರ ಜೊತೆಗೆ ಇದೊಂದು ಅಷ್ಟೆ". ಅಂದ.

ಸುಮಿತ್ರ ಇಡ್ಲಿ ತಟ್ಟೆ ಹಿಡಿದು ಎಲ್ಲರಿಗೂ ಕೊಡಲು ಬಂದಳು. ನಟರಾಜ ಅವಳನ್ನು ಎವೆ ಇಕ್ಕದೆ ನೋಡುತ್ತಲೇ ಇದ್ದ. ಸುಮಿತ್ರ ಕೂಡ ಎರೆದುಕೊಂಡು ಸಡಿಲವಾಗಿ ಜಡೆ ಹೆಣೆದುಕೊಂಡಿದ್ದಳು ಇನ್ನೂ ಯಾವ ಆಭರಣವನ್ನೂ ಹಾಕಿಕೊಂಡಿರಲಿಲ್ಲ. ರಾಜಿ, ಸುಶೀಗಿಂತ ಸುಮಿತ್ರಳ ಕಣ್ಣುಗಳು ಬಲು ಅಂದವಾಗಿದ್ದವು.

ಬಾಗಿಲಿಗೆ ಅಡ್ಡಲಾಗಿ ನಟರಾಜ ನಿಂತಿದ್ದುದರಿಂದ "ಎಲ್ಲಿ ಸ್ವಲ್ಪ ದಾರಿ ಬಿಡು ಮಾವ" ಅಂದಳು. ಆದರೂ ನಟರಾಜ ಅಲುಗಾಡದೆ ಅವಳನ್ನೇ ನೋಡುತ್ತಿದ್ದ.

"ಇದೇನೋ ಮಾವ ! ಎಂದೂ ನೋಡದವನ ಹಾಗೆ ನನ್ನನ್ನು ಹಾಗೆ ನೋಡ್ತಿದ್ದೀಯಲ್ಲಾ ! ಕೋ ಇಡ್ಲಿ ತಕೋ ತಿನ್ನು" ಎಂದು ತಟ್ಟೆ ಕೈಗೆ ಕೊಟ್ಟಳು.

"ಹೌದು ಸುಮಿತ್ರ, ಹೀಗೆ ... ಹೀಗೆಯೇ... ಥೇಟ್ ನಿನ್ನ ಹಾಗೆಯೇ ಆ ಲಕ್ಕಿ ಇರೋದು" ಅಂದ.

"ಅದ್ಯಾರಪ್ಪಾ ನನ್ನ ಹಾಗಿರೋಳು" ?

"ನಾನು ಕೆಲಸ ಮಾಡೋ ಕಡೆ ಒಬ್ಬ ಲಂಬಾಣಿ ಹುಡುಗಿ ಸುಮ್ಮೀ, ನಿನ್ನ ಕಣ್ಣುಗಳನ್ನು ನೋಡಿದರೆ ಅದೇ ಹೊಳಪು, ಅದೇ ವಿಶಾಲ"

ಅಷ್ಟು ಕೇಳುತ್ತಿದ್ದಂತೆಯೇ ಅಲ್ಲಿಯೇ ಇದ್ದ ಮಂಗಳೆಯ ಎದೆ ಡವ ... ಡವನೆ ಬಡಿದುಕೊಳ್ಳತೊಡಗಿತು. ಅಡಗಿದ್ದ ನೆನಪು ಮರುಕಳಿಸಿತು. ಏನೋ ರಾಜ ! ಅದು ... ಅದ್ಯಾವ ಹುಡುಗಿಯೊ" ?

"ನೋಡಕ್ಕ ಆ ಲಂಬಾಣಿ ಹುಡುಗಿ ಇಲ್ಲದಿದ್ದರೆ ಆವತ್ತು ನಾನು ಹಾವು ಕಡಿದು ಸಾಯಬೇಕಾಗಿತ್ತು. ನನ್ನ ಪ್ರಾಣವನ್ನೇ ಉಳಿಸಿದಳು. ಅಕ್ಕ"

ಮಂಗಳೆ ಉತ್ಸುಕತೆಯಿಂದ "ಆ ಲಂಬಾಣಿ ಎಷ್ಟು ವರ್ಷದ ಹುಡಿಗಿಯೋ ರಾಜ" ?

"ಅದೇ ಅಕ್ಕ ಈ ಸುಮ್ಮೀ ಅಥವಾ ಸುಶೀ ವಯಸ್ಸೇ ಇರಬಹುದು ಥೇಟ್

ನಮ್ಮ ಸುಮೀನ ನೋಡಿದಹಾಗೇ ಆಗುತ್ತೆ ಕಣಕ್ಕ, ಲಂಬಾಣಿಯರಲ್ಲಿ ಅಷ್ಟು ಚೆನ್ನಾಗಿರೋ ಹುಡಿಗೀನ ನಾನು ನೋಡೇ ಇಲ್ಲ" ಅಂದ.

"ಓಹೋ! ಅಲ್ಲೊಬ್ಬಳು ಲಂಬಾಣಿ ಮೋಹಿನಿ ಮಾವನಿಗೆ ಮಂತ್ರ ಹಾಕಿದಾಳೆ ಅಂತ ಕಾಣುತ್ತಮ್ಮಾ! ಆದರೆ ನಮ್ಮ ಸುಶೀ ಇದನ್ನ ಕೇಳಿದರೆ ಮಾವನ್ನ ಅಲ್ಲಿಗೆ ಕಳಿಸೋದೇ ಇಲ್ಲ" ಎಂದು ನಗುತ್ತಾ ತಿಂಡಿ ಹಂಚೋ ಕೆಲಸಕ್ಕೆ ಹೊರಟು ಹೋದಳು.

ನಟರಾಜನ ಹಿಂದು ಮುಂದೆಯೇ ಇರುತ್ತಿದ್ದ ಸುಶೀಗೆ ಈ ಮಾತು ಕೇಳಿಸಿಯೇ ಕೇಳಿಸಿತು, ಅವಳ ಮನಸ್ಸು ತಲ್ಲಣಿಸಿತು.

ಮಂಗಳೆಯ ಅಂತರಂಗದಲ್ಲಿ ತರಂಗಗಳೇಳಲು ತೊಡಗಿದವು. "ಲಂಬಾಣಿ ಹುಡಿಗಿ" ಎಂಬ ಮಾತು ಅವಳ ಕರುಳನ್ನೇ ಕಲಕಿತು, ಹಿಂದಿನ ಘಟನೆ ಜ್ಞಾಪಕಕ್ಕೆ ಬಂದಿತು. ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಗರಬಡಿದಂತೆ ನಿಂತು ಬಿಟ್ಟಳು. "ಆ ಹುಡಿಗಿ ಅದೇ ಲಂಬಾಣಿ ಇರಬಹುದೇ"? ಒಂದು ವೇಳೆ ನಿಜ ವಾಗಿದ್ದರೆ!... ಇಪ್ಪತ್ತು ವರ್ಷಗಳ ಕಾಲ ಬಚ್ಚಿಟ್ಟಿದ್ದ ಒಂದು ತಪ್ಪನ್ನು ಈಗ ಬಯಲು ಮಾಡಲೇ? ಅಯ್ಯೋ ದೇವರೇ? ನನ್ನ ಕಂದನು ದೊಡ್ಡವಳಾಗಿ ಬೆಳೆದು ಸುಖವಾಗಿರುವುದನ್ನ ಒಂದು ಬಾರಿ ಕಣ್ಣಾರ ನೋಡುವ ಭಾಗ್ಯವನ್ನು ನನಗೆ ಕರುಣಿಸಲಾರೆಯಾ"? ಎಂದು ಮನದಲ್ಲಿಯೇ ಮಿಡುಕಿ ದೇವರಿಗೆ ಮೊರೆಯಿಟ್ಟಳು, ಅವಳಿಗೆ ಅರಿವಿಲ್ಲದಂತೆಯೇ ಬಿಕ್ಕಿ-ಬಿಕ್ಕಿ ಅಳಲು ತೊಡಗಿದಳು.

ನಟರಾಜನಿಗೆ ಗಾಬರಿಯಾಯಿತು. "ಯಾಕಕ್ಕಾ! ಏನಾಯಿತು? ಯಾಕ್ ಅಳ್ತೀಯಾ"? ಎಂದು ತಿನ್ನುತ್ತಿದ್ದ ತಿಂಡಿ ತಟ್ಟೆಯನ್ನು ಅಲ್ಲಿಯೇ ಇಟ್ಟು ಅಕ್ಕನ ಬಳಿ ಹೋದ, ಮಂಗಳೆಗೆ ತಲೆಸುತ್ತಿದಂತಾಗಿ ಅಲ್ಲಿಯೇ ಗೋಡೆಗೆ ಒರಗಿ ಕುಳಿತಳು.

ನಟರಾಜ ಅಕ್ಕನನ್ನು ಹಿಡಿದುಕೊಂಡು "ಭಾವಾ... ಭಾವಾ" ಎಂದು ಕೂಗಿ ಕೊಂಡ, ಮನೆಯಲ್ಲಿ ಎಲ್ಲರೂ ಬಿಟ್ಟ ಕೆಲಸ ಬಿಟ್ಟು ಮಂಗಳೆಯ ಬಳಿ ಓಡಿ ಬಂದರು.

ನಟರಾಜನೂ, ಮೂರ್ತಿಯವರೂ ಅವಳನ್ನು ಕರೆದುಕೊಂಡು ಹೋಗಿ ಮಂಚದಲ್ಲಿ ಮಲಗಿಸಿದರು. ನಟರಾಜ ಗಾಬರಿಯಿಂದ "ಯಾಕ್ ಭಾವಾ ಅಕ್ಕನಿಗೆ ಪದೇ-ಪದೇ ಹೀಗಾಗೋದಕ್ಕೆ ಕಾರಣ ಏನು"? ಅಂದ.

"ಏನೋಪ್ಪ ಅವಳಿಗೆ ಬ್ರೈನೇ ಕೆಟ್ಟುಹೋಗಿದೆ. ನಾವಂತೂ ತುಂಬಾ ಹುಷಾರಾಗಿ ನೋಡಿಕೊಳ್ಳುತ್ತಿರುತ್ತೇವೆ. ಆದರೂ ಒಂದೊಂದು ಸಮಯ ಏನೋ ಚಿಂತೆ-ಗಾಬರಿ ಆಗಿಬಿಟ್ಟರೆ ಹೀಗಾಗ್ ಬಿಡುತ್ತೆ. ಈಗ ಏನಾಯಿತಪ್ಪಾ" ಎಂದರು ಮೂರ್ತಿ.

"ಅಡಿಗೆ ಮನೇಲಿ ಎಲ್ಲಾ ಮಾತಾಡ್ತಾ ಇದ್ದೆವು. ಏನೋ ಮಾತಿಗೆ ಮಾತು ಬಂದು ನಾನಿರೋಕಡೆ ಒಬ್ಬ ಲಂಬಾಣಿ ಹುಡಿಗಿ ನಮ್ಮ ಸುಮ್ಮಿ ಇದು ಹಾಗೆ ಇದಾಳೆ ಅಂದೆ, ಅಷ್ಟೆ. ಅಕ್ಕ ಏನೋ ಒಂದು ತರಹ ಸಪ್ಪಗಾದಳು ಆ ಮೇಲೆ ಇದ್ದಕ್ಕಿದ್ದಂತೆ ಅಳಲು ಶುರುಮಾಡಿಬಿಟ್ಟಳು ಭಾವಾ" ಅಂದ ನಟರಾಜ

"ಓ... ಸರಿ... ಸರಿ ಅಲ್ಲೇ ಇರೋದು ಮೂಲ. ನೋಡು ರಾಜಾ ನಿಮ್ಮ ಅಕ್ಕನಿಗೆ ಲಂಬಾಣಿ ಅನ್ನುವ ಮೂರಕ್ಷರ ಕಿವಿಗೆ ಬಿದ್ದರೆ ಸಾಕು ಹುಚ್ಚಿಹಾಗೆ ಆಗ್ತಾಳಪ್ಪಾ ! ಇದೇನು ಕಾರಣ ಅನ್ನೋದು ಆ ದೇವರೇ ಬಲ್ಲ" ಎಂದು ನಿಟ್ಟುಸಿರು ಬಿಟ್ಟರು ಮೂರ್ತಿ.

ತಲೆಗೆ ತಣ್ಣೀರು ಪಟ್ಟುಹಾಕಿ ಗಾಳಿ ಬೀಸುತ್ತಿದ್ದರು ಮೂರ್ತಿ. ಸ್ವಲ್ಪ ಹೊತ್ತಿನ ಮೇಲೆ ಹುಷಾರಾಗಿ ಎದ್ದಳು ಮಂಗಳೆ. ಆದರೆ ಉತ್ಸಾಹವಿಲ್ಲದೆ ಏನೊ ಚಿಂತೆ ಮನಸನ್ನಾವರಿಸಿತು. ಅಭ್ಯಾಸಬಲದಿಂದ ಕೆಲಸದಲ್ಲಿ ತೊಡಗಿದಳು. ಎಲ್ಲರನ್ನೂ ಕೂರಿಸಿ ಊಟಕ್ಕೆ ಅವಳೇ ಬಡಿಸಿದಳು. ಮಂಗಳೆಯ ಅಸ್ವಸ್ಥತೆಯಿಂದಾಗಿ ಯುಗಾದಿ ಹಬ್ಬ ಒಂದುರೀತಿ ಸಪ್ಪೆಯಾಗಿ ಕಳೆಯಿತು.

ಮಾರನೆಯದಿನ ನಟರಾಜ ಹೊರಡಬೇಕಾಗಿತ್ತು. ವೆರಾಂಡದಲ್ಲಿ ಮೂರ್ತಿಯೂ-ನಟರಾಜನೂ ಸೋಫಾ ಮೇಲೆ ಕುಳಿತು ತಮ್ಮ ಕೆಲಸದ ವಿಚಾರವಾಗಿ ಮಾತನಾಡುತ್ತಿದ್ದರು.

"ಏನಪ್ಪಾ ! ರಾಜಾ ! ನಾಳೆ ಬೆಳಗ್ಗೆಯೇ ಹೊರಡುವವನೋ ನೀನು" ? ಅಂದರು.

"ಹೌದು ಭಾವ ! ಒಂದು ದಿನ ಕೆಲಸ ನಿಂತರೂ ನಮಗೆ ತೊಂದರೆ".

"ಸರಿ ನೋಡು ಅಲ್ಲಿಯ ಸರ್ವೆ ಕೆಲಸ ಮುಗಿಸಿ ಬಂದ ಕೂಡಲೇ ಮದುವೆ ಕೆಲಸವೊಂದು ನೆರವೇರಿಸಿ ಬಿಡೋಣ ಅಂತಿದೇನಪ್ಪಾ"

"ಯಾರ ಮದುವೆ ಭಾವ" ?

"ಇನ್ಯಾರದ್ದು ನಿಂದು-ಸುಶೀದು".

ಈ ಮಾತಿಗೆ ನಟರಾಜ ಏನೊಂದು ಹೇಳದೆ ತಲೆ ತಗ್ಗಿಸಿ ಕುಳಿತ.

"ಯಾಕಪ್ಪಾ ರಾಜಾ ! ಏನ್ ಯೋಚನೆ ಮಾಡ್ತೀ"?

"ಏನೂ ಇಲ್ಲ ಭಾವಾ ಈಗ... ನಂಗೆ... ಅಂದ ಅನುಮಾನಿಸುತ್ತಾ ಏನಪ್ಪಾ ! ಏನೋ ರಾಗ ಎಳೀತಿದೀಯಲ್ಲಾ."

"ಅಲ್ಲಾ ಈಗಲೇ ಮದುವೆಗೆ ಅವಸರವೇನು ಭಾವಾ"?

"ಸರಿಹೋಯಿತಪ್ಪ ನಿನಗವಸರವಿಲ್ಲ ಅಂದರೆ ಹೆಣ್ಣು ಹೆತ್ತವರು ನಾವು ಇನ್ನೆಷ್ಟು ದಿನ ಹಾಗೇ ಇಟ್ಟುಕೊಂಡಿರೋಣ."

"ಸುಶೀಗೆ ಮಾಡಿಬಿಡಿ ಭಾವಾ ! ಅಂದ ಅನುಮಾನಿಸುತ್ತಾ. ಮೂರ್ತಿ ಘಟ್ಟಿಯಾಗಿ ನಗುತ್ತಾ..."ಲೇ ಮಂಗಳಾ ಇಲ್ಲಿ ಬಾರೆ" ಎಂದು ಕರೆದರು ಏನೊಂದ್ರೀ"? ಎಂದು ಮಂಗಳೆ ಒಳಗಿನಿಂದ ಬಂದಳು.

"ಕೇಳು ಕೇಳು ನಿನ್ನ ತಮ್ಮನ ಮಾತು ಅವನಿಗೇನೋ ಇನ್ನೂ ಈಗಲೇ ಮದುವೆ ಬೇಡವಂತೆ."

"ಏನೋ ರಾಜ ! ವಯಸ್ಸಾದ ಅಪ್ಪ-ಅಮ್ಮ ಇರೋ ಒಬ್ಬ ಮಗನಿಗೆ ಮದುವೆ ಬೇಗ ಮಾಡಿಬಿಡಬೇಕು ಅಂತ ಬಾಯ್‌ಬಾಯ್ ಬಿಡ್ತಾ ಇದ್ರೆ ನೀನೋಗಿ ಬೆಟ್ಟದ ತುದೀಲಿ ಕುಳಿತುಕೋತಿದೀಯಾ"? ಅಂದಳು.

"ಅದಿರಲಿ, ಕೇಳೇ ! ಸುಶೀಗೆ ಮಾಡಿಬಿಡಬೇಕಂತೆ. ಇವನಿಲ್ಲದೆ ಸುಶೀ ಒಬ್ಬಳಿಗೆ ಹೇಗ್ ಮಾಡಬೇಕಂತೆ"? ಅಂದರು ಮೂರ್ತಿ ಮರ್ಮವನ್ನರಿಯದೆ.

ಈಗ ಮಂಗಳೆಗೆ ಗಾಬರಿಯಾಯಿತು. "ಏನೋ ರಾಜ ! ಸುಶೀನ ನೀನು ಮದ್ವೆ ಆಗೋಲ್ವೇನೋ"?

ಇಷ್ಟು ಆತ್ಮೀಯರಾದ ಅಕ್ಕ ಭಾವನಿಗೆ ಏನೆಂದು ಹೇಳುವುದು ? ಆದರೂ ಅವರಿಗೆ ಪೂರ್ಣ ಭರವಸೆಯನ್ನು ಕೊಡಲು ತನ್ನ ಮನಸ್ಸು ಒಪ್ಪದು. ಎಂದು ಅನುಮಾನಿಸುತ್ತಾ "ಏನೋಕ್ಕಾ ಸುಶೀ ನನಗಾಗಿ ಕಾಯೋದು ಬೇಡ" ಅಂದ.

ನಟರಾಜನ ಈ ಒಂದು ಮಾತು ಅಲ್ಲಿದ್ದ ಮೂರ್ತಿ, ಮಂಗಳೆ, ಸುಮಿತ್ರ, ಎಲ್ಲರಿಗೂ ಗಾಬರಿಯನ್ನುಂಟುಮಾಡಿತು. ಸದ್ಯಕ್ಕೆ ಸುಶೀ ಅಲ್ಲಿರಲಿಲ್ಲ.

ಸುಮಿತ್ರ ಎರಡು ಹೆಜ್ಜೆ ಮುಂದೆ ಬಂದು ಕಾತುರದಿಂದ "ಇದೇನು ಮಾವಾ ಸುಶೀನ ಬೇರೆ ಗಂಡಿಗೆ ಕೊಟ್ಟು ಮದುವೆ ಮಾಡಿ ಅಂತೀಯಾ"? ಅಂದಳು.

"ಮಾಡಿದರೆ ತಪ್ಪೇನಮ್ಮ" ! ಅಂದ ನಟರಾಜ, ಯಾವ ಭಾವೋದ್ರೇಕವೂ ಇಲ್ಲದಂತೆ.

ಈ ಮಾತು ಕೇಳಿ ಮಂಗಳೆಯ ಮನಸ್ಸು ತಲ್ಲಣಿಸಿಹೋಯಿತು. " ಏನೋ ರಾಜ ! ಚಿಕ್ಕಂದಿನಿಂದ ನಿನಗಾಗಿಯೇ ಅವಳನ್ನು ಹೆಸರಿಟ್ಟು ಈಗ ಹೀಗಂತಿಯಾ "? ಅಂದಳು ದೀನಳಾಗಿ.

ಏನಪ್ಪ ರಾಜ ! ಸುಶೀನ ಮಾಡ್ಕೊಳ್ಳೋಕೆ ಇಷ್ಟ ಇಲ್ವೇನಪ್ಪಾ ? ಹೇಳಿಬಿಡು" ಎಂದರು ಮೂರ್ತಿ.

ತನ್ನನ್ನೇ ನಂಬಿಕೊಂಡಿರುವ ಅಕ್ಕ ಭಾವನ ಮನಸ್ಸು ನೋಯಿಸಲು ನಟರಾಜನ ಮನಸ್ಸು ಒಪ್ಪಲಿಲ್ಲ. ಸುಶೀ ಅಂತೂ ತನ್ನನ್ನು ಕಂಡರೆ ಪ್ರಾಣ ಬಿಡುತ್ತಾಳೆ... ಅದೇನೋ ಸರಿ. ಸುಶೀಲಳನ್ನೇ ನಾನು ಕೈ ಹಿಡಿಯಬೇಕಾದುದು ನ್ಯಾಯ. ಆದರೆ... ನನ್ನ ರಕ್ತ ಕಣ ಕಣಗಳಲ್ಲಿಯೂ, ವ್ಯಾಪಿಸಿ ನನ್ನಲ್ಲಿ ಒಂದಾಗಿ ಸೇರಿ ಹೋಗಿರುವ ಲಕ್ಕಿಯ ರೂಪವನ್ನು ಹೇಗೆ ಮರೆಯಲಿ ? ಎಂದು ಒಂದು ಕ್ಷಣ ತಲ್ಲಣಿಸಿದ.

ಛೆ... ಅದು ನಡೆಯಲಾರದ ವಿಚಾರ, ಆ ಲಂಬಾಣಿಯನ್ನು ನೆಚ್ಚಿಕೊಂಡು ಇವರೆಲ್ಲರ ಮನಸ್ಸನ್ನು ನೋಯಿಸುವುದು ಸರಿಯಲ್ಲ, ಎಂದು ತೀರ್ಮಾನಿಸಿದ.

ಕೂಡಲೇ "ಅಲ್ಲ ಭಾವ ಇನ್ನೂ ಅಲ್ಲಿಯ ಕೆಲಸ ಮುಗಿಯುವವರೆಗೂ ಮದುವೆ ಸಾಧ್ಯವಿಲ್ಲ. ಅದುವರೆಗೂ ಸುಶೀ ಕಾಯುವುದು ಬೇಡ ಅಂದೆ ಅಷ್ಟೆ. "

" ಕೇಳಿದೆಯೇನೇ ಮಂಗಳಾ ! ನಿನ್ನ ತಮ್ಮನ ಮಾತನ್ನು ಅಲ್ಲಿ ಕೆಲಸ ಏನೋ ರಾಜಾ ! ನೀನೇ ಇರಬೇಕೂಂತ ಏನೂ ಇಲ್ಲ ಬೇರೆ ಯಾರನ್ನಾದರೂ ಹಾಕಿದರಾಯಿತು. ಅದಕ್ಕೆ ಇಷ್ಟು ಯೋಚನೆಯೇನು ಬಂತು ? ನಾಳೆನೇ ಬೇಕಾದ್ರೂ ಬೇರೆಯವರನ್ನು ಹಾಕಿಸಿ ಬಿಡ್ತೀನಿ. "

ಭಾವನ ಮಾತು ಕೇಳಿ ನಟರಾಜನಿಗೆ ಗಾಬರಿಯಾಯಿತು. ಸದ್ಯ ಲಕ್ಕಿಯನ್ನು ನೋಡುವ ಭಾಗ್ಯವು ಎಲ್ಲಿ ತಪ್ಪಿಹೋಗುವುದೋ ಎಂದು ಕೂಡಲೇ "ಬೇಡಿ ಬೇಡಿ ಬಾವಾ ! ನನಗೆ ವಹಿಸಿರೋ ಜವಾಬ್ದಾರೀನ ನಾನೇ ಪೂರ್ತಿ ಮಾಡಿ ಬರ್ತೀನಿ. ಇನ್ನೇನು ಕೆಲವೇ ದಿನಗಳಲ್ಲಿ ಅಲ್ಲಿಯ ಕೆಲಸ ಮುಗಿದು ಹೋಗುತ್ತೆ " ಅಂದ.

ಇವನ ಮಾತಿನಿಂದ ಮಂಗಳೆ-ಮೂರ್ತಿಯವರುಗಳಿಗೆ ಎಷ್ಟೋ ನೆಮ್ಮದಿ ಯಾಯಿತು.

ನಟರಾಜ ಮಾರನೆ ದಿನ ಹೊರಡಲು ಸಿದ್ಧನಾದ. ಹೊರಡುವ ಮುನ್ನ ಮಂಗಳೆಯ ಬಳಿ ಹೋಗಿ "ಹೋಗಿ ಬರುತ್ತೀನೆ ಅಕ್ಕಾ" ಎಂದು ಹೇಳಿದ. ಮಂಗಳೆ ಒಬ್ಬಳೇ ಸ್ಟೋರ್ ರೂಮಿನಲ್ಲಿ ಸಾಮಾನುಗಳನ್ನು ಓರಣವಾಗಿ ಇಡು ತ್ತಿದ್ದಳು. ಅಕ್ಕ ಪಕ್ಕನೋಡಿ ಯಾರೂ ಇಲ್ಲವೆಂದು ತಿಳಿದು ತಮ್ಮನೊಂದಿಗೆ ರಾಜಾ ! ಆ ಲಂಬಾಣಿ ಹುಡುಗಿಯನ್ನು ನಾನೊಂದು ಬಾರಿ ನೋಡಬೇಕೆಂದು ಆಸೆ. ತೋರಿಸ್ತೀಯಾ ? ಅಂದಳು.

ನಟರಾಜನಿಗೆ ಅಕ್ಕನ ಅಂತರಂಗ ಏನುಗೊತ್ತು ? ತಾನು ಮೆಚ್ಚಿದ ಲಕ್ಕಿಯನ್ನು ಅಕ್ಕನು ನೋಡಿ ಮೆಚ್ಚಿದರೆ ತನ್ನ ಮನಸ್ಸಿನ ಆಸೆ ನೆರವೇರ ಬಹುದು ಎಂಬ ಒಂದು ಆಶೋತ್ತರದಿಂದ "ಓ ಆಗಲಿಅಕ್ಕ ಆ ಹುಡುಗಿಯನ್ನು ಒಂದು ಬಾರಿ ಈ ಮನೆಗೆ ಕರೆದುಕೊಂಡು ಒರುತ್ತೀನಿ, ನೋಡುವಿಯಂತೆ. ಒಳ್ಳೆ ದೇವಕನ್ನಿಕೆ ಇದ್ದ ಹಾಗಿದ್ದಾಳಕ್ಕಾ" ಅಂದ ಖುಷಿಯಿಂದ.

ಅಷ್ಟೊತ್ತಿಗೆ ಮಂಗಳೆಯನ್ನು ಹುಡುಕಿಕೊಂಡು ಮೂರ್ತಿಯೂ ಅಲ್ಲಿಗೆ ಬಂದರು "ಏನೇ ! ಹುಷಾರಾಗಿದ್ದೀಯಾ ? ನಾನು ಹೋಗಿಬರಲಾ " ? ಎಂದರು.

"ಹುಂ... ಹುಷಾರಾಗಿದ್ದೀನಿ ತಾಳಿ, ನಿಮಗೂ ರಾಜನಿಗೂ ಹಬ್ಬದ ತಿಂಡಿ ತೆಗೆದಿಟ್ಟದ್ದೆ ಕೊಡ್ತೀನಿ ಇರಿ" "ಲೇ ಸುಶೀ ಅಡಿಗೇಮನೇಲಿ ತಿಂಡಿ ಹಾಕಿದ ಡಬ್ಬಿ ಇಟ್ಟದ್ದೀನಿ ತೆಗೆದುಕೊಂಡು ಬಾರೇ " ಎಂದು ಕೂಗಿದರು.

ಸುಶೀ ರೂಮಿನಲ್ಲಿ ನಟರಾಜನ ಬಟ್ಟೆಗಳನ್ನು ಕಿಟ್‌ಬ್ಯಾಗಿಗೆ ಇಡು ತ್ತಿದ್ದಳು. ತಾಯಿ ಕೂಗಿದ್ದ ಕೇಳಿ "ಬಂದೇಮ್ಮಾ "! ಎಂದು ಅಡಿಗೆ ಮನೆಗೆ ಬಂದು ಎರಡು ಸ್ಟೀಲ್ ಡಬ್ಬಗಳನ್ನು ತೆಗೆದುಕೊಂಡು ಬಂದಳು.

ಏನಮ್ಮ ಯಜಮಾನರ ಡಬ್ಬಿಗೆ ಜಾಸ್ತಿ ತಿಂಡಿ ಹಾಕಿದ್ದೀಯೋ ? ಎಂದು ಮಗಳನ್ನು ಹಾಸ್ಯ ಮಾಡಿದರು ಮೂರ್ತಿ.

" ನಾನೇನ್ ಹಾಕ್‌ಲಿಲ್ಲಾಪ್ಪ ! ಅಮ್ಮನೆ ಹಾಕಿಟ್ಟದ್ದಳು " ಎಂದು ನಟರಾಜನ ಕೈಗೆ ಒಂದು ಡಬ್ಬಿಯನ್ನು ಮೂರ್ತಿಯವರ ಕೈಗೆ ಒಂದು ಡಬ್ಬಿ ಯನ್ನು ಕೊಟ್ಟಳು ಸುಶೀಲ.

"ಏನಪ್ಪ ರಾಜ ನೀನೊಂದು ತಾಳಿ ಅಂತ ಇವಳ ಕುತ್ತಿಗೆಗೆ ಕಟ್ಟಿಬಿಟ್ರೆ ನೋಡು ನಾನು ಅರ್ಧ ಬದಿಕ್ಕೊಳ್ತೀನಿ" ಅಂದರು ಮೂರ್ತಿ.

"ನಾನೇನಪ್ಪ ನಿಂಗೆ ತೊಂದ್ರೆ ಮಾಡ್ತಿರೋದು" ? ಎಂದು ಗಲ್ಲ ಉಬ್ಬಿಸಿ ಮುದ್ದಾಗಿ ಕೇಳಿದಳು ಸುಶೀ.

"ನೋಡು ರಾಜಾ ! ನಾನೂ ಅಂದ್ರೆ ಎಳೆಮಗೂ ಅಂತ ಇವಳ ಭಾವನೆ ನಾನು ಕೂತ ಕಡೆಗೆ ಎಲ್ಲಾ ಉಪಚಾರನೂ ಮಾಡ್ತಿರ್ತಾಳೆ....ಕಡೇಗೆ ಇಂತದೇ ಅಂಗಿ, ಇಂತದೇ ಪಂಚೆ, ಅಂದ್‌ಬಿಟ್ಟು ಅವಳು ತಂದು ಕೊಟ್ಟಿದ್ದು ಬಟ್ಟೇನೇ ನಾನ್ ಹಾಕ್ಕೋಬೇಕು. ನೀನ್ ಸ್ವಲ್ಪ ಬೇಗ ಅವಳ ಕೈಗೆ ಸಿಕ್ಕಿ ಹಾಕ್ಕೊಳ್ಳೀ ಅಂತ ಅಷ್ಟೆ".

ನಟರಾಜ ನಕ್ಕು ಬಿಟ್ಟ ನಂತರ ಸ್ವಲ್ಪ ಗಂಭೀರವಾಗಿ, "ನಾನು ಆಗ್ಲೇ ಹೇಳಿದ್ನಲ್ಲ ಭಾವ ! ನನಗೆ ಈಗಲೇ ಮದುವೆ ಆಗೋದು ಇಷ್ಟವಿಲ್ಲಾಂತ ಈಗೇನು ಅವಸರ" ಎಂದು ಮಾತನ್ನು ಅಷ್ಟಕ್ಕೇ ನಿಲ್ಲಿಸಿ ಕಾಲಿಗೆ ಕಾಲು ಚೀಲ ಬೂಡ್ಸು ಹಾಕ್ಕೊಳ್ಳೊದರಲ್ಲಿ ತಲ್ಲೀನನಾದ.

ಮೂರ್ತಿಯವರು ಅವನ ಮಾತಿಗೆ ಗಟ್ಟಿಯಾಗಿ ನಕ್ಕು ಬಿಟ್ಟರು. "ಅಯ್ಯೋ ! ಹುಚ್ಚ ! ನೀನಿರೋ ಅಂಥಾ ಪ್ರಕೃತಿ ಸೌಂದರ್ಯದ ಪ್ರದೇಶದಲ್ಲಿ ಒಂಟಿಯಾಗಿ ಇರೋದಕ್ ಬದ್ಲು ಜೊತೆಗೆ ಒಂದು ಹೆಣ್ಣೂ ಇದ್ದರೆ ? ಎಷ್ಟು ಚೆನ್ನ ಅನ್ನೋದನ್ನ ಯೋಚಿಸಿ ನೋಡು ಹೌದೋ ? ಅಲ್ಲವೋ ?....ಸುಶೀ" ಎಂದು ಪಕ್ಕದಲ್ಲಿ ನಿಂತಿದ್ದ ಮಗಳ ಬೆನ್ನು ತಟ್ಟಿದರು.

ಸುಶೀ, ಉತ್ಸಾಹವೆಲ್ಲಾ ನಟರಾಜನ ಒಂದೇ ಮಾತಿನಿಂದ ಇಳಿದು ಹೋಗಿತ್ತು. ತಂದೆಯ ತಮಾಷಿ ಮಾತಿಗೆ ಪ್ರತಿ ಯಾವ ಮನೋಭಾವವನ್ನೂ ತೋರಗೊಡದೆ ಟೇಬಲ್ ಕ್ಲಾತಿನ ತುದಿಯನ್ನು ಕೈಯ್ಯಲ್ಲಿ ತಿರುಚುತ್ತಾ ತಲೆ ತಗ್ಗಿಸಿ ನಿಂತಿದ್ದಳು.

ಯಾಕಮ್ಮಾ ಸುಶೀ ! ಸಪ್ಪೆ ಆಗ್‌ಬಿಟ್ಟೇ ? ಅವನ ಮಾತೇನು ಮಹಾ ! ದೊಡ್ಡೋವರು ಇಲ್ವೇ ? ಈ ಜೇಷ್ಠಮಾಸ ಅಂತೂ ಮದುವೆ ಖಂಡಿತ. ಈಗ ಬೇಡ್ - ಬೇಡಾ ! ಅಂತಿರ್ತಾನೆ ಮದುವೆ ಆದ ತಕ್ಷಣ ನಿನ್ನ ಒಂದು ನಿಮಿಷಾನೂ ಇಲ್ಲಿ ಬಿಡೋಲ್ಲ. ಮೂಗುದಾರ ಹಾಕಿ ಎಳ್‌ಕೊಂಡು ಹೋಗ್ತಾನೆ ಸುಮ್ಮಗಿರು". ಎಂದು ಸುಶೀ ಬೆನ್ನು ತಟ್ಟಿದರು ಮೂರ್ತಿ.

"ನಂಗೇನೂ ಮದುವೆ ಯೋಚ್ನೆ ಇಲ್ಲ ಹೋಗಪ್ಪ"! ಎಂದು ಹೇಳಿದವಳೇ ಸುಶೀ ಒಳಕ್ಕೇ ಹೊರಟು ಹೋದಳು.

ಪಾಪ ಮುಗ್ಧ ಹುಡುಗಿ ತನ್ನ ಒರಟು ಮಾತಿನಿಂದ ಮನಸ್ಸಿಗೆ ಎಷ್ಟು ನೊಂದುಕೊಂಡಳೋ ? ಎಂದು ನಟರಾಜನ ಕರುಳು ಚುರುಕ್ ಎಂದಿತು. ಅವಳಿಗೆ ಒಂದೆರಡು ಸಮಾಧಾನದ ಮಾತನ್ನಾದರೂ ಹೇಳಿ ಹೋಗಬೇಕೆಂದು ಕೊಂಡ ನಟರಾಜ, ಈ ಮನೆಯಲ್ಲಿ ಪ್ರತಿಯೊಬ್ಬರೂ ತನ್ನನ್ನೇ ನೆಚ್ಚಿಕೊಂಡು ಎಂತಹ ಆಶಾ ಕೋಟೆಯನ್ನು ಕಟ್ಟುತ್ತಿದ್ದಾರೆ. ಛೆ... ಅದು ನನ್ನಿಂದಲೇ ಒಡೆದು ಪುಡಿ - ಪುಡಿಯಾಗಬಾರದಲ್ಲವೇ ? ಎಂದು ಒಂದು ಕ್ಷಣ ಚಿಂತಿಸಿದ. ಕೂಡಲೇ "ಭಾವಾ ನಾನಿನ್ನು ಹೋಗಿಬರಲೇ ? ನಿಮ್ಮ ಇಷ್ಟವಿದ್ದಂತೆ ಮಾಡಿ ಭಾವಾ ! ನನ್ನನ್ನೇನು ಕೇಳೋದು" ಎಂದ.

ಒಳಗೆಲ್ಲೋ ಕೆಲಸದಲ್ಲಿದ್ದ ಮಂಗಳೆಯನ್ನು ಕೂಗಿ "ಅಕ್ಕಾ ! ನಾನು ಹೋಗಿ ಬರ್ತೀನಿ. ನೀನು ಮನಸ್ಸಿಗೆ ಏನೂ ಹಚ್ಚಿಕೊಳ್ಳಬೇಡ ." ಎಂದವನೇ ಮುಂದೆ ಒಂದೆರಡು ಹೆಜ್ಜೆ ಇಟ್ಟು ಸುತ್ತಲೂ ಕಣ್ಣೋಡಿಸಿದ. ಅವನ ಕಣ್ಣುಗಳು ಸುಶೀಲೆಗೋಸ್ಕರ ಹುಡುಕಾಡಿದವು ಎಲ್ಲೂ ಕಾಣಲಿಲ್ಲಿ, ರೂಮಿನಲ್ಲಿ ತನ್ನ ಕಿಟ್ ಬ್ಯಾಗ್ ಇಟ್ಟಿದನ್ನು ತರಲು ರೂಮಿನೊಳಕ್ಕೆ ಹೋದ. ಮಂಚದಮೇಲೆ ದಿಂಬಿನಲ್ಲಿ ಮುಖ ಹುದುಗಿಸಿ ಬಿಕ್ಕುತ್ತಿದ್ದಳು ಸುಶೀ.

ನಟರಾಜನಿಗೆ ಗಾಬರಿಯಾಯಿತು. ಅವಳ ಹತ್ತಿರ ಹೋಗಿ ಮೃದುವಾಗಿ ಬೆನ್ನಮೇಲೆ ಕೈ ಆಡಿಸುತ್ತಾ "ಸುಶೀ ಏನಾಯಿತು ? ಏಕೆ ಅಳತ್ತಿದ್ದೀ" ಎಂದು ಮುಖದ ಹತ್ತಿರ ಬಗ್ಗಿ ಕೇಳಿದ.

ಸುಶೀಲ ಎದ್ದು ಕುಳಿತು ಏನೂ ಇಲ್ಲ ಎಂಬಂತೆ ಸುಮ್ಮನೆ ತಲೆ ಆಡಿಸಿದಳು.

"ಮಾತಾಡು ಸುಶೀ .... ನಾನೇನಾದ್ರೂ ತಪ್ಪಾಡಿದ್ದರೆ ಕ್ಷಮಿಸಿಬಿಡು". ಎಂದು ಸಾಧಾರಣವಾಗಿ ಬೇರೆಯವರಿಗೆ ಹೇಳುವಂತೆ ಹೇಳಿದ.

ಈಗಲಾದರೂ " ನಾನು ನಿನ್ನನ್ನೇ ಮದುವೆಯಾಗುತ್ತೇನೆ. ಎಷ್ಟೇ ನಿಧಾನವಾದರೂ ನೀನೇ ನನ್ನ ರಾಣಿ" ಎಂದು ಹೇಳಿ ತನ್ನನ್ನು ಸಂತೈಸ ಬಹುದು ನಟರಾಜ" ಎಂದು ಆಶಿಸಿದ್ದಳು ಸುಶೀ.

ಆದರೆ ನಟರಾಜನ ನಡುವಳಿಕೆ, ಮಾತು, ಅಡ್ಡಗೋಡೆಯ ದೀಪವಂತೆ ಏನೊಂದೂ ಸರಿಯಾಗಿ ಅರ್ಥವಾಗಲೊಲ್ಲದು ಸುಶೀಗೆ.

"ಸುಶೀ ನಗ್ ನಗ್ತಾ ಇರು ನಾನು ಹೋಗಿ ಬರ್ಲಾ " ? ಎಂದು ನಟರಾಜ ಕಿಟ್ ಬ್ಯಾಗ್ ಹಿಡಿದು ಹೊರಟು ನಿಂತ.

"ರಾಜಾ ! ಇನ್ನೂ ನಿಮ್ಮ ಸಂಭಾಷಣೆ ಮುಗೀಲಿಲ್ಲವೇನೋ ? ನಾನು ಹೊರಡ್ತೀನಪ್ಪಾ " ! ಎಂದು ಮೂರ್ತಿ ಹೇಳುತ್ತಲೇ ಬೀದಿ ಬಾಗಿಲಿನತ್ತ ಹೊರಟರು.

ಇನ್ನು ಎಲ್ಲರೂ ಹಾಸ್ಯ ಮಾಡಲು ಶುರು ಮಾಡಿ ಬಿಡುತ್ತಾರೆ. ಎಂದು ಸುಶೀಲ ಅಳುಮುಖದಲ್ಲಿ ನಗುವನ್ನು ತೇಲಿಸಿ ಹೊರಕ್ಕೆ ಬಂದಳು.

ನಟರಾಜ, "ಸುಶೀ ಟಾ.. ಟಾ .... ಬರ್ಲಾ ? ಎಂದು ಹೇಳುತ್ತಲೆ, ಹೊರಕ್ಕೆ ಹೊರಟ, ಆ ವೇಳೆಗೆ ಸುಮಿತ್ರ ಅಲ್ಲಿಗೆ ಬಂದಳು "ಅಬ್ಬಬ್ಬಬ್ಬ.... ಇನ್ನೇನು ಒಬ್ಬರಿಗೊಬ್ಬರಿಗೆ ಬಿಟ್ಟಿರಲಾರದೆ ಹಾಗಾಡ್ತೀರೋಪ್ಪ ? ಬೇಕಾದ್ರೆ ಮಾವನ ಜೊತೇಲಿ ಈಗಲೇ ಹೋಗೆ ಸುಶೀ... ನಿನ್ಯಾರು ಬೇಡಾ ಅಂತಾರೆ" ? ಎಂದು ತಮಾಷಿಯ ಚಿಟಿಕೆ ಹಾರಿಸಿದಳು ಸುಮಿತ್ರ, ನಟರಾಜ ಎಲ್ಲರಿಗೂ ಟಾ... ಟಾ ಮಾಡಿ ಹೊರಟ.

ಮಾರನೆಯ ದಿನವೇ ಸುಮಿತ್ರ ಮಗುವಿನೊಂದಿಗೆ ಗಂಡನ ಜೊತೆಯಲ್ಲಿ ಪ್ರಯಾಣ ಮಾಡಿದಳು.

ಎಲ್ಲರೂ ಹೊರಟು ಹೋದ ಮೇಲೆ ಸುಶೀಗೆ ಮನೆಯಲ್ಲಿ ಇರೋದೇ ಬೇಸರ ವೆನ್ನಿಸಿತು, ಮನೆ "ಬಿಕೋ... ಅನ್ನುವಂತೆ ಅವಳ ಮನಸ್ಸೂ ಬಿಕೋ ಅನ್ನುತ್ತಿತ್ತು. ನಟರಾಜ ತನ್ನನ್ನು ಬಾಳಗೆಳತಿಯಾಗಿ ಮಾಡಿಕೊಳ್ಳುವ ಒಲವನ್ನು ತೋರಿಸುತ್ತಿಲ್ಲ, ಎಂಬುದು ಈ ಸಲ ಸುಶೀಗೆ ಅರ್ಥವಾಯಿತು. ಅವನಲ್ಲಿ ಪೂರ್ಣ ಪ್ರೇಮವನ್ನಿಟ್ಟಿದ್ದ ಅವಳ ಆಶಾಲತೆ ಬಾಡಲು ಪ್ರಾರಂಭವಾಯಿತು.

ಚಿಗುರಿಯಂತೆ ಜಿಗಿದು ಓಡಾಡುತ್ತಿದ್ದವಳು ಗಂಭೀರ ತಾಳಿದಳು, ಅವಳಲ್ಲಿದ್ದ ಹಾಸ್ಯ ಪ್ರವೃತ್ತಿ ಮಾಯವಾಗಿ, ಚಿಂತೆಯ ಕೀಟ ಮನಸ್ಸನ್ನು ಕೊರೆಯಲಾರಂಭಿಸಿತು. ಕುಳಿತಲ್ಲಿ ನಿಂತಲ್ಲಿ ಚಿಂತಿಸತೊಡಗಿದಳು.

ಮೂರ್ತಿಯ ತಾಯಿ ಪಾರ್ವತಮ್ಮನವರು ಪೂನಾಕ್ಕೆ ಮಗಳ ಮನೆಗೆ ಹೋಗಿದ್ದರು. ಪಾರ್ವತಮ್ಮನವರಿಗೆ ಒಬ್ಬರೇ ಅಣ್ಣ, ಅವರು ಕಾಶಿಯಲ್ಲಿ

ಹೋಗಿ ನೆಲಸಿದ್ದರು. ಎರಡು ವರ್ಷಕ್ಕೋ, ಮೂರುವರ್ಷಕ್ಕೋ ಒಂದು ಬಾರಿ ಬಂದು ತಂಗಿಯನ್ನೂ ತಂಗಿಯ ಸಂಸಾರವನ್ನೂ ನೋಡಿ ಕೊಂಡು ಹೋಗುತ್ತಿದ್ದರು.

ಅವರಿಗೆ ಮಕ್ಕಳೇ ಇರಲಿಲ್ಲ ಅದೇ ವೈರಾಗ್ಯದಿಂದಲೇ ಅವರ ಹೆಂಡತಿಯ ಸಮೇತ ಕಾಶಿಯಲ್ಲೇ ನೆಲಸಿ ಒಂದು ಮೂಲ ಶಿಕ್ಷಣ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿ ನಡೆಸುತ್ತಾ, ವಿಶ್ವೇಶ್ವರನ ಪೂಜೆ ಧ್ಯಾನವಲ್ಲಿ ತಮ್ಮ ಜೀವಿತವನ್ನು ಕಳೆಯುತ್ತಿದ್ದರು.

ಅವರು ಈಕಡೆ ಬಂದು 4-5 ವರ್ಷಗಳಾಗಿ ಬಿಟ್ಟಿತ್ತು. ದೂರ ದೇಶದಲ್ಲಿ ಹೋಗಿ ಸೇರಿ ಬಿಟ್ಟಿರುವ ಒಬ್ಬನೇ ಅಣ್ಣನನ್ನು ನೋಡಲು ಪಾರ್ವತಮ್ಮನವರು ಹಾತೊರೆಯುತ್ತಿದ್ದರು.

ಈಗ ತಮ್ಮ ಮನೆಯಲ್ಲಿ ಪ್ರತಿವರ್ಷ ನಡೆಯುವ ರಾಮನವಮಿ ಉತ್ಸವದ ವೇಳೆಗೆ ಕಾಶಿಯಿಂದ ಅಣ್ಣನು ಬರುವ ಸಮಾಚಾರ ಪಾರ್ವತಮ್ಮನವರಿಗೆ ತಿಳಿಯಿತು. ಅವರೂ ಪೂನಾದಿಂದ ಮಗಳು ಮೊಮ್ಮಕ್ಕಳ ಸಮೇತ ಶಿವಮೊಗ್ಗಾಕ್ಕೆ ಬಂದರು.

ಪುನಃ ಮನೆಯಲ್ಲಿ ಸಂಭ್ರಮವೋ ಸಂಭ್ರಮ, ಪಾರ್ವತಮ್ಮನವರು ರಾಮೋತ್ಸವಕ್ಕೆ ಅಣಿಮಾಡತೊಡಗಿದರು. ಅಣ್ಣ ಅತ್ತಿಗೆ ಕಾಶಿಯಿಂದ ಬರುವ ನಿರೀಕ್ಷೆಯಲ್ಲಿ ನಿಮಿಷ-ನಿಮಿಷಗಳನ್ನೂ ಎಣಿಸತೊಡಗಿದರು.

ಶೇಷ ಮಾವ ಬರುವರೆಂಬ ಸಂತೋಷದ ಸುದ್ಧಿಯನ್ನು ಕೇಳಿ ಮಂಗಳೆಯೂ ಮನದ ದುಗುಡವನ್ನು ಮರೆತು ಉತ್ಸುಕಳಾಗಿ ಕೆಲಸದಲ್ಲಿ ತೊಡಗಿದಳು. ಮನೆಯಲ್ಲಿ ಎಲ್ಲರಿಗೂ ಅವರು ಬರುವುದು ಸಂತೋಷದ ಸಂಗತಿ ಸುಶೀಲ-ವಿಶ್ವನಾಥ ಚಿಕ್ಕವರಾಗಿದ್ದಾಗ ಬಂದಿದ್ದರು.

ಆಗ ಅವರು ತಮ್ಮೊಂದಿಗೆ ಆಡಿದ ಆಟದ ಸವಿನೆನೆಪು ಇನ್ನೂ ಮಾಸದೇ ಮನಸ್ಸಿನಲ್ಲಿ ಉಳಿದಿತ್ತು.

ವಿಶೂ ಹೊರಗಡೆಯಿಂದ ಬಂದ ಕೂಡಲೇ ಸುಶೀಲ " ಲೋ .. ವಿಶೂ ನಾಳೆ ಕಾಶಿ ಮಾವ ಬರ್ತಾರೆ ಕಣೋ " ಅಂದಳು ಖುಷಿಯಿಂದ.

" ಅದೇ ಶೇಷ್‌ಮಾವ ಅಲ್ಲವೇನೇ ? ಅವರು ನಮಗೆ ಎಷ್ಟೊಂದು ನಾಟಕ ಆಡಿಸಿದ್ದರು? ಆ ಸಲ ಬಂದಿದ್ದಾಗ "ಅಂದ ವಿಶು ಹಿಂದಿನ ನೆನೆಪಿನಿಂಧ ಉತ್ಸುಕನಾಗಿ

" ಹೌದು ಕಣೋ ತೋಳ ಕುರಿಮರಿಯ ಕಥೆಯನ್ನು ಹೇಳಿ ನನ್ನನ್ನು ತೋಳ, ನಿನ್ನನ್ನು ಕುರಿಮರಿ ಮಾಡಿ ನಮ್ಮಿಂದ ನಾಟಕವನ್ನೇ ಮಾಡಿಸಿದರು ನೋಡಿದ್ಯಾಮ್ಮ ದುಷ್ಟರು ಹೀಗೆಯೇ ಸಾಧುಗಳನ್ನು ನೆಪವಿಲ್ಲದ ನೆಪದಲ್ಲಿ ಹಿಂಸಿಸುತ್ತಾರೆ ಎಂದು ನೀತಿಯನ್ನು ಹೇಳಿದರು. ಅದು ಇನ್ನೂ ಜ್ಞಾಪಕವಿದೆ" ಅಂದಳು ಸುಶೀ.

" ಆ ಮೇಲೆ, ಭಾರಿ ಕಳ್ಳ, ಕೊಲೆಗಡುಕ ಅಂಗುಲಿ ಮೊಲ ಬುದ್ಧನಿಗೆ ಶರಣಾಗತಿಯಾದ ಕಥೆಯನ್ನು ಹೇಳಿ ನನ್ನನ್ನು ಬುದ್ಧ, ಸುಮೀ ಅಕ್ಕನನ್ನು ಕಳ್ಳನನ್ನಾಗಿ ಮಾಡಿ ನಾಟಕ ಮಾಡಿಸಿದ್ದು ಇನ್ನೂ ಜ್ಞಾಪಕವಿದೆ.

ಯಾರು ಹಿಡಿಯಲಾರದ ಕಳ್ಳನನ್ನು ಬುದ್ಧ ಹೇಗೆ ತನ್ನ ಶಾಂತಿ, ಪ್ರೀತಿಯ ಬಲೆಗೆ ಹಾಕಿಕೊಂಡ ? ಎಂಬ ನೀತಿ ಎಷ್ಟು ಚೆನ್ನಾಗಿ ತಿಳಿಯುವಂತೆ ನಮಗೆ ಶೇಷಮಾವ ನಾಟಕ ಮಾಡಿಸಿದರು ? ಸುಶೀ ; ನಿಜವಾಗಿಯೂ ನಾನು ಸ್ಕೂಲಿನ ಪಾಠ ಎಂದರೆ ಸೋಮಾರಿ. ಆದರೆ ಶೇಷಮಾವ ಕಲಿಸಿದ ಪಾಠಗಳು ಎಂದೆಂದೂ ನನ್ನ ಮನಸ್ಸಿನಿಂದ ಮಾಸುವುದಿಲ್ಲ ಕಣೇ" ಎಂದ ಭಾವೋದ್ರೇಕನಾಗಿ

" ನಾವು ತುಂಬಾ ಚಿಕ್ಕವರಾಗಿದ್ದಾಗ ಕಾಶಿಮಾವ ಬಂದಿದ್ದು ಕಣೋ ಈಗ ಎಷ್ಟು ದೊಡ್ಡವರಾಗಿ ಬಿಟ್ಟಿದ್ದೇವೆ. ಆದರೂ ಅವರ ಕಥೆ ಕೇಳಬೇಕೆನ್ನಿಸುತ್ತೆ ಅಲ್ವೇನೋ ವಿಶೂ "

ಏನೋಮ್ಮ ಈಗ ನನಗೆ ಕತೆ ಗಿತೆ ಕೇಳೋ ಆಸೆ ಇಲ್ಲ. ಎಲ್ಲಾದ್ರೂ ಕ್ರಿಕೆಟ್ ಮ್ಯಾಚು ಅಂದ್ರೆ ಅದಕ್ಕೆ ಪ್ರಾಕ್ಟೀಸ್ ಮಾಡ್ಕೋಳೋದ್ರಲ್ಲಿ ನನಗೆ ಆತುರ ಅಷ್ಟೇ."

ಇವರು ಮಾತಾಡುತ್ತಿದ್ದ ಕಡೆಗೆ ಪಾರ್ವತಮ್ಮ ಬಂದರು. ಅವರ ಕೈಯ್ಯಲ್ಲಿ ಆಗತಾನೇ ಕರಿದಿದ್ದ ಬಿಸಿ ಬಿಸಿ ಮುಚ್ಚೋರೆಯ ತಟ್ಟೆ ಇತ್ತು.

" ಸುಶೀ ! ಇದೇನೆ ? ಹೊರಗಡೆಯಿಂದ ಸುತ್ತಿಕೊಂಡು ಬಂದ ಹುಡುಗನ್ನ ಇಲ್ಲೇ ಮಾತಿಗೆ ನಿಲ್ಲಿಸಿಕೊಂಡು ಬಿಟ್ಟಿ ಇಬ್ರೂ ಒಳಕ್ಕೇ ಬನ್ನಿ ನಿಮಗಿಷ್ಟವಾದ ಮುಚ್ಚೋರೆ ಮಾಡಿದ್ದೀನಿ ತಿಂದು ಕಾಫಿ ಕುಡಿಯೋವ್ರಂತೆ." ಅಂದು ಪುನಃ ತಿಂಡಿತಟ್ಟೆ ಸಮೇತ ಒಳಕ್ಕೇ ಹೋದರು ಪಾರ್ವತಮ್ಮ.

ಸುಶೀನೂ-ವಿಶೂನೂ ಅಜ್ಜಿ ಕೊಟ್ಟ ಗರಿ-ಗರಿ ಮುಚ್ಚೋರೆ ತಿನ್ನುತ್ತಾ ಹರಟೆ ಬಡಿಯುತ್ತಿದ್ದರು. ಪ್ಲೇಟು ಖಾಲಿ ಆದದ್ದೇ ಗೊತ್ತಾಗಲಿಲ್ಲ ವಿಶೂಗೆ.

"ಇದೇನಜ್ಜೀ ನೀನು ಕೊಟ್ಟಿದ್ದು ಎರಡು ಮುಚ್ಚೋರೆನೂ ನಾನೇ ತಿಂದನೇ" ? ಅಂದ.

"ಇಲ್ಲ ಕಣೋ ನಿನ್ನ ಬಾಯಿ ತಿಂತು ! ಅಂದಳು ಸುಶೀ. ಹೋಗಲಿ ಇನ್ನೊಂದು ಕೊಟ್ಟು ಬಿಡು ಅಜ್ಜೀ ಹೊರಟು ಹೋಗ್ತೀನೆ ಅಂದ ವಿಶ್ವನಾಥ

ಸರಿ ಪ್ರೀತಿಯ ಮೊಮ್ಮಗ ಕೇಳಿದರೆ ಇಲ್ಲಾ ಅನ್ನುತ್ತಾರೆಯೇ ? ಪಾರ್ವತಮ್ಮ ಇನ್ನೆರಡು ಮುಚ್ಚೋರೆ ಅವನ ಪ್ಲೇಟಿ ಹಾಕಿದರು.

ಬಾಂಡ್ಲಿಯಲ್ಲಿದ್ದ ಒಬ್ಬೆ ತೆಗೆದು ಇನ್ನೊಂದು ಒಬ್ಬೆ ಒತ್ತಿ ಬಾಂಡ್ಲಿಗೆ ಹಾಕಿದರು.

ಅಲ್ಲಿ ನಿಂತಿದ್ದ ಅಡಿಗೆ ಮಂಜುನಾಥ ಭಟ್ಟ "ಬಿಡಿ ಅಮ್ಮ ನೀವ್ಯಾಕೆ ಒಲಿ ಷ್ಮುಂದೆ ಕುಳಿತಿರುತ್ತೀರಿ ? ಇನ್ನು ಎಲ್ಲ ನಾನೇ ಕರೀತೀನಿ," ಅಂದ.

"ನಿಮಗೆ ಹದವಾಗಿ ಎತ್ತೋಕೆ ಬರೋಲ್ಲ ಭಟ್ಟರೇ ತುಂಬಾ ಕೆಂಪಗೆ ಸೀಸಿ ಬಿಡ್ತೀರಿ ಇಲ್ಲದಿದ್ದರೆ ಹಸೀ ಹಸೀನೆ ಎತ್ತಿ ಬಿಡ್ತೀರಿ. ಅದಕ್ಕಾಗಿ ನಾನೇ ಕೂತ್ಕೊಂಡೆ ಆಯ್ತು ಬಿಡಿ. ನೀವು ರಾತ್ರಿ ಅಡಿಗೆ ಸಿದ್ಧತೆ ನೋಡಿ" ಅಂದರು ಪಾರ್ವತಮ್ಮ.

ಸುಶೀ ಮುಚ್ಚೋರೆಯ ರುಚಿಯನ್ನು ಮೆಲಕು ಹಾಕುತ್ತಾ "ಅಜ್ಜೀ !.... ಇಷ್ಟು ಗರಿ-ಗರೀ ಅಂತ ಆಗಿದೆಯಲ್ಲಾ ? ಮುಚ್ಚೋರೆಗೆ ಏನೇನ್ ಹಾಕಿದ್ದೀ ಅಜ್ಜೀ ! ಅಂದಳು.

ಸರಿ ಸರಿ ಮುಚ್ಚೋರೆ ತಿಂತಾ ಅದರ ವರ್ಣನೇಲೇ ಕೂತಿರ್ತೀರೋ ಇಬ್ಬರೂ ! ಇಲ್ಲ ರೈಲ್ವೆ ಸ್ಟೇಷನ್ನಿಗೆ ಹೋಗಿ ಬರ್ತೀರೊ ಆಗಲೇ ಆರು ಗಂಟೆ ಹೊಡೀತಲ್ಲೇ ಗಡಿಯಾರ".

"ಒಳ್ಳೆ ಅಜ್ಜಿ ನಿನ್ನ ಕಣ್ಣು ಕಿವಿ ಎಲ್ಲಾ ಇವತ್ತು ಗಡಿಯಾರದ ಮೇಲೆ ಇದೆ. ಅಲ್ಲಾ ಅಜ್ಜೀ ರಾತ್ರಿ ಒಂಭತ್ತು ಗಂಟೆಗೆ ಬರೋ ರೈಲಿಗೆ ಈಗ ಆರು ಗಂಟೇಗೆ ಹೋಗಿ ರೈಲ್ವೆ ಸ್ಟೇಷನ್ನಿನಲ್ಲಿ ಕುಳಿತು ಕೊಳ್ಳುತ್ತಾರೇನಜ್ಜೀ ಅಂದ ವಿಶ್ವನಾಥ.

"ಅಪ್ಪ, ಕಾರು ತೆಗೆದು ಕೊಂಡು ಬರ್ತೀನಿ ಆಮೇಲೆ ಎಲ್ಲಾ ರೈಲ್ವೆ ಸ್ಟೇಷನ್ನಿಗೆ ಹೋಗೋಣ ಅಂದಿದ್ದಾರೆ ಅಜ್ಜೀ....ಅಬ್ಬಬ್ಬ ಅಣ್ಣ ಬರ್ತಾರೆ ಅಂದು ಬಿಟ್ಟು ಅಜ್ಜಿ ಸಂಭ್ರಮ ಹೇಳತೀರದು ಕಣೋ ವಿಶೂ. ಮುಚ್ಚೋರೆ

ಮಾಡಿದ್ದೂ ಅವರಿಗೋಸ್ಕರಾನೇ ಅಲ್ವೇನಜ್ಜೀ ? ಅಂದಳು ಸುಶೀ

ಹೌದು ! ಹೌದು, ಈಗ ನೀವು ತಿನ್ನಲೇ ಇಲ್ಲ ಪಾಪ ! ಹೋಗೆ, ಸುಶೀ ಬಚ್ಚಲ ಮನೆಯಲ್ಲಿ ಹಂಡೇಲಿ ನೀರು ಕಾದಿದೆಯೋ ನೋಡು ಇಲ್ಲದಿದ್ದರೆ ಇನ್ನೊಂದು ಸ್ವಲ್ಪ ಮರದ ಹೊಟ್ಟು ಒಲೆಗೆ ತುಂಬಿ ಬಿಡು ಶೇಷಣ್ಣ ಬಂದ ಕೊಡಲೇ ಸ್ನಾನ ಮಾಡ್ತಾನೆ ಕಣೇ.

ಅಜ್ಜೀ ನೀನು ಯಾವುದಕ್ಕೂ ಚಿಂತಿಸ ಬೇಡ, ಹಂಡೇಲಿ ನೀರು ಮರಳಿ ಕೂತಿದೆ. ಹಾಲಿನ ದೊಡ್ಡ ರೂಮು ಬಿಡುವು ಮಾಡಿ ಅವರಿಗೋಸ್ಕರ ಎಲ್ಲಾ ಸಿದ್ಧ ಮಾಡಿದೆ. ಮಾವ ಬರೋದು ನಮಗೂ ಆಸೆ ಇಲ್ವೇನಜ್ಜೀ ?

ಅಲ್ಲಾ ! ಮೂರು ದಿವಸದಿಂದ ಒಂದೇ ಸಮ ಹೀಗೆ ಅವಾಂತರ ಪಡ್ತಿದ್ದೀಯಲ್ಲಜ್ಜೀ....ಕಾಶಿಯಿಂದ ಅವರು ಬರಬೇಡವೇ ? ನಿನ್ನ ಆತುರಕ್ಕೆ ರೈಲು ಒಂದೇ ದಿನಕ್ಕೆ ಓಡಿ ಬಂದು ಬಿಡುತ್ತ್ಯೇ ? ಒಳ್ಳೆ ಅಜ್ಜಿ, ಅಂದು ವಿಶೂ ಅಜ್ಜಿಯನ್ನು ಹಾಸ್ಯ ಮಾಡಿದ.

ಹೋಗೋ ! ತಲೆ **ಹರಟೆ** ! ನಿನಗೇನು ಗೊತ್ತಾಗುತ್ತೆ ? ಬೆನ್ನಲ್ಲಿ ಬಿದ್ದಿರೋ ಅಣ್ಣ, ಅಂತ ಇರೋವ್ನು ಅವನೊಬ್ಬ. ಅವನ್ನ ನೋಡಿ ಎಂಟು ವರ್ಷ ಆಯ್ತಲ್ಲಾ; ದೂರ ದೇಶ, ಸದ್ಯ ಸುಖವಾಗಿ ಬಂದು ಸೇರಲಿ ದೇವರೇ! ಅವರು ಎಂದು ಹೇಳುತ್ತಲೇ ಪಾರ್ವತ್ತಮ್ಮ ಕಣ್ಣಲ್ಲಿ ನೀರು ಹಾಕಿದ್ದರು.

ಆ ವೇಳೆಗೆ ಮಂಗಳೆ ಬಂದು ಏನತ್ತೇ ! ಈಗ ರಾತ್ರಿ ಅಡಿಗೆಗೆ ಏನಾದ್ರೂ ತರಕಾರಿ ಇದೆಯೋ ? ಇಲ್ಲಾ ಭಟ್ಟಪ್ಪನ ಕೈಲಿ ತರಿಸಲೋ ? ಎಂದು ಕೇಳಿದಳು.

ತರಕಾರಿ ಏನೂ ಬೇಡ ಕಣೇ ! ತಿಳಿಯಾಗಿ ಒಂದಿಷ್ಟು ಅನ್ನ ಸಾರು, ಕಾಯಿ ಚಟ್ನಿ, ಮಾಡಿ ಬಿಡಲಿ. 4-5 ದಿವಸ ರೈಲು ಪ್ರಯಾಣ, ಊಟ ಮಾಡಿರೋಲ್ಲ. ಸುಸ್ತಾಗಿರುತ್ತೆ. ತಿಳೀ ಅನ್ನ ಸಾರೇ ಹಿತವಾಗಿರುತ್ತೇ ಅಂದರು ಪಾರ್ವತಮ್ಮ.

ಅಂತು ಮನೆಯಲ್ಲಿ ಎಲ್ಲರೂ ಶೇಷಮಾವ ಬರುವುದನ್ನು ಅಕ್ಕರೆಯಿಂದ ನಿರೀಕ್ಷಿಸುತ್ತಿದ್ದರು.

ಅದಕ್ಕೆ ಕಾರಣ ಅವರ ಉತ್ತಮ ವ್ಯಕ್ತಿತ್ವ. ಉದಾರ ಹೃದಯ, ಅವರಿಗೆ ಮಂಡ್ಯದ ಬಳಿ ಕಾವೇರಿ ನದಿಯ ನೀರಿನ ಆಸರೆಯಲ್ಲಿ ಹತ್ತು ಎಕರೆ

ಗದ್ದೆ, ನಾಲ್ಕು ಎಕರೆ ತೋಟ ಎಲ್ಲಾ ಇತ್ತು.

ಯಾವಾಗ ತಮಗೆ ಇನ್ನು ಮಕ್ಕಳಾಗುವ ಭಾಗ್ಯವಿಲ್ಲವೆಂದು ತಿಳಿಯಿತೋ ಆಗಲೇ ಎರಡು ಎಕರೆ ಗದ್ದೆ, ಒಂದೆಕರೆ ತೋಟವನ್ನು ತಮ್ಮೂರಿನ ಶ್ರೀ ರಾಮ ದೇವರ ದೇವಸ್ಥಾನದ ಹೆಸರಿಗೂ, ಇನ್ನೂ ಎರಡು ಎಕರೆ ಗದ್ದೆ, ಒಂದು ಎಕರೆ ತೋಟವನ್ನು ಅದೇ ಊರಿನಲ್ಲಿ ಶ್ರೀ ಗುರುರಾಜ ಮಠಕ್ಕೂ ಬರೆದು ಬಿಟ್ಟು ಅದರಲ್ಲಿ ಬರುವ ಭತ್ತದ ಬೆಳೆಯನ್ನು ಮಠದಲ್ಲಿಯೇ ಇದ್ದುಕೊಂಡು ಸಂಸ್ಕೃತ ಕಲಿಯುವ ವಿದ್ಯಾರ್ಥಿಗಳಿಗೆ ಊಟ ಹಾಕುವುದಕ್ಕಾಗಿ ಉಪಯೋಗಿಸ ಬೇಕೆಂದು, ಮಠದ ಗುರುಗಳಿಗೆ ಒಪ್ಪಿಸಿ, ನಂತರ ಹೆಂಡತಿಯ ಬಳಿ ಬಂದು ಕೇಳಿದರು.

' ಏನೇ ! ಲಕ್ಷ್ಮಿ ! ನನ್ನ ಆಸ್ತಿಯಲ್ಲಿ ಅರ್ಧ ಭಾಗ ದೇವಸ್ಥಾನಕ್ಕೂ ಮಠಕ್ಕೂ ಮಾಡಿ ಬಿಟ್ಟೆ. ಇನ್ನೂ ಅರ್ಧ ಭಾಗ ಉಳಿದಿದೆ. ಅದನ್ನೆಲ್ಲಾ ಇಟ್ಟುಕೊಂಡು ನೀನು ಇಲ್ಲೆ ಇರ್ತಿಯೋ ? ಇಲ್ಲಾ ನನ್ನ ಜೊತೆಯಲ್ಲಿ ಕಾಶಿಗೆ ಬರ್ತಿಯೋ ಅಂದರು.

ಲಕ್ಷಮ್ಮನಿಗೆ ಈ ಮೊದಲೇ ಪತಿಯ ಅಭಿಪ್ರಾಯ ಸುಮಾರಾಗಿ ಗೊತ್ತಿತ್ತು. ಅವರು ಮಹಾ ಸಾಧ್ವಿ. ತನ್ನಿಂದ ಅವರ ವಂಶದ ಕುಡಿ ಬೆಳೆಯಲಿಲ್ಲವಲ್ಲಾ ಎಂದು ಅವರು ಬಹಳವಾಗಿ ವ್ಯಥೆಪಡುತ್ತಿದ್ದರು.

ಬೇಕಾದಷ್ಟು, ವ್ರತ ಉಪವಾಸ, ತೀರ್ಥ ಯಾತ್ರೆ, ದಾನ, ಧರ್ಮ, ಎಲ್ಲವನ್ನು ಶ್ರದ್ಧಾ ಭಕ್ತಿಯಿಂದ ಮಾಡಿದ್ದರು. ಏನೇ ಮಾಡಿದರು ದೈವ ಸಂಕಲ್ಪ, ಅವರಿಗೆ ಮಕ್ಕಳಾಗಲಿಲ್ಲ.

ಅದೇ ಚಿಂತೆಯಿಂದ ಪತಿಯು ದಿನ ದಿನಕ್ಕೆ ವೈರಾಗ್ಯದತ್ತ ಮನಸ್ಸನ್ನು ಎಳೆಯುತ್ತಿರುವುದು ಅವರ ಗಮನಕ್ಕೆ ಬರದೇ ಇರಲಿಲ್ಲ.

ಪತಿಯ ಹಿತವೇ ತಮ್ಮ ಹಿತವೆಂದು ತಿಳಿದಿದ್ದ ಮಹಾ ಪತಿವ್ರತೆ ಆಕೆ. ಪತಿಯ ಯಾವ ಕೆಲಸಕ್ಕೂ ಅಡ್ಡಿ ಬಂದವರಲ್ಲ. ಇನ್ನು ಈಗ ಶೇಷಣ್ಣನವರು ಆ ರೀತಿ ಕೇಳಿದಾಗ ಅವರು ಮತ್ತೇನು ಹೇಳುತ್ತಾರೆ. ?

ನೀವು ಎಲ್ಲಿದ್ದರೆ ನಾನು ಅಲ್ಲಿ. ನಿಮಗಿಂತ ಈ ಆಸ್ತಿ ನನಗೆ ಹೆಚ್ಚೇ ? ನಾನೂ ನಿಮ್ಮ ಜೊತೆಯಲ್ಲಿ ಕಾಶಿಗೆ ಬರುತ್ತೇನೆ. ಅಂದರು

ಸರಿ, ಹಾಗಿದ್ದ ಮೇಲೆ ಉಳಿದಿರುವ ಗದ್ದೆ, ತೋಟವನ್ನು ನಮ್ಮ

ಪಾರ್ವತಿ ಮಗ ಮೂರ್ತಿ ಹೆಸರಿಗೆ ಬರೆದುಬಿಡುತ್ತೇನೆ. ಆಗ ನಾವು ನಿಶ್ಚಿಂತೆಯಿಂದ ದೇವರ ಧ್ಯಾನ ಮಾಡಬಹುದು. ಅವನೂ ಮಕ್ಕಳೊಂದಿಗೆ, ಸುಖವಾಗಿರಲಿ, ಇದಕ್ಕೆ ನಿನ್ನ ಒಪ್ಪಿಗೆಯೇ ಲಕ್ಷ್ಮಿ ; ಅಂದರು.

ಇದೇನೊಂದ್ರೀ ಎಲ್ಲಾದಕ್ಕೂ ನನ್ನ ಒಪ್ಪಿಗೆಯನ್ನು ಕೇಳುತ್ತೀರಿ ? ನಿಮ್ಮಿಷ್ಟ ಏನುಬೇಕಾದರೂ ಮಾಡಿ. ನೀವಿದ್ದಕಡೆ ನಾನು. ಇನ್ನೇನು ಮಕ್ಕಳೇ ಮರಿಯೇ ? ಇನ್ನೇನಾಗಬೇಕಾಗಿದೆ ? ಎಂದು ವ್ಯಥೆಯಿಂದ ಕಣ್ಣಲ್ಲಿ ನೀರು ಹಾಕಿದರು ಲಕ್ಷ್ಮಮ್ಮ.

ನೋಡು ಲಕ್ಷ್ಮಿ ; ಈ ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲ. ಪೂರ್ವಾರ್ಜಿತ ಕರ್ಮಫಲಕ್ಕನುಸಾರವಾಗಿ ಹೆಂಡತಿ, ಮಕ್ಕಳು ಗಂಟು ಬೀಳುತ್ತಾರೆ. ಈ ಶರೀರದಲ್ಲಿರುವ ಆತ್ಮವು ಬೇರೆಯಾದಾಗ ಹೆಂಡತಿ ಯಾರೋ ಮಕ್ಕಳು ಯಾರೋ! 'ನೆಲೆಯಿಲ್ಲ ಸಂಸಾರ, ಇಳಿದಂತೆ ಬಾವಿಯೊಳು, ಸಿಲುಕಿ ಸಿಲುಕುತೆ ನೀನು ಭ್ರಮಿತನಾದೆ. ಹಣೆಯಲ್ಲಿ ಬರೆದ ಕಲ್ಪಣವದು ತಪ್ಪದು, ನರಹರಿಯ ಸ್ಮರಣೆಯೊಳಗಿರು ಕಂಡ್ಯ ಮನವೆ', ಎಂದು ಪುರಂದರದಾಸರು ಹೇಳಿದಾರೆ ಲಕ್ಷ್ಮೀ.

ಮಕ್ಕಳಾದರೆ ಏನು ? ಆಗದಿದ್ದರೆ ಏನು ? ಸದಾಕಾಲವೂ ಆ ಪರಮಾತ್ಮನ ಧ್ಯಾನ ಮಾಡುವ ಸಂಯೋಗ ಒಂದಿದ್ದರೆ ಸಾಕು. ಈ ಮಾನವನಾಗಿ ಹುಟ್ಟಿದ್ದಕ್ಕೆ ಸಾರ್ಥಕ.

ನೋಡು ಮಕ್ಕಳಿದ್ದವರಿಗಾದರೆ ತಮ್ಮ ಮಕ್ಕಳ ಮೇಲೆಯೇ ಅಕ್ಕರೆ, ನಮಗಾದರೋ ವಿಶ್ವದ ಮಕ್ಕಳೇ ನಮ್ಮ ಮಕ್ಕಳು. ಲಾಲಿಸಿದರೆ ಮಕ್ಕಳು, ಪೂಜಿಸಿದರೆ ದೇವರು, ಎನ್ನುವಂತೆ, ಮಕ್ಕಳು ಪ್ರೀತಿ ಮಾಡಿದವರನ್ನು ಪ್ರೀತಿಸುತ್ತವೆ.

ಮೂರ್ತಿಯ ಮಕ್ಕಳನ್ನೇ ನಿನ್ನ ಮಕ್ಕಳೆಂದು ತಿಳಿ. ನಿನಗೆ ಆಸೆಯಾದಾಗ ಬಂದು ನೋಡಿಕೊಂಡು ಹೋದರಾಯಿತು. ಅಳಬೇಡ ಲಕ್ಷ್ಮೀ ಎಂದು ಹೆಂಡತಿಯನ್ನು ಸಮಾಧಾನ ಮಾಡಿದರು.

ಮಾರನೆಯ ದಿನವೇ ಮೂರ್ತಿಯನ್ನು ಬರಮಾಡಿಕೊಂಡು ಅವನ ಹೆಸರಿಗೆ ಉಳಿದ ಆಸ್ತಿಯನ್ನೆಲ್ಲಾ ಬರೆದು ತಾವು ಕಾಶಿಗೆ ಹೊರಟಿರುವ ಏರ್ಪಾಡನ್ನು ತಿಳಿಸಿದರು.

ಮೂರ್ತಿ ಎಷ್ಟೋ ವಿಧದಲ್ಲಿ ಅವರಿಗೆ ಹೇಳಿದರು. "ನೀವು ಕಾಶಿಗೆ ಹೋಗಿ ಬನ್ನಿ ಮಾವ, ಅದಕ್ಕೇನೂ ಅಡ್ಡಿಯಿಲ್ಲ. ಆದರೆ ಅಲ್ಲೇ ಏಕೆ ಇದ್ದು ಬಿಡಬೇಕು ? ಅತ್ತೆ, ನೀವು ಇಬ್ಬರೂ ನಮಗೆ ಹಿರಿಯರಾಗಿ ನಮ್ಮ ಮನೆಯಲ್ಲಿಯೇ ಇದ್ದುಕೊಂಡಿರಿ ಎಂದು" ಏನು ಹೇಳಿದರೂ ಅವರ ಸಂಕಲ್ಪವನ್ನು ಬದಲಾಯಿಸಲಿಲ್ಲ. ಹೆಂಡತಿ ಸಮೇತ ಕಾಶಿಗೆ ಹೊರಟು ಹೋದರು.

ಶೇಷಣ್ಣನವರು ಹಣಕಾಸು ಏನನ್ನೂ ಅಪೇಕ್ಷೆ ಮಾಡದಿದ್ದರೂ ಮೂರ್ತಿಯೇ ಅವರ ಬೆಳೆಯಿಂದ ಬಂದ ಹಣವನ್ನು ಆಗಾಗ ಅವರ ಹೆಸರಿಗೆ ಮಣಿಯಾರ್ಡರ್ ಮೂಲಕ ಕಳುಹಿಸುತ್ತಿದ್ದರು. ಅವರು ಕಾಶಿಯಿಂದ ಆಗಾಗ ಬಂದು ಹೋಗುತ್ತಿದ್ದರು.

ಅಂಥಹ ಅಪೂರ್ವ ವ್ಯಕ್ತಿ ಶೇಷಣ್ಣ ಮಾವ ಈಗ ಐದು ವರ್ಷಗಳ ನಂತರ ಬರುತ್ತಾರೆಂದಮೇಲೆ ಮೂರ್ತಿಯು, ಅವರು ಬರುವುದನ್ನು ಕಾದು ಕುಳಿತ್ತಿದ್ದರು.

ಅಣ್ಣ ಅತ್ತಿಗೆ ಮನೆಗೆ ಬಂದ ಕೂಡಲೇ ಆಗಲಿದ್ದ ಅಣ್ಣನನ್ನು ನೋಡಿ ಪಾರ್ವತಮ್ಮನಿಗೆ ಸಂತೋಷವೂ ದುಃಖವೂ ಒಟ್ಟಿಗೇ ಬಿತ್ತರಿಸಿತು.

ಹೋಗಿದ್ದೇ ಅಣ್ಣ ಅತ್ತಿಗೆಯ ಕಾಲಿಗೆ ನಮಸ್ಕಾರ ಮಾಡಿ ಬಿಕ್ಕಿ ಬಿಕ್ಕಿ ಅತ್ತು ಬಿಟ್ಟರು. ಬಾಯಿಂದ ಮಾತೇ ಹೊರಡಲಿಲ್ಲ.

ಇದೇನು ಪಾರ್ವತಿ ! ಯಾಕಳ್ತೀಯ ? ಮೂರ್ತಿ ಎಲ್ಲಾ ಯೋಗ ಕ್ಷೇಮವನ್ನೂ ರೈಲ್ವೆ ಸ್ಟೇಷನ್ನಿನಲ್ಲಿಯೇ ಹೇಳಿದ. ಮನೆಯಲ್ಲಿ ಎಲ್ಲಾ ಚೆನ್ನಾಗಿದಾರೆ ಎಂದು. ನೋಡ್ಕೋ ಪಾರ್ವತಿ ; ನೀನೇ ಭಾಗ್ಯವಂತೆ ದೇವರಂಥಾ ಮಗ, ಲಕ್ಷ್ಮಿಯಂತೆ ಸೊಸೆ, ಮೊಮ್ಮಕ್ಕಳು. ಈ ಪ್ರಾಪಂಚಿಕ ಸಂಸಾರದಲ್ಲಿ ಇದಕ್ಕಿಂತ ಇನ್ನೇನು ಬೇಕು ಹೇಳು.

ಸರಿ ಅಣ್ಣಾ ; ಎಲ್ಲಾ ಇದೆ. ಆದರೆ ನೀನೊಬ್ಬ ದೂರವಾದೆಯಲ್ಲಾ ; ಎನ್ನುವುದೊಂದೇ ಕೊರಗು. ಅಂದರು ಕಣ್ಣೊರಸಿಕೊಳ್ಳುತ್ತಾ ಪಾರ್ವತಮ್ಮ.

ಮಂಗಳೆಯೂ, ಮಾವನಿಗೆ ಪಾದ ಮುಟ್ಟಿ ನಮಸ್ಕಾರ ಮಾಡಿದಳು. ನೀನು ಈ ಮನೆಯ ಮಂಗಳ ಲಕ್ಷ್ಮಿಯಮ್ಮಾ ; ಚಿರಕಾಲ ಚೆನ್ನಾಗಿರು ಎಂದು ಹರಸಿದರು.

ಸುಶೀಲ-ವಿಶ್ವನಾಥ ಇಬ್ಬರೂ ನಮಸ್ಕಾರ ಮಾಡಿ ಏನ್ ಮಾವ; ನೀವ್ ಬಂದು ಎಷ್ಟೊಂದು ವರ್ಷಗಳಾಗಿ ಹೋಯಿತು, ಹೋಗಿ ಮಾವ; ಎಂದು ಎಳೆ ಮಕ್ಕಳಂತೆ ಕೆನ್ನೆ ಉಬ್ಬಿಸಿ ಹೇಳಿದಳು ಸುಶೀ.

ಎಲಾ; ಎಲಾ ವಿಶೂ, ಎಷ್ಟು ದೊಡ್ಡವನಾಗಿ ಬಿಟ್ಟಿದ್ದೀಯೋ? ಆಗಲೇ ಮೀಸೆ ಬಂದ ಹುಡುಗ ಆಗಿ ಬಿಟ್ಟಿದ್ದೀಯಲ್ಲೋ ಗುರುತೇ ಸಿಕ್ಕೋಲ್ಲ; ಇವಳು ಯಾರು? ಸುಮಿತ್ರಾನೋ? ಸುಶೀಲಾನೋ?

ಇನ್ನೇನು ಇಷ್ಟು ಕಾಲ ಆದ್ರೂ ಇತ್ತ ಕಡೆ ಬರದೇನೇ ಇದ್ರೆ ನಾವು ಯಾರೂ ಅನ್ನೋದು ಮರೀದೇ ಇರುತ್ತ್ಯೇ ಮಾವ? ಇವಳು ಸುಶೀ ಮಾವ ಅಂದ ವಿಶೂ,

ರಾಜಿ, ಸುಮಿ, ಮದ್ವೇಗೂ ನೀವು ಬರಲೇ ಇಲ್ಲ ಮಾವ. ಅವರಿಬ್ಬರೂ ಬೆಂಗಳೂರಿನಲ್ಲಿ ಗಂಡನ ಮನೇಲಿ ಇದ್ದಾರೆ. ಅಂದರು ಮೂರ್ತಿ.

ಮಾತೆಲ್ಲಾ ಆಮೇಲೆ ಆಗಲೀ ಹಂಡೇಲಿ ನೀರು ಕಾದಿದೆ. ಸ್ನಾನ ಮಾಡಿ ಏಳಿ. ಮೊದಲು ಸ್ವಲ್ಪ ಏನಾದ್ರೂ ತೆಗೆದು ಕೊಳ್ಳೋವ್ರಂತೆ. ಪಾರ್ವತಮ್ಮ ಅಣ್ಣ, ಅತ್ತಿಗೆಗೆ ಹೇಳಿದರು.

ಮೂರ್ತಿಯ ಮನೆ ಸಂಸಾರ ಅಚ್ಚು ಕಟ್ಟಾಗಿ, ಮಕ್ಕಳು ದೊಡ್ಡವರಾಗಿ ಇಬ್ಬರೂ ಹೆಣ್ಣು ಮಕ್ಕಳು ಮದುವೆಯಾಗಿ ಸುಖವಾಗಿ ಬಾಳುತ್ತಿರುವ ವಿಚಾರ ವನ್ನೆಲ್ಲಾ ನಾದಿನಿ ಪಾರ್ವತಮ್ಮನಿಂದ ತಿಳಿದು ಲಕ್ಷ್ಮಮ್ಮ ಸಂತೋಷದಿಂದ ಹಿಗ್ಗಿದರು.

ಅಣ್ಣ ಅತ್ತಿಗೆ ಬಂದಾಗಿನಿಂದ ಪಾರ್ವತಮ್ಮ ವಿಧ ವಿಧ ಅಡಿಗೆ ತಿಂಡಿ ಮಾಡಿ ಅಕ್ಕರೆಯಿಂದ ತಾವೇ ಬಡಿಸುತ್ತಿದ್ದರು.

ಮನೆಯಲ್ಲಿ ಆಳು ಕಾಳು ಇದ್ದರೂ ಮಂಗಳೆ ಸ್ವತಃ ಮಾವನ ಮಡಿ ಬಟ್ಟೆ ಒಗೆದು ಒಣಗಿ ಹಾಕಿ, ಹೊತ್ತಿಗೆ ಸರಿಯಾಗಿ ಅವರ ಸ್ನಾನ ಪೂಜೆ ಎಲ್ಲದಕ್ಕೂ ಅಣಿ ಮಾಡುತ್ತಿದ್ದಳು.

ಈ ಕೆಲಸಗಳಿಗಾಗಿ ಅವಳಿಗೂ ಶೇಷಣ್ಣನವರಿಗೂ ತುಂಬಾ ಚರ್ಚೆಯೇ ನಡೆಯುತ್ತಿತ್ತು.

"ನೋಡು ಮಂಗಳಾ; ಮನುಷ್ಯ ಕೈಕಾಲು ಗಟ್ಟಿಯಾಗಿರುವವರೆಗೂ ಚೆನ್ನಾಗಿ ದುಡಿಯ ಬೇಕಮ್ಮ. ನಮ್ಮ ಕೆಲಸವನ್ನೂ ಇನ್ನೊಬ್ಬರ ಕೈಲಿ

ಮಾಡಿಸಿಕೊಳ್ಳಬಾರದು. ಇದ್ಯೇನಮ್ಮ ಮಹಾ ಕಷ್ಟ, ನಲ್ಲೀಲೀ ಬರೋ ನೀರಿನಲ್ಲಿ ನನ್ನ ಪಂಚೆ ಬಂದು ಕಸಕಿ ಹಾಕಿ ಕೊಳ್ಳೋದಕ್ಕೆ ನನಗೆ ಆಗೋಲ್ವೇನಮ್ಮಾ ; ನೀನು ಬೇರೆ ಕೆಲಸ ನೋಡು ಹೋಗು, ಅನ್ನುತ್ತಿದ್ದರು.

ಮಂಗಳೆ ಉಪಾಯವಾಗಿ ಅವರ ಕೈಯಿಂದ ಬಟ್ಟೆಗಳನ್ನೂ ತೆಗೆದುಕೊಂಡು, "ನಮಗೂ ಸ್ವಲ್ಪ ನಿಮ್ಮ ಸೇವೆ ಮಾಡೋ ಭಾಗ್ಯ ಬಿಟ್ಟು ಕೊಡಿ ಮಾವ, ಅನ್ನುತ್ತಿದ್ದಳು.

ಮೂರ್ತಿಯೂ ಕೂಡಾ ಅಪರೂಪವಾಗಿ ಬಂದಿರುವ ಅತ್ತೆ ಮಾವನಿಗೆಂದು ಬುಟ್ಟಿಯ ತುಂಬಾ ಕಿತ್ತಳೆ ಹಣ್ಣು, ಸೇಬಿನ ಹಣ್ಣು, ಮಾವಿನ ಹಣ್ಣುಗಳನ್ನು ತರುತ್ತಿದ್ದರು.

ವಿಶೂ-ಸುಶೀನೂ ಮಾವನ ಬಳಿ ಕುಳಿತು ಹರಟೆ ಹೊಡೆಯುತ್ತಿದ್ದರು. ಮನೆಯಲ್ಲಿ ಪ್ರತಿಯೊಬ್ಬರೂ ಮಾವನಲ್ಲಿ ತಮಗಿರುವ ಅಕ್ಕರೆಯನ್ನು ಒಂದಲ್ಲ ಒಂದು ವಿಧದಲ್ಲಿ ತೋರ್ಪಡಿಸಿಕೊಳ್ಳುತ್ತಿದ್ದರು.

ಆದರೆ ಶೇಷಣ್ಣನವರು ನಿರ್ಲಿಪ್ತರು. ಅವರಿಗಾಗಿ ಅವರು ಏನನ್ನೂ ಅಪೇಕ್ಷಿಸುತ್ತಿರಲಿಲ್ಲ. ಭಕ್ತಾದಿಗಳು ತಮಗಿಷ್ಟವಾದುದನ್ನು ದೇವರಿಗೂ ಇಷ್ಟವೆಂದು ನೀಡಿದರೆ ಭಕ್ತನ ಅಪೇಕ್ಷೆಯಂತೆ ಸ್ವೀಕರಿಸುವ ದೇವರಂತೆ ಶೇಷಣ್ಣನವರು ಅವರ ಮನಸ್ಸನ್ನು ತೃಪ್ತಿ ಪಡಿಸುವುದಕ್ಕಾಗಿ ಅವರಂತೆ ತಾವು ಇರುತ್ತಿದ್ದರು.

ಲಕ್ಷ್ಮಮ್ಮನವರೂ ಎಷ್ಟಾದರೂ ಹೆಣ್ಣು ಜೀವ ಮನೆಯವರೆಲ್ಲರ ಪ್ರೀತಿ ಆದರಗಳಲ್ಲಿ ತಮ್ಮನ್ನು ತಾವೇ ಮರೆತರು, ಪಾರ್ವತಮ್ಮನಂತೂ ಅತ್ತಿಗೆಯನ್ನು ಅತಿಶಯವಾಗಿ ನೋಡಿಕೊಳ್ಳುತ್ತಿದ್ದರು.

ಅತ್ತಿಗೆ ನಾದಿನಿ ಎಂಟು ವರ್ಷಗಳ ಮಾತನ್ನು ಆಡಿದ್ದೂ ಆಡಿದ್ದೇ.

ನಿನ್ನ ಸೊಸೆಗೆ ಸಮಾನ ಇಲ್ಲ ಪಾರ್ವತಿ, ನೋಡೋಕೂ ಒಳ್ಳೆ ಲಕ್ಷಣವಾಗಿ ಲಕ್ಷ್ಮಿದೇವಿ ಇದ್ದ ಹಾಗೆ ಇದಾಳೆ. ಒಂದು ಅಹಂಕಾರವೇ ? ಒಂದು ಜಂಭವೇ ? ಒಂದೂಇಲ್ಲ ಬಲು ಒಳ್ಳೆ ಹುಡುಗಿ ಅಂದರು, ಲಕ್ಷ್ಮಮ್ಮ ಮಂಗಳೆಯ ಮೇಲೆ ಅಭಿಮಾನದಿಂದ.

ಅಯ್ಯೋ ಅತ್ತಿಗೆ " ಎಲ್ಲಾ ಜಾಣ ತುಸುಕೋಣ ಅನ್ನೋ ಹಾಗೆ ಆ ಗಂಡು ಹುಡುಗನ ತಲೆ ಕಂಡ್ರೆ ಅವಳಿಗಾಗೋಲ್ಲ ಉರಿದು ಬೀಳ್ತಾಳೆ. ಸ್ವಲ್ಪ

ಹೆಣಗಿದೇನೆಯೇ ? ಅವಳ ಕೈಲಿ ? ಅಂದರು ಪಾರ್ವತಮ್ಮ ಮೆಲ್ಲನೆ. ಮಂಗಳೆ ಕಿವಿಗೆ ಬೀಳದಂತೆ.

ಅದೇ ಪಾತೂ, ವಿಶು ಹೊರಗಡೆಯಿಂದ ಬಂದರೆ ಅಜ್ಜೀ ! ಅಂತ ಬರ್ತಾನೆಯೇ ಹೊರತು ಅಮ್ಮಾ ! ಎಂದು ಬರುವುದೇ ಇಲ್ಲ. ಅವನಿಗೂ ತಾಯಿ ಅಂದ್ರೆ ಒಂದು ತರಹಾ ; ಅಲ್ಲವೆ ?

ಏನೋಮ್ಮ ನಮ್ಮನೇದು ಒಂದು ವಿಚಿತ್ರ ಮೂರು ಹೆಣ್ಣು ಮಕ್ಕಳ ಮೇಲೆ ಒಂದು ಗಂಡಾದರೆ ಯಾರಿಗೆತಾನೇ ಅತಿಶಯವಿಲ್ಲ ? ಹೇಳು.

ಪಾಪ ; ಮಂಗಳೇಗೆ ತಾನೇ ಮಗ ಅನ್ನೋ ಅಕ್ಕರೆ ಇಲ್ಲವೇ ? ಅವಳದು ತುಂಬಾ ಮೃದು ಮನಸ್ಸು ಅವಳನ್ನು ನೀನು ಏನೂ ಅನ್ನೋಕೆ ಹೋಗಬೇಡ ಪಾತು ಅಂದರು ಲಕ್ಷಮ್ಮ ನಾದಿನಿಯಮೇಲೆ ತಮಗಿದ್ದ ಸಲಿಗೆಯಿಂದ. ಇಬ್ಬರೂ ಹುರುಳಿಕಾಯಿಗೆ ನಾರು ತೆಗೆದು ಹಚ್ಚುತ್ತಾ ಮಾತಾಡುತ್ತಿದ್ದರು.

ಇದೋ ಅತ್ತೆ ಈಗತಾನೆ ಬೆಟ್ಟಪ್ಪ ಕೋಸುತಂದ, ಕೋಸು ಪಲ್ಯ, ಹುರುಳಿಕಾಯಿ ಉಳಿ ಮಾಡೋಣವೇ ನೋಡಿ ಎಂದು ಮಂಗಳೆ ೪-೫ ಕೋಸನ್ನ ಬುಟ್ಟಿಯಿಂದ ತೆಗೆದಿಟ್ಟಳು.

ಭಟ್ಟರಿಗೆ ಮೊದಲೇ ಹೇಳಿಬಿಡು ಮಂಗಳಾ, ಇಲ್ಲದಿದ್ದರೆ ಅವರು ಹುಳಿ ಲೊಡ್ಡಿನ ಹುಳಿ ಮಾಡಿ ಇಟ್ಟುಬಿಡುತ್ತಾರೆ ಅಂದರು ಪಾರ್ವತಮ್ಮ.

ನಾವು ಬಂದು ಆಗಲೇ ಒಂದುವಾರ ಆಗೋಯ್ತಲ್ಲೇ ಮಂಗಳಾ ! ಇಲ್ಲಿ ದಿನ ಕಳೆಯೋದೇ ಗೊತ್ತಾಗೋಲ್ಲಮ್ಮ ಅಂದರು ಲಕ್ಷಮ್ಮ.

ಎಷ್ಟು ದಿನ ಆದರೆ ಏತ್ತೇ ಈಗ. ಈ ಸಲ ಇಲ್ಲೇ ಇದ್ದುಬಿಡಿ ಮಾವ ನೀವು ಇಬ್ಬರೂ ಅಂದಳು ಮಂಗಳೆ.

ಅದು ಹೇಗಮ್ಮ ಸಾಧ್ಯ ? ಅವರಿಗೆ ತಮ್ಮ ಆಶ್ರಮ, ಆಶ್ರಮದ ಮಕ್ಕಳಮೇಲೆ ಪ್ರಾಣ. ಅವರು ನೋಡಿಕೊಳ್ಳುವಂತೆ ಬೇರೆಯಾರೂ ಅದನ್ನು ನಿಭಾಯಿಸಲಾರರು. ಬಂದು ಹದಿನೈದು ದಿನ ಇದ್ದು ಮಕ್ಕಳನ್ನೆಲ್ಲಾ ನೋಡಿ ಕೊಂಡು ಹೋಗೋಣಾ : ಅಂತ ಬಂದೆವು. ಸುಮಿತ್ರಾ, ರಾಜೇಶ್ವರಿಯನ್ನು ಅಷ್ಟರಲ್ಲಿ ಕರೆಸಮ್ಮ ಅವರ ಗಂಡ ಮಕ್ಕಳು ಅವರ ಸಂಸಾರ ನೋಡಿಬಿಟ್ಟರೆ ಇಲ್ಲಿಗೆ ತೃಪ್ತಿ ಎಂದರು ಲಕ್ಷಮ್ಮ.

ಹೂಂ ಅತ್ತೇ ರಾಜಿ, ಸುಮ್ಮೀಗೂ ಕಾಗದ ಬರೆದಿದ್ದೇವೆ. ನಾಳೆ ಅವರೆಲ್ಲರೂ ಬರುತ್ತಾರೆ.

ನೋಡು ಅತ್ತಿಗೆ, ಸುಮಿ, ರಾಜಿ, ಗಂಡಂದಿರು ಇಬ್ಬರೂ ಅಷ್ಟೆ; ತುಂಬಾ ಒಳ್ಳೆಯವರು. ರಾಜಿ ಗಂಡ ಒಂದು ಸೋಪು ಫ್ಯಾಕ್ಟ್ರಿಯನ್ನೇ ನಡೆಸುತ್ತಿದ್ದಾನೆ; ಬೇಕಾದಷ್ಟು ಸಂಪಾದನೆ ಇದೆ.

ಸುಮಿ ಗಂಡ ಡಾಕ್ಟ್ರು, ಅಷ್ಟು ಚಿಕ್ಕ ವಯಸ್ಸಿಗೇ ತುಂಬಾ ಹೆಸರುವಾಸಿಯಾಗಿದ್ದಾನೆ. ಸದ್ಯ ಹೆಣ್ಣು ಮಕ್ಕಳೇನೋ ಹಾಯಾಗಿದ್ದಾರಮ್ಮ. ಅಂದರು ಪಾರ್ವತಮ್ಮ ಹೆಮ್ಮೆಯಿಂದ.

ಊಟದ ವೇಳೆಗೆ ಮೂರ್ತಿಯೂ ಕಾರಿನಲ್ಲಿ ಬಂದರು. ಅಲ್ಲಿಯೇ ಇದ್ದ ಮಾವ ಏಕಪ್ಪ ! ಮೂರ್ತಿ ! ನೀನು ಬಂದು ಮೂರುದಿನ ಆಯ್ತಲ್ಲ, ಏನು ಕೆಲಸ ಜಾಸ್ತಿನೋ ? ಅಂದರು.

ಅಲ್ಲಿಯೇ ಅವರ ಪಕ್ಕ ಕುಳಿತು, ಇದು ಬಹಳ ಜವಾಬ್ದಾರಿಯ ಕೆಲಸ ಮಾವ. ಶರಾವತಿ ಯೋಜನೆಯ ನಿರ್ಮಾಣದಲ್ಲಿ ಇಡೀ ಭಾರತದ ಭವಿಷ್ಯ ಅಡಗಿದೆ. ಏಕೆಂದರೆ ಶರಾವತಿ ನೀಡಬಲ್ಲ ವರಪ್ರಸಾದ ಕುರಿತು ಅಮಿತವಾದ ನಿರೀಕ್ಷೆ ಇದೆ.

ಶರಾವತಿ ಯೋಜನೆ ಪೂರ್ಣವಾದರೆ ಗ್ರಾಮಗಳಲ್ಲಿ ಮನೆಗಳನ್ನು ಬೆಳಗಲು ದೀಪಗಳನ್ನೂ, ಕಾರ್ಖಾನೆಗಳಲ್ಲಿ ಚಕ್ರಗಳನ್ನು ತಿರುಗಿಸಲು ಶಕ್ತಿಯನ್ನು ನೀಡುತ್ತಾ ಲಕ್ಷೋಪಲಕ್ಷ ಭಾರತೀಯರ ಜೀವನವನ್ನು ಸುಮಧುರಗೊಳಿಸಲು ದಶಲಕ್ಷ ಕಿಲೋವಾಟರುಗಳಷ್ಟು ಅಗಾಧ ವಿದ್ಯುಚ್ಛಕ್ತಿಯ ಪ್ರವಾಹ ಹರಿಯಲಿದೆ. ಇದರಿಂದಾಗಿ ಉದ್ಯೋಗಾವಕಾಶ ಹೆಚ್ಚಿ ರಾಷ್ಟ್ರೀಯ ಉತ್ಪಾದನೆ ಇಮ್ಮಡಿಸಿ ವಿದೇಶಿ ಆಮದಿನಿಂದ ಭಾರತ ಉಳಿಯಲು ಸಾಧ್ಯವಿದೆ ಮಾವ.

ಇಂಥಾ ಆಶಾ ಭವಿಷ್ಯ ಇಂದು ನಮ್ಮ ಕೈಯ್ಯಲ್ಲಿದೆ ಮಾವ. ಸರ್ಕಾರವು ನಮ್ಮನ್ನು ನಂಬಿದೆ. ನಾವು ಸ್ವಲ್ಪ ಮೈಮರೆತರೂ ಕಟ್ಟಡದ ಯಾವ ಭಾಗದಲ್ಲಿ ಏನು ಐಬು ಉಂಟಾಗಿಬಿಡುತ್ತದೆಯೋ ? ಕಟ್ಟಡದ ಪ್ರತಿಯೊಂದು ಅಡಿಯನ್ನು ನಾವು ಪರೀಕ್ಷಿಸುತ್ತಲೇ ಇರಬೇಕು ಮಾವ. ಅಂದರು ಮೂರ್ತಿ.

ಅಬ್ಬ .. ಮಾನವ ತನ್ನ ಆ ವಾಸ ಸ್ಥಾನವಾದ ಭೂಮಂಡಲದ ಮೇಲೆ

ಸಹಸ್ರಾರು ವರ್ಷಗಳ ಬಾಳುವೆ ಮಾಡಿದ ನಂತರ ಪ್ರಕೃತಿಯಲ್ಲಿ ಅಡಗಿರುವ ಮಹಾಶಕ್ತಿಯನ್ನು ತನ್ನ ಉಪಯೋಗಕ್ಕೆ ಬಳಸುವ ತಂತ್ರಗಳನ್ನು ಅರಿತುಕೊಂಡ.

ಅದೇನೇ ಇರಲಿ ಈ ವಿಜ್ಞಾನಯುಗದಲ್ಲಿ ದೈವಶಕ್ತಿಗೆ ಮಾನವನ ಯುಕ್ತಿ ಪೈಪೋಟಿ ನಡೆಸುತ್ತಿದೆಯೆನ್ನಿಸುತ್ತದೆ ಮೂರ್ತಿ. ಏಳಪ್ಪಾ ! ದಣಿದು ಬಂದಿದ್ದೀ ಊಟಕ್ಕೇಳು, ಅಂದರು ಶೇಷಣ್ಣನವರು.

ಮೂರ್ತಿಯವರ ಮನೆಯಲ್ಲಿ ಪ್ರತಿವರ್ಷವೂ ಶ್ರೀರಾಮನವಮಿ ಅದ್ಧೂರಿಯಾಗಿ ನಡೆಯುತ್ತಿತ್ತು. ಮನೆಯವರೆಲ್ಲರೂ ಶ್ರೀರಾಮ ಸೇವೆಯನ್ನು ಶ್ರದ್ಧಾ ಭಕ್ತಿಯಿಂದ ಮಾಡುತ್ತಿದ್ದರು.

ಯುಗಾದಿ ಹಬ್ಬದ ದಿನ ರಾಮಾಯಣ ಪಾರಾಯಣ ಪ್ರಾರಂಭವಾಗಿ ಶ್ರೀರಾಮನವಮಿಯ ದಿನ ಶ್ರೀರಾಮ ಪಟ್ಟಾಭಿಷೇಕದ ಘಟ್ಟವನ್ನು ಮುಗಿಸಿ ಮಂಗಳ ಮಾಡುತ್ತಿದ್ದರು.

ಒಂಭತ್ತು ದಿನವೂ ಮನೆಯಲ್ಲಿ ಪೂಜೆ, ಪುನಸ್ಕಾರ ಅನ್ನ ಸಂತರ್ಪಣೆ ಎಲ್ಲಾ ನಡೆಯುತ್ತಿತ್ತು.

ಮೂರ್ತಿಯವರು ತಮಗೆ ಅವಕಾಶ ದೊರಕಲಿ, ದೊರಕದೇ ಹೋಗಲಿ ಈ ಉತ್ಸವಕ್ಕೆ ಮಾತ್ರ ಎಲ್ಲಾ ಏರ್ಪಾಡನ್ನೂ ಮಾಡಿ ಶಾಸ್ತ್ರಿಗಳಿಂದ ರಾಮಾಯಣ ಪಾರಾಯಣ ಮಾಡಿಸುತ್ತಿದ್ದರು.

ಇದು ಅವರ ತಂದೆಯ ಕಾಲದಿಂದಲೂ ನಡೆದುಬಂದ ಒಂದು ಪುಣ್ಯದ ಕೆಲಸ. ಈ ಒಂದು ಪದ್ಧತಿಯನ್ನು ಮೂರ್ತಿಯವರು ಇನ್ನೂ ಅದ್ಧೂರಿಯಾಗಿ ನಡೆಸುತ್ತಿದ್ದರು.

ತಮಗೆ ದೇವರು ಕೊಟ್ಟ ಐಶ್ವರ್ಯದಲ್ಲಿ ಸ್ವಲ್ಪ ಭಾಗವಾದರೂ ಸದ್ವಿನಿಯೋಗವಾಗಲಿ ಎಂದು ಅವರ ಅಭಿಮತ. ಪಟ್ಟಾಭಿಷೇಕದ ದಿವಸ ನೂರ ಒಂದು ಜೋಡಿ ದಂಪತಿಗಳನ್ನು ಕರೆಸಿ ಅವರಿಗೆ ಪಾದಪೂಜೆಮಾಡಿ ಹೊಸ ಸೀರೆ, ಪಂಚೆಗಳನ್ನು ಕೊಟ್ಟು ನಮಸ್ಕಾರ ಮಾಡುತ್ತಿದ್ದರು. ಪಾರ್ವತಮ್ಮನವರಿಗಂತೂ ಮಗನ ಈ ಶ್ರದ್ಧಾ ಭಕ್ತಿಯನ್ನು ನೋಡಿ ಅಪಾರ ಹೆಮ್ಮೆ.

ಜನಗಳು, ಪಾರ್ವತಮ್ಮನವರೇ ! ನಿಮ್ಮ ಮನೆಯಲ್ಲಿ ರಾಮೋತ್ಸವ ನಡೆಯುವಂತೆ ಊರೆಲ್ಲಾ ಸೇರಿ ನಡೆಸುವ ರಾಮಮಂದಿರದಲ್ಲಿಯೂ ನಡೆಯುವುದಿಲ್ಲ ಪುಣ್ಯಾತ್ಮರು ನಿಮ್ಮ ಮಗ, ಸೊಸೆ ಅನ್ನುತ್ತಿದ್ದರು.

ಹೌದಮ್ಮ ನಮ್ಮ ಯಜಮಾನರ ಕಾಲದ ಪದ್ಧತಿಯನ್ನು ಮಗ ಇನ್ನು ಚೆನ್ನಾಗಿ ನಡೆಸುತ್ತಾನೆ, ಎಂದು ಜಂಭದಿಂದ ಹೇಳಿಕೊಳ್ಳುತ್ತಿದ್ದರು ಪಾರ್ವತಮ್ಮ.

ಈ ಸಲವೂ ಯುಗಾದಿ ಹಬ್ಬಕ್ಕೆ ಎರಡು ದಿನ ಮುಂಚಿತವಾಗಿ ಬೆಂಗಳೂರಿನಿಂದ ಮಂಗಳೆಯ ಹೆಣ್ಣು ಮಕ್ಕಳೂ ಅಳಿಯಂದಿರೂ ಅವರ ಮಕ್ಕಳೂ ಬಂದಿಳಿದರು. ಮನೆ ಮದುವೆ ಮನೆಯಂತೆ ಸಂಭ್ರಮದಿಂದ ತುಂಬಿತು. ಈ ಸಲ ವಿಶೇಷವೆಂದರೆ ಕಾಶಿಯಿಂದ ಅತ್ತೆ ಮಾವ ಬಂದಿರುವುದು.

ಲಕ್ಷಮ್ಮನವರೂ, ಶೇಷಣ್ಣನವರೂ, ಸುಮಿತ್ರ. ರಾಜೇಶ್ವರಿ ಇವರ ಸಂಸಾರವನ್ನು ನೋಡಿ ಆನಂದಪಟ್ಟರು. ರಾಜೇಶ್ವರಿಗೆ ಒಂದು ಗಂಡು. ಒಂದ ಹೆಣ್ಣು, ಎರಡು ಮಕ್ಕಳು. ಸುಮಿತ್ರೆಗೆ ಒಂದು ಗಂಡು ಮಗು ಮಾತ್ರ.

ಪಟ್ಟಾಭಿಷೇಕದ ವೇಳೆಗೆ ಬಂಧು ಬಳಗದವರೆಲ್ಲಾ ಬಂದು ಸೇರಿದರು. ಪಾರ್ವತಮ್ಮನ ಮಗಳು ದೇವಕಿಯೂ ಮಕ್ಕಳೂ ಬಂದಿದ್ದರೂ ಮನೆ ಗಿಜಗಿಜನೆ ತುಂಬಿತ್ತು. ದೇವಕಿಯ ಮಗಳು ವೀಣಾ ಪಾಣಿ ೧೬ ವರ್ಷದ ಹುಡುಗಿ, ಇನ್ನು ಮಿಕ್ಕ ಮೂರು ಗಂಡು ಮಕ್ಕಳು ಚಿಕ್ಕವರು, ಮಗಳು ಮೊಮ್ಮಕ್ಕಳೂ ಬಂದದ್ದು ಪಾರ್ವತಮ್ಮನವರಿಗೆ ಹಿಡಿಸಲಾರದ ಹಿಗ್ಗು. ಅವರುಗಳು ಪೂನಾದ್ದಲ್ಲಿದ್ದುದರಿಂದ ಪದೇಪದೇ ಬರುತ್ತಿರಲಿಲ್ಲ. ಈಗ ಮೂರು ವರ್ಷದ ಕೆಳಗೆ ಬಂದಿದ್ದ ಮಗಳು ಅಳಿಯ ಈಗ ಬಂದಿದ್ದರು.

ವಿಶ್ವನಾಥ ಬ್ಯಾಟು, ಬೆಳ್ಳಿಕಪ್ಪು ಹಿಡಿದು ಅಜ್ಜೀ... ಇಲ್ಲಿ ನೋಡು; ಎಂದು ಕೂಗುತ್ತಾ ಒಳಕ್ಕೆ ಬಂದ.

ಹಾಲಿನಲ್ಲಿ ಎಲ್ಲರೂ ಕುಳಿತು ಮಾತನಾಡುತ್ತಾ ಇದ್ದರು. ದೇವಕಿಯನ್ನು ನೋಡಿ, ಓಹೋ ಹೋ ಯಾವಾಗ ಬಂದೆ ಅತ್ತೇ; ಎಲ್ಲಾ ಸೌಖ್ಯವೇ? ಅಂದ ವಿಶೂ.

ಏನೋ... ನೀನೇನಾ ವಿಶೂ, ಅಲ್ಲ ಕಣೋ ಗುರುತೇ ಸಿಕ್ಕದಷ್ಟು ಉದ್ದ ಬೆಳೆದು ಬಿಟ್ಟಿದ್ದೀಯಲ್ಲೋ ಅಂದಳು ದೇವಕಿ.

ಒಳ್ಳೆ ಅತ್ತೆ; ನೀವು ಮೂರು ವರ್ಷಕ್ಕೋ ಆರು ವರ್ಷಕ್ಕೋ ಒಂದು ಸಲ ಬನ್ನಿ, ನಾನು ಇದ್ದಷ್ಟೇ ಇರ್ತೀನಿ, ಅಲ್ವೆ? ಎಂದು ನಕ್ಕ.

ಟ್ರೈಟು ಪೈಜಾಮ, ಜುಬ್ಬ ಹಾಕಿಕೊಂಡು ನಿಂತಿದ್ದ ವೀಣಾಳನ್ನು ನೋಡಿ ಅತ್ತೆ : ಯಾರು ಆ ಹುಡುಗಿ ? ಅಂದ, ತಮಾಷೆಗಾಗಿ.

ಆಮ್ಮಾ ನೋಡಮ್ಮ ನಾನು ಯಾರು ಅನ್ನೋದೇ ಮರೆತು ಬಿಟ್ಟಿದ್ದಾನೆ ವಿಶೂ. ಅಯ್ಯೋ ಶೇಮ್, ಶೇಮ್ ಎಂದು ಚಪ್ಪಾಳೆ ತಟ್ಟಿಕೊಂಡು ಕುಣಿದಳು ವೀಣಾ.

ಅಲೆಲೆ ವೀಣಾ, ನೀನೂ ! ಎಷ್ಟು ಉದ್ದ ಆಗಿಬಿಟ್ಟಿದ್ದೀ ? ನೀನ್ಯಾರು ಅನ್ನೋದು ನಂಗೆ ಗೊತ್ತಿಲ್ವೇನೇ ? ಅಲ್ಲಾ ಈ ಪೈಜಾಮ, ಜುಬ್ಬಾ ಹಾಕಿ ರೋದು ಒಳ್ಳೆ ಸಿಂಧಿ ಹುಡುಗಿ ಇದ್ದ ಹಾಗೆ ಇದ್ದೀ ...ನಮ್ಮ ವೀಣಾ-ಪಾಣಿ ಕೈಯ್ಯಲ್ಲಿ ವೀಣೆ ಇಲ್ವಲ್ಲಾ ? ಅಂತ ಗುರುತು ಸಿಕ್ಕಲಿಲ್ಲ ಅಷ್ಟೆ, ಎಂದು ಅವಳ ಮೊಟಕು ಎರಡು ಜಡೆಯನ್ನು ಎಳೆದು ಕೀಟಲೆ ಮಾಡಿದ ವಿಶೂ.

ಅತ್ತೆ, ವೀಣಾ, ಎಲ್ಲರೂ ಮೊನ್ನೆಯೇ ಬಂದರು ಕಣೊ ವಿಶೂ.... ! ಎಲ್ಲೋ ಕೊಡೋ ಇಲ್ಲಿ ಎಷ್ಟು ದೊಡ್ಡ ಬೆಳ್ಳೀಕಪ್ಪು ಈ ಸಲ ? ಎಂದು ಹಿಗ್ಗಿನಿಂದ ವಿಶೂ ಕೈಲಿದ್ದ ಕಪ್ಪನ್ನು ಕಿತ್ತುಕೊಂಡಳು ಸುಶೀ.

ಮೆಡ್ರಾಸ್ ಟೀಮಿನವರು ಸೋತುಹೋದರು ಸುಶೀ, ನಮ್ಮ ಕಾಗಡಕ್ಕೆ ಷೀಲ್ಡು, ನನಗೆ ಈ ಬೆಳ್ಳಿಕಪ್ಪು ಬಂತು, ಅಂದ ವಿಶೂ, ಠೀವಿಯಿಂದ ಬ್ಯಾಟ್ ತಿರುಗಿಸುತ್ತಾ.

ಅತ್ತೆ ವಿಶು ಬೆಂಗಳೂರಿಗೆ ಕ್ರಿಕೆಟ್ ಮ್ಯಾಚ್‌ಗೆ ಹೋಗಿದ್ದ ಎನ್ನಲಿಲ್ಲವೇ? ನೋಡು ಗೆದ್ದು ಬೆಳ್ಳೀಕಪ್ಪು ತಂದಿದಾನೆ, ಅಂದಳು ಸುಶೀಲ.

ಒಂದು ಗಾಜಿನ ಬೀರು ಬೆಳ್ಳೀಕಪ್ಪಿನಿಂದ ತುಂಬಿಹೋಗಿದೆ. ಇದನ್ನ ಇಡೋಕೆ ಜಾಗವೇ ಇಲ್ವಲ್ಲೋ ವಿಶೂ .. ಅಂದಳು ವೀಣಾ ಗಾಜಿನ ಬೀರು ಕಡೆ ಕೈ ತೋರಿಸಿ.

ಇದನ್ನ ನಿನ್ನ ಪೆಟ್ಟಿಗೇಲೇ ಇಟ್ಕೊಳ್ಳೀ ವೀಣಾ ; ಅಂದು ಬೆಳ್ಳಿ ಕಪ್ಪನ್ನು ವೀಣಾಳ ಕೈಗೆ ಕೊಟ್ಟ....ವಿಶೂ.

ಓ....ಹೋ-ಹೋ ಇನ್ನೂ ಮದುವೆ ಆಗೋದಕ್ಕೆ ಮೊದಲೇ ಹೆಂಡತೀ ಅನ್ನೋ ಅಭಿಮಾನ ನೋಡಪ್ಪಾ ; ಎಂದು ಸುಶೀಲ ಕೈ ಬಾಯಿ ತಿರುಗಿಸಿ ಹಾಸ್ಯ ಮಾಡಿದಳು.

ಹೋಗು, ಸುಶೀ; ನಾನೇನು ಆ ಲಾಂಗ್ ಟಾಂಗ್‌ನ್ನ ಮದುವೆ ಆಗೋಲ್ಲ. ಅಂದು ವೀಣಾ ಕೆನ್ನೆ ಹುಬ್ಬಿಸಿ ಬೆಡಗಿನಿಂದ ಬೆಳ್ಳೀಕಪ್ಪನ್ನು ಟೇಬಲ್ ಮೇಲೆ ಇಟ್ಟಳು.

ಓ ಹೋ ಹೋ ಈ ಬಿಳೀ ಜಿರಲೆ, ಸಿಂಧೀನ ನಾನೇನು ಮಾಡ್ಕೊಳ್ಳೋಕೆ ಕಾಯ್ಕೊಂಡು ಇಲ್ಲಾ ಕಣೇ ಹೋಗೇ ಹೋಗೇ ಪೂನಾವಾಲಿ ಅಂದ ವಿಶೂ.

ಮಕ್ಕಳ ಮಾತಿಗೆ ಎಲ್ಲರೂ ಘೊಳ್ಳೆಂದು ನಕ್ಕರು. ಶ್ರೀರಾಮ ಪಟ್ಟಾಭಿಷೇಕದ ದಿನ ಮೂರ್ತಿಯವರ ಮನೆಯಲ್ಲಿ ಸಂಭ್ರಮವೋ ಸಂಭ್ರಮ.

ಬಾಳೆ ಕಂಬ, ಮಾವಿನೆಲೆ ಮಲ್ಲಿಗೆ ಹೂವಿನಿಂದ ಅಲಂಕರಿಸಿದ ಮಂಟಪದಲ್ಲಿ ಶ್ರೀರಾಮದೇವರ ದೊಡ್ಡ ಪಟವನ್ನಿಟ್ಟು ಬಗೆ ಬಗೆಯ ಹೂವಿನ ದಂಡೆಯ ಹಾರಗಳಿಂದ ಅಲಂಕರಿಸಿದ್ದರು.

ಮಂಟಪದ ಮುಂದೆ ಲಕ್ಷಣವಾಗಿ ರಂಗೋಲೆಗಳನ್ನು ಹಾಕಿ, ಸಾಲು ದೀಪ, ನೀಲಾಂಜನಗಳನ್ನು ಬೆಳಗಿಸಿದ್ದರು, ಹೂವು ಹಣ್ಣು ತಾಂಬೂಲ, ಗಂಧ ಅಕ್ಷತೆ ಆರತಿ ಮೊದಲಾದ ಮಂಗಳ ದ್ರವ್ಯಗಳ ತಟ್ಟೆಗಳನ್ನು ದೇವರ ಮುಂದೆ ಸಾಲಾಗಿ ಇಟ್ಟಿದ್ದರು.

ಹಚ್ಚಿದ ಊದುಬತ್ತಿಯ ಪರಿಮಳ ಮಲ್ಲಿಗೆಯ ಸುವಾಸನೆ ಮನೆಯಲ್ಲಾ ಕಂಪನ್ನು ಬೀರಿತ್ತು. ಮುತ್ತೈದೆ, ಬ್ರಾಹ್ಮಣರು, ಮಕ್ಕಳೂ ನೆರೆದಿದ್ದ ಆ ವಿಶಾಲವಾದ ಭವನವು ಅಯೋಧ್ಯಾಪಟ್ಟಣದ ಶ್ರೀರಾಮ ಪಟ್ಟಾಭಿಷೇಕದ ದಿವ್ಯಮಂಗಳ ಸನ್ನಿವೇಶವನ್ನೇ ನೆನಪಿಗೆ ತರುತ್ತಿತ್ತು.

ಶಾಸ್ತ್ರಿಗಳು ಶ್ರೀರಾಮ ಪಟ್ಟಾಭಿಷೇಕದ ಘಟ್ಟವನ್ನು ಓದಿ ಮಹಾ ಮಂಗಳಾರತಿ ಮಾಡಿದರು. ಸುಮಂಗಲೆಯರು ಆರತಿ ಎತ್ತಿ ಅಕ್ಷತೆ ಹಾಕಿದರು. ಎಲ್ಲರೂ ಲಾಜ, ಅಕ್ಷತೆ ಹೂವುಗಳನ್ನು ದೇವರಿಗೆ ಅರ್ಪಿಸಿ ನಮಸ್ಕರಿಸಿದರು. ಮಂಗಳೆಯೂ, ಮೂರ್ತಿಯೂ, ಶ್ರದ್ಧಾ ಭಕ್ತಿಯಿಂದ ನೂರೊಂದು ದಂಪತಿಗಳಿಗೆ ಪಾದ ಪೂಜೆ ಮಾಡಿ ಉಡುಗರೆಯನ್ನೂ ತಾಂಬೂಲವನ್ನೂ ಅರ್ಪಿಸಿದರು.

ಶೇಷಣ್ಣನವರು ಭಕ್ತಿ ಪಾರವಶ್ಯದಿಂದ ಕಣ್ಣಲ್ಲಿ ಆನಂದಾಶ್ರುಗಳನ್ನು ಸುರಿಸುತ್ತಾ ಶ್ರೀರಾಮ, ಜಯರಾಮ, ಶ್ರೀರಾಮ, ಜಯರಾಂ, ಎಂದು ರಾಮ ನಾಮದಲ್ಲಿ ತಲ್ಲೀನನಾದ ಆಂಜನೇಯನಂತೆ ಕುಳಿತು ಬಿಟ್ಟಿದ್ದರು.

ಅವರ ವಿಭೂತಿ ಹಚ್ಚಿದ ವಿಶಾಲ ಲಲಾಟ, ಭಕ್ತಿಪೂರಿತ ನಿಮೀಲಿತ ನೇತ್ರ, ತೇಜಃ ಪುಂಜ ಆಕೃತಿ, ಪೀಠದ ಮೇಲೆ ಪದ್ಮಾಸನ ಹಾಕಿ ಕುಳಿತಿರುವ ಧಾರಢ್ಯ ದೇಹ, ಇವುಗಳನ್ನು ನೋಡಿದರೆ ರಾಮ ನಾಮ ಪವಿತ್ರ ಜಪವನ್ನು ಜಪಿಸುತ್ತ ಕುಳಿತಿರುವ ಪರಶಿವನಂತೆ ಕಾಣುತ್ತಿದ್ದರು

ಅಲ್ಲಿ ಬಂದಿದ್ದವರೆಲ್ಲರೂ ದೇವರಿಗೆ ನಮಸ್ಕಾರ ಮಾಡಿದ ನಂತರ ಶೇಷಣ್ಣನವರ ಪಾದಮುಟ್ಟಿ ನಮಸ್ಕಾರ ಮಾಡಿ ಹೋಗುತ್ತಿದ್ದರು.

ಬಂದಿದ್ದ ಭಕ್ತಾದಿಗಳೆಲ್ಲರಿಗೂ ಹರಿದ್ರಾ-ಕುಂಕುಮ ಪ್ರಸಾದ ವಿನಿಯೋಗ ವಿತರಣೆಯಿಂದ ಆಯಿತು. ಈ ಎಲ್ಲಾ ಕಾರ್ಯಗಳನ್ನೂ ಗಮನಿಸಿ ಮಂಗಳೆಯು ಪ್ರತಿಯೊಬ್ಬರನ್ನೂ ಆದರದಿಂದ ವಿಚಾರಿಸಿಕೊಳ್ಳುತ್ತಿದ್ದಳು.

ಮಕ್ಕಳು ಸಂಭ್ರಮದಿಂದ ಓಡಾಡಿದರು. ಉತ್ಸವಕ್ಕೆ ಬಂದಿದ್ದ ಭಕ್ತಾದಿಗಳ ಮಧ್ಯೆ ತಲೆ ನೆರೆತ ವಯಸ್ಸಾದ ಮುದುಕಿಯೊಬ್ಬಳು ಕುಳಿತ್ತಿದಳು. ಅವಳ ದೃಷ್ಟಿ ಓಡಾಡುತ್ತಿದ್ದ ಮಂಗಳೆಯತ್ತಲೇ ಇತ್ತು.

ಅವಳು ರಾಮೋತ್ಸವಕ್ಕಾಗಿ ಬಂದಂತೆ ಕಾಣಲಿಲ್ಲ. ಸರಿಗೆ ಪಂಚೆಯನುಟ್ಟು ಶಲ್ಯವನ್ನು ಹೊದ್ದು ಆಜಾನು ಬಾಹುವಾಗಿ ಓಡಾಡುತ್ತಿದ್ದ ವಿಶುವನ್ನು ಎವೆಯಿಕ್ಕದೆ ನೋಡಿದಳು, ಮನಸ್ಸಿನಲ್ಲಿ ಏನೋ ತೀರ್ಮಾನ ಮಾಡಿಕೊಂಡಂತಿತ್ತು ಅವಳ ಮುಖದ ಭಾವ.

ವಿಶೂ ಎಲ್ಲರಿಗೂ ಕೊಸಂಬರಿ, ಪಾನಕ ಪ್ರಸಾದ ಹಂಚುತ್ತಿದ್ದ. ಈ ಮುದುಕಿಯ ಕೈಗೂ ಕೋಸಂಬರಿಯ ದೊನ್ನೆ ಕೊಟ್ಟು "ಕೊಳ್ಳೀಮ್ಮ ಪಾನಕ" ಎಂದ,

ಆ ಮುದುಕಿಗೆ ಎಲ್ಲೋ ಜ್ಞಾನ. ವಿಶುವಿನ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದಳು.

ದೊನ್ನೆ ಸರಿಯಾಗಿ ಹಿಡಿಯಿರಮ್ಮ ಪಾನಕ ಹಾಕುತ್ತೇನೆ ಅಂದ. ಆಗ ಎಚ್ಚೆತ್ತವಳಂತೆ "ಹುಂ ಹಾಕಪ್ಪಾ... ಹಾಕು. ನಿಮ್ಮ ತಾಯೀನ ಸ್ವಲ್ಪ ಈ ಕಡೆ ಬರ ಹೇಳಪ್ಪಾ ; ಅವರೇ ತಾನೇ ನಿಮ್ಮ ತಾಯಿ, ಎಂದು ಮಂಗಳೆಯತ್ತ ಬೆಟ್ಟುಮಾಡಿ ತೋರಿಸಿದಳು.

"ಅಮ್ಮಾ ; ಇಲ್ಲಿ ನೋಡು ನಿನ್ನನ್ನು ಇವರು ಕರೀತಿದಾರೆ" ಅಂದು ವಿಶೂ ಮುಂದೆ ಮುಂದೆ ಪ್ರಸಾದ ಹಂಚುತ್ತಾ ಹೋದ.

ಮಂಗಳೆ ಈ ಮುದುಕಿಯ ಬಳಿ ಬಂದು, ಏನಮ್ಮಾ ! ನಿಮಗೆ ಪ್ರಸಾದ ಆಯಿತೇ ? ಎಂದು ಕೇಳಿದಳು.

"ಹೂಂ ಸ್ವಲ್ಪ ಹೊರಗಡೆ ಬನ್ನಿ ನೀವು, ಎಂದು ಮಂಗಳೆಯನ್ನು ಕರೆದಳು. ಮಂಗಳೆಗೆ ಏನೊಂದೂ ಅರ್ಥವಾಗಲಿಲ್ಲ. ಅವಳೊಂದಿಗೆ ಹೊರಗಡೆ ವರಾಂಡಕ್ಕೆ ಬಂದಳು.

ಈ ಕಡೆ ಬನ್ನಿ ಎಂದು ಮೆಲ್ಲನೆ ಹೇಳಿ ಆ ಮುದುಕಿ ಯಾರೂ ಇಲ್ಲದ ಸಂಪಿಗೆ ಮರದ ಬಳಿ ಕರೆದುಕೊಂಡು ಹೋದಳು.

ಅಕ್ಕ-ಪಕ್ಕ ಒಂದು ಬಾರಿ ನೋಡಿ ನಂತರ ಪಿಸುಮಾತಿನಲ್ಲಿ ನೀವು ಲಕ್ಕವಳ್ಳಿಯಲ್ಲಿ ಆಸ್ಪತ್ರೆಯಲ್ಲಿ ಹೆತ್ತ ಗಂಡು ಮಗು ಆ ಹುಡುಗನೇ ಅಲ್ವಾ ; ಪ್ರಸಾದ ಹಂಚುತ್ತಿದ್ದ ಹುಡುಗ ? ಅಂದಳು ಮುದುಕಿ.

ಏಕೋ ಮಂಗಳೆಯ ಎದೆ ಧಡ ಧಡನೆ ಬಡಿದುಕೊಳ್ಳಲಾರಂಭಿಸಿತು. ಹಾಗೂ ಧೈರ್ಯಮಾಡಿ....ಹೌದಮ್ಮಾ ಏಕೆ ? ಅಂದಳು.

ನಾನು ನರ್ಸ್ ಲೀಲಾವತಿ ; ಜ್ಞಾಪಕ ಇದೆಯೋ ; ಎಂದಳು ಮೆಲ್ಲನೆ ಮಂಗಳೆ ತಡವರಿಸುತ್ತಾ : ಹೌದಾ ! ಎಲ್ಲೋ ನೋಡಿದ ಹಾಗಿದೆಯಲ್ಲಾ ಅಂದುಕೊಂಡೆ ಅಂದಳು.

ನೋಡೀಮ್ಮ ಈಗ ನಿಮ್ಮ ಭವಿಷ್ಯ ನನ್ನ ಕೈಯಲ್ಲಿದೆ. ಇಷ್ಟು ಜನರ ಮಧ್ಯೆ ನಾನೇನಾದರೂ ಒಂದು ಮಾತು ಅಂದುಬಿಟ್ಟರೆ ..

ಅರ್ಧಕ್ಕೇ ಅವಳ ಮಾತನ್ನು ತಡೆದು ಮಂಗಳೆ, ಬೇಡಮ್ಮ ಬೇಡ, ನಿನ್ನ ಪುಣ್ಯಕ್ಕೆ ಹಾಗೆಂದೂ ಮಾಡಬೇಡ, ಎಂದು ಅಂಗಲಾಚಿದಳು.

ನೋಡೀಮ್ಮ ಅದರಿಂದ ನನಗೇನಾಗಬೇಕು ? ನಾನೇಕೆ ತಿಳಿಸಲಿ ? ನನಗೆ ರಿಟೇರ್ ಆಗಿಹೋಯಿತು, ಬರೋದು ೩೦ ರೂಪಾಯಿ ಪೆಂಷನನ್ನು ಈ ಊರಿನಲ್ಲೇ ನಮ್ಮ ಅಣ್ಣನ ಮನೆ ಇದೆ. ಅವರ ಬಳಿ ಬಂದು ಸೇರಿಕೊಂಡೆ. ಬಡತನದಗೋಳು, ತಿನ್ನೋಕೂ ಗತಿಯಿಲ್ಲದಂತಾಗಿವೆ. ನೀವು ಸ್ವಲ್ಪ ಹಣ ಸಹಾಯ ಮಾಡಿಬಿಟ್ಟರೆ ! ......

ಎಂದು ಅಷ್ಟಕ್ಕೇ ಮಾತು ನಿಲ್ಲಿಸಿದಳು ಮುದುಕಿ. ಅಮ್ಮಾ, ಎಲ್ಲರಿಗೂ ಎಲೆ ಹಾಕು, ಬಡಿಸೋಕೆ ಕಾಯ್ಕೊಂಡಿದಾರೆ, ಬಾಮ್ಮ.... ಅಜ್ಜೀ ಕರೀತಿದಾರೆ, ಎಂದು ಸುಮ್ಮಿ ಕೂಗುತ್ತಾ ಬಂದಳು........

ಮಂಗಳೆ ತಬ್ಬಿಬ್ಬಾಗಿ, ಮುದುಕಿಗೆ ಸನ್ನೆಮಾಡಿ ಇಲ್ಲಿಯೇ ಇರು ಬಂದೆ ಎಂದು ಹೇಳಿ ಒಳಗೆ ಹೋದಳು. ಗಾಡ್ರೇಜ್ ತೆಗೆದು ನೋಟಿನ ಕಟ್ಟಿನಿಂದ ಕೈಗೆ ಬಂದಷ್ಟು ತೆಗೆದುಕೊಂಡು ಮುದುಕಿಯಿದ್ದಲ್ಲಿಗೆ ಬೇಗ ಬೇಗ ಬಂದಳು.

ಇದ್ಯಾಕಮ್ಮ ಹೊರಕ್ಕೆ ಹೊರಟೆ ? ಎಂದು ವಿಶೂ ಹಿಂದೆಯೇ ಬಂದ. ಬಂದೆ ನಡ್ಯೋ ! ಎಂದು ಹೇಳಿ ಹಿಡಿಯಲ್ಲಿದ್ದ ನೋಟನ್ನು ಆ ಮುದುಕಿಯ ಕೈಗೆ ತುರುಕಿ ಧಡ ಧಡನೆ ಮನೆಯೊಳಕ್ಕೆ ಹೊರಟಳು. ಏನೋ ಗಾಬರಿ, ಮುಖದಲ್ಲಿ, ಎದೆಯಲ್ಲಿ ಗಡ ಗಡನೆ ನಡುಕ.

ಮಂಗಳೆಯ ತಲೆ ಗಿರ್ರನೆ ಸುತ್ತುವಂತಾಯಿತು. ವೆರಾಂಡಾದ ಮೆಟ್ಟಿಲು ಹತ್ತುತ್ತಿದ್ದಂತೆಯೇ ತನ್ನ ಕಾಲು ತನ್ನ ಸ್ವಾಧೀನದಲ್ಲಿಲ್ಲದಂತೆ ಅಲ್ಲಿಯೇ ಬವಳಿ ಬಂದು ಬಿದ್ದು ಬಿಟ್ಟಳು.

ಅಮ್ಮಾ ! ಯಾಕಮ್ಮಾ ! ಅಪ್ಪಾ ! ಬೇಗ ಬನ್ನಿ....ಅಂದು ವಿಶೂ ಕೂಗಿಕೊಂಡ, ಮೂರ್ತಿ ಓಡಿಬಂದರು. ಅಲ್ಲಿದ್ದವರೆಲ್ಲಾ ಏನು ? ಏನಾಯಿತು ? ಎಂದು ಮಂಗಳೆಯ ಸುತ್ತಲೂ ಸುತ್ತುಗಟ್ಟಿದರು.

ಮೂರ್ತಿಯೂ ವಿಶೂವೂ ಮಂಗಳೆಯನ್ನೆತ್ತಿಕೊಂಡು ಹೋಗಿ ರೂಮಿನಲ್ಲಿ ಮಂಚದಮೇಲೆ ಮಲಗಿಸಿದರು. ಮಂಗಳೆಗೆ ಜ್ಞಾನವೇ ಇಲ್ಲ, ಮಂಗಳೆಯ ಮಕ್ಕಳು ಅಳಿಯಂದಿರು ಎಲ್ಲಾ ಬಂದು ಮಂಗಳೆಯ ಮಂಚದ ಸುತ್ತ ತುಂಬಿಕೊಂಡರು.

ಮೂರ್ತಿ ಹೆಂಡತಿಯ ಪಕ್ಕ ಕುಳಿತು ಬೀಸಣಿಗೆಯಿಂದ ಮೆಲ್ಲನೆ ಗಾಳಿ ಹಾಕುತ್ತಾ, ಸುಶೀ ಎಲ್ಲಿ ಸ್ವಲ್ಪ ತಣ್ಣೀರುತಾಮ್ಮ ಅಂದರು.

ಆ ವೇಳೆಗೆ ಸುಶೀ ಆಗಲೇ ಲೋಟದಲ್ಲಿ ನೀರು ತಂದಿದ್ದಳು ಮುಖದ ಮೇಲೆ ಸ್ವಲ್ಪ ನೀರು ಚಿಮುಕಿಸಿ ಮೆಲ್ಲನೆ ಗಾಳಿ ಬೀಸುತ್ತಿದ್ದರು ಮೂರ್ತಿ.

ಅಲ್ಲಿಯೇ ಎಲ್ಲವನ್ನೂ ಗಮನಿಸುತ್ತಿದ್ದ ಶೇಷ ಮಾವ ಇದೇನಪ್ಪಾ ಮೂರ್ತಿ ಇದ್ದಕ್ಕಿದ್ದಂತೆ ಏನಾಯ್ತು ಅವಳಿಗೆ ? ಬೆಳಗ್ಗೆಯಿಂದ ಉಪವಾಸ, ರಾತ್ರಿಯಲ್ಲಾ ನಿದ್ದೆಕೆಟ್ಟು ಪೂಜೆಗೆ ಅಣಿಮಾಡುತ್ತಿದ್ದಳು, ಅದಕ್ಕೆಲ್ಲೋ ತಲೆ ತಿರುಗಿ ಬಿದ್ದು ಬಿಟ್ಟಿರಬೇಕು.

ಹೋಗ್ರೋ ವಿಶೂ, ಸುಮಿತ್ರ, ರಾಜೇಶ್ವರಿ ...ನೀವೂ ಹೋಗೀಮ್ಮ ಹೊರಗಡೆ ಬಂದಿರುವ ಜನಗಳಿಗೆ ಸರಿಯಾಗಿ ಬಡಿಸುತ್ತಿದಾರೆಯೋ ? ನೋಡಿ

ಊಟಕ್ಕೆ ಕೂರಿಸಿ ವಿಚಾರಿಸಿಕೊಳ್ಳಿ ಎಂದರು.

ಮೂರ್ತಿಯೂ, ನಿಮಗ್ಯಾಕ್ರೇ ಗಾಬರಿ ? ನಿಮ್ಮ ಮನಿಗೆ ಆಗಾಗ ಹೀಗಾಗೋದು ನಿಮಗೆ ತಿಳಿದೇ ಇದೆಯಲ್ಲ. ಇನ್ನು ಸ್ವಲ್ಪ ಹೊತ್ತಿಗೆ ಸರಿ ಹೋಗ್ತಾಳೆ ಹೋಗೀಮ್ಮ" ಎಂದು ಮಕ್ಕಳನ್ನು ಕಳುಹಿಸಿದರು.

ಹೌದೇನಪ್ಪಾ ! .. ಮೂರ್ತಿ ? ಮಂಗಳೆಗೆ ಆಗಾಗ ಹೀಗೆ ಜ್ಞಾನ ತಪ್ಪೋದು ಉಂಟೇನು ? ಅಂದರು ಶೇಷಮಾವ.

ಹೌದು ! ಮಾವ ; ಈ ವಿಶೂ ಬಾಣಂತೀಲಿ, ಏನೋ ಒಂದು ತರಹ ಅವಳ ಬ್ರೈನೇ ವ್ಯತ್ಯಾಸವಾಗಿಹೋಯ್ತು ಮನಸ್ಸಿಗೆ ಏನಾದ್ರೂ ಸ್ವಲ್ಪ ಚಿಂತೆ, ಗಾಬರಿ ಅದ್ರೂನೂ, ಹೀಗೆ ಆಗುತ್ತೆ.

ಯಾರಾದರೂ ಮನಶ್ಶಾಸ್ತ್ರಜ್ಞ ಡಾಕ್ಟರಿಗೆ ತೋರಿಸಿದೆಯಾ ? ಮೂರ್ತಿ.

ಎಲ್ಲ ಆಯ್ತು ಮಾವ. ಡಾಕ್ಟ್ರು ಅವರ ಮನಸ್ಸಿಗೆ ವಿರೋಧವಾಗಿ ಏನೂ ಮಾಡಬೇಡಿ ಜೋಪಾನ, ಎಂದಿದ್ದಾರೆ, ಅವಳ ಮನಸ್ಸಿನಲ್ಲಿ ಏನಿದೆಯೋ ಯಾರೂ ಕಂಡಿದ್ದಾರೆ ?

ಇವರು ಹೀಗೆ ಮಾತಾಡುತ್ತಿರುವಂತೆಯೇ ಮಂಗಳೆ ಮೆಲ್ಲನೆ ಕಣ್ಣು ತೆರೆದಳು. ಸುತ್ತಲೂ ಒಂದುಬಾರಿ ನೋಡಿದಳು. ಮುಖದಲ್ಲಿ ಗಾಬರಿ ಇನ್ನೂ ಹಾಗೆಯೇ ಇತ್ತು.

ತಟ್ಟನೆ ಏಳಲು ಹೋದಳು. ಇನ್ನು ಸ್ವಲ್ಪ ಹೊತ್ತು ಸುಧಾರಿಸಿಕೋ ಮಂಗಳ ಮಲಗಿಕೋ ಎಂದು ಮೂರ್ತಿ ಪುನಃ ಅವಳನ್ನು ಮಲಗಿಸಿದರು.

ಅವಳಿಗೆ ಚೆನ್ನಾಗಿ ಜ್ಞಾನ ಬಂದಮೇಲೆ ಅಯ್ಯೋ ರಾಮೋತ್ಸವದಲ್ಲಿ ಬಂದ ಜನಗಳೆದುರಿಗೆ ಹೀಗಾಯಿತಲ್ಲಾ ! ಅಬ್ಬ ಹದಿನೆಂಟು ವರ್ಷಗಳ ನಂತರ ಆವಳಿಲ್ಲಿ.... ಇಲ್ಲಿಗೆ ಬಂದಳು ? ಪಾಪಿ ! ... ಅಂದುಕೊಂಡಳು ಮಂಗಳೆ. ಸ್ವಲ್ಪ ಹೊತ್ತಿನಮೇಲೆ ಎದ್ದು ತನ್ನ ಕೆಲಸದಲ್ಲಿ ತೊಡಗಿದಳು. ರಾಮೋತ್ಸವಕ್ಕೆ ಬಂದಿದ್ದ ಜನ ಒಬ್ಬೊಬ್ಬರು ಒಂದೊಂದು ವಿಧ ವಿಧವಾಗಿ ಮಂಗಳೆಯ ವಿಷಯ ಗುಸು... ಗುಸು... ಪಿಸು ಪಿಸು ಮಾತನಾಡಿಕೊಂಡರು. ಒಟ್ಟಿನಲ್ಲಿ ಅವಳಿಗೇನೋ ಬುದ್ಧಿ ಭ್ರಮಣೆಯ ಖಾಯಿಲೆಯೆಂದು ಜನಗಳ ತೀರ್ಮಾನ.

ರಾಮೋತ್ಸವ ಮುಗಿಯುವುದನ್ನೇ ಕಾದಿದ್ದರು ಶೇಷಮಾವ. ಅವರು ಕಾಶಿಗೆ ಹೊರಡುವ ಸನ್ನಾಹ ಮಾಡಿದರು. ಹೊರಡುವ ವಿಷಯ ಎತ್ತಿದರೆ

ಸಾಕು ಮನೆಯಲ್ಲಿ ಎಲ್ಲರೂ ತಡೆ ಹ ಕುತ್ತಾರೆ. ಇವರೆಲ್ಲರ ಪ್ರೀತಿ ಹೀಗೆಯೇ ಉಳಿಯಬೇಕಾದರೆ "ನೆಂಟರಿಗೆ ದೂರ, ನೀರಿಗೆ ಹತ್ತಿರ" ಎಂಬ ಗಾದೆಯಂತೆ ನಾವು ದೂರ ಇರುವುದೇ ಒಳ್ಳೆಯದು ಎಂದು ಮನಸ್ಸಿನಲ್ಲಿ ಅಂದುಕೊಂಡರು.

ಆ ದಿನ ಊಟವಾದಮೇಲೆ ಎಲ್ಲರೂ ವಿಶ್ರಾಂತಿಯಾಗಿ ಹರಟೆ ಹೊಡೆಯುತ್ತಾ ಕುಳಿತ್ತಿದ್ದರು. ಮೂರ್ತಿಯೂ ಅಲ್ಲಿಯೇ ಕುಳಿತು ಯಾವುದೋ ವಾರ ಪತ್ರಿಕೆಯನ್ನು ನೋಡುತ್ತಿದ್ದರು.

ಏನಪ್ಪಾ : ಮೂರ್ತಿ ! ....ನಮ್ಮನ್ನು ಇನ್ನು ಕಳುಹಿಸಿಕೊಡು ನಾಳೆ ನಾಡಿದ್ದರಲ್ಲಿ ಹೊರಡೋಣ ಎಂದಿದ್ದೇವೆ. ಎಂದು ನೇರ ಪ್ರಶ್ನೆಗೆ ಬಂದರು ಶೇಷಮಾವ.

ಮೂರ್ತಿ ಓದುತ್ತಿದ್ದ ಪತ್ರಿಕೆಯನ್ನು ಟೇಬಲ್‌ಮೇಲೆ ಹಾಕಿ ಏನು ಮಾವ ಕಾಶಿಗೆ ಹೊರಡೋದೂ ಅಂತಾನೇ ನೀವು ಹೇಳಿದ್ದೂ ?

ಇನ್ನೆಲ್ಲೀಗಪ್ಪ ? ನಮ್ಮ ಜೀವಮಾನ ಪೂರ್ತಿ ಅಲ್ಲೀ....ನೋಡೀ ಮಾವ ನೀವು ದೊಡ್ಡೋರು, ತಿಳಿದೋರು, ನಿಮಗೆ ನಾನು ಹೇಳ್ತೀನಿ ಅಂದು ಕೋಬೇಡಿ. ನಿಮಗೂ, ಅತ್ತೇಗೂ, ವಯಸ್ಸಾಯಿತು. ಇನ್ನುಮೇಲೆ ಇಲ್ಲೀ ಇದ್ದುಬಿಡಿ.

ಅದೇ ಕಣೋ ಮೂರ್ತಿ ನಾನೂ ಹೇಳೋಣಾಂತ ಬಂದೆ. ಈ ಸಲ ಅಣ್ಣ-ಅತ್ತಿಗೆ ಇಲ್ಲೇ ನಿಂತುಬಿಡಲಿ, ಅಲ್ಲಿ ಮಾಡೋ ದೇವರ ಸೇವೆ ಇಲ್ಲೇ ಮಾಡಲಿ, ಅಂದರು ಪಾರ್ವತಮ್ಮ ಮಡಿಸೀರೆ ಹರವುತ್ತಿದ್ದವರು ಹಾಗೆಯೇ ಬಂದು.

ಅಲ್ಲಿಯೇ ಇದ್ದ ಲಕ್ಷ್ಮಮ್ಮನವರು ನಿಮಗೆಲ್ಲೋ ಭ್ರಾಂತು. ಅವರು ಯಾರ ಮಾತಿಗೂ ನಿಲ್ಲೋಲ್ಲ ಕಣೇ ಪಾತೂ ಅಂದರು.

ನೋಡು ನೋಡು ಪಾರ್ವತಿ, ನಿನ್ನತ್ತಿಗೆ ಇಷ್ಟು ವರ್ಷ ನನ್ನ ಜೊತೇಲೇ ಇದ್ರೂ ನನ್ನ ಸ್ವಭಾವವನ್ನು ಅರ್ಥಮಾಡಿಕೊಳ್ಳಲಿಲ್ಲ. ಮೀನು ನೀರಿನಲ್ಲೇ ಇದ್ರೂ ನಿ ರಿನ ರುಚಿ ಮೀನಿಗೆ ಗೊತ್ತಿರೊಲ್ಲ ಅದರಂತೆ.

ನೋಡು ಮೂರ್ತಿ ಈ ಪ್ರಪಂಚದಲ್ಲಿ ಮನುಷ್ಯನಾಗಿ ಹುಟ್ಟಿದ ಮೇಲೆ ಯಾವುದಾದರೂ ಒಂದು ಉತ್ತಮ ಕೆಲಸವನ್ನು ಸಾಧಿಸಬೇಕು. ನಾನೂ ಬುದ್ಧನಂತೆ ಅನೇಕ ಸಾಧನೆಗಳನ್ನು ಮಾಡಿ ನೋಡಿದೆ, ನನ್ನ ಮನಸ್ಸಿಗೆ ಶಾಂತಿ

ದೊರಕಲಿಲ್ಲ. ಈಗ ನಾನು ಕೈಕೊಂಡಿರುವ ಕೆಲಸವು ನನಗೆ ಶಾಂತಿಯನ್ನೂ ತೃಪ್ತಿಯನ್ನೂ ಕೊಟ್ಟದೆ. ಅದನ್ನು ಬಿಟ್ಟು ಈ ಸಂಸಾರದಲ್ಲಿ ಸುಖದ ಮರೀಚಿಕೆಗೆ ಬಾಯ್ಬಿಟ್ಟು ನಮ್ಮ ಆಯುಷ್ಯವನ್ನೇ ಹಾಳುಮಾಡುವುದು ನನಗಿಷ್ಟವಿಲ್ಲ.

ನಿನ್ನ ಆಶ್ರಮದ ವಿಚಾರ ಎಲ್ಲ ಅತ್ತಿಗೆ ಹೇಳಿದಳಣ್ಣಾ. ಅಲ್ಲಾ ಆ ಚಿಟ್ಟಿ–ಪೊಟ್ಟಿ ಮಕ್ಕಳನ್ನು ಕಟ್ಟಕೊಂಡು ಹೆಣಗೋದ್ರಲ್ಲಿ ನಿನಗೆ ಯಾವ ಶಾಂತಿ ಇದೆ ಅಣ್ಣಾ ? ಒಳ್ಳೆ ಕರ್ಮ ಇದು ...ಅಂದರು ಪಾರ್ವತಮ್ಮ ಬೇಸರದಿಂದ.

ನಾವು ; ನಮ್ಮ ಸಂಸಾರ, ಅಷ್ಟೇ ನಮ್ಮದು, ಅಂತ ಇರೋವ್ರಿಗೆ ಅದು ಅರ್ಥವಾಗೋಲ್ಲ ಪಾರ್ವತಿ. ನನ್ನ ದೃಷ್ಟಿಯಲ್ಲಿ ವಿಶ್ವದ ಮಕ್ಕಳೇ ನಮ್ಮ ಮಕ್ಕಳು. ಆ ಮಕ್ಕಳಲ್ಲಿ ಯಾರು ಕೆಡಕಿಯಾದರೂ ವಿಶ್ವಕ್ಕೇ ಕೆಡಕು. ಆದ್ದರಿಂದ ನಮ್ಮ ಕೈಗೆ ಸಿಕ್ಕಿದಷ್ಟು ಮಕ್ಕಳನ್ನಾದರೂ ಉತ್ತಮ ವ್ಯಕ್ತಿಗಳನ್ನಾಗಿ ತಯಾರಿಸುವ ಉದ್ದೇಶ ನನ್ನದು.

ಸರಿ ಮಾವ : ಅಷ್ಟೊಂದು ವೈರಾಗ್ಯವಾಗಿದ್ದ ನಿಮಗೆ ಆ ಮಕ್ಕಳಲ್ಲಿ ಹೇಗೆ ಗಂಟು ಬಿದ್ದುವು ? ಅನ್ನೋದೇ ನನಗೆ ಆಶ್ಚರ್ಯ ಅಂದರು ಮೂರ್ತಿ.

ವೈರಾಗ್ಯದ ನೆಪದಲ್ಲಿ ಕರ್ತವ್ಯವಿಮುಖರಾಗಿ ಸೋಮಾರಿಯಂತೆ ಕಾಲ ಕಳೆಯುವುದಂತೂ ನನಗಿಷ್ಟವಿಲ್ಲ ಮೂರ್ತಿ. ಕಣ್ಣು ಮುಚ್ಚಿ ಮೂಗು ಹಿಡಿದು ಕುಳಿತು ತಪಸ್ಸು ಮಾಡುವುದರಿಂದ ಬೇರೆ ಯಾರಿಗೆ ತಾನೆ ಪ್ರಯೋಜನವಾದೀತು? ದೇವರ ಪೂಜೆ, ದಾನ ಧರ್ಮ, ತಪಸ್ಸು, ಧ್ಯಾನ ಇವೆಲ್ಲದಕ್ಕಿಂತಲೂ ಉತ್ತಮ ಕೆಲಸವೆಂದರೆ ಕಳ್ಳ–ಕಪಟವರಿಯದ ದೇವ ಸ್ವರೂಪರಾದ ಪುಟ್ಟ ಮಕ್ಕಳ ಹೃದಯದಲ್ಲಿ ಸದ್ಭಾವನೆಗಳನ್ನು ಮೂಡಿಸಿ, ಒಬ್ಬೊಬ್ಬರನ್ನೂ ಉತ್ತಮ ವ್ಯಕ್ತಿಗಳನ್ನಾಗಿ ಮಾರ್ಪಡಿಸಿ ಆ ಸಿದ್ಧ ವಸ್ತುಗಳನ್ನು ಸಮಾಜ ಸೇವೆಗೆ ಅರ್ಪಿಸಿದರೆ, ಅಂತಹ ನೂರಾರು ವ್ಯಕ್ತಿಗಳಿಂದ ಸಾವಿರಾರು ಪುಣ್ಯ ಕಾರ್ಯಗಳು ನಡೆದು ನಮ್ಮ ದೇಶವೇ ಉದ್ಧಾರವಾದೀತು. ಮಾನವ ಕೋಟಿಯ ಕಲ್ಯಾಣವಾದೀತು.

ಅಲ್ಲ ಮಾವ; ನೀವೊಂದು ನೂರು ಮಕ್ಕಳನ್ನ ತಯಾರು ಮಾಡಿಬಿಟ್ಟರೆ ಆಯ್ತೇ? ಬಾಕಿ ಮಕ್ಕಳ ವಿದ್ಯಾಭ್ಯಾಸ ಸ್ಕೂಲಿನಲ್ಲಿ ಅವರು ಹೇಳಿ ಕೊಟ್ಟಂತೆ ತಾನೇ ಆಗಬೇಕು.

ಸ್ಕೂಲಿನಲ್ಲಿ ತಾನೇ ಕೆಟ್ಟದು ಹೇಳಿಕೊಡ್ತಾರೆ ಅಂತ ಯಾರು ಹೇಳು ತ್ತಾರೆ ಮೂರ್ತಿ? ಕ್ರಮ ಸರಿಯಾಗಿಲ್ಲ ಅಷ್ಟೆ. ಅನಾದಿ ಕಾಲದ ನಮ್ಮ ಭಾರತದ ಸಂಸ್ಕೃತಿಯನ್ನು ಒತ್ತಿ ಹೇಳಿ ಮಕ್ಕಳ ಮನಸ್ಸನ್ನು ಅತ್ತ ಸೆಳೆಯ ಬೇಕು.

ಭಾರತದ ಮಕ್ಕಳು ವಿಶ್ವದಲ್ಲಿಯೇ ತಲೆ ಎತ್ತಿ ನಿಲ್ಲಬೇಕು. ಅವರ ವಿದ್ಯಾಭ್ಯಾಸದ ಸೌಧವು ಪುರಾಣ ಪುಣ್ಯ ಕಥೆಗಳ ಆಧ್ಯಾತ್ಮಿಕ ಪುಣ್ಯಜೀವಿಗಳ ಆದರ್ಶದ ಬುನಾದಿಯ ಮೇಲೆ ಕಟ್ಟಬೇಕು. ವೇದ ಪುರಾಣಗಳ ಕಾಲದ ತ್ಯಾಗಿಗಳ ಚರಿತ್ರೆಯ ಮಕ್ಕಳ ಮನದಮೇಲೆ ಅಚ್ಚೊತ್ತಬೇಕು.

ತ್ಯಾಗದಲ್ಲಿ, ದುಷ್ಟರ ದಮನಕ್ಕಾಗಿ ತನ್ನ ಬೆನ್ನು ಮೂಳೆಯನ್ನೇ ಕೊಟ್ಟ ಧಧೀಚಿಯಂತೆ ಆಗಬೇಕು.

ಶರಣಾಗತರನ್ನು ಕಾಪಾಡಲು ಶಿಬಿಯಂತೆ ತನ್ನನ್ನೇ ಅರ್ಪಿಸಿಕೊಳ್ಳ ಬೇಕು. ಸತ ಹರಿಶ್ಚಂದ್ರನ ಧೃಢತೆ ಇರಬೇಕು. ಹನುಮನ ರಾಮ ಭಕ್ತಿ ಕರ್ಣನ ಸ್ವಾಮಿಭಕ್ತಿ, ಏಕಲವ್ಯನ ಗುರುಭಕ್ತಿ, ಮಕ್ಕಳಲ್ಲಿ ಮೂಡಬೇಕು ಧರ್ಮ ಸಂಸ್ಥಾಪನೆ ಮಾಡಲು ಕತ್ತಿ ಹಿಡಿದು ನಿಂತ ವೀರ ಶಿವಾಜಿಯಂತೆ, ಬಡವರ ಉದ್ಧಾರಕಾಗಿ ಗಾಂಧೀಜೀಯಂತೆ, ದೇಶಪ್ರೇಮದಲ್ಲಿ ಲಾಲ್‌ಬಹಾದ್ದೂರ್ ಶಾಸ್ತ್ರಿಗಳಂತೆ, ನಮ್ಮ ಭಾರತೀಯ ಮಕ್ಕಳು, ತಮ್ಮ ಜೀವನವನ್ನು ಒಳ್ಳೆಯ ಕೆಲಸಕ್ಕಾಗಿ ವಿನಿಯೋಗಿಸಬೇಕೆಂಬ ಭಾವನೆ ಹುಟ್ಟಿಸುವ ಈ ಚರಿತ್ರೆಗಳನ್ನು ಅವರಿಗೆ ಬೋಧನೆ ಮಾಡಬೇಕು. ಅಂತಹ ವಿದ್ಯಾಭ್ಯಾಸ ಎಂದಿನ ವರಗೆ ಬರುವುದಿಲ್ಲವೋ ಅಂದಿನವರೆಗೆ ನಮ್ಮ ಜನಾಂಗ ಶಾಂತಿ ಜೀವನ ನಡೆಸಲು ಸಾಧ್ಯವಿಲ್ಲ ತಿಳಿದುಕೋ

ಅಬ್ಬ ನಿಮ್ಮದು ಎಷ್ಟು ಉದಾತ್ತಧ್ಯೇಯಾ ಮಾವ, ಹಾಗಾದರೆ ನಿಮ್ಮ ಆಶ್ರಮದಲ್ಲಿಯ ವಿದ್ಯಾಭ್ಯಾಸ ಕ್ರಮವೇ ಬೇರೆ ಎಂದು ಕಾಣುತ್ತೆ.

ಹೌದು. ನಮ್ಮ ಆಶ್ರಮವೆಂದರೆ ಅದೊಂದು ಪುಟ್ಟ ಪ್ರಪಂಚವೆಂದೇ ಹೇಳಬಹುದು. ಅಲ್ಲಿ ೫ ವರ್ಷದ ಪುಟ್ಟ ಬಾಲಕರಿಂದ ೨೦ ವರ್ಷದ ಯುವಕರವರೆಗೂ ಇದ್ದಾರೆ. ಅಲ್ಲಿಯ ವೈಶಿಷ್ಟ್ಯವೆಂದರೆ ವಿದ್ಯೆಯ ಜೊತೆ-ಜೊತೆಗೆ ಕಾಯಕ, ಕಷ್ಟಪಟ್ಟು ದುಡಿಯುವ ಅಭ್ಯಾಸ. ಅವರವರ ವಯಸ್ಸಿಗೆ ತಕ್ಕಷ್ಟು ದುಡಿಮೆ.

ಆಶ್ರಮದ ಸುತ್ತ ವಿಶಾಲವಾದ ಭೂಮಿಯಿದೆ. ಗಂಗಾ ಮಾತೆಯ ಆಶ್ರಯವಿದೆ. ಆಶ್ರಮಕ್ಕೆ ಸಾಕಾಗುವಷ್ಟು ಎಲ್ಲಾ ಧಾನ್ಯಗಳನ್ನೂ ವಿದ್ಯಾರ್ಥಿಗಳೇ ಬೆಳೆಯುತ್ತಾರೆ.

ಮರಗೆಲಸ, ನೂಲುವುದು, ನೇಯುವುದು, ಹೊಲಿಯುವುದು ಬೆತ್ತದ ಕೈಗಾರಿಕೆ, ಚಿತ್ರ, ಶಿಲ್ಪಕಲೆ, ಸಂಗೀತ, ಹೀಗೆ ಅವರವರ ಅಭಿರುಚಿಯಿದ್ದಂತೆ ಉಪ-ವಿದ್ಯೆಯನ್ನೂ ಕಲಿಯುತ್ತಾರೆ. ಇದರಿಂದ ಅವರು ಎಲ್ಲಿ ಹೋದರೂ ಸ್ವಾವಲಂಬಿಗಳಾಗಿರಬಹುದು.

ನಮ್ಮ ಆಶ್ರಮದಲ್ಲಿ ಸಂಸ್ಕೃತ, ವೇದ ಪಾಠದಿಂದ ಪ್ರಾರಂಭವಾಗುತ್ತದೆ. ಈಗಿನ ಸ್ಕೂಲಿನಲ್ಲಿ ಹೇಳಿಕೊಡುವ ವಿಜ್ಞಾನ ಇಂಗ್ಲೀಷನ್ನೂ ದಿನಕ್ಕೆ ಒಂದೆರಡು ಗಂಟೆ ಅಳವಡಿಸಿರುತ್ತೆ. ಎಲ್ಲವೂ ಮಕ್ಕಳಿಗೆ ಬೇಕು. ಮಕ್ಕಳ ತಲೆ ಪುಷ್ಪಕ ವಿಮಾನವಿದ್ದಂತೆ. ಅದಕ್ಕೆ ಸ್ವಲ್ಪ ಸ್ವಲ್ಪವೇ ತುಂಬಿದಷ್ಟೂ ಹಿಡಿಯುತ್ತಲೇ ಇರುತ್ತೆ. ಬಿಟ್ಟರೆ ಖಾಲಿ.

ಎಳೆಯ ಬಿದಿರನ್ನು ಸುಲಭವಾಗಿ ಬಗ್ಗಿಸಬಹುದು. ಆದರೆ ಬಲಿತ ಬಿದಿರನ್ನು ಬಗ್ಗಿಸಲು ಪ್ರಯತ್ನಿಸಿದರೆ ಅದು ಮುರಿದು ಹೋಗುವುದು. ದೇವರ ಕಡೆಗೆ ಎಳೆಯರ ಮನಸ್ಸನ್ನು ತಿರುಗಿಸುವುದು ಸುಲಭ. ಆದರೆ ವಯಸ್ಸಾದ ಮೇಲೆ ಎಂದರೆ ಪ್ರಾಪಂಚಿಕ ವಿಷಯಗಳಲ್ಲಿ ಪೂರ್ಣವಾಗಿ ಬೆರೆತುಹೋಗಿರುವ ಮನಸ್ಸನ್ನು ಸೆಳೆದು ದೇವರ ಮೇಲೆ ನಿಲ್ಲಿಸುವುದು ಕಷ್ಟ ಮೂರ್ತಿ; ಆದ್ದರಿಂದಲೇ ಎಳೆಯ ವಯಸ್ಸಿನಲ್ಲಿ ಮಕ್ಕಳ ಮನಸ್ಸು ಮೇಣವಿದ್ದಂತೆ. ಯಾವ ಆಕಾರಕ್ಕಾದರೂ ಮಾರ್ಪಡಿಸಬಹುದು.

ಮಾವ; ನಿಜವಾಗಿಯೂ ನೀವೂ ನಿಮ್ಮ ಆಶ್ರಮವೂ ಪ್ರಪಂಚಕ್ಕೇ ಆದರ್ಶ. ಎಲ್ಲೆಲ್ಲಿಯೂ, ನಿಮ್ಮ ಆಶ್ರಮದಂತೆ ಗುರುಕುಲವಾಸ ವಿದ್ಯಾರ್ಥಿಗಳಿಗೆ ದೊರೆತರೆ, ಅವರುಗಳು ನಿಜ ಜೀವನದಲ್ಲಿ ಉತ್ತಮ ವ್ಯಕ್ತಿಗಳಾಗಿ ಬಾಳುವರೆಂಬುದರಲ್ಲಿ ಸಂದೇಹವಿಲ್ಲ ಮಾವ. ಒಂದು ಬಾರಿ ನಾನೂ ಕೂಡಾ ನಿಮ್ಮ ಆಶ್ರಮವನ್ನು ಬಂದು ನೋಡಬೇಕೆನ್ನಿಸುತ್ತದೆ ಅಂದರು ಮೂರ್ತಿ.

ಅಲ್ಲಿಯೇ ಇದ್ದು ಎಲ್ಲಾ ಕೇಳಿಸಿಕೊಳ್ಳುತ್ತಿದ್ದ ಪಾರ್ವತಮ್ಮನೂ ಅಣ್ಣಾ; ಈ ಸಲ ನಿನ್ನ ಜೊತೆಯಲ್ಲಿ ನಾನೂ ಕಾಶಿಗೆ ಬರುತ್ತೇನೆ. ನಿಮ್ಮ ಆಶ್ರಮವನ್ನು ನೋಡುವ ಆಸೆ ನನಗೂ, ಅಂದರು.

ಯಾರು ಬೇಕಾದರೂ ಬನ್ನಿ. ಬಂದವರಿಗೆಲ್ಲಾ ಒಂದೊಂದು ಕೆಲಸ ಇದ್ದೆ ಇರುತ್ತೆ ಅಲ್ಲಿ. ನೀನೇ ಬಂದು ನೋಡು ಅಲ್ಲಿ ಯಾವುದಾದರೂ ಬಾಬ್ತು ವಹಿಸಿಕೊಂಡು ಬಿಟ್ಟರೆ, ಅದರಿಂದ ಕೈ ಕೊಡವಿಕೊಂಡು ಬರುವುದಕ್ಕೆ ಆಗು ವುದಿಲ್ಲ. ಅಲ್ಲಿಯ ಸನ್ನಿವೇಶ ಹಾಗಿದೆ. ಅಂದರು ಶೇಷಣ್ಣನವರು

ಇವರು ಹೀಗೆ ಮಾತನಾಡುತ್ತಿರುವಂತೆಯೇ ವಿಶೂ, ನೀಟಾಗಿ ಬೆಲೆ ಬಾಳುವ ಪ್ಯಾಂಟು, ಬುಷ್‌ಕೋಟು, ಕ್ರಿಕೆಟ್ ಕ್ಯಾಪ್ ಹಾಕಿಕೊಂಡು ಬ್ಯಾಟ್ ಹಿಡಿದು ಹೊರಟ.

ಹೊರಟು ಬಿಟ್ಟೆಯೇನೋ ; ಬ್ಯಾಟ್ ಹಿಡಿದು ? ಯಾವ ಮ್ಯಾಚಿದೆ ಯಪ್ಪಾ ? ಅಂದರು ಮೂರ್ತಿ. ವಿಶುವನ್ನು ನೋಡಿ.

ಇವತ್ತು ಯಾವ ಮ್ಯಾಚೂ ಇಲ್ಲಪ್ಪ ; ಸುಮ್ಮನೇ ಪ್ರಾಕ್ಟೀಸ್ ಅಷ್ಟೆ.... ಅಪ್ಪಾ ; ಇದೋ ನೋಡು, ಈ ಬ್ಯಾಟು, ತೀರಾ ಹಳೆಯ ಮಾದರಿ ಆಗಿದೆ ಯಪ್ಪಾ ; ನಾಳೆ ಒಂದು ಹೊಸಾ ಬ್ಯಾಟು ತೆಗೆದುಕೋಬೇಕು ನನಗೆ ಸ್ವಲ್ಪ ದುಡ್ಡು ಬೇಕಪ್ಪಾ ; ಅಂದ ವಿಶೂ.

ಇನ್ನೇನು ನಿನ್ನ ಬ್ಯಾಟು, ನಿನ್ನ ಡ್ರೆಸ್ಸು, ನಿನ್ನ ಶೋಕಿ ಇವಕ್ಕೆ ಆಗೋ ಅಷ್ಟು ಹಣದಲ್ಲಿ, ಒಬ್ಬ ಬಡಸಂಸಾರ ಜೀವನ ಮಾಡಬಹುದು. ನೋಡು ನಿನಗೆ ಸ್ವಲ್ಪವೂ ಹಣದ ಬೆಲೆ ಗೊತ್ತಾಗೋಲ್ಲ ಕಣೋ, ಅಂದು ಗದರಿದರು ಮೂರ್ತಿ.

ಏನಪ್ಪ ನಿನ್ನ ದೊಡ್ಡಸ್ತಿಕೆಗೆ ತಕ್ಕಂತೆ ನಾನೂ ಇರಬೇಕೋ ಬೇಡವೋ ನೀನೇ, ಹೇಳಪ್ಪ ! ಅಂದ ವಿಶೂ,

ತಂದೆ ಮಗನ ಮಾತನ್ನು ಕೇಳಿಸಿಕೊಂಡ ಶೇಷಣ್ಣನವರು .. ಏನಪ್ಪಾ.... ಮೂರ್ತಿ ; ನಾನೂ ಆವತ್ತಿನಿಂದ ನಿನ್ನ ಮಗನ ವಿಚಾರವಾಗಿ ಒಂದೆರಡು ಮಾತು ಹೇಳೋಣಾ .. ಅಂತಿದ್ದೆ .. ನೀನೇನಾದ್ರೂ ತಿಳಿದುಕೋ ಅವನೂ ವಯಸ್ಸಿಗೆ ಬಂದ ಹುಡುಗ. ಈ ರೀತಿ ಜವಾಬ್ದಾರಿ ಇಲ್ಲದೆ ಇರಬಾರದು ಅವನು, ಅಂದರು,

ಅಲ್ಲಾ ಅಣ್ಣಾ ; ಅವನಿಗಿನ್ನೂ ಯಾವ ಮಹಾ ವಯಸ್ಸು, ಆಡೋ ಹುಡುಗ, ಅವನಿಗೆ ಯಾವ ಜವಾಬ್ದಾರಿ ಗೊತ್ತಾಗುತ್ತೆ ? ಹೇಳು ಅಂದರು ಪಾರ್ವತಮ್ಮ

ನೋಡು ಪಾರ್ವತಿ ಯಾವುದಕ್ಕೂ ಮಿತಿ ಇರಬೇಕು. ಮಕ್ಕಳನ್ನು ಮುದ್ದು ಮಾಡುವುದೂ ಅತಿಯಾದರೆ ಕಷ್ಟ "ಸುತಕೆಡಗು ಲಾಲನೆಗಳಲಿ" ಎಂಬಂತೆ ನಮ್ಮ ಮುದ್ದಿನಿಂದ ಅವರ ಭವಿಷ್ಯದ ಬಾಳು ಹಾಳಾಗಬಾರದು. ಈಗ ವಿಶ್ವನಾಥನಿಗೆ ಹಣ ಸಂಪಾದಿಸುವ ಕಷ್ಟ ಏನು ಗೊತ್ತಿದೆ ಬರೀ ಖರ್ಚು ಮಾತ್ರ ಮಾಡುತ್ತಾನೆ. ಮನುಷ್ಯನಿಗೆ ದುಡಿಯದೆ ಖರ್ಚು ಮಾಡುವ ಅಭ್ಯಾಸ ಒಳ್ಳೆಯದಲ್ಲ, ಅವನು ಕಷ್ಟಪಟ್ಟು ದುಡಿದು ಸಂಪಾದಿಸಿದಾಗ ಕಾಸಿನ ಬೆಲೆ ಅವನಿಗೆ ಗೊತ್ತಾಗುತ್ತೆ ಅಂದರು ಶೇಷಣ್ಣನವರು.

ವಿಶೂ ಅಲ್ಲಿಯೆ ತಲೆತಗ್ಗಿಸಿ ಸುಮ್ಮನೆ ನಿಂತಿದ್ದ.

ಮಾವನ ಮಾತನ್ನು ಕೇಳಿಸಿಕೊಂಡೇ ಬಂದ ಮಂಗಳೆ "ಅದೇ ಮಾವ ; ಈ ಘರದೇಶಿಗೆ, ಈ ಮನೇಲಿ ಎಲ್ಲಿಲ್ಲದ ವೈಭವ, ಎಲ್ಲರೂ ಅವನನ್ನು ಮುದ್ದು ಮಾಡಿ ಏರಿಸಿ ಬಿಟ್ಟಿದ್ದಾರೆ. ಬಿಟ್ಟಿ ದುಡ್ಡು ಖರ್ಚು ಮಾಡಿಕೊಂಡು ಸೋಮಾರಿಯಾಗಿದ್ದಾನೆ" ಎಂದು ಅವನ ಮೇಲಿದ್ದ ತನ್ನ ಕೋಪವನ್ನು ಹೊರ ಹಾಕಿದಳು.

ಹಾಗೆಲ್ಲ ಅನ್ನಬಾರದಮ್ಮ ಅವನು ಈ ಮನೆಯೇ ವಂಶದ ಕುಡಿ. ಅವನಿಗೇ ಎಲ್ಲಾ ಹಕ್ಕೂ ಸರಿ... ಆದರೆ ; ಮನುಷ್ಯ ಕಷ್ಟಪಟ್ಟು ದುಡಿದು ತಿನ್ನಬೇಕಮ್ಮಾ" ಅಂದರು.

ಇವನಿಗೆಂಥಾ ಹಕ್ಕು ಮಾವ ಹೆಣ್ಣು ಮಕ್ಕಳಿಗಿಲ್ಲದ ಹಕ್ಕು....ಇವನಿಗೆ ಮಾತ್ರ ಬಂದು ಬಿಡುತ್ತೇ ? ಇವನಿಗೂ ಈ ಮನೆಗೂ ಯಾವ ಬಾಧ್ಯತೇನೂ ಇಲ್ಲ ಮಾವಾ ! ಇಲ್ಲಿ ಎಂದು ಬಡ-ಬಡನೆ ಹೇಳಿಕೊಂಡೇ ಮಂಗಳೆ ಒಳಕ್ಕೆ ಹೊರಟುಹೋದಳು

ವಿಶೂ ವಿಚಾರದಲ್ಲಿ ಮಂಗಳೆಯ ಮನಸ್ಸಿನಲ್ಲಿ ಏನೋ ಆಂದೋಳನ ವಾಗುತ್ತಿದೆಯೆಂದು ಶೇಷಮಾವನಿಗೆ ಅನ್ನಿಸಿತು.

ತಾಯಿ, ಎಲ್ಲರೆದುರಿಗೆ ತನ್ನನ್ನು ಹೀಯಾಳಿಸಿ, ಮಾತನಾಡಿದಳೆಂದು ವಿಶೂಗೆ ತುಂಬಾ ದುಃಖವಾಯಿತು.

ಹೀಗೇ ಮಾವ, ನನ್ನನ್ನು ಏನಾದ್ರೂ ಅಂತಾ ಇದ್ರೇನೇ ಅಮ್ಮನಿಗೆ ಸಮಾಧಾನ, ಈ ಮನೇಲಿ ನಾನಿರೋದೇ ತಪ್ಪು ; ಎಂದು ಹೇಳುತ್ತಾ ಹೊರಟ.

ಪಾಪ ; ಅನ್ನಿಸಿತು ಮಾವನಿಗೆ . ಇಲ್ಲಿ ಬಾರೋ ವಿಶ್ವನಾಥ ಎಂದು ಕರೆದರು. ವಿಶು ಹಿಂದಕ್ಕೆ ಬಂದು ಏನು ಮಾವ ? ಅಂದ.

ನೋಡು ಈಸಲ ನನ್ನ ಜೊತೇಲಿ ಕಾಶಿಗೆ ಬಂದುಬಿಡು. ಅಲ್ಲಿ ಆಶ್ರಮ ಎಲ್ಲಾ ನೋಡಿಕೊಂಡು ಬರುವಿಯಂತೆ ಅಂದರು.

ಈ ಮಾತಿನಿಂದ ಮೂರ್ತಿಗೂ ನೆಮ್ಮದಿಯಾಯಿತು. ಏನೋ ! ನನ್ನ ಹಣೇಬರಹ ಮಾವ ವಂಶಕ್ಕೆ ಒಬ್ಬ ಮಗ, ಇವನಿಗೆ ವಿದ್ಯೆ ಹತ್ತಲಿಲ್ಲ. ಸದ್ಯ, ನೀವಾದರೂ ಕರೆದುಕೊಂಡು ಹೋಗಿ ಆಶ್ರಮದ ವಾತಾವರಣದಲ್ಲಿ ಕಾಯಕ ವಿದ್ಯೆಯನ್ನು ಇವನಿಗೂ ಕಲಿಸಿ. ನಿಮ್ಮ ಜೊತೆ ಕರೆದುಕೊಂಡು ಹೋಗಿ ಅಂದುಬಿಟ್ಟು, ಏನೋ ವಿಶೂ : ಹೋಗ್ತಿಯೇನೋ ? ಎಂದು ಮಗನಕಡೆ ನೋಡಿದರು.

ವಿಶೂಗೂ ಈ ಮನೆಯ ವಾತಾವರಣದಿಂದ ದೂರ ಎಲ್ಲಿಯಾದರೂ ಹೋಗಬೇಕೆನ್ನಿಸುತ್ತಿತ್ತು. ಕಾಶಿಯನ್ನೂ ನೋಡಿದಂತೆಯಾಗುತ್ತದೆ" ಎಂದು ಖುಷಿಯಿಂದಲೇ ಓ .. ಆಗಲಿ ಅಪ್ಪಾ ; ಮಾವನ ಜೊತೇಲಿ ಈಸಲ ಹೋಗ್ತಿನಿ ಅಂದ.

ಅಲ್ಲಿಯೇ ಇದ್ದ ಪಾರ್ವತಮ್ಮನವರು ಈಸಲ ನಾನು ಕಾಶಿಗೆ ಬರ್ತಿನಲ್ಲೋ ವಿಶೂ ನಿನ್ನ ಜೊತೇಲೇ ನಾನು ಇರ್ತೀನಿ ಬಿಡು" ಅಂದರು ಇನ್ನೂ ವಿಶೂಗೆ ಚಿಂತೆಯೇನು ?

ಸರಿ-ಸರಿ ಮಾವ ಹೋಗಿ ಅಲ್ಲಿ ಸೇರಿಕೊಂಡು ಒಬ್ಬೊಬ್ಬರನ್ನೇ ತಮ್ಮ ಕಡೆ ಎಳೆದುಕೊಳ್ಳುತ್ತಿದ್ದಾರೆ. ಇದೇನಮ್ಮ ?..... ನೀನೂ ನಮ್ಮನ್ನೆಲ್ಲಾ ಬಿಟ್ಟು ಹೋಗ್ತೀನಿ.... "ಅಂತೀಯಾ ?" ಅಂದರು ಮೂರ್ತಿ.

ಇನ್ನೇನೋ ನಿನ್ನ ಹೆಂಡತಿ ಮಕ್ಕಳು ಸಂಸಾರ, ಎಲ್ಲಾ ಒಂದು ಮಟ್ಟಕ್ಕೆ ಬಂತು ಇನ್ನು ನಾನು ಎಲ್ಲಿದ್ದರೆ ಏನಪ್ಪಾ ? ಈಸಲ ಅಣ್ಣನ ಜೊತೆಯಲ್ಲಿ ಕಾಶಿಗೆ ಕಳುಹಿಸಿಕೊಡು ಅಂದರು ಪಾರ್ವತಮ್ಮ.

ತಾಯಿಯು ಹೊರಡುವ ನಿರ್ಧಾರ ಮಾಡಿರುವುದನ್ನು ತಿಳಿದು ಮೂರ್ತಿಯೂ, ಸರಿ, ನಿನ್ನ ಸಂತೋಷ ಹೋಗಿಬಾರಮ್ಮ.....ಆದರೆ ಈಗಲೇ. ಹೇಳಿದೀನಿ "ಸುಶೀ ಮದುವೆ ಇನ್ನೇನು ಈ ಜೇಷ್ಠ ಮಾಸದಲ್ಲಿ ಮಾಡಿಬಿಡಬೇಕು" ಇನ್ನು ೩ ತಿಂಗಳು ಉಳಿದಿದೆ ಆ ವೇಳೆಗೆ ಎಲ್ಲರೂ ಇಲ್ಲಿಗೆ ಬಂದುಬಿಡಬೇಕು

ಏನು ಮಾವ ? ಈ ಮದುವೆಗೆ ನೀವೂ ಖಂಡಿತ ಬರಬೇಕು...ಎಂದರು ಮೂರ್ತಿ

ನಿನ್ನ ಭಾವ ವೈದ್ಯ, ನಟರಾಜ ಒಳ್ಳೆ ಯೋಗ್ಯವರ... ಸುಶೀಲ ಅದೃಷ್ಟ ಮಾಡಿದ್ದಳು, ಸಂತೋಷ... .ಬರ್ತೀವಪ್ಪಾ : ಅಂದರು ಶೇಷಮಾವ.

ಮಾವ ನೀವು ಊರಿಗೆ ಹೊರೊಡೋಅಷ್ಟರಲ್ಲಿ ಒಂದು ಬಾರಿ ನಿಮ್ಮ ಜಮೀನನ್ನು ನೋಡಿಕೊಂಡು ಬರೋವ್ರಂತೆ. ನಾಳೆ ಕಾರಿನಲ್ಲಿ ಹೋಗಿ ಬರೋಣವೇ ? ಅಂದರು ಮೂರ್ತಿ.

ಮೂರ್ತಿ.... ನನಗೆ ಅದರ ಚಿಂತೆಯಾಗಲೀ, ಆಸೆಯಾಗಲೀ ಇಲ್ಲಪ್ಪಾ ; ಯಾವತ್ತು ನಿನ್ನ ವಶಕ್ಕೆ ಒಪ್ಪಿಸಿದೆನೋ ಅವತ್ತಿನಿಂದ ನಾನು ನಿಶ್ಚಿಂತೆಯಿಂದಿದ್ದೇನೆ. ಬೇಡವೆಂದರೂ ನೀನು ಆಗಾಗ ಹಣ ಕಳಿಸುತ್ತೀ ಅದೂ ಕೂಡ ಆಶ್ರಮದ ಮಕ್ಕಳ ಬಟ್ಟೆ, ಹಾಸಿಗೆ, ಹೊದ್ದಿಕೆಗಳಿಗಾಗಿ ಸದ್ವಿನಿಯೋಗವಾಗುತ್ತಿದೆ. ಆ ಪುಣ್ಯವೂ ನಿನಗೆ ಸೇರಿದ್ದು.

ಅಷ್ಟೇ ಸರಿ ಮಾವ ; ನಿಮ್ಮ ಜಮೀನಿನ ಉತ್ಪತ್ತಿಯಲ್ಲಿ ಸ್ವಲ್ಪ ಭಾಗ ನಿಮಗೆ ಕೊಡುವುದರಿಂದ ನಾನೇನು ಧರ್ಮ ಮಾಡಿದಂತಾಯಿತು ?

ಧರ್ಮ ಸೂಕ್ಷ್ಮ ನಿನಗೆ ತಿಳಿಯದು ಮೂರ್ತಿ !... ಎಂದು ಆ ಸ್ವತ್ತನ್ನು ನಿನಗೆ ಒಪ್ಪಿಸಿದೆನೋ ಅಂದೇ ಅದರ ಸಂಬಂಧ ನನಗೆ ಬಿಟ್ಟು ಹೋಯಿತು. ನಿನಗೆ ಇಷ್ಟ ಬಂದ ರೀತಿಯಲ್ಲಿ ಅದನ್ನು ನೀನು ಉಪಯೋಗಿಸಿಕೊಳ್ಳಬಹುದು.

ಎಲ್ಲಾ ಕೇಳಿಸಿಕೊಳ್ಳುತ್ತಿದ್ದ ಪಾರ್ವತಮ್ಮನವರು, ಅಣ್ಣಾ ; ನೀನು ತುಂಬಾ ಹಿರಿಯ ವ್ಯಕ್ತಿ ನಿನ್ನ ಮುಂದೆ ನಾವು "ಸೂರ್ಯನ ಮುಂದೆ ಹಣತೆ ಇದ್ದಂತೆ" ಈ ಪ್ರಾಪಂಚಿಕ ವ್ಯವಹಾರದಲ್ಲಿಯೇ ತೊಳಲಿ ಬಳಲುತ್ತಿದ್ದೇವೆ. ನಿನ್ನಂತೆ ವೈರಾಗ್ಯ ನಮಗೆ ಬರುವುದು ಯಾವಾಗ ? ಎಂದರು.

ನೋಡು ಪಾರ್ವತಿ ಎಲ್ಲದಕ್ಕೂ ಮನಸ್ಸೇ ಕಾರಣ, ಪ್ರಾಪಂಚಿಕ ಸುಖದ ಛಾಯೆಯನ್ನೇ ನಿಜವಾದ ಸುಖವೆಂದು ಭ್ರಮಿಸುವವರನ್ನು ಯಾವ ಉಪದೇಶವೂ ಜಾಗ್ರತರನ್ನಾಗಿ ಮಾಡಲಾರದು.

ಒಂಟೆಗೆ ಮುಳ್ಳಿನ ಗಿಡ ಕಂಡರೆ ಇಷ್ಟ ಅದನ್ನು ತಿನ್ನುವಾಗ ಚುಚ್ಚಿ ರಕ್ತ ಸುರಿದರೂ ಅದು ತಿನ್ನುವುದನ್ನು ಬಿಡುವುದಿಲ್ಲ. ಅದರಂತೆಯೇ ಮನುಷ್ಯ ಎಂಥ ಕಷ್ಟ ಕೋಟಲೆಗಳಲ್ಲಿ ಬೆಂದರೂ ಪ್ರಾಪಂಚಿಕ ಮೋಹ ಬಿಡುವುದಿಲ್ಲ.

ಆದರೆ ಸಾಧನೆಯಿಂದ ಎಲ್ಲವೂ ಸಾಧ್ಯ ಪಾರ್ವತಿ; ಅದಕ್ಕೆ ತಾಳ್ಮೆ ಬೇಕು. ಸಮುದ್ರದಲ್ಲಿ ಒಮ್ಮೆ ಮುಳುಗಿದಾಗ ಮುತ್ತು ಸಿಗದೇ ಇದ್ದರೆ ಸಮುದ್ರದಲ್ಲಿ ಮುತ್ತೇ ಇಲ್ಲವೆಂದು ತಿಳಿಯಬಾರದು, ಬೇಕಾದಷ್ಟಿವೆ. ಆದರೆ ಅಷ್ಟು ಬೆಲೆ ಬಾಳುವ ವಸ್ತುವನ್ನು ಪಡೆಯಲು ಕಷ್ಟಪಡಬೇಕು.

ಅಂತೆಯೇ ಅಮೂಲ್ಯ ವಸ್ತುವಾದ ಪರಮಾತ್ಮನನ್ನು ಪಡೆಯಬೇಕಾದರೆ ಹೆಚ್ಚು ಸಾಧನೆ ಅಗತ್ಯ. ನೋಡು ಒಮ್ಮೆ ಆ ಪವಿತ್ರ ನಾಮದ ರುಚಿಯನ್ನು ಕಂಡುಕೊಂಡರೆ ಬಿಡುವ ಮನಸ್ಸಾಗುವುದಿಲ್ಲ. ಕಡೆಗೆ ಅದೇ ನಮ್ಮ ಜೀವನದ ಜೀವಾಳವಾಗುತ್ತದೆ ಎಂದು ಭಕ್ತಿ ಪರವಶರಾಗಿ ಹೇಳಿದರು ಶೇಷಣ್ಣನವರು.

ಅಣ್ಣನ ಮಾತಿನಲ್ಲಿಯೇ ತಲ್ಲೀನರಾಗಿದ್ದ ಪಾರ್ವತಮ್ಮನವರು "ನಿನ್ನ ಮಾತನ್ನು ಕೇಳಿಸಿಕೊಳ್ಳುತ್ತಾ ಇದ್ದರೆ ಮನಸ್ಸು ಶುದ್ಧವಾಗಿ ಯಾರಿಗಾದರೂ ವೈರಾಗ್ಯ ಹುಟುತ್ತೆ ಅಣ್ಣಾ: ಮತ್ತೆ; ನಿನ್ನ ಈ ನಿರ್ಲಿಪ್ತತೆಗೂ ಆ ಆಶ್ರಮದ ಪರಿವಾರಕ್ಕೂ ಹೇಗೆ ಹೊಂದುತ್ತೆ ಅನ್ನೋದೇ ಆಶ್ಚರ್ಯ.

ಎಲ್ಲದರಲ್ಲಿಯೂ ಪರಮಾತ್ಮನ ಅಂಶವನ್ನು ಕಾಣುವುದೇ ಭಕ್ತಿ.

ನಾನು ಹುಡುಗರನ್ನು ಏಕೆ ಅಷ್ಟು ಪ್ರೀತಿಸುತ್ತೇನೆ ಎಂದರೆ; ಅವರು ಸ್ವಚ್ಛ ಅಮೃತ ಶಿಲೆಯಿದ್ದಂತೆ. ಯಾವ ಕಲಂಕವೂ ಅವರ ಮನಸ್ಸಿನ ಮೇಲೆ ಲೇಪನವಾಗಿರುವುದಿಲ್ಲ. ಅವರು ಪರಮಾತ್ಮನನ್ನು ಮುಗ್ಧ ಮನಸ್ಸಿನಿಂದ ಮೆಚ್ಚಿಸಬಲ್ಲರು....ಅವರ ಸಹವಾಸದಲ್ಲಿ ನಮಗೂ ಸ್ವಚ್ಛತೆಯು ಸಾಧ್ಯವಿದೆ.

ಅದೇನೋಪ್ಪ ಈ ಸಲ ನಿನ್ನ ಜೊತೆಯಲ್ಲಿ ಬಂದು ನಿನ್ನ ಆಶ್ರಮವನು ನೋಡುವ ಆಸೆಯಾಗಿದೆ. ಬಂದು ಬಿಡುತ್ತೇನೆ ಎಂದರು ಪಾರ್ವತಮ್ಮ.

ಏನೋ: ಮಾವ ...ಇದುವರೆಗೂ ನಮ್ಮನ್ನು ಬೇರೆ ಒಂದು ಪ್ರಪಂಚಕ್ಕೆ ಒಯ್ದಿದ್ದಿರಿ....ನಿಮ್ಮ ಮಾತನ್ನು ಕೇಳುತ್ತಿದ್ದರೆ ಅಂಥ ಸೇವಾ ಕಾರ್ಯವನ್ನು ನಾವೂ ಮಾಡುವ ಸುಯೋಗವು ದೊರಕಲಿ ಎನ್ನಿಸುತ್ತದೆ.

ನಮ್ಮ ದೇಶದಲ್ಲಿ ಅಲ್ಲಲ್ಲಿ ಇಂಥಾ ಆಶ್ರಮಗಳಿದ್ದರೆ ಮುಂದಿನ ಪೀಳಿಗೆ ಉತ್ತಮ ವ್ಯಕ್ತಿಗಳು ತಯಾರಾಗುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಎಂದರು ಮೂರ್ತಿ.

ಮಾರನೆಯ ದಿನ ತಾವು ಕೆಲಸ ಮಾಡಿಸುವ ಶರಾವತಿ ಯೋಜನೆಯ ಸ್ಥಳವನ್ನು ತೋರಿಸಲು ಮೂರ್ತಿಯವರು ಮಾವನನ್ನು ಕರೆದರು. ಸರಿ ...

ಅಷರೂಪಕ್ಕೆ ದೇವಕಿ ಬಂದಿದ್ದಳು ಅವಳು "ನಾನೂ ಬರುತ್ತೇನೆ ಅಣ್ಣಾ ನೋಡಲು ನನಗೂ ಆಸೆ ಅಂದಳು".

ಅವಳ ಮಗಳು ವೀಣಾಪಾಣಿ ಹೊರಟಳು. ಸರಿ ವೀಣಾಪಾಣಿ ಹೊರಟ ಮೇಲೆ ವಿಶೂ ಹೊರಡದಿರುತ್ತಾನೆಯೇ ಅವನೂ ಹೊರಟ. ಮೂರ್ತಿಯವರು ಒಂದು ವ್ಯಾನನ್ನೇ ತರಿಸಿದರು.

ಅಮ್ಮ ಅತ್ತೆ ಯಾರು ಬೇಕಾದರೂ ಹೊರಡಿ ವ್ಯಾನನ್ನೇ ತರಿಸಿದ್ದೇನೆ ಎಂದರು ಮೂರ್ತಿ.

ಲಕ್ಷಮ್ಮನವರು "ನನಗೆ ಆ ಪ್ರಯಾಣದ ಆಯಾಸವೆಲ್ಲಾ ತಡೆಯೋಲ್ಲಪ್ಪ ಮೂರ್ತಿ. ನಾನೆಲ್ಲೂ ಬರಲಾರೆ ಹಾಯಾಗಿ ಮನೇಲಿ ಇರ್ತೇನೆ ನೀವೆಲ್ಲಾ ಹೋಗಿಬನ್ನಿ ಎಂದರು.

ಪಾರ್ವತಮ್ಮನವರು "ಇನ್ನು ನಾಳೆ ಪ್ರಯಾಣಕ್ಕೆಲ್ಲಾ ಅಣಿ ಮಾಡಿಕೊಳ್ಳಬೇಡವೇ ? ನನಗೂ ಬರೋದಕ್ಕೆ ಆಗೋಲ್ಲ ಕಣೋ" ಅಂದರು.

ಮಂಗಳೆ ಅಡಿಗೆಭಟ್ಟರ ಕೈಲಿ ಬಿಸಿಬೇಳೆಬಾತು, ಮೊಸರುಅನ್ನ, ಆಂಬೋಡೆ, ಎಲ್ಲಾ ಮಾಡಿಸಿ ಪಾತ್ರೆಗಳಲ್ಲಿ ತುಂಬಿಸಿ ಜೀಪ್‌ನಲ್ಲಿ ಇಡಿಸಿದಳು.

ಮೂರ್ತಿ, ಶೇಷಮಾವ, ಅವರು ಮುಂದಿನ ಸೀಟಿನಲ್ಲಿ ಕುಳಿತರು, ದೇವಕಿ ವಿಶೂ, ಹಿಂದಿನ ಸೀಟಿನಲ್ಲಿ ಕುಳಿತು ವೀಣಾಪಾಣಿಗಾಗಿ ನಿರೀಕ್ಷಿಸುತ್ತಿದ್ದರು,

ವೀಣಾ ಸುಶೀಲಳನ್ನೂ ಬರಲು ಬಲವಂತ ಮಾಡುತ್ತಿದ್ದಳು. ಸುಶೀಲೆಗೇಕೋ ಯಾವುದರಲ್ಲಿಯೂ ಉತ್ಸಾಹವಿಲ್ಲ. ತನ್ನ ಜೊತೆಗೆ ನಟರಾಜ ಇದ್ದಿದ್ದರೆ ಎಲ್ಲಿ ಬೇಕಾದರೂ ಹೋಗಬಹುದಾಗಿತ್ತು. ಈಗ ಎಲ್ಲಿ ಹೋಗಲು ಮನಸ್ಸೇ ಬರುವುದಿಲ್ಲ ಎಂದುಕೊಂಡು,

ವೀಣಾ ; ನೀವೆಲ್ಲಾ ಹೋಗಿಬನ್ನಿ ನನಗೇಕೋ ಮೈಹುಷಾರಿಲ್ಲ, ತುಂಬಾ ನೆಗಡಿ, ಎಂದು ನೆಪ ಹೇಳಿದಳು.

ವಿಶೂ ಜೀಪಿನಿಂದ ಇಳಿದು ಒಳಕ್ಕೆ ಹೋಗಿ ಲೇ ವೀಣಾ ! ಎಷ್ಟೊತ್ತೇ ? ಅಪ್ಪ ಕರೀತಿದಾರೆ ಬೇಗ ಬಾ ಎಂದು ಕೂಗಿದ.

ಬಂದೆ ಕಣೋ ನೋಡು ಸುಶೀ ಬರೋಲ್ಲ ಅಂತಾಳೆ. ಯಾಕೆ ಸುಶೀ ? ನೀನು ಬರೋಲ್ವೇ ? ಬಾಮ್ಮ ನೀನೂ : ಅಂದು ವಿಶು ಗೋಗರೆದ.

ಇಲ್ಲ ಕಣೋ ನೀವು ಹೋಗಿ. ನಾನು ಎಷ್ಟೋಸಲ ಅಪ್ಪನಜೋತೆ ಹೋಗಿ ನೋಡಿದೀನಿ. ಸದ್ಯ ವೀಣಾಪಾಣೀನ ಜೋಪಾನವಾಗಿ ನೋಡಿ ಕರೆದುಕೊಂಡು ಬಾರೋ. ಅಣೆಕಟ್ಟು ಹತ್ತುವಾಗ ಕಾಲು ಗೀಲು ಜಾರೀತು ? ಅಂದಳು.

ಆ ವೇಳೆಗೆ ವೀಣಾಪಾಣಿ ಕನ್ನಡಿ ಮುಂದೆ ನಿಂತು ತನ್ನ ಅಲಂಕಾರವನ್ನು ಪೂರೈಸಿದ್ದಳು. ಅವಳ ಮಾಟವಾದ ಮೈಗೆ ಪೈಜಾಮ ಜುಬ್ಬ ಅಂದವಾಗಿ ಒಪ್ಪುತ್ತಿತ್ತು. ಗುಂಗುರಾದ ಗೊಂಚಲು ಕೂದಲನ್ನು ಎರಡುಜಡೆ ಹೆಣೆದು ರಿಬ್ಬನ್ ಕಟ್ಟಿದ್ದಳು. ಒಂದೇ ಗುಲಾಬಿ ಹೂವನ್ನು ಜಡೆಯಮೇಲೆ ಪಿನ್ ಹಾಕಿ ಸಿಕ್ಕಿಸಿದ್ದಳು. ಚಿಕ್ಕದಾದರೂ ಚುರುಕಾದ ಅವಳ ಕಣ್ಣುಗಳು ಆಕರ್ಷಣೀಯ ವಾಗಿದ್ದುವು.

ಕರೆಯುಲು ಬಂದ ವಿಶೂ ವೀಣಾಪಾಣಿಯನ್ನೇ ನೋಡುತ್ತಾ ನಿಂತುಬಿಟ್ಟ.

ಅಲ್ಲೇ ಇದ್ದ ಸುಶೀ ...ಇದೇನೋ ವಿಶೂ ; ಹಾಗೆ ಅವಳನ್ನೇ ನೋಡುತ್ತಾ ನಿಂತ್‌ಬಿಟ್ಟೆ ? ಅಂದು ಎಚ್ಚರಿಸಿದಳು.

ಅಲ್ಲಾ ಈ ಬಿಳೀಜಿರ್ಲೆ ಇವತ್ತೇನೋ ಬಲು ಜೋರಾಗಿ ಅಲಂಕಾರ ಮಾಡ್ಕೊಂಡಿದೆಯಲ್ಲಾ ! ಅದೇನಪ್ಪಾ ! ಅಂತ ನೋಡ್ದೆ ಅಷ್ಟೆ, ಎಂದು ವೀಣಾಳ ಕಿವಿ ಹಿಂಡಿದ,

ಅಯ್ಯೋ ! ಬಿಡೋ ಕಿವಿ, ಹೋಯ್ತು ನೋಡು, ಸುಶೀ ! ಯಾವಾಗ್ಲೂ ನನ್ನ "ಬಿಳೀ ಜಿರ್ಲೆ" ಅಂತಾನೆ. ಹೀಗೆಲ್ಲಾ ಮಾಡಿದ್ರೆ ನಾನು ಇವನ್ ಜೊತೆ ಹೋಗೋದೇ ಇಲ್ಲ ನೋಡು ಅಂದು ಕೆನ್ನೆ ಉಬ್ಬಿಸಿ ಮಾತನಾಡಿದಳು ವೀಣಾ.

ಅವರಿಬ್ಬರ ಮೋಹಕವಾದ ಜಗಳ ಸುಶೀಲೆಗೆ ತುಂಬಾ ತಮಾಷೆಯಾಗಿತ್ತು. "ಮುದ್ದಾದ ಜೋಡಿ" ಎಂದುಕೊಂಡಳು ಮನಸ್ಸಿನಲ್ಲಿಯೇ "ಆಮೇಲೆ ಕಿತ್ತಾಡು ವಿರಂತೆ, ಅಪ್ಪ ಕಾಯ್ತಿದಾರೆ ಬೇಗಹೋಗಿ ಎಂದಳು ಸುಶೀ.

ಒಬ್ಬ ಕೈ ಒಬ್ಬರು ಹಿಡಿದುಕೊಂಡು ವೀಣಾ-ವಿಶೂ ಇಬ್ಬರೂ ಹೊರಕ್ಕೆ ಓಡೋಡಿ ಬಂದರು. ಒಳಗಿನಿಂದಲೇ ಇವರನ್ನು ನೋಡುತ್ತಿದ್ದ ಪಾರ್ವತಮ್ಮ ನವರು, ಲೇ ; ಮಂಗಳಾ ! ನಿನ್ನ ಮಗ-ಸೊಸೆ ನೋಡೆ ಈಗಲೇ ಕೈ ಹಿಡಿದು ಜೋಡಿ ಎಷ್ಟು ಮುದ್ದಾಗಿ ಹೋಗ್ತಿದಾರೆ ?" ಎಂದರು.

ಮಂಗಳೆಗೆ ಕೂಡಾ ಆ ಮಕ್ಕಳನ್ನು ನೋಡಿ ಸಂತೋಷವಾಯಿತು. "ನಿಮ್ಮ ಆಶೀರ್ವಾದ ಅವರಿಬ್ಬರೂ ಮದುವೆಯಾಗಿ, ಹೀಗೇ ಸಂತೋಷವಾಗಿರಲಿ ಅತ್ತೆ" ಅಂದಳು.

ಹೂಂ.... ಕಣೇ.... ಮಂಗಳಾ ನಾನು ದೇವಕಿಗೆ ಆಗಲೇ ಹೇಳಿಬಿಟ್ಟಿದ್ದೀನೆ. ನಮ್ಮ ವಿಶೂಗೇ ನಿನ್ನ ವೀಣಾನ ಕೊಡಬೇಕು ; ಸುಶೀಲ, ಮದುವೆ ಜೊತೇಲೇ ಅದೂ ಮಾಡಿಬಿಡೋಣ ಅಂದೆ.

ಹಾಗೇ ಆಗಲಮ್ಮ ಜೋಡಿ ಚೆನ್ನಾಗಿದೆ ಎಂದು ಒಪ್ಪಿಕೊಂಡಿದಾಳೆ ಕಣೇ.... ಅಂದರು.

ದುರ್ಗಮವಾದ ಕಾಡನ್ನು ಸೀಳಿಕೊಂಡು ಜೀಪು ಹೊರಟಿತು. ಜೋಗು ಜಲಪಾತದ ಬಳಿಗೆ ಇನ್ನೂ ಸುಗಮವಾದ ರಸ್ತೆ ತಯಾರಾಗಿರಲಿಲ್ಲ. ಲಾರಿ ಜೀಪು ಓಡಾಡುವಷ್ಟು ಸ್ಥಳವನ್ನು ಮಾಡಿಕೊಂಡಿದ್ದರು ಇಂಜಿನೀಯರುಗಳು.

ಇಕ್ಕೆಲದಲ್ಲಿಯೂ ಭೂಮ್ಯಾಕಾಶವನ್ನು ಒಂದಾಗಿಸುವಂತಹ ದಟ್ಟಹಸಿರು ಕಾಡು, ವೃಕ್ಷರಾಜ, ಧೀಮಂತನಾಗಿ ಎದೆ ಸೆಟೆದು ನಿಂತಂತಿತ್ತು.

ಸುಯ್ಯನೆ ಬೀಸುವ ಸುಳಿಗಾಳಿಗೆ ಸಣ್ಣ-ಸಣ್ಣ ಗಿಡಗಳು ತೂಗಿ ಬಾಗುತ್ತಿದ್ದುವು. ಲತಾವನಿತೆಯೂ ಬಿಳುಗಾಳಿಗೂ ಭಯಪಡದೆ ವೃಕ್ಷರಾಜ ನನ್ನು ಬಿಗಿದಪ್ಪಿ ಆಶ್ರಯ ಪಡೆದಿದ್ದಳು.

ಆ ಬೃಹದಾಕಾರದ ಹಚ್ಚ ಹಸುರಿನ ಮಧ್ಯೆ ಇವರ ಜೀಪು ಒಂದು ಸಣ್ಣ ಬಿಳಿಯ ಚಿಟ್ಟೆ ಹಾರಿಹೋದಂತಿತ್ತು.

ಇಂತಹ ಸುಂದರ ದೃಶ್ಯವನ್ನು ನೋಡುತ್ತಾ ಹೋದಂತೆಲ್ಲಾ ವೀಣಾಪಾಣಿಯ ಮನಸ್ಸು ಸಂತೋಷದಿಂದ ಹಿಗ್ಗಿತು. ಅವಳು ಹರೆಯದ ಹೊಸ್ತಿಲಲ್ಲಿ ಕಾಲಿಟ್ಟವಳು. ಆ ಸನ್ನಿವೇಶವೂ ವಿಶೂವಿನ ಸಾನಿಧ್ಯವೂ ಏನೋ ಹೊಸ ಅನುಭವವನ್ನು ಉಂಟುಮಾಡಿತ್ತು.

ವಿಶೂ ಕೂಡ ವೀಣಾ ಬಂದ ದಿನದಿಂದ ಎದೆಬಿಡದೆ ಅವಳ ಹಿಂದು ಮುಂದು ಓಡಾಡುತ್ತಾ ಅವಳನ್ನು ಕೀಟಲೆ ಮಾಡಿ ರೇಗಿಸುತ್ತಲೇ ಇದ್ದ.

ಜೀಪು ಶರಾವತಿ ಯೋಜನೆಯ ಕೆಲಸದ ಸ್ಥಳಕ್ಕೆ ಬಂದು ಸೇರಿತು. ಎಲ್ಲರೂ ಜೀಪಿನಿಂದ ಇಳಿದರು.

ಅಲ್ಲಿ ನಿರ್ಮಾಣವಾಗುತ್ತಿರುವ ಲಿಂಗನಮಕ್ಕಿ ಅಣೆಕಟ್ಟಿನ ಬೃಹತ್ ಕಾರ್ಯದಲ್ಲಿ ನೂರಾರು ಮಂದಿ ನಿಪುಣರಾದ ಇಂಜಿನಿಯರುಗಳೂ ಮತ್ತು ಸಹಸ್ರಾರು ಸ್ತ್ರೀಪುರುಷರೂ ತಮ್ಮ ತನು ಮನ ಶಕ್ತಿಯನ್ನು ಧಾರೆಯೆರೆದು ಕೆಲಸ ಮಾಡುತ್ತಿದ್ದರು.

ಅಣೆಕಟ್ಟೆಯ ನಿವೇಶನಕ್ಕೆ ಒಡೆದ ಕಲ್ಲುಗಳ ಭಾರವನ್ನು ಶಕ್ತಿಮೀರಿ ಹೊತ್ತು ಬೊಂಬಿನ ಅಣೆಕಟ್ಟೆಯ ಮೆಟ್ಟಲೇರಿ ಪ್ರಾಣವನ್ನು ಲೆಕ್ಕಿಸದೆ ಸಾವಿರಾರು ಅಡಿಗಳ ಎತ್ತರದಲ್ಲಿ ಕಾರ್ಮಿಕರು ಜೀವದ ಹಂಗನ್ನು ತೊರೆದು ಕೆಲಸ ಮಾಡುತ್ತಿದ್ದರು.

ದಟ್ಟವಾದ ಅರಣ್ಯ ಮಧ್ಯದಲ್ಲಿ ಪ್ರಕೃತಿಯ ಸೊಬಗಿನ ಜೋಗು ಜಲಪಾತ ನಾಲ್ಕು ಸೀಳಾಗಿ ದುಮ್ಮಿಕ್ಕುವ ದೃಶ್ಯವನ್ನು ದೂರದಿಂದ ಮಾವನಿಗೆ ತೋರಿಸಿದರು ಮೂರ್ತಿ.

ಎಲ್ಲರೂ ಆ ಸೊಗಸಿಗೆ ಮನಸೋತು ತಮ್ಮನ್ನು ತಾವೇ ಮರೆತು ನಿಂತು ಬಿಟ್ಟರು.

ಬನ್ನಿ ಮಾವ, ನಮ್ಮ ಕೆಲಸ ನಡೆಯುತ್ತಿರುವ ಸ್ಥಳವನ್ನು ನೋಡುವಿರಂತೆ. ಸ್ವಲ್ಪ ಹುಷಾರಾಗ್ಬನ್ನಿ ಕಾಲು ಜಾರೀತು ; ಲೋ ವಿಶೂ ವೀಣಾ ಕೈಹಿಡಿದೇ ಕರೆದುಕೊಂಡುಬಾರೋ ; ನೀನೂ ದೇವಂ ಎಂದು ಎಲ್ಲರಿಗೂ ಎಚ್ಚರಿಕೆ ಕೊಟ್ಟರು ಮೂರ್ತಿ.

ಕಟ್ಟಡದ ಕೆಲಸವನ್ನು ನೋಡಲು ಸ್ವಲ್ಪದೂರ ಬಿದುರಿನ ಅಟ್ಟಣೆಯ ಮೇಲೆ ನಡೆದು ಹೋಗಬೇಕಾಗಿತ್ತು. ಎಲ್ಲರೂ ಅಲ್ಲಿಗೆ ಹೋದರು. ಆ ಅದ್ಭುತ ಅಣೆಕಟ್ಟಿನ ನಿರ್ಮಾಣವನ್ನು ವೀಕ್ಷಿಸಿ ಶೇಷಣ್ಣನವರು ಆಶ್ಚರ್ಯಗೊಂಡರು.

ಭೂಮ್ಯಾಕಾಶವು ಒಂದಾಗುವಂತೆ ನಿರ್ಮಿಸಿದ್ದ ಬೊಂಬಿನ ಅಟ್ಟಣೆಯೇ ಅಸಾಧ್ಯವಾಗಿರುವಾಗ ಇನ್ನು ಆ ಕಟ್ಟಡದ ನಿರ್ಮಾಣವು ಇನ್ನೆಷ್ಟು ಅಸಾಧ್ಯವಾಗಿರಬಹುದು ? ಎಂದು ಅವರು ಯೋಚಿಸಿದರು.

ಏನಪ್ಪಾ ; ಮೂರ್ತಿ, ಈಗ ನಿರ್ಮಿಸುತ್ತಿರುವ ಈ ಕಟ್ಟಡಕ್ಕೆ ಎಷ್ಟುಕಾಲ ಹಿಡಿಸಿತು ? ಇನ್ನು ಎಷ್ಟು ದಿನಗಳಲ್ಲಿ ಇದು ಪೂರೈಸಬಹುದು ಎಂದು ಕೇಳಿದರು.

ಈ ಕಟ್ಟಡಕ್ಕೆ ಯೋಜನೆ ಹಾಕಿಕೊಂಡು ಈ ದುಸ್ಸಹವಾದ ಕಾಡನ್ನು ಸರ್ವೆ ಮಾಡಿಸಲು ಪ್ರಾರಂಭಿಸಿ ಈಗ್ಗೆ ೫ ವರ್ಷಗಳಾಯಿತು. ವರ್ಷಕ್ಕೆ ನೂರು ದಿನಗಳು ಮಾತ್ರ ಇಲ್ಲಿ ಕೆಲಸ ಮಾಡಿಸಲು ಸಾಧ್ಯ. ಏಕೆಂದರೆ ಮಲೆನಾಡು ಪ್ರದೇಶದಲ್ಲಿ ಮಳೆಗಾಲದಲ್ಲಿ ಸುಮಾರು ೩೦೦ ಇಂಚುಗಳಷ್ಟು ಮಳೆ ಕುಂಭ-ದ್ರೋಣವಾಗಿ ಬೀಳುತ್ತದೆ... ಒಂದು ವರ್ಷ ಕಟ್ಟಡ ಮೇಲೆದ್ದಿದುದು ಮಳೆಯಿಂದಾಗಿ ಕುಸಿದು ಬಿತ್ತು ಮತ್ತೆ ಕಟ್ಟಿದೆವು ಮತ್ತೆ ಕುಸಿಯಿತು.

ಇಷ್ಟೆಲ್ಲ ಕಂಟಕಗಳು ಪ್ರಾಪ್ತವಾದರೂ ಮನಸ್ಸು ಅಲ್ಲೋಲ್ಲ ಕಲ್ಲೋಲವಾದರೂ; ಇಲ್ಲಿಯ ಪರಿಸ್ಥಿತಿ ಮತ್ತು ಹವಾಗುಣ ವಾಸಮಾಡುವುದಕ್ಕೆ ಸಾಧ್ಯವಾಗದಿದ್ದರೂ ಈ ಕಠಿಣ ಕಾರ್ಯವನ್ನು ಪೂರೈಸಲು ಪಣತೊಟ್ಟು ಕಾರ್ಮಿಕರು ಕೆಲಸವನ್ನು ಸಾಧಿಸಿ ಯಶಸ್ವಿಯಾಗಿದ್ದಾರೆ ಮಾವ.

ಈ ಕೆಲಸ ಪೂರ್ಣಗೊಂಡರೆ ಅದರ ಯಶಸ್ಸು ಕಾರ್ಮಿಕರಿಗೇ ಸಲ್ಲ ತಕ್ಕದ್ದು. ಇನ್ನೂ ಮೂರು ವರ್ಷದಲ್ಲಿ ಈ ಕೆಲಸ ಪೂರ್ಣಗೊಳ್ಳಬಹುದೆಂದು ಅಂದಾಜು ಮಾಡಲಾಗಿದೆ ಎಂದು ಹೇಳುತ್ತಾ ಆಯಾ ಭಾಗಗಳನ್ನು ತೋರಿಸಿದರು ಮೂರ್ತಿ.

"ಈ ಅಣೆಕಟ್ಟಿನಿಂದ ವಿದ್ಯುಚ್ಛಕ್ತಿ ಹೇಗೆ ಉತ್ಪತ್ತಿಯಾಗಬಹುದೆಂಬುದೇ ನನ್ನ ಬುದ್ಧಿಗೆ ಹೊಳೆಯುತ್ತಿಲ್ಲ ಮೂರ್ತಿ.

ಅದು ಈಗ ಸಾಮಾನ್ಯರಿಗೆ ಅರ್ಥವಾಗುವುದಿಲ್ಲ ಮಾವ; ನಮ್ಮ ಉದ್ದೇಶ್ಯ ಪ್ರಕೃತಿದತ್ತವಾದ ಜೋಗು ಜಲಪಾತಕ್ಕೆ ಯಾವ ಕುಂದೂ ಆಗಬಾರದು ಮತ್ತು ಅದರ ಅದ್ಭುತಶಕ್ತಿ ವ್ಯರ್ಥವಾಗಬಾರದು ಈಗನೋಡಿ ಜಲಪಾತದ ಸೊಬಗನ್ನೂ ಹೆಚ್ಚಿಸಿ ಅಂತೆಯೇ ಜಲಧಾರೆಯ ಗರ್ಭದಲ್ಲಿ ಅಡಗಿರುವ ಶಕ್ತಿಯನ್ನು ಸಂಗ್ರಹಿಸಲು ಉತ್ತಮ ಯೋಜನೆಯನ್ನು ರಚಿಸಲಾಗಿದೆ.

ಈ ಲಿಂಗನಮಕ್ಕಿ ಅಣೆಕಟ್ಟಿನ ಜಲಾಶಯದಿಂದ ಜಲಧಾರೆ ಮಲಾಳಿ ಸುರಂಗದ ಮೂಲಕ ತಲಕಳಲೆ ಜಲಾಶಯಕ್ಕೆ ಹರಿದು ಹೋಗುತ್ತದೆ. ಅಲ್ಲಿಂದ ಹತ್ತು ಭಾರಿ ಕೊಳವೆಗಳ ಮೂಲಕ ನೀರು ನುಗ್ಗುತ್ತಾ ಆನೆಬೈಲು ವಿದ್ಯುತ್ ಕೇಂದ್ರಕ್ಕೆ ಹೋಗುತ್ತದೆ. ಅದೇ ಈ ಪ್ರಾಜೆಕ್ಟಿನ ಮುಖ್ಯ ವಿದ್ಯುತ್ ಉತ್ಪಾದನಾ ಕೇಂದ್ರ.

ಆ ನೆಲ್ಲೈಲು ತಲಕಳಲೆ ಜಲಾಶಯಕ್ಕೆ ೧೫೦೦ ಅಡಿಗಳ ಕೆಳಮಟ್ಟದಲ್ಲಿದೆ. ಜಲಾಶಯದಿಂದ ವೇಗವಾಗಿ ಕೆಳಗುರುಳುವ ನೀರು ಗಂಟೆಗೆ ೩೦೦ ಕಿಲೋಮೀಟರ್ ರಭಸದಿಂದ ಘರ್ಜಿಸುತ್ತಾ ಭಾರಿ ಟರ್ಬೈನುಗಳನ್ನು ತಿರುಗಿಸುವಾಗ ನೀರಿನ ಶಕ್ತಿ ವಿದ್ಯುಚ್ಛಕ್ತಿಯಾಗಿ ಮಾರ್ಪಟ್ಟು ವಿದ್ಯುದ್ವಾಹಕ ತಂತಿಗಳ ಮೂಲಕ ಶೇಖರಿಸಲ್ಪಡುತ್ತದೆ.

ಮುಂದೆ ಅದರ ಉಪಯೋಗ ಅಪಾರ ಮಾವ! ಆದರೆ ಈ ಎಲ್ಲಾ ಕಾರ್ಯನಿರ್ಮಾಣಕ್ಕೂ ಕಾಲಾವಕಾಶಬೇಕು, ಎಂದು ಯೋಜನೆಯ ಉದ್ದೇಶ್ಯವನ್ನು ವಿವರಿಸಿದರು ಮೂರ್ತಿ.

ಎಲ್ಲವನ್ನೂ ಗಮನಿಸಿ ಕೇಳುತ್ತಿದ್ದ ಶೇಷಣ್ಣನವರು ಆಶ್ಚರ್ಯದಿಂದ ಅಬ್ಬಾ!.... ಈ ಯೋಜನೆಯು ಕಾರ್ಯಗತವಾದರೆ ಮುಂದಿನ ಪೀಳಿಗೆಯವರು ಇದರ ಲಾಭವನ್ನು ಅನುಭವಿಸುತ್ತಾರೆ. ದುಡಿಯುವವರೊಬ್ಬರಾದರೆ, ಸುಖ ಪಡುವವರು ಮತ್ತೊಬ್ಬರು, ಎಂದರು ಶೇಷಣ್ಣನವರು.

ಹೌದು ಮಾವ! ರೈಲು, ವಿಮಾನ, ರೇಡಿಯೋ ಮೊದಲಾದ ಅನೇಕ ಯಂತ್ರಗಳನ್ನು ಕಂಡುಹಿಡಿದ ವಿಜ್ಞಾನಿಗಳು ಅದಕ್ಕಾಗಿ ಹಗಲಿರುಳು ದುಡಿದರು ಆದರೆ ಅವುಗಳ ಸೌಲಭ್ಯಗಳನ್ನು ಇಂದು ನಾವು ಅನುಭವಿಸುತ್ತಿದ್ದೇವೆ. ಅವರಿಗೆ ನಾವು ಚಿರಋಣಿಗಳು ಅಷ್ಟೇ....

ಹೀಗೆ ಇಬ್ಬರೂ ಅನೇಕ ವಿಚಾರಗಳನ್ನು ಮಾತನಾಡುತ್ತಾ ಆ ಪ್ರದೇಶದಲ್ಲೆಲ್ಲಾ ಸುತ್ತಾಡಿಕೊಂಡು ಸುತ್ತ ಮುತ್ತಲಿನ ವನಶ್ರೀಯ ಸೊಬಗನ್ನು ನೋಡಿ ಆನಂದದ ಕಡಲಿನಲ್ಲಿ ಮುಳುಗಿದ್ದರು.

ಇವರುಗಳು ಮಾತನಾಡುತ್ತಿದ್ದಂತೆಯೇ ವಿಶೂ-ವೀಣಾ ಇಬ್ಬರೂ ಆ ಗಿಡ ಗೆಂಟೆಗಳ ಹಚ್ಚ–ಹಸುರಿನ ಸೊಬಗನ್ನು ನೋಡಿ ಮೈಮರೆದು ಕುಣಿದಾಡಿದರು.

ಅಪ್ಪಾ! ನಾವಿಲ್ಲೇ ಒಂದು ಚೂರು ತಿರುಗಾಡಿಕೊಂಡು ಬರ್ತೀವಿ ಅಂದ ವಿಶೂ.

ಜೋಪಾನ ವಿಶೂ: ವೀಣಾಗೆ ಇಂತಹ ಕಾಡಿನ ಮಧ್ಯೆ ಓಡಾಡಿ ಅಭ್ಯಾಸವಿಲ್ಲ. ಕೈ ಹಿಡಿದು ಕರೆದುಕೊಂಡು ಹೋಗು ಎಂದು ಎಚ್ಚರಿಕೆ ಹೇಳಿದರು ದೇವಕಿ. "ನಾನೆಲ್ಲು ಬರೋಲ್ಲ, ಇಲ್ಲೇ ಕೂತಿರ್ತಿನಿ ನೀವು ಹೋಗಿಬನ್ರೋ" ಎಂದು

ಹೇಳುತ್ತಾ ಅಲ್ಲಿಯೇ ಹುಲ್ಲಿನಮೇಲೆ ಕುಳಿತುಬಿಟ್ಟಳು.

ಬಾರೆ ವೀಣಾ ! ಹಾಗೆ ಅಲ್ಲೆಲ್ಲಾ ಸುತ್ತಾಡಿ ಬರೋಣ ಎಂದ ವಿಶೂ. ವೀಣಾಗೆ ಕೂಡಾ ತುಂಬಾ ಇಷ್ಟ ಕುಣಿದು ಕುಪ್ಪಳಿಸುತ್ತಾ ಅವನ ಜೊತೆ ಹೋದಳು.

ವೀಣಾಳ ಕೈಹಿಡಿದು ಅವಳನ್ನೂ ಎಳೆದುಕೊಂಡೇ ಓಡಿದ. ಲೋ ವಿಶೂ, ಹೀಗೆ ನೀನು ಓಡಿದರೆ ಈ ಗಿಡಗಳ ಸಂದಿ-ಗೊಂದಿಯಲ್ಲಿ ನನಗೆ ನಡೆಯೋಕೇ ಆಗೋಲ್ಲಾಪ್ಪ. ಇನ್ನು ಓಡೋದು ಹೇಗೆ ? ಅಂದಳು.

ನೀನೆಲ್ಲಿ ಓಡುತ್ತಾ ಇದ್ದೀ ? ನಾನೇ ನಿನ್ನನ್ನು ಎಳೆದುಕೊಂಡು ಹೋಗ್ತಿದ್ದೀನಲ್ಲೇ...

ತಾಳೋ ! ... ಆ ಗಿಡಕ್ಕೆ ನನ್ನ ದಾವಣಿ ಸಿಕ್ಕಿಕೊಂಡಿದೆ ಕೈ ಬಿಡೋ.... ಎಂದು ಕಿರುಚಿದಳು ವೀಣಾ.

ವಿಶೂ ಹಿಂತಿರುಗಿ ನೋಡಿದ ವೀಣಾ ಜುಬ್ಬಾಮೇಲೆ ಎದೆ ಮಾತ್ರ ಮುಚ್ಚುವಂತೆ ವಿ ಆಕಾರವಲ್ಲಿ ಹಾಕಿ ಬೆನ್ನಿನ ಹಿಂದಕ್ಕೆ ಬಿಟ್ಟಿದ್ದ ಅವಳ ನೈಲಾನ್ ದಾವಣಿ ಹಿಂದೆ ಒಂದು ಗಿಡದ ಮೇಲೆ ಸಿಕ್ಕಿಕೊಂಡು ಹಾರಾಡುತ್ತಿದೆ. ವೀಣಾಳ ಮೈಮೇಲೆ ಜುಬ್ಬ ಒಂದೇ ಮೈಗೆ ಅಂಟಿದಂತಿದೆ.

ಕೈ ಹಿಡಿದಿದ್ದಂತೆಯೇ ಅವಳನ್ನು ಕಣ್ಣರಳಿಸಿ ನೋಡಿದ ವಿಶೂ. ಅವಳ ಯೌವ್ವನದ ಅಂಗ ಸೌಷ್ಟವ ಅವನ ಮನಸ್ಸಿಗೆ ಮೋಡಿಹಾಕಿತು. ವೀಣಾ ಬಹಳ ಸುಂದರಿಯಾಗಿ ಕಂಡಳು.

ಒಂದೇಸಮ ಎವೆಯಿಕ್ಕದೆ ತನ್ನನ್ನು ವಿಶೂ ನೋಡುತ್ತಿರುವುದನ್ನು ಕಂಡು ನಾಚಿ ವೀಣಾ ಅವನ ಕಡೆ ಬೆನ್ನುಮಾಡಿ ದಾವಣಿ ತರಲು ಓಡಿದಳು. ವಿಶೂನೂ ಅವಳ ಹಿಂದೆಯೇ ಬಂದ. ಮುಂದೆ ಒಂದು ಹಳ್ಳಕ್ಕೆ ಕಾಲಿಟ್ಟು ಮುಗ್ಗರಿಸಿದಳು ವೀಣಾ.

ಹಿಂದಿನಿಂದ ಚಟ್ಟನೆ ಹಾರಿ ಬಂದು ಕೈ ಆಸರೆಕೊಟ್ಟು ತಬ್ಬಿ ಹಿಡಿದ ವೀಣಾಳನ್ನು.

ಜಂಭ ಮಾಡ್ಕೊಂಡು ಓಡಿದ್ಯಲ್ಲಾ ನೋಡಿದ್ಯೋ ಹೇಗಾಯ್ತು ? ಎಂದು ಹಂಗಿಸಿದ.

ಹೋಗೋ !.. ನೀನ್ಯಾರು ಬಂದು ಹಿಡಿದುಕೋ ಅಂದವರು ಬಿಡು ಕೈ ಎಂದು ಕೊಸರಿದಳು.

ನನ್ನ ಮುದ್ದು ಗಿಣಿಯೇ ನಿನ್ನ ಕೈ ಬಿಡೋಕಲ್ಲ ಕಣೇ ಹಿಡಿದಿರೋದು ; ಎಂದು ಅವಳ ಕೈ ಹಿಡಿದೇ ಮುಂದೆ ನಡೆದು ಗಿಡದ ಮೇಲಿದ್ದ ದಾವಣಿಯನ್ನು ತೆಗೆದು ಅವಳಿಗೆ ಕೊಟ್ಟ.

ವಿಶೂ ತನಗಾಗಿ ಏನುಬೇಕಾದರೂ ಮಾಡುತ್ತಾನೆ ಎಂದು ವೀಣಾಳಿಗೆ ಗೊತ್ತು. ತಾನು ಬಂದ ಒಂದು ತಿಂಗಳಿಂದಲೂ, ಅರಗಳಿಗೆ ತನ್ನನ್ನು ಬಿಟ್ಟಿರ ಲಾರದೆ ಹೋದ ಕಡೆಗೆಲ್ಲಾ ಜೊತೆ ಜೊತೆಯಲ್ಲಿ ಬರುತಿದ್ದ.

ವೀಣಾಳಿಗೂ ಅವನ ಮೇಲೆ ತನಗರಿವಿಲ್ಲದಂತೆಯೇ ಪ್ರೇಮಕೊಂಡಿ ಬೆಸೆಯುತ್ತಾ ಬಂದಿತ್ತು.

ಬಾ ವೀಣಾ ! ಆ ನೀರು ಧುಮುಕುವ ಬಳಿ ಇಬ್ಬರೂ ಸ್ವಲ್ಪಹೊತ್ತು ಕುಳಿತಿದ್ದು ಹೋಗೋಣ ಎಂದ ವಿಶೂ ..

ವೀಣಾ ಮರು ಮಾತಾಡದೆ ಅವನ ಜೊತೆಯಲ್ಲಿ ಹೋದಳು. ಬಂಡೆಗಳ ಮೇಲಿಂದ ಬುಳ-ಬುಳನೆ ಬೀಳುತ್ತಿದ್ದ ಆ ಸಣ್ಣ ಜಲಪಾತವು ಕೆಳಗೆ ಅಗಾಧ ನೀರಿನೊಂದಿಗೆ ಬೆರೆತು ನೀರಿನಲ್ಲಿ ನೀರು ಲೀನವಾಗುತ್ತಿದ್ದ ದೃಶ್ಯ ಮನ ಮೋಹಕ ವಾಗಿತ್ತು.

ಅಗಲವಾದ ಒಂದು ಬಂಡೆಯಮೇಲೆ ವಿಶೂ ಕಾಲುಚಾಚಿ ಕುಳಿತು ವೀಣಾಳನ್ನು ಕೈಹಿಡಿದು ಪಕ್ಕದಲ್ಲಿ ಕುಳ್ಳಿರಿಸಿಕೊಂಡ.

ವೀಣಾ ಈ ಜಾಗ ಚೆನ್ನಾಗಿಲ್ವಾ ? ಅಂದ.

ಇಲ್ಲಿಂದ ಹೋಗೋಕೇ ಮನಸ್ಸು ಬರೋಲ್ಲ ಕಣೋ....

ಇನ್ನೇನು ನಾಳೆ ನೀನು ಊರಿಗೆ ಹೋಗೋವ್ರು. ನಿನ್ನ ಸಂಗ ಟೂ.... ಟೂ ಟೂ.... ಹೋಗು ದೂರ ಎಂದು ಸ್ವಲ್ಪ ಸರಿದು ಕೂತ ವಿಶೂ.

ವಿಶೂ....ನಿಜವಾಗಿ ಹೇಳ್ತೀನಿ ನಿನ್ನ ಜೊತೆ ಬಿಟ್ಟು ಊರಿಗೆ ಹೊಗೋಕೆ ನನಗೆ ಇಷ್ಟಾನೇ ಇಲ್ಲ ಕಣೋ.. ಪಾಪ ! ನನ್ನ ಮಾತ್ರ ಹೇಳ್ತೀಯಲ್ಲಾ ! ನೀನೂ ಮಾವನ ಜೊತೆ ಕಾಶಿಗೆ ಹೊರಟಿದ್ದೀ .. ಇದೋ, ನಾನೂ ನಿನಗೆ ಟೂ... ಟೂ ಟೂ ... ಮಾಡ್ತೀನಿ .. ಎಂದು ಇನ್ನು ಸ್ವಲ್ಪ ದೂರ ಸರಿದಳು.

ಪೂನಾವಾಲೀನ ನಾನೆಲ್ಲೆ ಬಿಟ್ಟಿರ್ತೀನಿ ಇನ್ನೇನು ಸುಶೀ ಮದುವೆ, ೨ ತಿಂಗಳಿಗೆ ಆಗ ಬಂದೇ ಬರ್ತೀವಲ್ಲಾ, ಆಗ ನಿನ್ಕತ್ತಿಗೂ ಒಂದು ತಾಳಿ ನಾನು ಕಟ್ಟಿಬಿಡ್ತೀನಿ... ಅಷ್ಟೆ. ಎಂದು ಅವಳ ಕತ್ತಿನಸುತ್ತ ಕೈಬಳಸಿ ಹತ್ತಿರಕ್ಕೆ ಎಳೆದುಕೊಂಡ.

ಮುಗ್ಧ ವೀಣಾಗೆ ಯಾವ ಪ್ರೇಮ-ಪ್ರೀತಿ ಅನ್ನುವುದು ಅರ್ಥವಾಗ ದಿದ್ದರೂ ವಿಶೂವಿನ ಹುಡುಗಾಟವೆಲ್ಲಾ ಇಷ್ಟವಾಗುತ್ತಿತ್ತು. ಪೂನಾಗೆ ಹೋದ ಮೇಲೆ ನನ್ನನ್ನು ಮರೆತು ಬಿಡುತ್ತೀಯಾ ? ವೀಣಾ ? ಎಂದು ಅವಳ ಭುಜ ಹಿಡಿದು ಅಲುಗಿಸಿದ

ನೀನು ಕಾಶಿಗೆ ಹೋದಮೇಲೆ ನನ್ನ ಮರೆತು ಬಿಡ್ತೀಯೆನೋ ವಿಶೂ ? ಎಂದು ಮರು ಪ್ರಶ್ನೆ ಹಾಕಿದಳು.

ತಾಳು ಹಾಗಾದೆ ನಾನೊಂದು ಸಾಮಾನು ಕೊಡ್ತೀನಿ ಅದನ್ನು ನಿನ್ನ ಹತ್ತಿರವೇ ಇಟ್ಟುಕೊಂಡು ಜ್ಞಾಪಿಸಿಕೊಳ್ಳುತ್ತಿರಬೇಕು. ಅಂದು ವಿಶೂ ಎದ್ದು ಹೋಗಿ ಅಲ್ಲೆಲ್ಲಾ ಹುಡುಕಾಡಿ ತುಂಬಾ ನುಣುಪಾಗಿ ಬಿಳುಪಾಗಿದ್ದ ಒಂದು ಕಲ್ಲನ್ನು ಆರಿಸಿತಂದು ಅದನ್ನು ವೀಣಾ ಕೈಲಿ ಕೊಟ್ಟ

ನೋಡು ಇದನ್ನು ಜೋಪಾನವಾಗಿ ಇಟ್ಟುಕೊಂಡಿದ್ದರೆ ನಿನಗೆ ನನ್ನ ಜ್ಞಾಪಕ ಇದೆ ಎಂದು ಅರ್ಥ ಅಂದ.

ವೀಣಾ ಆ ನುಣುಪಾದ ಕಲ್ಲನ್ನು ತನ್ನ ಮೃದುವಾದ ಕೆನ್ನೆಯಮೇಲೆ ಸವರಿ, ನನಗೆ ಇದು ತುಂಬಾ ಇಷ್ಟವಾಯಿತು ವಿಶೂ ...ಅಂದಳು.

ನೋಡು ವೀಣಾ ! ಅದು ಕೆಲಸಕ್ಕೆ ಬೇಡದ ಕಲ್ಲಾದರೂ ನಾನು ಕೊಟ್ಟಿದ್ದು, ಜ್ಞಾಪಕವಿರಲಿ.

ನೋಡು ಬೇಕಾದ್ರೆ ನಾನು ಸಾಯೋವರ್ಗೂ ಅದನ್ನು ಜೋಪಾನವಾಗಿ ಇಟ್ಟಿರ್ತೀನಿ ಎಂದು ಅದನ್ನು ತನ್ನ ಜುಬ್ಬ ಜೇಬಿನಲ್ಲಿ ಜೋಪಾನವಾಗಿಟ್ಟಳು. ಜ್ಞಾಪಿಸಿಕೊಂಡವಳಂತೆ ತಾಳು....ತಾಳು ನಾನೂ ನಿನಗೆ ಏನಾದರೊಂದು ಕೊಡ್ತೀನಿ. ಎಂದವಳೇ ಎಲ್ಲಾ ತಡಕಾಡಿ ಕಡೆಗೆ ತನ್ನ ಕತ್ತಿನಲ್ಲಿ ಒಂದು ವಿಧವಾದ ಹೊಳಪಿನ ಕಲ್ಲು ಮಣಿಸರ ಒಂದಿತ್ತು. ಅದನ್ನೇ ತೆಗೆದ ವಿಶೂ ಕುತ್ತಿಗೆಗೆ ಹಾಕಿ "ಇದು ನಿನಗೆ ತುಂಬಾ ಚೆನ್ನಾಗಿ ಒಪ್ಪುತ್ತೆ ಕಣೋ ! ಇದನ್ನು

ಯಾವಾಗಲೂ ನಿನ್ನ ಕುತ್ತಿಗೆಯಿಂದ ತೆಗೀಕೂಡದು ಗೊತ್ತಾ ? ಎಂದು ಆ ಸರವನ್ನು ಮುಟ್ಟಿ ಮುಟ್ಟಿ ನೋಡಿದಳು.

ಹೀಗೆಯೇ ಇಬ್ಬರೂ ಇನ್ನೂ ಎಷ್ಟು ಹೊತ್ತು ಮಾತನಾಡುತ್ತಾ ಕುಳಿತಿರುತ್ತಿದ್ದರೋ ?.. .... ಮೂರ್ತಿಯವರು ವಿಶೂ.....ವೀಣಾ....... ಎಲ್ಲೋ ಹೊರಟೋದ್ರಿ ? ಬನ್ನಿ ಹೋಗೋಣ ಎಂದು ಗಟ್ಟಿಯಾಗಿ ಕೂಗು ಹಾಕಿದರು.

ಅಯ್ಯೋ....ಏಳೋ ಹೋಗೋಣ ಎಷ್ಟು ಹೊತ್ತಾಯಿತು ನಾವು ಬಂದು ಎಂದು ಎದ್ದು ನಿಂತಳು ವೀಣಾ. ವೀಣಾಳ ಸಾಮೀಪ್ಯ ವಿಶೂಗೆ ಏನೋ ಒಂದು ವಿಧವಾದ ಮಾದಕವನ್ನುಂಟು ಮಾಡಿತ್ತು. ಪ್ರಪಂಚವನ್ನೇ ಮರೆತು ಅವಳ ಮುಗ್ಧ ಮುಖವನ್ನು ನೋಡುತ್ತಾ ಕುಳಿತಿದ್ದ. ಅವನಿಗೆ ಏನೋ ನೆಮ್ಮದಿ, ಏನೋ ಒಂದು ಆಸರೆ ತನಗೆ ಸಿಕ್ಕಿದಂತೆ ಹಿಗ್ಗು, ತಾಯಿಯ ಪ್ರೇಮದಿಂದ ವಂಚಿತನಾಗಿ ಬಾಳಲ್ಲಿ ಬೇಸರಗೊಂಡಿದ್ದ ಅವನಿಗೆ ವೀಣಾ ; ಜೀವನದ ಜ್ಯೋತಿಯಾಗಿ ಕಂಡಳು.

ಮನಸ್ಸಿಲ್ಲದ ಮನಸ್ಸಿನಿಂದ ಎದ್ದು ವೀಣಾಳ ಕೈಹಿಡಿದು "ನಡೀ ಹೋಗೋಣ" ಎಂದು ಹೊರಟ.

ಈ ಟ್ರಿಪ್ ಮುಗಿಸಿಕೊಂಡು ಎಲ್ಲರೂ ಶಿವಮೊಗಕ್ಕೆ ವಾಪಸ್ ಬಂದರು. ಮಾರನೆಯ ದಿನವೇ ಶೇಷಣ್ಣನವರು ಕಾಶಿಗೆ ಹೊರಟರು. ಅವರ ಜೊತೆಯಲ್ಲಿ ಲಕ್ಷಮ್ಮ, ಪಾರ್ವತಮ್ಮ, ವಿಶೂ, ಮೂವರೂ ಹೊರಟರು.

ಹೊರಡುವ ಸಮಯದಲ್ಲಿ ಮಗನಿಗೆ ಬುದ್ಧಿವಾದ ಹೇಳುವುದನ್ನು ಮರೆಯಲಿಲ್ಲ ಮೂರ್ತಿಯವರು. "ಆದಷ್ಟು ಅಲ್ಲಿಯ ಕೈಗಾರಿಕೆಯನ್ನು ಕಲಿತು ಬಾ ನಿನಗೆ ಅದೇ ಉದ್ಯೋಗ" ಎಂದು ಹೇಳಿದರು.

ಅವರೆಲ್ಲಾ ಹೊರಟು ನಿಂತಾಗ ತುಂಬಾ ದುಃಖವಾಯಿತೆಂದರೆ ಸುಶೀಗೆ ವಿಶೂವನ್ನು ಬಿಟ್ಟಿರುವುದೆಂದರೆ ಅವಳಿಗೆ ತುಂಬಾ ಕಷ್ಟ.

ಅಲ್ಲಾ ಕಣೋ ವಿಶೂ... .ಅಜ್ಜೀನೂ ಹೊರಟಿದ್ದಾರೆ ಇದೇ ಸಮಯದಲ್ಲಿ ನೀನೂ ಹೋಗಬೇಕೇನೋ ? ಈ ಮನೇಗೆಲ್ಲಾ ಅಮ್ಮ-ನಾನು ಇಬ್ಬರೇ : ಹೇಗೋ ಇರೋದು ?..... ಇಷ್ಟು ಹೇಳುವ ಹೊತ್ತಿಗೆ ಗಂಟಲು ಬಿಗಿಯಿತು. ದುಃಖ ಒತ್ತರಿಸಿ ಬಂತು. ಕಣ್ಣಿನಲ್ಲಿ ನೀರು ಸುರಿಸುತ್ತಾ ಒಳಕ್ಕೆ ಹೊರಟು ಹೋದಳು.

ಅವಳ ಹಿಂದೆಯೇ ಹೋಗಿ ವಿಶೂ ಸಮಾಧಾನ ಮಾಡಿದ. ಇನ್ನು ಎರಡೇ ತಿಂಗಳು ಕಣೇ ಬಂದು ಬಿಡ್ತೀನಿ. ನೀನು ಮದುವೆ ಹುಡುಗಿ ಖುಷಿಯಾಗಿರು, ಸುಶೀ... ಅಂದ.

ಸುಶೀ ದುಃಖ ಉಕ್ಕುತಲೇ ಇತ್ತು.

ಹೋಗಲಿ ನಿನಗೆ ಇಷ್ಟವಿಲ್ಲದಿದ್ದರೆ ನಾನು ಹೋಗುವುದಿಲ್ಲ ಬಿಡು..... ಸುಶೀ...ನೀನು ಮಾತ್ರ ಅಳಬೇಡ ಅಂದು ಸುಶೀಲಳ ಕೈಹಿಡಿದು ಕೇಳಿದ ವಿಶೂ.

ಇಲ್ಲ ವಿಶೂ ! ನಾನು ಅಳೋಲ್ಲ ಹೋಗಪ್ಪ ಕಾಶಿ ನೋಡಿಕೊಂಡು ಬಾ....ಎಲ್ಲಾ ಒಟ್ಟಿಗೆ ಹೊರಟು ಬಿಟ್ಟರಲ್ಲಾ ! ಎಂದು ದುಃಖವಾಯಿತು ಅಷ್ಟೆ ಎಂದು ಸಮಾಧಾನ ತಂದುಕೊಂಡಳು ಸುಶೀ.

ಕಾರು ಹತ್ತಿ ಎಲ್ಲರೂ ಕುಳಿತರು ಸ್ಟೇಷನ್ನಿಗೆ ಬಿಟ್ಟುಬರಲು ಮೂರ್ತಿಯೆ ಕಾರು ಡ್ರೈವ್ ಮಾಡಲು ಕುಳಿತರು.

ವೀಣಾ ವಿಶೂವನ್ನು ಬೀಳ್ಕೊಡಲು ಕಾರಿನ ಹತ್ತಿರ ಬಂದು ಟಾ.. ಟಾ.. ಮಾಡಿದಳು. ವಿಶೂ ಕತ್ತಿನ ಮಣಿ ಸರವನ್ನು ಎತ್ತಿ ಅವಳಿಗೆ ತೋರಿಸಿದ. ಕೂಡಲೇ ವೀಣಾ ಜೋಬಿನಲ್ಲಿದ್ದ ನುಣುಪು ಕಲ್ಲನ್ನು ತೆಗೆದು ಅವನಿಗೆ ತೋರಿಸಿದಳು. ಕಾರು ಹೊರಟಿತು.

ಮರುದಿನವೇ ದೇವಕಿ, ವೀಣಾ ಅವರುಗಳೂ ಕೂಡಾ ಪೂನಾಕ್ಕೆ ಹೊರಟರು.

ಈಗ ಮನೆಯಲ್ಲಿ ಸುಶೀ ಒಬ್ಬಳೇ ತುಂಬಾ ಬೇಸರ, ಕೂತರೆ ನಿಂತರೆ ಚಿಂತೆ ಅವಳನ್ನು ಕಾಡುತ್ತಿತ್ತು.

## ಅಧ್ಯಾಯ

ಮಳೆಗಾಲ ಹತ್ತಿರವಾಗುತ್ತಾ ಬಂತು ಮಲೆನಾಡಿನ ಕಡೆ ಮಳೆಯೆಂದರೆ ನಾಲ್ಕು ತಿಂಗಳು ಬಿಡುವಿಲ್ಲದೆ ಆಕಾಶ-ಭೂಮಿ ಒಂದಾಗುವಂತೆ, ಜಿರೋ.... ಎಂದು ಸುರಿಯುತ್ತದೆ. ಸೂರ್ಯರಶ್ಮಿಯನ್ನು ಕಾಣುವುದೇ ಕಷ್ಟ. ಮಳೆ ಪ್ರಾರಂಭವಾಗುವ ವೇಳೆಗೆ ಸರ್ವೆಕಾರ್ಯವನ್ನು ಪೂರೈಸಿಬಿಡಬೇಕೆಂದು ಸರ್ಕಾರದ ಆಜ್ಞೆಯಾಗಿತ್ತು ನಟರಾಜನಿಗೆ.

ಹೆಚ್ಚು ಕೆಲಸಗಾರರನ್ನು ಉಪಯೋಗಿಸಿಕೊಂಡು ತ್ವರೆಯಿಂದ ಕೆಲಸ ಮಾಡಿಸತೊಡಗಿದ. ಕೆಲಸದ ಜಂಜಾಟದಲ್ಲಿ ಊಟ-ನಿದ್ದೆಯನ್ನು ಗಮನಿಸಲೂ ಅವನಿಗೆ ಪುರಸತ್ತಿರಲಿಲ್ಲ. ಬೆಳಗಿನ ಜಾವ ಎದ್ದು ಆಳುಗಳ ಸಮೇತ ಕೆಲಸದ ಜಾಗಕ್ಕೆ ಹೋದನೆಂದರೆ ಸಂಜೆ ಕತ್ತಲಾಗುವ ವೇಳೆಗೆ ಡೇರಕ್ಕೆ ಹಿಂತಿರುಗುತ್ತಿದ್ದ.

ಅವನಿಗೆ ದಿನ ಕಳೆದದ್ದೇ ತಿಳಿಯಲಿಲ್ಲ. ಊರಿಂದ ಬಂದು ೧೦-೧೫ ದಿನ ಕಳೆದು ಹೋಯಿತು.

ಲಕ್ಕಿಯ ಸುಳಿವೇ ಇಲ್ಲ, ಕೆಲಸದ ಕಡೆ ಊಟವನ್ನೂ ಅವಳು ತರಲಿಲ್ಲ. ಸೋಮನಾಯಕನ ಮಕ್ಕಳೇ ತರುತ್ತಿದ್ದರು.

ಲಕ್ಕಿಯನ್ನು ಕಾಣದ ನಟರಾಜನ ಮನಸ್ಸು ತಳ ಮಳಿಸಿತು. “ಅವಳೇಕೆ ಬರಲಿಲ್ಲ ? ಮನೆಯವರೇನಾದರೂ ಅವಳಿಗೆ ಅಡ್ಡಿ ಮಾಡಿರುವರೇ ?” ಅಥವಾ ನನ್ನ ಮೇಲೆ ಅಸಮಾಧಾನವೇ ? ಇಲ್ಲ ಬೇರೆ ಎಲ್ಲಿಗಾದರೂ ಹೊರಟು ಹೋದಳೆ? ಹೀಗೆ ಏನೇನೋ ಯೋಚಿಸಿದ ನಟರಾಜ. ಅವನಿಗೆ ಊಟ ನಿದ್ದೆ ಒಂದೂ ಬೇಕಾಗಿಲ್ಲ.

ಬಿಸಿಲು ಗಾಳಿ ಎನ್ನದೆ ಸದಾ ಹೊರಗಡೆ ಕೆಲಸದಲ್ಲಿ ತೊಡಗಿರುತ್ತಿದ್ದ. ಆದಿನ ಕೆಲಸದಿಂದ ಬಂದವನು ತುಂಬಾ ಆಯಾಸದಿಂದ ಮಲಗಿದ್ದ. ರಾತ್ರಿ ಯೆಲ್ಲಾ ಮೈ ಕೈ ನೋವು. ವಿಪರೀತ ತಲೆಸಿಡಿತ, ನರಳುತ್ತಾ ನಿದ್ದೆಯಿಲ್ಲದೆ ಹಾಸಿಗೆಯ ಮೇಲೆ ಹೊರಳಾಡುತ್ತಾ ಮಲಗಿದ್ದ. ಬೆಳಗಾಗುವ ವೇಳೆಗೆ ವಿಪರೀತ ಜ್ವರ ಬಂದು ಬಿಟ್ಟಿತ್ತು.

ಕೆಲಸದ ಆಳು ರಾಮಯ್ಯ ಬಂದು ನೋಡಿ ಯಾಕೆ ದಣಿಯೋರಾ? ಮುಲುಕಾಡುತ್ತೀರಿ ? ಮೈ ಹುಸಾರಿಲ್ಲವಾ? ಎಂದು ಕೇಳಿದ.

ಇಲ್ಲ ರಾಮಯ್ಯ ಏಕೋ ಜ್ವರ ಬಂದುಬಿಟ್ಟಿದೆ, ಏಳುವುದಕ್ಕೇ ಆಗುವುದಿಲ್ಲ, ಅಂದ ನಟರಾಜ.

ಇದು ಮಲೇರಿಯಾ ಜರ ಸಾಮಿ. “ಮೊದಲು ಔಷಧಿ ತೆಗೆದುಕೊಳ್ಳಿ” ಎಂದು ಅಲ್ಲಿಯೇ ಟೇಬಲ್ ಮೇಲೆ ಇಟ್ಟಿದ್ದ ಮಲೇರಿಯಾ ಪಿಲ್ಸಿನ ಗುಳಿಗೆಯನ್ನು ಶೀಶೆಯಿಂದ ತೆಗೆದು ನಟರಾಜನ ಕೈಗೆ ಕೊಟ್ಟು ಫ್ಲಾಸ್ಕಿನಲ್ಲಿದ್ದ ಬಿಸಿ ನೀರನ್ನು ಲೋಟಕ್ಕೆ ಬಗ್ಗಿಸಿಕೊಳ್ಳಿ ಬುದ್ಧೀ ಮೊದಲು ಪಿಲ್ಸು ನುಂಗಿಬಿಡಿ ಅಂದ.

ಅಯ್ಯೋ ! ರಾಮಯ್ಯ ಎದ್ದು ಮುಖ ತೋಳಿ ಬೇಕಲ್ಲಪ್ಪಾ ; ಅಂದ ನಟರಾಜ.

ಆವೆಲ್ಲಾ ಆಮೇಲೆ ಕಣ್‌ಬುದ್ಧೀ ಮೊದಲು ಔಷಧಿ ಕುಡಿಯಿರಿ, ಎಂದು ಬಲವಂತಮಾಡಿ ಆ ಪಿಲ್ಸ್ ನುಂಗಿಸಿದ. ಈಗ ಸುಮ್ಕೆ ಮಲೀಕೊಳ್ಳಿ ಬುದ್ಧಿ ವಾಮನಭಟ್ಟರು ಬಂದ ಮ್ಯಾಲೆ ಬಿಸಿ ಕಾಫಿ ಮಾಡಿ ಕೊಡ್ತಾರೆ ಅಂದ.

ರಾಮಯ್ಯ ! ಆ ವಾಮನಭಟ್ಟ ಯಾವ ಕಾಲಕ್ಕೋ ಬರ್ತಾನೆ. ಅದಿರಲಿ, ನೀನು ಸ್ವಲ್ಪ ಈವತ್ತು ಕೆಲಸದ ಕಡೆ ನಿಗಾ ಕೊಡಬೇಕಪ್ಪಾ ; ಆ ಮೇಸ್ತ್ರಿ ಮಂಜುನಾಥಪ್ಪನಿಗೆ ಹೇಳು ಇವತ್ತು "ಬೀಟಿಮರದ ತೋಪು ಪೂರ್ತಿ ಸರ್ವೆ ಮಾಡಬೇಕಂತೆ" ಅಂತ, ಆಮೇಲೆ ನೆನ್ನೆ ಕಡಿದಿದ್ದ ಮರಗಳನ್ನು ತುಂಡು ಹಾಕಿ ಲಾರಿಗೆ ತುಂಬಿಸಬೇಕಂತೆ ಅಂತ ಹೇಳು ಅಂದ.

ನಾನು ಹೊರಟು ಹೋದರೆ ಇಲ್ಲಿ ನೀವು ಒಬ್ಬರೇ ಮನಗಿರುತ್ತೀರಾ ಬುದ್ಧೀ ? ಭಟ್ಟರು ಬಂದ ಮ್ಯಾಲೆ ಹೋಗ್ತೀನಿ ಬಿಡಿ, ಅಂದ ರಾಮಯ್ಯ.

ಬೇಡ-ಬೇಡ, ನೀನು ಆಳುಗಳೊಂದಿಗೆ ಹೋಗಪ್ಪಾ ! ನಿಗಾ ಮಾಡಿ ಕೊಂಡು ಬೇಗ ಕೆಲಸ ಮಾಡಿಸು. ಹಾಗೇ ಸೋಮನಾಯಕನ ಮನೆಗೆ ಹೋಗಿ ಬೇಗ ಹಾಲು ಕಳುಹಿಸುವಂತೆ ಹೇಳು ಎಂದು ಹೇಳಿ ಸುಸ್ತಾಗಿ ಕಣ್ಮುಚ್ಚಿ ಮಲಗಿದ ನಟರಾಜ.

ರಾಮಯ್ಯನಿಗೆ ಯೋಚನೆಗಿಟ್ಟುಕೊಂಡಿತು ಇಲ್ಲಿ ಯಾರೂ ಇಲ್ಲದಿದ್ದರೆ ಗತಿಯೇನು ? ಎಂದುಕೊಂಡು ಸೋಮನಾಯಕನ ಮನೆಗೆ ಹೋಗಿ ಮನೆಯವ ರೊಂದಿಗೆ ವಿಷಯ ತಿಳಿಸಿ ನಿಮ್ಮ ಮನೆಯವರು ಯಾರಾದರೂ ಒಬ್ಬರು ಹೋಗಿ ನೋಡಿಕೊಳ್ಳಿ ದಣಿಯೋರಿಗೆ ತುಂಬಾ ಜ್ವರ ! ಎಂದ.

ಈ ಮಾತು ಕೇಳಿಸಿ ಕೊಂಡ ಲಕ್ಕಿಗೆ ತುಂಬಾ ಗಾಬರಿಯಾಯಿತು. ಏನು ರಾಮಯ್ಯ ದಣಿಯೋರು ಮಲಗಿ ಬಿಟ್ಟವ್ರಾ ? ಎಂದಳು.

ಹೂಂ ಕಣವ್ವ, ತಾಯಿ ಹೋಗಿ ನೀನೇ ರವಷ್ಟು ನಿಗಾ ನೋಡಿಕೊ ಭಟ್ಟರು ಬಂದು ಬಿಡುತ್ತಾರೆ ಎಂದು ಹೇಳಿ ಹೊರಟು ಹೋದ ರಾಮಯ್ಯ.

ಲಕ್ಕಿಯ ಜೀವ ತಳ ಮಳಿಸಿತು. ಇನ್ನು ಒಂದು ಗಳಿಗೆಯೂ ಮನೆಯಲ್ಲಿ ನಿಲ್ಲಲಾರದಾದಳು, "ಅತ್ತೇ ಹಾಲು ಕೊಡು ನಾನೇ ತೆಗೆದುಕೊಂಡು ಹೋಗಿ ನೋಡಿಕೊಂಡು ಬರ್ತೀನಿ" ಎಂದಳು.

ಹೋಗವ್ವಾ ! ಇಂಥಾ ಸಮಯದಾಗೆ ನಾವು ಮಾಡಬೇಕು. ಅಲ್ಲಿಯೇ ಇದ್ದು ಅವರು ಹೇಳಿದ ಕೆಲಸ ಮಾಡಿಕೊಡು. ಜಾಸ್ತಿ ಕುಡಿಸು, ದೇವರಂಥಾ ದಣಿಗಳು, ಪಾಪ ! ಮಲಗಿಬಿಟ್ಟವ್ರೆ" ಎಂದು ಒಂದೇ ಸಮ, ಪರದಾಡಿ ಬಿಟ್ಟಳು ಸೋಮನಾಯಕನ ಹೆಂಡತಿ.

ಲಕ್ಕಿ ಹಾಲು ತಂದಾಗ ನಟರಾಜ ಕಣ್ಮುಚ್ಚಿ ಮಲಗಿದ್ದ. ಜ್ವರದ ಕಾವಿಗೆ ಮುಖ ಕೆಂಡಾವರೆಯಂತಾಗಿತ್ತು. ಜ್ವರದ ತಾಪಕ್ಕೆ ಬಾಯಲ್ಲಿ ಏನೇನೋ ಹೇಳಿಕೊಳ್ಳುತ್ತಿದ್ದ.

ಲಕ್ಕಿ ಹಾಲಿನ ಚೊಂಬನ್ನು ಟೇಬಲ್ ಮೇಲೆ ಇಟ್ಟು ಮಂಚದ ಹತ್ತಿರ ನಿಂತು ದಣಿಯೋರಾ ! ಮೆಲ್ಲನಂದಳು.

ನಟರಾಜ ಕಣ್ಣು ತೆರೆಯಲಿಲ್ಲ. ಅಯ್ಯೋ ! ಅಮ್ಮಾ ! ತಲೆ ಸಿಡಿತ, ಲಕ್ಕೀ ನಾನು ಸಾಯತ್ತೀನೆ. ಒಂದು ಸಾರಿ ಬರಬಾರದೇ ? ನಾನೇನು ತಪ್ಪು ಮಾಡಿದೆ ? ಕ್ಷಮಿಸು ಲಕ್ಕೀ... ನನ್ನ ರಾಣೀ.. ಎಂದು ಏನೇನೋ ಹೇಳುತ್ತಿದ್ದ.

ಇಷ್ಟು ಜ್ವರದಲ್ಲಿಯೂ ತನ್ನ ಹೆಸರನ್ನೇ ಹೇಳಿ ಕೊಂಡು ತನ್ನನ್ನೇ ನೆನೆಸು ತ್ತಿರುವುದನ್ನು ನೋಡಿ ಲಕ್ಕಿಗೆ ಅಯ್ಯೋ ! ಎನ್ನಿಸಿತು. ತಾನು ಇಷ್ಟು ದಿನ ಬರದೇ ತಪ್ಪು ಮಾಡಿದೆ ಎಂದು ಪೇಚಾಡಿಕೊಂಡಳು.

ನಟರಾಜನ ಹತ್ತಿರ ಹೋಗಿ ತನ್ನ ಮೃದುವಾದ ಕೈಯನ್ನು ಅವನ ಹಣೆಯ ಮೇಲೆ ಇಟ್ಟಳು. ಕೆಂಕಿಯ ಮೇಲೆ ಕೈಯಿಟ್ಟಂತಾಯಿತು. ಗಾಬರಿ ಯಿಂದ ಅವಳ ಎದೆ ಡವ-ಡವನೆ ಒಡೆದು ಕೊಂಡಿತು... ಶೀತಲ ಮೃದು ಸ್ಪರ್ಶವು ನಟರಾಜಗೆ ಹಾಯೆನಿಸಿತು. ತನ್ನ ಕೈಯಿಂದ ಅದನ್ನು ಹಾಗೆಯೇ ಒತ್ತಿ ಹಿಡಿದು ಕಣ್ಬಿಟ್ಟು ನೋಡಿದ.... ಯಕ್ಷಿಣಿ ಮಂತ್ರದಂತೆ ಇದ್ದಕ್ಕಿದ್ದಂತೆ ಲಕ್ಕಿ ತನ್ನ ಹತ್ತಿರ ? ತನ್ನ ಹೃದಯ ರಾಣಿ, ನಿಜವಾಗಿಯೂ ತನ್ನ ಹಣೆಯನ್ನು ನೇವರಿಸು ತ್ತಿದ್ದಾಳೆಯೇ ? ಇದೇನು ಕನಸೋ-ನೆನಸೋ ? ಒಂದೂ ನಟರಾಜನಿಗೆ ಅರ್ಥವಾಗಲಿಲ್ಲ.

ಕಣ್ಣುಗಳನ್ನು ಇನ್ನೂ ಅಗಲವಾಗಿ ತೆರೆದು ಅವಳನ್ನೇ ದಿಟ್ಟಿಸಿ ನೋಡುತ್ತಿದ್ದ.

ಲಕ್ಕಿ ಕಾತುರತೆಯಿಂದ "ಯಾಕೆ ದಣಿಯೋರಾ ಈಟಿ ಂದು ಜರ ಬಂದು ಬಿಟ್ಟೈತೆ ? ಔಸ್ತಿ ತಕ್ಕೊಂಳ್ಳಿಲ್ವಾ ? ಎಂದು ಕೇಳಿದಳು.

ಈಗ ಲಕ್ಕಿಯ ಧ್ವನಿಯಿಂದ ಅವಳು ಬಂದಿರುವುದು ಖಚಿತವಾಯಿತು. "ನೀನು ನನ್ನನ್ನು ಮರೆತೇ ಬಿಟ್ಟಿಯೇನೋ ಅಂತಿದ್ದೆ ಲಕ್ಕಿ " ಅಂದ ನಟರಾಜ.

ನಟರಾಜ ಜ್ಞಾನವಾಗಿ ಮಾತಾಡಿದ್ದು ಲಕ್ಕಿಗೆ ಏಷ್ಟೋ ಸಮಾಧಾನ ವಾಯಿತು. ನಿಮ್ಮನ್ನು ಮರೆಯೋಕಾಯ್ತದಾ ದಣಿಯೋರಾ? ಎಂದು ಹಣೆಯ, ಮೇಲಿಂದ ಕೈಯನ್ನು ತೆಗೆಯಲು ಯತ್ನಿಸಿದಳು.

ನಟರಾಜ ತನ್ನೆರಡು ಕೈಗಳಿಂದಲೂ ಅವಳ ಕೈಯನ್ನು ಭದ್ರವಾಗಿ ಹಿಡಿದು ಬೇಡ ಲಕ್ಕೀ....ಕೈ ಹಾಗೆಯೇ ನನ್ನ ಹಣೆಯ ಮೇಲಿರಲಿ. ನನ್ನ ಜ್ವರವೆಲ್ಲಾ ಹೊರಟು ಹೋಗುತ್ತೆ. ನಿಂತಿರಬೇಡ ಬಾ ನನ್ನ ಪಕ್ಕದಲ್ಲೇ ಮಂಚದ ಮೇಲೆ ಕುಳಿತುಕೋ ಎಂದು ಅವಳ ಇನ್ನೊಂದು ಕೈಯನ್ನು ಹಿಡಿದು ಎಳೆದು ತನ್ನ ಪಕ್ಕದಲ್ಲಿ ಕೂರಿಸಿಕೊಂಡ.

ಲಕ್ಕಿಗೆ ಏನೂ ತೋಚದಾಯಿತು. ಲಜ್ಜೆಯಿಂದ ಅವಳ ಮುಖ ಕೆಂಪಾ ಯಿತು, ಆದರೂ ಅಲ್ಲಿಂದ ಎದ್ದು ದೂರ ಹೋಗುವ ಮನಸ್ಸಾಗಲಿಲ್ಲ. ನಟರಾಜ ನಿಗೋಸ್ಕರ ಏನು ಬೇಕಾದರೂ ಮಾಡೇನು ಅನ್ನಿಸಿತು. ಅವನ ಹಣೆಯನ್ನು ಒತ್ತಿ ಹಿಡಿದು ಹಾಗೆಯೇ ಪಕ್ಕದಲ್ಲಿ ಕುಳಿತಳು.

ನಟರಾಜ ತನಗೆ ಜ್ವರ ಬಂದಿದ್ದೂ ಅದೃಷ್ಟವೆಂದೇ ಭಾವಿಸಿದ. ಇಲ್ಲದಿದ್ದರೆ ಲಕ್ಕಿ ಹೀಗೆಲ್ಲಿ ತನ್ನನ್ನು ಉಪಚರಿಸುತ್ತಿದ್ದಳು ? ಎನ್ನಿಸಿತು.

ಲಕ್ಕಿಯ ಹಿತವಾದ ಸ್ಪರ್ಶವು ಅವನ ಎಲ್ಲಾ ನೋವನ್ನೂ ಮರೆಸಿತು. ಅವಳನ್ನೇ ನೋಡುತ್ತಾ ! ಲಕ್ಕೀ ಅದೇಕೆ ಇಷ್ಟುದಿನ ಬರಲಿಲ್ಲ ?

ಲಕ್ಕಿ ಏನೊಂದು ಉತ್ತರವನ್ನೂ ಕೊಡದೆ ತಲೆ ತಗ್ಗಿಸಿ ಕುಳಿತ್ತಿದ್ದಳು.

ಅದೇಕೆ ಲಕ್ಕೀ ನನ್ನ ಮೇಲೆ ಕೋಪವಾ ?

ಹಾಗೂ ಲಕ್ಕಿ ಮಾತನಾಡದೆ "ಇಲ್ಲ" ವೆಂಬಂತೆ ತಲೆ ಆಡಿಸಿದಳು.

ನೀನೇನು ಮೂಗಿಯೇ ? ಎಲ್ಲದಕ್ಕೂ ತಲೆ ಆಡಿಸುತ್ತೀಯಲ್ಲಾ ? ಮಾತಾಡು.

ಏನ್ ಮಾತಾಡ್ಲೀ ?

ನಾನು ಕೇಳಿದ್ದಕ್ಕೆಲ್ಲಾ ಉತ್ತರ ಕೊಡು ...

ಹುಂ ಆಗಲಿ, ಆದರೆ ನಂಗೆ ಗೊತ್ತಾಗದಿದ್ದರೆ ?

ನಿಂಗೆ ಗೋತಿರೆ ಇದೇ ಕೇಳೋದು. ನೀನ್ಯಾಕೆ ಇಷ್ಟು ದಿನ ಇಲ್ಲಿಗೆ ಬರಲಿಲ್ಲ ? ಇದಕ್ಕೆ ಹೇಳೋಕೆ ಗೊತ್ತಿದೆ ತಾನೆ ?

ಮನ್ಯಾಗೆ ಕೆಲಸ ಕಾರ್ಯ. ಬಿಡುನೇ ಸಿಕ್ಕಾಕಿಲ್ಲ ಹೆಂಗ್ ಬರೋಕಾಯ್ತದೆ

ನಿನಗೆ ಇಲ್ಲಿಗೆ ಬರಬೇಕು ಅನ್ನಿಸಲಿಲ್ಲವಾ ?

ಅನ್ನಿಸಿತು ಆದರೆ ಅತ್ತೆ ಖಾಯಿಲೆ ನುನಗಿಬಿಟ್ಟವ್ಳೆ. ಸೋನ್ಯಾ ಗಂಡನ ಮನೆಗೆ ವೋಗಿಬಿಟ್ಟು. ಮನೆತಾವ ಮಕ್ಳು ನಿಗಾ ನೋಡೋರೇ ಇಲ್ಲ. ನಮ್ಮಾವ ಪೇಚಾಡ್ಕೋತಾನೆ, ನಾನು ನಮ್ಮವ್ವ ಬರದಿದ್ದರೆ "ನಮ್ಮ ಸಂಸಾರದ ಗತಿಯೇನಾಗ್‌ತಿತ್ತು ?" ಅಂತಾನೆ.

ಓಹೋ ! ಹಾಗಾ ! ಮತ್ತೆ ಸೋಮನಾಯಕ ನನ್ನ ಕೈಲಿ ಏನೂ ಹೇಳಲೇ ಇಲ್ಲ. ಅದಕ್ಕೇ ಒಂದು ವಿಧವಾಗಿ ಮಂಕಾಗಿದ್ದಾನೆ.

ನಮ್ಮ ಮಾವ ಬಲು ತೂಕದ ಮನ್ಸಾ ದಣಿಯೋರಾ ! ಅಂದಳು. ಇಷ್ಟು ಮಾತಾಡುವ ವೇಳೆಗೆ ನಟರಾಜನಿಗೆ ತುಂಬಾ ಆಯಾಸವಾಗಿ ಹೋಯಿತು. ಅವನು ಸಂಕಟದಿಂದ ಅತ್ತಿಂದಿತ್ತ ಹೊರಳಾಡಲು ತೊಡಗಿದ.

ಲಕ್ಕಿಗೆ ಏನೂ ತೋಚದೆ ಗಾಬರಿಯಾಯಿತು. ಅಯ್ಯೋ ಯಾಕ್ ದಣಿಯೋರಾ ? ಏನಾಗ್ತೈತೆ ? ಹೇಳಿ ಎಂದು ದೂರ ಸರಿದು ನಿಂತಳು.

ಅಯ್ಯೋ ! ಬಾ ಲಕ್ಕೀ ನೀನು ಹೊರಟು ಹೋಗಬೇಡ. ನನಗೆ ಪ್ರಾಣ ಹೋಗೋಷ್ಟು ಸಂಕಟ ಎಂದು ಒಂದೇ ಸಮ ನೆರಳತೊಡಗಿದ.

"ಹಂಗೆಲ್ಲಾ ಮಾತಾಡ್ಬೇಡಿ ದಣಿಯೋರಾ ! ನಂಗೆ ಏನೂ ಗೊತ್ತಾಗೋಕಿಲ್ಲಾ" ಎಂದು ನಟರಾಜನ ಕೈಯ್ಯನ್ನು ತನ್ನೆರಡು ಕೈಗಳಿಂದಲೂ ಹಿಡಿದು ಅಳಲು ತೊಡಗಿದಳು.

ನಟರಾಜನಿಗೆ ಅವಳನ್ನು ಹೇಗೆ ಸಮಾಧಾನ ಪಡಿಸುವುದೆಂದು ತಿಳಿಯದಾಯಿತು.

"ಅಳಬೇಡ ಲಕ್ಕಿ ! ನನಗೇನೂ ಆಗೋದಿಲ್ಲ. ತುಂಬಾ ಸುಸ್ತಾಗಿದೆ ಹೋಗು ಒಳಗೆ ಸ್ಟೌವ್ ಹಚ್ಚಿ ಸ್ವಲ್ಪ ಹಾಲು ಕಾಯಿಸಿ ತಂದುಕೊಡು" ಎಂದು ಮೆಲ್ಲದೆ ಹೇಳಿದ.

ಲಕ್ಕಿಗೆ ಸ್ಟೌವು ಹಚ್ಚಿಸಲು ಬರದು. ಆದರೂ ಒಂದು ದಿನ ನಟರಾಜ ಹಚ್ಚುವುದನ್ನು ನೋಡಿದ್ದಳು. ಮೊದಲು ಹಾಲು ಕಾಯಿಸಿ ಕೊಡಬೇಕೆಂಬ ಕಾತುರ. ಕಡ್ಡಿ ಗೀಚಿ–ಗೀಚಿ ೪-೫ ಸಲ ಪ್ರಯತ್ನ ಪಟ್ಟಮೇಲೆ ಸ್ಟೌವು ಹತ್ತಿತು. ಹಾಲು ಕಾಯಿಸಿ ತಂದಳು. ಕೊಳ್ಳಿ ಕುಡಿಯಿರಿ. ಎಂದು ನೀಡಿದಳು.

ನಟರಾಜ ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದ ಆಗಲಿಲ್ಲ. ಲಕ್ಕಿಯೇ ಲೋಟದಲ್ಲಿ ಬಾಯಿಗೆ ಸ್ವಲ್ಪ ಸ್ವಲ್ಪವಾಗಿ ಹಾಕಿ ಕುಡಿಸಿದಳು. ಟವಲಿನಿಂದ ಬಾಯಿ ಒರೆಸಿದಳು. ಹೊದ್ದಿಕೆಯನ್ನು ಸರಿಯಾಗಿ ಹೊದಿಸಿ ಇನ್ನು ಸ್ವಲ್ಪ ಸುಮ್ಮನೆ ಮಾನಗಿ ದಣಿಯೋರಾ: ಎಂದು ಹೇಳಿ ಪಾತ್ರೆಗಳನ್ನು ಒಳಗಿಡಲು ಹೋದಳು.

"ಲಕ್ಕೀ ನೀನು ಇಲ್ಲಿಯೇ ಕುಳಿತಿರು. ಎಲ್ಲಿಗೂ ಹೋಗಬೇಡ" ಎಂದು ಕೂಗಿಕೊಂಡ....

ಅಯ್ಯೋ: ದಾನಪರಾ! ನಾನೆಲ್ಲಿ ಹೋಯ್ತೀನಿ ನಿಮ್ಮ ತಾವೇ ಇದ್ದೀನಲ್ಲಾ!

ನನ್ನಿಂದ ನಿನಗೆ ತುಂಬಾ ಕಷ್ಟ ಅಲ್ಲವಾ! ಲಕ್ಕೀ? ಸದ್ಯ ನಂಗೆ ಕಷ್ಟ ಇರಲಿ, ದೇವರು ನಿಮಗೆ ಬೇಗ ಖಾಯಿಲೆ ವಾಸಿ ಮಾಡಿದರೆ ಸಾಕು. ಎಂದು ಹೇಳುತ್ತಿರುವಂತೆಯೇ ಲಕ್ಕಿಯ ಕಣ್ಣಲ್ಲಿ ನೀರು ತುಂಬಿಕೊಂಡಿತು. ಗಂಟಲು ಬಿಗಿಯಿತು.

ಯಾಕೆ ಲಕ್ಕೀ ನನಗೋಸ್ಕರ ಅಷ್ಟು ಪೇಚಾಡ್ತೀ? ನೀವು ನಮ್ಮ ಧಣಿಯೋರು. ನಮ್ಮ ಹಳ್ಳೀ ಜನಕ್ಕೆಲ್ಲಾ ದ್ಯಾವರು ಇದ್ದಹಂಗೆ...ನೀವು ಹಿಂಗೆ ಮನಿಗ್ಬಿಟ್ರೀ ಅಂತ ಲಕ್ಕಿ ಬಿಕ್ಕಿದಳು.

ಮುಗ್ಧ ಲಕ್ಕಿ, ತಮ್ಮ ಹಳ್ಳಿಯನ್ನೇ ಉದ್ಧಾರ ಮಾಡಿದ ದಣಿ ನಟರಾಜ. ಅಂತಹವರಿಗೆ ಏನೂ ತೊಂದರೆಯಾಗಬಾರದು. ದೇವರು ಬೇಗ ಅವರ ಖಾಯಿಲೆ ವಾಸಿಮಾಡಲಿ. ಎಂದು ಮನದಲ್ಲಿಯೇ ಹರಕೆ ಹೊತ್ತಳು.

ನಟರಾಜನಿಗೆ ಸ್ವಲ್ಪ ಜೊಂಪು ಹತ್ತಿತ್ತು. ಲಕ್ಕಿ ಮೆಲ್ಲನೆ ಸರಿದು ನೆಲದ ಮೇಲೆ ಸ್ವಲ್ಪ ದೂರದಲ್ಲಿ ಕುಳಿತಳುಅಷ್ಟರಲ್ಲಿ ವಾಮನ ಭಟ್ಟ ಮಡಿ ಪಂಚೆ

ಯುಟ್ಟು ಕೈಯ್ಯಲ್ಲಿ ನೀರಿನ ಥಾಲಿ ಹಿಡಿದು ಬಾಯಲ್ಲಿ ಮಂತ್ರ ಪಠನ ಮಾಡುತ್ತಾ ಬಂದ.

ಒಳಗೆ ಬಂದು ನೋಡಿ "ಏಕೆ ಧಣೀ ಇನ್ನೂ ಮಲಗೇ ಇದ್ದೀರಿ"? ಎಂದ.

ಅಷ್ಟರಲ್ಲಿ ಅಲ್ಲಿಯೇ ಇದ್ದ ಲಕ್ಕಿ, "ಧಣಿಯೋರನ್ನ ಎಬ್ಬಿಸಬೇಡಿ ಸಾಮಿ ಅವರಿಗೆ ತುಂಬಾ ಜರ ಈಗ ತಾನೆ ರವಷ್ಟು ಮಲಗವ್ರೆ....ಅಂದಳು.

ಓಹೋ... ನೀನು ಇಲ್ಲೇ ಇದ್ದೀಯೋ? ಇಲ್ಲಿದ್ದು ಏನ್ ಉದ್ಧಾರ ಮಾಡ್ದೆ ದಣಿಯೋರಿಗೆ—

ಲಕ್ಕಿಗೆ ವಕ್ರಮಾತು ಅರ್ಥವಾಗಲಿಲ್ಲ.. "ತುಂಬಾ ಸುಸ್ತಾಗಿದ್ದರು. ಹಾಲು ಕಾಯಿಸಿ ಕೊಟ್ಟೆ ಸಾಮಿ" ಎಂದಳು ವಿಧೇಯವಾಗಿ.

ಅಯ್ಯೋ; ಕರ್ಮ .. ಕರ್ಮ... ಒಳಗೆ ಹೋಗಿ ಸ್ಟೌವು, ಪಾತ್ರೆ ಎಲ್ಲಾ ಮುಟ್ಟಿ ಮೈಲಿಗೆ ಮಾಡಿದೆಯೇನೇ ಯಾಡೀ ನಿನಗೆಷ್ಟೇ ಸೊಕ್ಕು?

ಲಕ್ಕಿಗೆ ಈಗ ತುಂಬಾ ಭಯವಾಯಿತು. "ಇಲ್ಲ ಸಾಮಿ....ಎಂದು ಹೇಳು ವಷ್ಟರಲ್ಲಿ ನಟರಾಜ "ಭಟ್ಟರೇ! ಲಕ್ಕಿಯನ್ನು ಏನೂ ಅನ್ನಬೇಡಿ. ನಿಮಗೆ ಮಡಿ ಬೇಕಾದರೆ ಸ್ಟೌವು ಎಲ್ಲಾ ತೊಳೆದುಕೊಳ್ಳಿರಿ" ಎಂದು ಸಿಟ್ಟಿನಿಂದ ಹೇಳಿದ.

ಧಣಿ ತನ್ನ ಮೇಲೆ ಎಂದೂ ಸಿಟ್ಟು ಮಾಡಿದ್ದೇ ಇಲ್ಲವಲ್ಲ ಇವತ್ತೇಕೆ ಹೀಗಾಡ್ತಾರೆ? ಎಂದುಕೊಂಡು ಒಳಗೆ ಹೋಗಿ ತನ್ನ ಕೆಲಸದಲ್ಲಿ ತೊಡಗಿದ.

ಅದೇ ಸಮಯಕ್ಕೆ ಲಕ್ಕಿ ನಾನ್ ಹೋಗ್ತೀನಿ ದಣಿಯೋರಾ; ಅಯ್ಯ ನವರು ಬಂದ್ರಲ್ಲಾ; ಎಂದವಳೇ ಹೊರಟುಬಿಟ್ಟಳು. ನಟರಾಜ ಆ ನಿಶ್ಶಕ್ತಿ ಯಲ್ಲಿಯೂ, "ಲಕ್ಕೀ ಬಾ, ಹೋಗಬೇಡ" ಎಂದು ಗಟ್ಟಿಯಾಗಿ ಕೂಗಿಕೊಂಡ, ಆದರೂ ಲಕ್ಕಿ ಹೊರಟೇ ಹೋದಳು.

ಲಕ್ಕಿಯನ್ನು ಒಂದು ಗಳಿಗೆ ಅಗಲಿರುವುದೂ ನಟರಾಜನಿಂದ ಸಾಧ್ಯವಿಲ್ಲ ದಂತಾಗಿತ್ತು. ವಾಮನ ಭಟ್ಟ ಸಿಕ್ಕಾ-ಪಟ್ಟೆ ಮಾತನಾಡಿದ್ದರಿಂದಲೇ ಲಕ್ಕಿ ಹೊರಟು ಹೋದದ್ದು ಎನ್ನಿಸಿತು.

ತನ್ನ ಕೋಪವನ್ನೆಲ್ಲಾ ವಾಮನ ಭಟ್ಟನ ಮೇಲೆ ತೀರಿಸಿಕೊಂಡ, "ನಾಳೆ ಯಿಂದ ನೀವು ಇಲ್ಲಿಗೆ ಕೆಲಸಕ್ಕೆ ಬರಬೇಡಿ. ಹೋಗಿ ನಿಮ್ಮ ಮನೆಯಲ್ಲಿ ಮಡಿಯಾಗಿರಿ" ಎಂದು ಕಿರುಚಿದ.

ಪಾಪ ; ವಾಮನ ಭಟ್ಟನಿಗೆ ಏನೂ ತೋಚಲಿಲ್ಲ ಲಕ್ಕಿಗಾಗಿ ತಮ್ಮ ದಣಿ ಹಂಬಲಿಸುವುದು ಪೆದ್ದ ಭಟ್ಟನಾದ ವಾಮನ ಭಟ್ಟನಿಗೆ ಹೇಗೆ ತಿಳಿಯ ಬೇಕು. "ತಾನೆಲ್ಲೋ ಈವತ್ತು ಎಡ ಮಗ್ಗುಲಲ್ಲಿ ಎದ್ದು ಬಂದಿರಬೇಕು, ಅದಕ್ಕೇ ದಣಿಯವರ ಕೈಯಲ್ಲಿ ಬೈಗಳ ತಿಂದೆ" ಎಂದುಕೊಂಡು "ತಪ್ಪಾಯಿತು ದಣೀ, ನಾನು ಇನ್ನು ಮೇಲೆ ಹೊತ್ತಿಗೆ ಮುಂಚೆ ಕೆಲಸಕ್ಕೆ ಬರ್ತೀನಿ" ಅಂದ.

ಅವನ ಸರಳತನಕ್ಕಾಗಿ ಅಯ್ಯೋ ಅನ್ನಿಸಿತು ನಟರಾಜನಿಗೆ.... ನಿಮ್ಮಮ್ಮನ ಪಿಂಡ, ಹೊತ್ತಿಗೆ ಮುಂಚೆ ಬರಬೇಡ. ಆ ಲಕ್ಕಿಯನ್ನು ಇನ್ನು ಮೇಲೆ ನೀವೇನಾದ್ರೂ ಅಂದ್ರೆ ಅವತ್ತೇ ನಿಮ್ಮನ್ನ ಕೆಲಸದಿಂದ ವಜಾ ಮಾಡಿ ಬಿಡ್ತೀನಿ ಅಂದ.

ಸರಿ ದಣಿ....ಆ ಲಂಬಾಣಿಯಾಡೀ ಸುದ್ದಿಗೆ ನಾನು ಹೋಗೋಲ್ಲ.... ಕ್ಷಮಿಸಿ. ಎಂದು ಸ್ಟೌವ್ ಹಚ್ಚಿ ಕಾಫಿ ಮಾಡಿ ತಂದು ನಟರಾಜನಿಗೆ ಕೊಟ್ಟ. ಆಮೇಲೆ ಅಲ್ಲಿಯೇ ನಿಂತು, "ಇಷ್ಟೊಂದು ಜ್ವರದಲ್ಲಿ ಮಲಗಿದ್ದೀರಾ ; ಊರಿಗೊಂದು ಕಾಗದ ಬರೆದು ಹಾಕಿ ದಣೀ ಯಾರಾದ್ರೂ ಬರ್ತಾರೆ" ಅಂದ.

ಅವೆಲ್ಲ ಪ್ರತಿಷ್ಠೆ ನಿಮಗೆ ಬೇಡ, ನಿಮ್ಮ ಕೆಲಸ ನೋಡಿ ಹೋಗಿ. ನಾಳೆ ಹೊತ್ತಿಗೆ ನನ್ನ ಜ್ವರ ಎಲ್ಲಾ ವಾಸಿಯಾಗಿ ಹೋಗುತ್ತೆ. ಅಂದು ಮೆಲ್ಲನೆ ಎದ್ದು ಡೇರೆಯಿಂದ ಹೊರಕ್ಕೆ ಬಂದು ಲಕ್ಕಿ ಹೋದ ಕಡೆಯೇ ನಿಟ್ಟಿಸುತ್ತಾ ನಿಂತ.

ಮತ್ತೆ ಲಕ್ಕಿ ಬರುವಳೋ? ಇಲ್ಲವೋ? ಎಂಬ ಕೊರತೆ ಅವನನ್ನು ಕಾಡಿತು.

ಒಂದು ವಾರ ಚಳಿ ; ಜ್ವರ ಬಿಡದೇ ಕಾಯಿತು. ಆದರೂ ನಟರಾಜ ಊರಿಗೆ ಸಮಾಚಾರ ತಿಳಿಸಲಿಲ್ಲ. ಪ್ರತಿದಿನ ಲಕ್ಕಿ ಬಂದು ಉಪಚರಿಸುತ್ತಿದ್ದುದೇ ಅವನಿಗೆ ನೆಮ್ಮದಿ. ಒಂದು ವಾರದ ನಂತರ ನಟರಾಜ ಚೇತರಿಸಿಕೊಂಡು ಕೆಲಸಕ್ಕೆ ಹೊರಟ.

ಈ ಒಂದು ಅವಕಾಶದಲ್ಲಿ ಲಕ್ಕಿಗೂ, ನಟರಾಜನಿಗೂ ಇದ್ದ ಆತ್ಮೀಯತೆ ಮತ್ತೂ ಹತ್ತಿರವಾದಂತಾಯಿತು. ಇಬ್ಬರ ಜನ್ಮ ಜನ್ಮಾಂತರದ ಸಂಬಂಧವೇ ತಮ್ಮ ಈ ಅಕ್ಕರೆಗೆ ಕಾರಣವಿರಬೇಕೆಂದುಕೊಂಡ ನಟರಾಜ.

ಮತ್ತೊಂದು ವಾರದೊಳಗೆ ಅಲ್ಲಿಯ ಸರ್ವೆಕಾರ್ಯ ಪೂರೈಸಿತು. ಮೇಲ್ಪಟ್ಟ ಅಧಿಕಾರಿಗಳು ಅಲ್ಲಿಯ ತನಿಖೆ ನಡೆಸಿ ನಟರಾಜನ ಕೆಲಸ ಮೆಚ್ಚಿ ಅವನಿಗೆ ಪ್ರಮೋಷನ್ ಕೊಟ್ಟರು. ನಟರಾಜ ಕೇಳಿದ ಕಡೆಗೆ ವರ್ಗಾಯಿಸಿ ಕೊಡುವುದಾಗಿ ಭರವಸೆ ನೀಡಿದರು.

ಇನ್ನು ಶಿವಮೊಗ್ಗಕ್ಕೇ ಹೋಗುವುದೆಂದು ತೀರ್ಮಾನಿಸಿದ. ಹೊರಡುವ ದಿನ ಹತ್ತಿರವಾದಂತೆಲ್ಲಾ ಅವನ ಮನಸ್ಸಿನಲ್ಲಿ ಏನೋ ಅಂದೋಲನ; ಚಿಂತೆ ನಿರುತ್ಸಾಹ, ಜೀವನವೇ ಬೇಸರ, ಇವಕ್ಕೆಲ್ಲಾ ಮೂಲ ಕಾರಣ ಲಕ್ಕಿಯನ್ನಗಲಿ ಹೊರಟು ಹೋಗಬೇಕಲಾ : ಎಂಬುದೇ....

ಕುಳಿತಲ್ಲಿ ನಿಂತಲ್ಲಿ ಚಿಂತಿಸಿದ, ಅದೆಂದಿಗೂ ಸಾಧ್ಯವಿಲ್ಲ .. ಇಲ್ಲ ಇಲ್ಲ.... ನಾನು ಲಕ್ಕಿ ಇಲ್ಲದೆ ಜೀವದಿಂದ ಇರಲಾರೆ ...ಅವಳನ್ನೂ ಜೊತೆಯಲ್ಲಿ ಕರೆದು ಕೊಂಡೇ ಹೊರಡುವುದು. ಎಂದು ತೀರ್ಮಾನಿಸಿಕೊಂಡ. ಈಗ ಮನಸ್ಸು ಸ್ವಲ್ಪ ಸಮಾಧಾನಕ್ಕೆ ಬಂದಿತು. ಆದರೆ ಲಕ್ಕಿ ಬರಲು ಒಪ್ಪಬೇಕಲ್ಲಾ ? ಪುನಃ ಚಿಂತೆ.

ಎಲ್ಲೋ ನೋಡುತ್ತಾ ಚಿಂತೆಯಲ್ಲಿ ಮುಳುಗಿದ್ದ ನಟರಾಜ. ನಿತ್ಯದಂತೆ ಹಾಲಿನ ಚೊಂಬನ್ನು ಹಿಡಿದು ಲಕ್ಕಿ ಮೆಲ್ಲನೆ ಹೆಜ್ಜೆಯಿಟ್ಟು ಸದ್ದಿಲ್ಲದೆ ಬಂದಳು. ನಟರಾಜ ಡೇರೆಯ ಮುಂಬಾಗದ ಒಂದು ಕಲ್ಲು ಹಾಸಿನ ಮೇಲೆ ಕುಳಿತಿದ್ದ. ಲಕ್ಕಿ ಬಂದದ್ದು ಅವನು ನೋಡಲಿಲ್ಲ. ಲಕ್ಕಿ ಒಂದು ಸಣ್ಣ ಕಲ್ಲು ತೆಗೆದು ಕೊಂಡು ಅವನ ಬೆನ್ನಿಗೆ ಎಸೆದಳು. ನಟರಾಜ ಬೆಚ್ಚಿ ಹಿಂತಿರುಗಿ ನೋಡಿದ— ಲಕ್ಕಿ ಕಿಲ-ಕಿಲನೆ ನಕ್ಕಳು.

ನಿನಗೇನು ; ಯಾವಾಗಲೂ ಹುಡುಗಾಟ, "ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟ" ಅಂತ ನಮ್ಮ ಸಂಕಟ ನಿನಗೇನು ಗೊತ್ತು : ಎಂದು ಹುಸಿ ಕೋಪವನ್ನು ತೋರಿಸಿದ ನಟರಾಜ.

ಯವ್ವೇ "ನಾನು ಬೆಕ್ಕೂ ಅಲ್ಲ, ನೀವು ಇಲೀನೂ ಅಲ್ಲ" ದಣಿಯೋರಾ; ಯಾಕೆ ಇವತ್ತು ಏನಾಗೈತೆ ಒಸಿ ಹೇಳಿ ಅಂದಳು.

ಬಾ ; ಇಲ್ಲಿ ಕೂತ್ಕೋ ಹೇಳ್ತೀನಿ....

ನೀವು ಎಷ್ಟಾರ ದಣಿಯೋರು, ನಾವು ಗರೀಬರು, ನಿಮ್ಮ ಸರೀ ಸಮ ನಾವು ಕುತ್ಕೋಣಕಾಗ್ತದಾ ? ಅಂದಳು ಲಕ್ಕಿ.

ನೋಡು, ಇನ್ನು ಮೇಲೆ ನೀನು ನನ್ನನ್ನು ದಣಿಯೋರಾ . ದಣಿಯೋರಾ! ಎಂದು ಕರೆಯಬೇಡ, ತಿಳೀತಾ ? ನಮಗೆ ಬಡವರು ಬಲ್ಲಿದರು ಎಂಬ ಭೇಧವಿಲ್ಲ.

ಮತ್ತೆ ಇನ್ನು ಹೇಗೆ ಕರೆಯಬೇಕು ?

ಬಾ... ಇಲ್ಲಿ ಹತ್ತಿರ ಕುಳಿತುಕೋ ಹೇಳ್ತೀನಿ....ಎಂದು ಅವಳ ಕೈ ಹಿಡಿದು ಹತ್ತಿರ ಕುಳ್ಳಿರಿಸಿಕೊಂಡ. ಲಕ್ಕಿಯ ಮುಖವನ್ನೇ ದಿಟ್ಟಿಸಿ ನೋಡಿದ.

ಏ....ಹೇಳಿ ಮತ್ತೀಗ ಎಂದು ತಲೆತಗ್ಗಿಸಿದಳು. ಲಕ್ಕಿ ನೋಡು ನನ್ನ ಹೆಸರು ನಟರಾಜ, ನೀನು ಬರೀ ರಾಜ ಅಂತ ಕರೀ ಸಾಕು.

ಆಯ್ಯೋ : ದ್ಯಾವರೆ ! ಹಂಗೆ ನಾನು ಕರೆಯಾಕಿಲ್ಲ ದಣಿಯೋರಾ ?

ನೋಡಿದ್ಯಾ : ಮತ್ತೆ ದಣಿಯೋರಾ : ಅಂತೀಯಾ ? ಹಾಗೆ ಕರೆದರೆ ನ್ನಾನು ಇನ್ನು ಮೇಲೆ ನಿನ್ನ ಜೊತೆ ಮಾತೇ ಆಡೋಲ್ಲ :

ಸರಿ ಬುದ್ಧಿ ನಾವು ತಿಳಿವಳಿಕೆ ಇಲ್ಲದ ಜನ ನನಗೊಂದೂ ಗೊತ್ತಾಗಾಕಿಲ್ಲ. (ಎಂದು ಸಂಕೋಚದಿಂದ ತಲೆ ತಗ್ಗಿಸಿ ಕೂತಳು)

ಲಕ್ಕಿಯ ಮನಸ್ಸಿಗೆ ನೋವಾಗಿರಬೇಕು ತನ್ನ ಮಾತಿನಿಂದ ಎಂದುಕೊಂಡ ನಟರಾಜ, ಲಕ್ಕಿಯ ಹತ್ತಿರ ಸರಿದು ಕುಳಿತು "ಏಯ್ ಹುಡುಗೀ ಕೋಪವಾ?" ಎಂದ.

ಊ-ಹುಂ ಎಂದು ತಲೆ ಆಡಿಸಿದಳು.

ಮತ್ತೆ ಏನಾರ ಮಾತಾಡು ಲಕ್ಕೀ.

ಏನು ಮಾತನಾಡಲೀ ?

ಸರಿ ಬಿಡು. ನನ್ನಿಂದ ನಿನಗೆ ತುಂಬಾ ಕಾಟ ಆಗಿತ್ತು. ಇನ್ನೇನು ಹೊರಟು ಹೋಗ್ತೀನಿ ಬಿಡು. ಎಂದು ದೂರ ಸರಿದು ಕುಳಿತ.

(ಲಕ್ಕಿ ಗಾಬರಿಯಿಂದ) ಅಂ....ಏನ್ ಬುದ್ಧೀ ? (ನಟರಾಜನ ಹತ್ತಿರ ಹೋಗಿ ಕುಳಿತು ಅವನ ಕೈಯನ್ನು ಭದ್ರವಾಗಿ ಹಿಡಿದುಕೊಂಡಳು).

ಪಾಪ : ಲಕ್ಕಿಯ ಆತ್ಮೀಯ ಪ್ರೇಮಕ್ಕಾಗಿ ಮಾರುಹೋದ ನಟರಾಜ. ನೋಡು ಲಕ್ಕಿ ಸರ್ಕಾರ ನನಗೆ ವಹಿಸಿದ್ದ ಇಲ್ಲಿಯ ಕೆಲಸ ಪೂರೈಸಿತು. ಇನ್ನು ಇಲ್ಲಿಂದ ನಾವೆಲ್ಲ ಹೊರಟು ಹೋಗ್ತೀವಿ ಮತ್ತೆ ನಾನು ಇಲ್ಲಿಗೆ ಬರುವಂತಿಲ್ಲ. ನಾನಿಲ್ಲಿರುವವರೆಗೂ ಪ್ರತಿ ದಿನ ಬರ್ತಾ ಇರ್ತೀಯಾ ? ಅಂದ.

ಲಕ್ಕಿಗೆ ಈ ಮಾತು ಕೇಳಿ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು. ನಟರಾಜನನ್ನು ಅಗಲುವುದು ಅವಳಿಂದ ಸಾಧ್ಯವೇ ಇರಲಿಲ್ಲ.

ಬೇಡಿ....ಬೇಡಿ, ಬುದ್ಧೀ ನೀವು ಇಲ್ಲಿಂದ ಹೊರಟು ಹೋದರೆ ನನ್ನ ... ಎಂದು ಅಷ್ಟಕ್ಕೇ ಮಾತು ನಿಲ್ಲಿಸಿದಳು.

ಏನು? ಹೇಳು ನಿನ್ನ ಪ್ರಾಣವೇ ...

ಹೌದು ಬುದ್ಧೀ ನನ್ನ ಪ್ರಾಣಾನೇ ನಿಲ್ಲಾಕಿಲ್ಲ.

ಹಾಗಾದರೆ ನೀನೂ ನನ್ನ ಜೊತೆ ಬಂದು ಬಿಡ್ತೀಯಾ?

ನೀವು ಕರೆದುಕೊಂಡು ಹೋದರೆ ಖಂಡಿತಾ ಬರ್ತ್ತೀನಿ.

ಹಾಗಾದರೆ ನೋಡು ನೀನು ಈ ಗ್ರಾಮೀಣ ಭಾಷೆ ಬಿಟ್ಟು ನಮ್ಮ ರೀತಿ ಮಾತಾಡಬೇಕು. ನಮ್ಮ ಮನೆಯವರು ಇದ್ದ ರೀತಿ ಇರಬೇಕು ತಿಳೀತಾ?

ನೀವು ಕಲಿಸಿಕೊಡಿ, ನೀವು ಹೆಂಗೆ ಹೇಳಿದರೆ ಹಂಗೆ ಇರ್ತೀನಿ ನಾನು. ನಿಮ್ಮ ಮನ್ಯಾಗೆ ಒಬ್ಬ ಕೆಲಸದೋಳು ಅಂತ ನನ್ನ ಮಡೀಕೊಂಡ್ರೂ ನಂಗೆ ಸಂತೋಷ

ಅಯ್ಯೋ; ಮೂಢ ಹುಡುಗೀ!... ನೀನು ಕೆಲಸದವಳಲ್ಲ ಲಕ್ಕೀ ನನ್ನ ಜೊತೆಗಾತಿಯಾಗಿ ಇರುವವಳು.

ಜೊತೆಗಾತಿ ಎಂದರೆ ಹೆಂಗೇ?

ಹೆಂಗೇ ಅಂದರೆ ಮದುವೆ ಮಾಡಿಕೊಂಡು ಜೊತೆಯಾಗಿರುವುದು.

ಈಗ ಲಕ್ಕಿ ನಟರಾಜನಿಂದ ದೂರ ಸರಿದು ಕುಳಿತು "ಯವ್ವೇ ನಾ ಕೆಟ್ಟೆ". ನಾನು....ನಿಮ್ಮನ್ನ ಮದುವೆ....ಆಗೋದಾ? ಎಂದು ಆಶ್ಚರ್ಯದಿಂದ ಬಾಯಿ ಮೇಲೆ ಬೆರಳಿಟ್ಟಳು.

ಅವಳ ತಲೆಯ ಮೇಲೆ ಮುಸುಕೆಳೆದಿದ್ದ ಕೆಂಪು ದಟ್ಟದಂತಹ ಹೊದ್ದಿಕೆಯನ್ನು ಎಳೆದು ಜಗ್ಗಿದ. ಲಕ್ಕಿ ಆಸರೆಯಿಲ್ಲದೆ ನಟರಾಜನ ಭುಜದ ಮೇಲೆ ವಾಲಿದಳು

ಅವಳ ಕಣ್ಣಲ್ಲಿ ಕಣ್ಣಿಟ್ಟು, ನಿಜ ಹೇಳು ಲಕ್ಕೀ ನನ್ನನ್ನು ಕಂಡ್ರೆ ನಿನಗೆ ಪ್ರೀತಿ ಇಲ್ವಾ?

"ಹುಂ"....ಎನ್ನುವಂತೆ ತಲೆ ಆಡಿಸಿದಳು ಮೌನವಾಗಿ.

ಮತ್ತೆ ಅದಕ್ಕೇ ಮದುವೆ ಆಗಬೇಕೂ ಅನ್ನೋದು—

"ನಮ್ಮಂಥಾ ಜನಾನ ನೀವು ಮದುವೆ ಆಗೋಕಾಗ್ತದಾ ಬುದ್ಧೀ ?"

ಲಕ್ಕಿಯ ಗಲ್ಲವನ್ನು ಹಿಡಿದು ಅವಳ ಮುಖವನ್ನೆತ್ತಿ ತದೇಕವಾಗಿ ದಿಟ್ಟಿಸುತ್ತಾ ಹೇಳಿದ ನಟರಾಜ.

"ನೋಡು ಲಕ್ಕೀ ; ನಾನು ಮದುವೆ ಆಗೋದಾದ್ರೆ ನಿನ್ನನ್ನೇ ಆಗೋದು ; ಇಲ್ಲದಿದ್ದರೆ ಬೇರೆ ಯಾವ ಹೆಣ್ಣನ್ನೂ ಮದುವೆ ಆಗೋದೇ ಇಲ್ಲ".

"ಯವ್ವೇ ! ನಿಮ್ಮ ಮನ್ಯೋರು ಇದಕ್ಕೆ ಒಪ್ತಾರಾ ?

ನಿನಗ್ಯಾಕೆ ಆ ಚಿಂತೆ ? ನಾನು ಹೇಳಿದ ಹಾಗೆ ನೀನು ಕೇಳ್ತೀಯ ತಾನೇ ?

"ಓ ನನ್ನ ರಾಜ ಹೇಳ್ದಂಗೆ ಕೇಳ್ತೀನಿ"....ಎಂದು ಹೇಳಿ ಕಿಲ ಕಿಲನೆ ನಕ್ಕಳು ಲಕ್ಕೀ.

ಆವಳ ಮೋಹಕ ನಗು ನಟರಾಜನ ಹೃದಯರಾಳದ ಸುಪ್ತ ಪ್ರೇಮ ವನ್ನು ಹೊಡೆದೆಬ್ಬಿಸಿತು. ಅವಳ ಎರಡೂ ಕೈಗಳನ್ನು ಹಿಡಿದು ಆವೇಶದಿಂದ, "ಲಕ್ಕೀ... ಲಕ್ಕೀ ನನ್ನ ರಾಣಿ, ವೆರಿಗುಡ್, ಇನ್ನು ಮೇಲೆ ಹೀಗೆ ರಾಜ... ಅಂತಾನೇ ಕರೀಬೇಕು, ತಿಳೀತಾ ?" ಎಂದ.

"ಹೂಂ ಸರಿ" ಎಂದು ತಲೆ ಆಡಿಸಿದಳು ಲಕ್ಕಿ.

"ನೋಡು ಲಕ್ಕೀ ಅಂದರೆ, ಲಕ್ಷ್ಮಿ ಅಂತ ಅರ್ಥ. ನಾನು ಇನ್ನು ಮೇಲೆ ನಿನ್ನನ್ನು ಲಕ್ಷ್ಮೀ" ಅಂತ ಕರೀಲಾ ?

ಲಕ್ಕಿಗೆ ನಟರಾಜನ ಈ ರೀತಿಯ ಪ್ರೇಮ, ಆದರ ನೋಡಿ ಸ್ವರ್ಗ ತನ್ನ ಕೈಯಲ್ಲೇ ಇದೆಯೇನೋ ಎನ್ನಿಸಿತು. ಸಂಕೋಚದಿಂದ "ನಿಮಿಷ್ಟ ಹೆಂಗೆ ಬೇಕಾದ್ರೂ ಕರೆಯಿರಿ" ಎಂದಳು.

## ಅಧ್ಯಾಯ ೧೦

ಇತ್ತ ನಟರಾಜನ ತಂದೆ ತಾಯಿಯರು ಮಗನ ಮದುವೆಯನ್ನು ಯಾವಾಗ ಕಂಡೆವೋ ? ಇರುವ ಒಬ್ಬನೇ ಒಬ್ಬ ಮಗನ ಸುಖ ಸಂಸಾರವನ್ನು ಕಣ್ಣಾರ ನೋಡಿ ಎಂದು ಸಂತೋಷ ಪಟ್ಟೇವೋ ? ಎಂದು ಕಾತರಿಸುತ್ತಿದ್ದರು.

"ಅವನು ಕಾಡಿನ ಸರ್ವೆ ಕೆಲಸ ಮುಗಿಸಿ ಬಂದ ಕೂಡಲೇ ಮದುವೆ ಏರ್ಪಾಟು ಮಾಡಿ ಬಿಡಿ" ಎಂದು ಮಂಗಳೆ--ಮೂರ್ತಿಯವರಿಗೂ ಕಾಗದ ಬರೆದಿದ್ದರು.

ಅವರ ಅಚ್ಚು-ಮೆಚ್ಚಿನ ಮೊಮ್ಮಗಳು ಸುಶೀನೇ ತಮ್ಮ ಸೊಸೆಯಾಗುವುದೆಂದ ಮೇಲೆ ಮತ್ತೇನೂ ನೋಡಬೇಕಾಗಿಯೇ ಇರಲಿಲ್ಲ. ಮಗ ಲಂಬಾಣಿ ಹುಡುಗಿಗೆ ಮನಸೋತಿರುವುದು ಅವರಿಗೆ ಹೇಗೆ ತಿಳಿಯಬೇಕು ? "ನಾವೊಂದು ನೆನೆದರೆ ದೈವವೊಂದು ನೆನೆಯಿತು" ಎಂಬಂತಾಯಿತು.

ನಟರಾಜ ಇನ್ನೊಂದು ವಾರದೊಳಗಾಗಿ ಶಿವಮೊಗ್ಗಕ್ಕೆ ಅಕ್ಕನ ಮನೆಗೆ ಬರುವುದಾಗಿ ತಿಳಿಸಿದ್ದ. ಅಲ್ಲಿಯ ಕೆಲಸ ಪೂರೈಸಿತು. ಇನ್ನು ನಟರಾಜ ಇಲ್ಲಿಯೇ ಕೆಲವುದಿನ ಇರುತ್ತಾನೆಂಬ ವಿಷಯ ತಿಳಿದು ಸುಶೀ ತುಂಬಾ ಹಿಗ್ಗಿದಳು.

ಮಂಗಳೆಗೂ ಎಲ್ಲಿಲ್ಲದ ಸಂಭ್ರಮ. ಮನೆಯಲ್ಲಿ ಮದುವೆಗೆ ಸಿದ್ಧತೆ ನಡೆಯುತ್ತಿತ್ತು. ಸಾಮಾನುಗಳು ಬಂದು ಬೀಳುತ್ತಿತ್ತು, ಕೆಲಸದಾಳುಗಳು ಮನೆತುಂಬಾ ಓಡಾಡುತ್ತಾ ಕೆಲಸ ಮಾಡುತ್ತಿದ್ದರು. ಮಂಗಳೆ ಹೀಗಲ್ಲ ಹೀಗೆ ಮಾಡಬೇಕೆಂದು ಅವರಿಗೆ ಸಲಹೆ ನೀಡುತ್ತಿದ್ದಳು.

ಸುಶೀ ಕೂಡಾ ಈಗ ಗೆಲುವಾಗಿ ಓಡಾಡಿಕೊಂಡು ಯಾವುದಾದರೊಂದು ಕೆಲಸದಲ್ಲಿ ತೊಡಗಿರುತ್ತಿದ್ದಳು. ಅವಳ ಸಂತೋಷಕ್ಕೆ ಕಾರಣವೆಂದರೆ ವಿಶೂ, ಅಜ್ಜೀ ಶೇಷಮಾವ ಎಲ್ಲಾ ಇನ್ನೇನು ಕಾಶಿಯಿಂದ ಬರ್ತಾರೆ, ಬಣ-ಬಣ ಅಂತ ಇದ್ದ ಮನೆ ಇನ್ನು ತುಂಬಿಕೊಂಡು ಸಂಭ್ರಮದ ಸ್ವರ್ಗವಾಗುತ್ತೆ, ಅಲ್ಲದೆ ನಟರಾಜನ ಆಗಮನ.

ಸುಶೀಲ ದೇವರ ಮುಂದೆ ರಂಗೋಲೆ ಹಾಕುತ್ತಾ ಮನಸ್ಸಿನಲ್ಲಿ ಇವೆಲ್ಲ ಮೆಲಕು ಹಾಕುತ್ತಿದ್ದಳು.

"ಸುಶೀ ಏನು ಮಾಡ್ತಿದ್ದೀಯಮ್ಮಾ ? ಎಂದು ಮಂಗಳೆ ಕೂಗಿದಳು. ಇದೋ ಬಂದೆ. ಏನಮ್ಮಾ" ಎಂದಳು ಸುಶೀ.

"ನೋಡು ನಟರಾಜ ಬಂದ್ರೆ ಇನ್ನು ಮೇಲೆ ಇಲ್ಲೇ ಇರ್ತಾನಂತೆ ಕಣೇ .. ಮಹಡಿಮೇಲೆ ಒಂದು ರೂಮು ಬಿಡುವುಮಾಡಿ, ಕನ್ನಡಿಬೀರು, ಮಂಚ, ಫ್ಯಾನು ಎಲ್ಲಾದನ್ನೂ ಹನುಮಪ್ಪನಿಗೆ ಹೇಳಿ ಸರಿಯಾಗಿ ಹಾಕಿಸೇ."

"ಇದೇನಮ್ಮ ಹೀಗಾಡ್ತೀ! ಮಾವ ಇವತ್ತೇ ನಮ್ಮ ಮನೆಗೆ ಹೊಸದಾಗಿ ಬರ್ತಾನೇನು?"

"ಇದೇನೆ ಸುಶೀ ಇನ್ನೂ ಅವನೂ, ಇವನೂ, ಮಾವ, ಅಂತಾನೆ ಮಾತಾಡ್ತೀಯಾ, ಮುಂದಕ್ಕೂ ಗಂಡಾ ಅನ್ನೋದೇ ಮರೆತು ಬಿಡ್ತೀಯೋ ಏನೋ?"

"ಅಯ್ಯೋ... ಸುಮ್ಮನಿರಮ್ಮ ಗಂಡ ಆದಕಾಲಕ್ಕೆ ನೋಡ್ಕೋಳೋಣ." ಎಂದವಳೇ ಮಹಡಿಯ ಕೊಠಡಿ ಅಣಿಮಾಡಲು ಹೋದಳು.

ಮಾರನೆಯದಿನ ಒಂಭತ್ತು ಗಂಟೆ ವೇಳೆಗೆ ಸಾಮಾನು ಸಮೇತ ನಟರಾಜನ ಜೀಪು ಮಂಗಳೆ ಮನೆ ಬಾಗಿಲಲ್ಲಿ ಬಂತು ನಿಂತಿತು. ಆಳು ಹನುಮಪ್ಪ ಓಡಿ ಹೋಗಿ ಒಳಗೆ ಸಮಚಾರ ತಿಳಿಸಿದ. ಮಂಗಳೆ ಸುಶೀ ಇಬ್ಬರೂ ಒಳಗಿನಿಂದ ಓಡಿಬಂದರು.

ನಟರಾಜ ಜೀಪಿನಿಂದ ಇಳಿದವನೇ ಜೀಪಿನ ಹಿಂದಿನ ಬಾಗಿಲು ತೆಗೆದು "ಇಳಿದು ಬಾ ಲಕ್ಷ್ಮೀ!" ಅಂದ.

"ಅದ್ಯಾರು ಲಕ್ಷ್ಮೀ?" ಎಂದು ಕುತೂಹಲದಿಂದ ಅತ್ತಲೇ ನೋಡುತ್ತಿದ್ದರು.

ಕಾಲಿನ ಅಂದಿಗೆ-ಗೆಜ್ಜೆ, ಜಲ್-ಜಲ್ ಎಂದು ಸದ್ದಾಯಿತು. ಲಂಬಾಣಿ ಉಡುಪಿನ ಅತಿ ಚಲುವೆಯಾದ ತರುಣಿಯೊಬ್ಬಳು ಜೀಪಿನಿಂದ ಇಳಿದಳು.

ಸಂಕೋಚದಿಂದ ತಲೆ ತಗ್ಗಿಸಿ ನಿಂತ ಆ ತರುಣಿಯನ್ನು ನಟರಾಜನೇ "ಬಾ ಲಕ್ಷ್ಮೀ ಇದೇ ನಮ್ಮ ಅಕ್ಕನ ಮನೆ" ಎಂದು ಅವಳನ್ನು ಒಳಕ್ಕೆ ಕರತಂದ ಎಲ್ಲರೂ ಬೆರಗಾಗಿ ಆ ಹುಡುಗಿಯನ್ನು ನೋಡಿದರು.

"ಅಕ್ಕಾ ನಾನು ಹೇಳಲಿಲ್ಲವಾ! ಲಂಬಾಣಿ ಹುಡುಗಿ ಲಕ್ಕೀ ಅಂತ ಇವಳೇ ಅಕ್ಕ" ಅಂದ ನಟರಾಜ.

ಇದ್ದಕ್ಕಿದ್ದಂತೆ ಲಂಬಾಣಿ ಹುಡುಗಿಯನ್ನು ನೋಡಿದ ಮಂಗಳೆ ತಬ್ಬಿಬ್ಬಾದಳು. ಆವಳ ಮನಸ್ಸಿನಲ್ಲಿ ನೂರಾರು ಭಾವನಾತರಂಗಗಳು ಬಂದು ಹೋದುವು. ಅಮೃತಶಿಲೆಯ ಕಲಾಕೃತಿಯಂತಿದ್ದ ರೂಪರಾಶಿ ಲಕ್ಕಿಯನ್ನು ನೆಟ್ಟ ದೃಷ್ಟಿಯಿಂದ ನೋಡುತ್ತಾ ನಿಂತುಬಿಟ್ಟಳು.

ಲಕ್ಕಿಗೂ ಹೊಸಜಾಗ, ಹೊಸಜನ, ಏನೋ ಮನಸ್ಸಿಗೆ ಗಾಬರಿ. ತನ್ನ ಬೊಗಸೆ ಕಣ್ಣುಗಳಿಂದ ಸುತ್ತಲೂ ನೋಡಿದಳು.

ಅಲ್ಲಿಯೇ ಇದ್ದ ನಟರಾಜ "ಇದೋ ಇವರೇ ನಮ್ಮ ಅಕ್ಕ ಲಕ್ಕೀ. ಇವಳು ನಮ್ಮ ಅಕ್ಕನ ಮಗಳು ಸುಶೀಲ ಅಂತ. ತುಂಬಾ ತುಂಟ ಹುಡಿಗಿ ನಿನ್ನನ್ನೂ ಬೇಕಾದ್ರೆ ರೇಗಿಸ್ತಾಳೆ."

ಎಂದು ಅವರ ಪರಿಚಯ ಮಾಡಿದ. ಭಾವ ಬಂದಿಲ್ಲವೇನಕ್ಕಾ ! ಅಂದ.

ಇನ್ನೂ ೪-೫ ದಿನ ಅವರಿಗೆ ಪುರಸತ್ತಿಲ್ಲವಂತೆ ಹಾಗೆಂದು ಅಪ್ಪ ಹೇಳಿ ಕಳುಹಿಸಿದ್ದಾರೆ" ಎಂದಳು ಸುಶೀಲ.

"ಇದೇನು ಇಲ್ಲೇ ನಿಲ್ಲಿಸಿಬಿಟ್ಟೆ ನಿಮ್ಮನ್ನ. ಬಾರೋ ರಾಜ ಒಳಕ್ಕೇ ನೀನೂ ಬಾಮ್ಮ" ಎಂದು ಮಂಗಳೆ ಕರೆದಳು.

ಜೀಪಿನಲ್ಲಿರುವ ಸಾಮಾನುಗಳನ್ನೆಲ್ಲಾ ಜವಾನನಿಗೆ ಒಳಗೆ ತಂದಿಡುವಂತೆ ಹೇಳಿ ಎಲ್ಲರೂ ಹಾಲಿನಲ್ಲಿ ಸೋಪಾಮೇಲೆ ಕುಳಿತರು.

ಅರಮನೆಯ ಹಾಗಿದ್ದ ಆ ಮನೆಯನ್ನು ನೋಡಿ ಲಕ್ಕೀ ಬೆಕ್ಕಸ ಬೆರಗಾದಳು. ಏನು ಮಾಡಬೇಕೆಂದು ತೋಚದೆ ಅಲ್ಲೇ ನಿಂತೇ ಇದ್ದಳು.

ತನ್ನ ಸೋದರಮಾವ ಈ ಹುಡುಗಿಯನ್ನೇಕೆ ಜೊತೆಯಲ್ಲಿ ಕರೆದುಕೊಂಡು ಬಂದ ? ಎಂದು ಸುಶೀಲೆಗೆ ಅನುಮಾನ ! ಮನಸ್ಸಿಗೆ ಕಿರಿ-ಕಿರಿ. ಹಾಗೂ ಅಪೂರ್ವ ಸೌಂದರ್ಯ ನಿಧಿಯಾಗಿದ್ದ ಆ ಹುಡುಗಿಯನ್ನು ನೋಡಿ ಏನೋ ಒಂದು ವಿಧವಾದ ಮಮತೆಯೂ ಉಂಟಾಯಿತು ಅವಳಿಗೆ.

"ಬಾರಮ್ಮ...ನೀನೂ ಇಲ್ಲಿ ಕುಳಿತುಕೋ" ಅಂದಳು ಸುಶೀ. ಆದರೂ ಲಕ್ಕಿ ನಿಂತೇ ಇದ್ದಳು.

ತಾನೇ ಲಕ್ಕಿಯ ಬಳಿ ಹೋಗಿ ಕೈಹಿಡಿದು ಕರತಂದು ಸೋಫಾಮೇಲೆ ಕುಳ್ಳಿರಿಸಿಧಳು.

"ಇದೇನೋ ರಾಜ ಈ ಹುಡುಗೀನ ಕರೆದುಕೊಂಡು ಬರ್ತೀನಿ ಅಂತ ತಿಳಿಸಲೇ ಇಲ್ಲ" ಅಂದಳು ಮಂಗಳೆ.

"ನೀನು ನೋಡಬೇಕು ಅಂದ್ಯಲ್ಲಕ್ಕಾ ! ಅದಕ್ಕಾಗಿ ಅವರ ತಾಯಿ, ಸೋದರಮಾವ, ಅವರನ್ನೆಲ್ಲ ಒಪ್ಪಿಸಿ ಕರೆದುಕೊಂಡು ಬಂದೆ. ಪಾಪ ! ಅವರಿಗೆ ನಾನು ಅಂದ್ರೆ ತುಂಬಾ ಅಭಿಮಾನ. ನನ್ನ ಯಾವ ಮಾತಿಗೂ ಇಲ್ಲ ಅನ್ನೋದಿಲ್ಲ ಅಕ್ಕ, ಒಳ್ಳೆ ಜನ" ಅಂದ ನಟರಾಜ.

ಅಮ್ಮಾ ! ಈ ಹುಡುಗಿ ನಮ್ಮ ಸುಮ್ಮಿ, ಹಾಗೇ ಕಾಣ್ತಾಳೆ ಅಲ್ಲವೇನಮ್ಮ ಅಂದಳು ಸುಶೀ

ಯಾವುದೋ ಜ್ಞಾನದಲ್ಲಿದ್ದ ಮಂಗಳೆ ಸುಮ್ಮನೆ ಹೂಂ, ಅಂದಳು.

ಮಾವ ! ಈ ಹುಡಿಗಿ ಇನ್ನು ಮೇಲೆ ನಮ್ಮ ಮನೆಯಲ್ಲಿಯೇ ಇರಲಿ ಬಿಡು ಮಾವ ; ಅಂದಳು ಮುಗ್ಧ ಸುಶೀ

ಸುಶೀಯ ನಿಷ್ಕಲ್ಮಷ ಮನಸ್ಸಿಗೆ ಮಾರುಹೋದ ನಟರಾಜ. ಸುಶೀ.... ನೀನೇ ಅವಳಿಗೆ ಜೊತೆಗಾತಿ, ಸಹಾಯಕಳು, ಮತ್ತು ಸಹೋದರಿ ಕೂಡ. ಹೊಸಜಾಗ, ಅವಳನ್ನು ನೀನೇ ನೋಡಿಕೊಳ್ಳಬೇಕು. ಎಷ್ಟು ದಿನ ಬೇಕಾದ್ರು ಇಟ್ಟುಕೊಂಡಿರು, ಅಂದ ನಟರಾಜ.

ಮಂಗಳೆ ತದೇಕವಾಗಿ ಲಕ್ಕಿಯನ್ನೇ ನೋಡಿದಳು. ಏನೋ ಮಮತೆಯ ಕೊಂಡಿಯೊಂದು ಆ ಹುಡಿಗಿಗೂ ತನಗೂ ಬೆಸೆದಿರುವಂತೆ ಅನ್ನಿಸಿತು. ಅಲ್ಲಿ ಕುಳಿತಿರಲಾರದೆ ಸರ್ರನೆ ಒಳಕ್ಕೆ ಹೋಗಿ ದೇವರ ಮುಂದೆ ಕೈ ಮುಗಿದು ಪ್ರಾರ್ಥಿಸಿದಳು. ದೇವರೇ ! ಮತ್ತೊಮ್ಮೆ ನನ್ನ ಕಂದನನ್ನು ನನ್ನ ಕಣ್ಮುಂದೆ ಕಾಣಿಸಿ ಮರೆ ಮಾಡಬೇಕೆಂದಿರುವೆಯಾ ? ಈ ಮುದ್ದು ಹುಡಿಗಿ ನನ್ನ ಮಗುವೇ ಆಗಿರಲಿ. ಈ ಬಾರಿ ಎಂದೆಂದಿಗೂ ನಾನು ಮೋಸ ಹೋಗುವುದಿಲ್ಲ. ಮುಂದಿನ ದಾರಿ ನೀನೇ ತೋರಿಸಬೇಕು. ಎಂದು ಬೇಡಿದಳು.

ಮನೆಯಲ್ಲಿ ಮದುವೆ ಕೆಲಸ ಕಾರ್ಯಗಳು ನಡೆಯುತ್ತಲೇ ಇದ್ದುವು. ನಟರಾಜ ಏನೊಂದು ಹೇಳದೇ ತನ್ನ ಕೆಲಸ ಕಾರ್ಯಕ್ಕೆ ಹೊರಗೆ ಹೋಗಿ ಬರುತ್ತಿದ್ದ.

ಮುಗ್ಧ ಬಾಲಿಕೆ ಲಕ್ಕಿಯ ಮೇಲೆ ಏನೋ ಅಕ್ಕರೆ ಸುಶೀಗೆ. ಅವಳ ಜೊತೆ ಜೊತೆಯಾಗಿ ಅವಳಿಗೆ ಯಾವ ವಿಧವಾದ ಬೇಸರವೂ ಆಗದಂತೆ ಸುಶೀ ನೋಡಿಕೊಳ್ಳುತ್ತಿದ್ದಳು.

ಲಕ್ಕಿಯ ನಡೆ-ನುಡಿ ಘನತೆ-ಗಾಂಭೀರ್ಯ ಆ ಮನೆಯವರನ್ನೆಲ್ಲಾ ಆಕರ್ಷಿಸಿತು. ಎರಡು ಮೂರು ದಿನಗಳೆನ್ನುವುದರೊಳಗೆ ಲಕ್ಕಿಯೂ ಆ ಮನೆಗೆ ಹೊಂದಿಕೊಂಡಳು.

ಮಂಗಳೆಗಂತೂ ಲಕ್ಕಿಯ ಮೇಲೆ ಒಂದು ಕಣ್ಣು ಇದ್ದೇ ಇತ್ತು. ಒಂದು ಗಳಿಗೆ ಅವಳು ಕಣ್ಮರೆಯಾದರೆ ಮನೆಯೆಲ್ಲಾ ಹುಡುಕಾಡುತ್ತಿದ್ದಳು.

"ಈ ಹುಡುಗಿಗೆ ಲಂಬಾಣಿ ಪಟ್ಟದ ಉಡುಪನ್ನು ತೆಗೆದು ನಮ್ಮಂತೆ ಸೀರೆ ಕುಪ್ಪಸ ಹಾಕಿ ನೋಡಬೇಕು ಹೇಗೆ ಕಾಣುತ್ತಾಳೋ ?" ಎಂದು ಮನದಲ್ಲಿ ಆಸೆ ಪಟ್ಟಳು ಮಂಗಳೆ

ಆ ದಿನ ಬೆಳಿಗ್ಗೆ ಲಕ್ಕಿ ಹುರುಳಿಕಾಯಿ ಬಿಡಿಸಿ ನಾರು ತೆಗೆದು ಹೆಚ್ಚುತ್ತಿದ್ದಳು. ಮಂಗಳೆ ಅವಳ ಬಳಿ ಬಂದು....

ಅಲ್ಲಮ್ಮ ಲಕ್ಕಿ ನಮ್ಮ ಮನೇಲಿರೋವರ್ಗೂ ನೀನೂ ನಮ್ಮ ಸುಶೀಲೆಯಂತೆ ಸೀರೇನೆ ಉಟ್ಕೊಕೋ....ನಿನಗೆ ಚೆನ್ನಾಗಿ ಕಾಣುತ್ತೆ ಅಂದಳು—

ನನಗೆ ಬರಾಕಿಲ್ಲ ಅಮ್ಮ ಅಂದಳು ಲಕ್ಕಿ.

ಮಂಗಳೆಯ ಮಮತೆ ಲಕ್ಕಿಯನ್ನು ಬೆರಗು ಗೊಳಿಸಿತ್ತು ಅವಳು ಅಕ್ಕರೆಯಿಂದ "ಅಮ್ಮ" ಎಂದೇ ಕರೆಯುತ್ತಿದ್ದಳು. ಏನೋ ಭಯ-ಭಕ್ತಿ. ಮಂಗಳೆ ಹೇಳಿದ್ದನ್ನು ಚಾಚೂ ತಪ್ಪದೆ ಮಾಡುತ್ತಿದ್ದಳು—ಈಗ ಮಂಗಳೆ ಸೀರೆ ಉಟ್ಕೊಕೋ . ಅಂದರೆ ಹುಂ ಎಂದು ಒಪ್ಪಿಕೊಳ್ಳಬೇಕಾಗಿತ್ತು, ಅನ್ನಿಸಿತು.

ಮಂಗಳೆಯೇ ಪುನಃ "ನಿನಗೆ ಬರದಿದ್ದರೆ ಸುಶೀಲೆ ಉಡಿಸಿ ತೋರಿಸಿ ಕೊಡುತ್ತಾಳೆ" ಎಂದು "ಲೇ ಸುಶೀ ಬಾ ಇಲ್ಲಿ" ಅಂದಳು.

ಸುಶೀಲೆ ಸ್ನಾನಕ್ಕೆ ನೀರು ಹದ ಮಾಡುತ್ತಿದ್ದವಳು ಬಂದು "ಏನಮ್ಮಾ?" ಎಂದಳು.

"ನೋಡು ಇವತ್ತು ಲಕ್ಕಿಗೆ ಸ್ನಾನವಾದ ಮೇಲೆ ಒಂದು ಸೀರೆ ನಿನ್ನದೇ ಉಡಿಸು" ಎಂದಳು.

ಸುಶೀಗೆ ತುಂಬಾ ಹಿಗ್ಗು. ಅವಳಿಗೂ ಅದೇ ಆಸೆ ಇತ್ತು. ಹೋಗು ಲಕ್ಷ್ಮಿ ಸ್ನಾನ ಮಾಡಿ ಬಾ : ಅಮ್ಮಾ ಹೇಳಿದಂತೆ ಇವತ್ತು ನೀನು ಸೀರೆ ಉಟ್ಕೊಕೊಳ್ಳಬೇಕು. ಅಂದಳು.

ನನಗಂತೂ ಅಭ್ಯಾಸವಿಲ್ಲ. ಏನೋ ನಿಮ್ಮಿಷ್ಟ ಎಂದು ಸ್ನಾನಮಾಡಲು ಹೋದಳು. ಸುಶೀಗೆ ಸಡಗರ. ದಂತದ ಮೈಬಣ್ಣಕ್ಕೆ ಯಾವ ಬಣ್ಣದ ಸೀರೆ ಹೊಂದುತ್ತೆ ? ಬೀರುವೆಲ್ಲಾ ಕೆದಕಿ-ಆರಿಸಿ ಆರಿಸಿ ತನ್ನ, ತಿಳಿ ನೀಲಿ ಆಕಾಶದ ಬಣ್ಣ ಮಧ್ಯೆಮಧ್ಯೆ ಸರಿಗೆ ನಕ್ಷತ್ರಗಳು. ಅಂಚಿಗೆ ಸರಿಗೆ ಗೋಪುರ, ಬಂದಿರುವ ರೇಷ್ಮೆ ಸೀರೆಯನ್ನು ತೆಗೆದಿಟ್ಟಳು.

ಅದಕ್ಕೆ ಒಪ್ಪುವ ಎಲ್ಲಾ ಮುತ್ತಿನ ಆಭರಣದ ಸೆಟ್ಟನ್ನೂ ತೆಗೆದಿಟ್ಟಳು. ಇದನ್ನೆಲ್ಲಾ ಹಾಕಿದರೆ ಲಕ್ಕಿ ಹೇಗಿರಬಹುದು ?—ಎಂದು ಊಹಿಸಿಯೇ ಆನಂದ ಪಟ್ಟಳು ಸುಶೀ—

ಲಕ್ಕಿ ಸ್ನಾನಮಾಡಿ ಬಂದ ಕೂಡಲೇ ಒಂದು ಕೈ ಪೆಟ್ಟಿಗೆಯನ್ನು ತಂದಿರಿಸಿ ಅದರೊಳಗೆ ಅವಳ ಲಂಬಾಣಿ ಮೂಳೆಬಳೆ ಬೆಳ್ಳಿ ಆಭರಣ ಎಲ್ಲಾ ಕಳಚಿಬಿಡು ವಂತೆ ಹೇಳಿದಳು. ಆಮೇಲೆ ನಿರಾಭರಣ ಲಕ್ಕಿಯನ್ನು ಕನ್ನಡಿ ಮುಂದು ನಿಲ್ಲಿಸಿ ತಲೆ ಬಾಚಿ ನೀಳ ಜಡೆ ಹೆಣೆದಳು. ಮಲ್ಲಿಗೆ ಕನಕಾಂಬರ ಸೇರಿದ ಹೂ ದಂಡೆ ಮುಡಿಸಿದಳು. ಎಲ್ಲಾ ಒಡವೆಗಳನ್ನೂ ಹಾಕಿ, ತಾನೇ ಸೀರೆ ಉಡಿಸಿದಳು. ಹಣೆಗೆ ಕೆಂಪು ತಿಲಕವನ್ನು ತಿದ್ದಿ, ತಾನೂ ನಾಲ್ಕು ಹೆಜ್ಜೆ ಹಿಂದೆ ಹೋಗಿ ಲಕ್ಕಿ ಯನ್ನು ಕಣ್ಣಿವೆ ಮುಚ್ಚದೆ ನೋಡಿದಳು ಕಣ್ಣು ಕೊರೈಸುವಂತಾಯಿತು. ದೃಷ್ಟಿ ತಾಕೀತೆಂದು ಅವಳ ಕೆನ್ನೆಯ ಮೇಲೊಂದು ಕರಿ ಚುಕ್ಕೆಯನ್ನಿಟ್ಟಳು. ಈಗ ಕನ್ನಡಿಯಲ್ಲಿ ನೋಡು ಲಕ್ಷ್ಮಿ ಯಾರು ಅಂತ ಅವಳನ್ನು ಕನ್ನಡಿ ಮುಂದೆ ನಿಲ್ಲಿಸಿದಳು.

ಲಕ್ಕಿಗೆ ತಲೆಯೆತ್ತಿ ಕನ್ನಡಿಯಲ್ಲಿ ತನ್ನ ರೂಪವನ್ನು ನೋಡಿಕೊಳ್ಳಲು ತನಗೆ ನಾಚಿಕೆಯಾಯಿತು. ಕನ್ನಡಿಯಲ್ಲಿ ಒಂದು ಬಾರಿ ನೋಡಿ ಚಕಿತಳಾದಳು ಲಕ್ಕಿ.

ನೋಡಿದ್ಯಾ ! ಲಕ್ಷ್ಮಿ ! ಈಗ ನೀನು ಎಷ್ಟು ಚೆನ್ನಾಗಿ ಕಾಣ್ತೀಯಾ ? ಎಂದು ಅಪ್ಪಿ ಮುದ್ದು ಗರೆದಳು ಸುಶೀ.

ಇಬ್ಬರೂ ಒಟ್ಟಿಗೆ ಮಹಡಿ ಮೆಟ್ಟಿಲನ್ನು ಇಳಿದು ಬಂದರು. ತಟ್ಟೆಯಲ್ಲಿ ದೇವರ ಪ್ರಸಾದವನ್ನು ಹಿಡಿದು ಮಕ್ಕಳಿಗೆ ಕೊಡುವುದಕ್ಕೆಂದು ಮಂಗಳೆ ಅಲ್ಲಿಗೆ ಬಂದಳು.

ಒಂದೇ ಸಮ ಅವಳಿ ಮಕ್ಕಳಂತಿದ್ದ ಸುಶೀ-ಲಕ್ಕಿಯರನ್ನು ನೋಡಿ ಮಂಗಳೆ ಬೆಕ್ಕಸ ಬೆರಗಾದಳು. ಏನೇ ಸುಶೀ ಲಕ್ಕಿ ಲಂಬಾಣಿ ಹುಡಿಗಿ ಎಂದು ಹೇಳುವುದಕ್ಕೇ ಸಾಧ್ಯವಿಲ್ಲವಲ್ಲೇ ! ರಾಜ ಆವತ್ತು ಹೇಳಿದ್ದು ನಿಜ, ಎಲ್ಲ ನಮ್ಮ ಸುಮ್ಮೀ,, ಹಾಗ್ಗೆ ಇದ್ದಾಳೆ. ಕೊಳ್ಳಿ ಪ್ರಸಾದ, ಎಂದು ಇಬ್ಬರಿಗೂ ಪ್ರಸಾದ ಕೊಟ್ಟಳು. ಮನಸ್ಸು ತಡೆಯಲಾರದೆ ಅವಳ ಕೆನ್ನೆಯನ್ನು ಎರಡು ಕೈಗಳಿಂದಲೂ ಸವರಿ ಲಟಿಕೆ ಮುರಿದಳು.

ಲಕ್ಷ್ಮೀ ನಿಜವಾಗಿ ಹೀಗಿದ್ದರೆ ನಿನಗೆ ದೃಷ್ಟಿತಾಕುತ್ತಮ್ಮ. ದೇವರು ನಿನ್ನನ್ನು ಸುಖವಾಗಿಡಲಿ ಎಂದು ಹರಿಸಿದಳು.

ಮೂಢ ಲಂಬಾಣಿಗಳ ಮಧ್ಯೆ ಬೆಳೆದರೂ ಸ್ವಭಾವತಃ ಚುರುಕು ಬುದ್ಧಿಯುಳ್ಳ ಲಕ್ಕಿ ಈ ಮನೆಯ ಜನದ ಘನತೆ, ಹಾಗೂ ಮಮತೆಯನ್ನು ಅರ್ಥ ಮಾಡಿಕೊಂಡಳು. ಅವರಿಗೆ ತಕ್ಕಂತೆ ನಡೆದು ಕೊಂಡಳು. ನಟರಾಜನ ಬಗ್ಗೆ ಅತೀವ ಗೌರವ ಭಾವನೆ ಮೂಡಿತು. ತನ್ನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಇವರೆಲ್ಲರ ಮಮತೆಯ ಮಡಿಲಿನಲ್ಲಿ ಬಿಟ್ಟಿದ್ದಕ್ಕೆ ಮನಸ್ಸಿನಲ್ಲಿಯೇ ಅವನಿಗೆ ಕೃತಜ್ಞತೆ ಸಲ್ಲಿಸಿದಳು.

ಮಂಗಳೆಯಾದರೂ ಅಷ್ಟೆ ಕಡಿದು ಹೋಗಿದ್ದ ತನ್ನ ಕುಡಿಯನ್ನು ಚಿಗುರಿಸಲು ದೇವರೇ ನಟರಾಜನಿಗೆ ಲಕ್ಕಿಯಮೇಲೆ ಅಕ್ಕರೆಯನ್ನು ತುಂಬಿರ ಬಹುದು. ಸದ್ಯ ಹಾಗಾದ ಪಕ್ಷದಲ್ಲಿ ನನ್ನ ರಾಜ ಏನು ಕೇಳಿದರೂ ಕೊಟ್ಟು ಬಿಡುತ್ತೇನೆ ಎಂದು ಮನಸ್ಸಿನಲ್ಲಿಯೇ ನಾನಾ ಆಶಾ ಕೋಟೆಯನ್ನು ಕಟ್ಟಿದಳು ಈಗ ಅವಳ ಮನಸ್ಸಿನಲ್ಲಿ ಏನೋ ನೆಮ್ಮದಿ. ಕೆಲಸದಲ್ಲಿ ಉತ್ಸಾಹ, ಅವಳ ಆರೋಗ್ಯವೂ ಸುಧಾರಿಸುತ್ತಾ ಬಂತು.

ಲಕ್ಕಿಯ ಅಲಂಕಾರವನ್ನು ನೋಡಿ ಬೆರಗಾದವನೆಂದರೆ ನಟರಾಜ "ಅಕ್ಕಾ ನೀನೇ ನೋಡಕ್ಕ ! ಲಂಬಾಣಿ ಹುಡುಗೀ ಅಂತ ಹೇಳೋದಕ್ಕಾಗುತ್ತಾ ಕ್ಕಾ !" ಎಂದು ಖುಷಿಯಿಂದ ಹೇಳಿದ.

"ಸರಿ ರಾಜ, ಅದಕ್ಕೇನು ಮಾಡಲು ಸಾಧ್ಯ ? ಅವಳನ್ನು ಇಲ್ಲಿಯೇ ಇಟ್ಟುಕೊಳ್ಳಲು ಅವರ ಮನೆಯವರು ಬಿಡುತ್ತಾರೇನಪ್ಪಾ" ಅಂದಳು.

"ಹೂಂ ಕಣಕ್ಕಾ ನೀನು ಮನಸ್ಸು ಮಾಡಿದರೆ ಇಟ್ಟುಕೊಳ್ಳಬಹುದು ಅಂದ. ನಟರಾಜನ ಮನಸ್ಸಿನಲ್ಲಿರುವುದು ಮಂಗಳೆಗೇನು ಗೊತ್ತು ? ಸುಶೀ ಮದುವೆ ಆಗೋವರ್ಗೂ ಇಲ್ಲಿಯೇ ಇರಲಿಬಿಡು" ಎಂದು ಹೇಳಿ ಒಂದು ನಿಟ್ಟುಸಿರು ಬಿಟ್ಟಳು.

"ಎಂಟೇ ದಿನದಲ್ಲಿ ಲಕ್ಕಿಯನ್ನು ಉಡಿಗೆ, ತೊಡಿಗೆ, ನಯ ಸಾಜೂಕು ಮಾತು ಕತೆ ಎಲ್ಲದರಲ್ಲಿಯೂ ನಾಗರಿಕಳಂತೆ ತಯಾರು ಮಾಡಿದ ಸುಶೀಲಳನ್ನು ತುಂಬಾ ಕೊಂಡಾಡಿದ.

ಈಗ ಅವನ ಮನಸ್ಸಿನಲ್ಲಿ ಎರಡು ವ್ಯಕ್ತಿಗಳು ಬಂದು ನಿಂತು ಪೈಪೋಟಿ ಮಾಡುತ್ತಿದ್ದುವು.

ಒಂದು ಸರಳ ಸುಂದರ ಮುಗ್ಧ ವನರಾಣಿ ಲಕ್ಕಿ. ಮತ್ತೊಂದು ನಿಷ್ಕಲ್ಮಷ ಪ್ರೇಮದಿಂದ ತನ್ನನ್ನು ಹೃದಯ ಮಂದಿರದಲ್ಲಿಟ್ಟು ಆರಾಧಿಸುತ್ತಿರುವ ಸುಶೀಲ, ಇಬ್ಬರಲ್ಲಿ ಯಾರನ್ನು ಆರಿಸಿಕೊಳ್ಳುವುದು ?

"ಪಾಪ ! ಅಕ್ಕ-ಭಾವ, ತಂದೆ, ತಾಯಿ, ಎಲ್ಲರೂ ಸುಶೀನೇ, ನನ್ನ ಸಂಗಾತಿಯಾಗುವವಳು ಎಂದು ನಿಶ್ಚಯಿಸಿದ್ದಾರೆ. ಅವರೆಲ್ಲರ ಮನಸ್ಸಿಗೆ ನೋವಾಗುವಂತೆ ಸುಶೀಲಳನ್ನೇ ಮದುವೆಯಾಗುವುದು ನ್ಯಾಯ" ಎಂದು ಒಂದು ಮನಸ್ಸು ಹೇಳಿತು.

ಮತ್ತೊಂದು ಮನಸ್ಸು ಪಾಪ ! ಲಕ್ಕಿಗೆ ಮಾತುಕೊಟ್ಟು ನಿನ್ನನ್ನೇ ಮದುವೆ ಆಗುತ್ತೇನೆ ಎಂದು ಕರೆದುಕೊಂಡು ಬಂದು ಏನೂ ಅರಿಯದ ಮುಗ್ಧ ಹುಡುಗಿಗೆ ಮೋಸ ಮಾಡುವುದೇ ? ಛೆ.... ಛೆ.... ಲಕ್ಕಿಯಿಲ್ಲದ ನನ್ನ ಜೀವನ ನೀರಿಲ್ಲದ ಮರುಭೂಮಿಯಂತೆ ಏನಾದರಾಗಲಿ, ಇಷ್ಟು ಜನವೂ ನನ್ನನ್ನು ಕಡೆಗಣಿಸಿದರೂ, ನಾನು ಲಕ್ಕಿಯನ್ನೇ ಮದುವೆಯಾಗುವುದು ಎಂದು ಮತ್ತೊಂದು ಬಾರಿ ಧೃಢ ಮಾಡಿಕೊಂಡ ನಟರಾಜ.

ಈ ವೇಳೆಗೆ ಮನೆಯ ಆಡಳಿತವನ್ನೆಲ್ಲಾ ಅರಿತ ಲಕ್ಕಿಗೆ ನಟರಾಜನಿಗೂ, ಸುಶೀಲಳಿಗೂ ಮದುವೆ ಏರ್ಪಾಡುಗಳು ನಡೆಯುತ್ತಿವೆ" ಎಂಬುದು ತಿಳಿಯಿತು.

"ಆ ಮನೆಯ ದೊಡ್ಡಸ್ತಿಕೆ, ವಹಿವಾಟು, ಸಿರಿ ಸಂಪತ್ತು, ಎಲ್ಲವನ್ನೂ ಕಣ್ಣಾರೆ ನೋಡುತ್ತಿದ್ದ ಲಕ್ಕಿಗೆ ತಾನು ಯಾವ ಮೂಲೆಯ ಭಿಕಾರಿ ? ತಾನು ಅವಿದ್ಯಾವಂತೆ, ಒರಟು ಗುಡ್ಡಗಾಡಿನ ಜನ. ಮೇಲಾಗಿ ತಿನ್ನುವುದಕ್ಕೂ ಗತಿಯಿಲ್ಲದ ಬಡವರ ಮಗಳು. ಇವರ ಅಂತಸ್ತಿಗೂ ನಮಗೂ ಯಾವ ಹೊಂದಾಣಿಕೆ ಇದೆ ? ನಮ್ಮ ದಣಿಯೋರು ದೇವರಂತವರು. ಅವರಿಗೆ ಸರಿಯಾದ ಹುಡುಗಿ ಎಂದರೆ ಸುಶೀ ಅಕ್ಕನೇ ಸರಿ.

"ಹೇಗಾರಮಾಡಿ ದಣಿಯೋರನ್ನ ಒಪ್ಪಿಸಬೇಕು" ಎಂದು ಮನಸ್ಸಿನಲ್ಲಿ ತೀರ್ಮಾನ ಮಾಡಿದಳು ಲಕ್ಕಿ.

"ಆದಿನ ಮಂಗಳೆ ಸುಶೀ ಇಬ್ಬರೂ ಮನೆಯಲ್ಲಿ ಇರಲಿಲ್ಲ. ಮದುವೆಗೆಂದು ಕೆಲವು ಒಡವೆಗಳನ್ನು ಆರಿಸಲು ಪೇಟೆಗೆ ಹೋಗಿದ್ದರು. ಲಕ್ಕಿ ನಿರಾಡಂಬರ

ಳಾಗಿ ಒಂದು ಬಿಳೀ ವಾಯಿಲ್ ಸೀರೆಯುಟ್ಟು ಕರೀ ರವಿಕೆಯನ್ನು ತೊಟ್ಟಿದ್ದಳು ಒಂದೇ ಎಳೆ ಮುತ್ತಿನ ಸರ ಮಾತ್ರ ಕತ್ತಿನಲ್ಲಿ ತೂಗಾಡುತ್ತಿತ್ತು. ಧರೆಗಿಳಿದು ಬಂದ ದೇವತೆಯಂತಿದ್ದಳು. ಅವಳು ವರಾಂಡದ ಸಾಮಾನುಗಳನ್ನು ಓರಣ ವಾಗಿಟ್ಟು ಶುಚಿ ಮಾಡುವ ಕೆಲಸದಲ್ಲಿ ತೊಡಗಿದ್ದಳು. ಕೈಕೆಲಸ ಮಾಡು ತ್ತಿದ್ದರೂ ಮನಸ್ಸು ಕದಡಿದ ಕೊಳವಾಗಿತ್ತು-

"ನಟರಾಜನನ್ನು ಬಿಟ್ಟುಕೊಡಲಾರಳು, ಕಟ್ಟಿಕೊಳ್ಳಲಾರಳು. ಈ ಸ್ಥಿತಿಯಲ್ಲಿ ತೂಗುಯ್ಯಾಲೆಯಾಗಿತ್ತು ಅವಳ ಮನಸ್ಸು."

"ನಟರಾಜ ಆಪೀಸಿನ ಕೆಲಸ ಮುಗಿಸಿ ಆಗತಾನೇ ಮನೆಗೆ ಬಂದ. ಒಳಗೆ ಹೋಗಿ ನೋಡಿದ. ಅಕ್ಕ, ಸುಶೀಲ ಯಾರೂ ಕಾಣಲಿಲ್ಲ. ವೆರಾಂಡಕ್ಕೆ ಬಂದು ಎಲ್ಲರೂ ಎಲ್ಲಿ ಲಕ್ಷ್ಮೀ ?" ಅಂದ.

"ಅವರು ಪೇಟೆಗೆ ಹೋಗಿದಾರೆ" ಎಂದು ಅಷ್ಟೇ ಹೇಳಿ ತನ್ನ ಕೆಲಸದಲ್ಲಿ ತೊಡಗಿದಳು.

"ಯಾಕೆ ಲಕ್ಷ್ಮಿ ! ನೀನು ಗುಡಿಸುತ್ತಾ ಇದ್ದೀಯಾ, ಹನುಮಪ್ಪ ಎಲ್ಲಿ ? ಅಂದ.

"ಯಾಕೆ" ಹನುಮಪ್ಪ ಆದರೆ ಏನು ? ನಾನಾದರೆ ಏನು ? ಆಯಪ್ಪ ಎಲ್ಲೋ ಹೋಗಿದಾನೆ ನಾನೇ ಗುಡಿಸ್ದೆ" ಅಂದಳು ಗಂಭೀರವಾಗಿ.

"ಲಕ್ಷ್ಮೀ ಕೆಲವೇ ದಿವಸಗಳಲ್ಲಿ ನೀನು ಎಷ್ಟು ಚೆನ್ನಾಗಿ ಶುದ್ಧ ಭಾಷೆ ಯಿಂದ ಮಾತಾಡುವುದನ್ನು ಕಲಿತುಬಿಟ್ಟೆಯಲ್ಲಾ ! ವಿದ್ಯಾವಂತರಿಗಿಂತ, ಯಾವುದರಲ್ಲಿಯೂ ನೀನು ಹಿಂದಿಲ್ಲ ಲಕ್ಷ್ಮೀ" ಎಂದು ಅವಳ ಬೆನ್ನಮೇಲೆ ಕೈ ಆಡಿಸಿದ ನಟರಾಜ.

"ಈಗ ಲಕ್ಷ್ಮಿ ಪರಕೆಯನ್ನು ಅಲ್ಲಿಯೇ ಇಟ್ಟು ನಿಮ್ಮ ಹತ್ರ ಸ್ವಲ್ಪ ಮಾತನಾಡಬೇಕು" ಅಂದಳು ತಲೆತಗ್ಗಿಸಿ.

"ಓ....ಹೋ ! ಬೇಕಾದಷ್ಟು ಮಾತನಾಡು ಇದೋ ಇಲ್ಲೇ ಕುಳಿತೆ." ಎಂದು ಅಲ್ಲಿದ್ದ ಕುರ್ಚಿಯಮೇಲೆ ಕುಳಿತ ನಟರಾಜ.

"ಇಲ್ಲಿ ಆಗೋಲ್ಲ ತುಂಬಾ ಮಾತನಾಡಬೇಕು" ಅಂದಳು ಲಕ್ಷ್ಮಿ

"ಓಹೋ....ಹೋ ಅದೇನಪ್ಪಾ ಇವತ್ತು ನನ್ನ ಸಾಹೇಬ್ರು ನನ್ನ ಕೈಲಿ

ಮಂತ್ರಲೋಚನೆ ಮಾಡೋದು ! ಜೀಪು ಸಿದ್ಧವಾಗಿದೆ ನಡೀ ಎಲ್ಲಿಗೆ ಬೇಕಾದ್ರೂ ಹೋಗೋಣ ಅಂದ ನಟರಾಜ.

ಮನೆಯಲ್ಲಿ ಕೆಲಸದವರಿಗೆ ತಿಳಿಸಿ ನಟರಾಜ ಲಕ್ಕಿಯ ಜೊತೆ ಜೀಪಿನಲ್ಲಿ ಹೊರಟ. ಎರಡು ಮೈಲಿ ಹೋಗಿ ಅಲ್ಲಿ ಝುಳ—ಝುಳನೆ ಹರಿಯುತ್ತಿದ್ದ ಹೊಳೆಯ ಬಳಿ ಜೀಪು ನಿಲ್ಲಿಸಿದ.

ನಿರ್ಜನ ಪ್ರದೇಶವಾಗಿತ್ತು. ಹೊಳೆಯ ತೀರದಲ್ಲಿ ದೊಡ್ಡ ದೊಡ್ಡ ಬಂಡೆಗಲ್ಲುಗಳಿದ್ದುವು.

ಲಕ್ಕಿಯ ಕೈ ಹಿಡಿದು ಇಳಿಸಿ ನೀರಿನ ತೀರದ ವಿಶಾಲ ಬಂಡೆಯಮೇಲೆ ಅವಳನ್ನೂ ಕುಳ್ಳಿರಿಸಿ ತಾನೂ ಅವಳ ಸನಿಹ ಕುಳಿತ ನಟರಾಜ.

ಆಯಿತು ಈಗ ಸಂಕೋಚವಿಲ್ಲದೆ ಬೇಕಾದಷ್ಟು ಮಾತನಾಡ ಬಹುದು ವನರಾಣಿ ಅಂದ.

ಲಕ್ಕಿ ಆಳವಾದ ಯೋಚನೆಯಲ್ಲಿ ಮುಳುಗಿದ್ದಳು. ಬಾಯಲ್ಲಿ ಒಂದು ಹುಲ್ಲಿನ ಕಡ್ಡಿಯನ್ನು ಅಗಿಯುತ್ತಾ ನದಿಯ ಪ್ರವಾಹವನ್ನೇ ದಿಟ್ಟಿಸುತ್ತಿದ್ದಳು. ಮನಸ್ಸು "ಆ ಮಾತನ್ನು ಹೇಳಿಬಿಟ್ಟರೆ ನನ್ನ ಗತಿ ?" ಎಂದು ತ್ರಳ ಮಳಿಸುತ್ತಿತ್ತು.

ಲಕ್ಕಿಯ ಭುಜವನ್ನು ಹಿಡಿದಲುಗಿಸಿ "ಏನು ಲಕ್ಷ್ಮಿ: ತುಂಬಾ ಯೋಚನೆ ಮಾಡುವಂತಿದೆ ಅದೇನು ಹೇಳು" ಅಂದ.

ಈಗ ಮನೆಯಲ್ಲಿ ಮದುವೆ ಕೆಲಸ ನಡೆಯುತ್ತಿದೆಯಲ್ಲಾ ಯಾರ ಮದುವೆ? ಎಂದು ನಿರ್ವಿಕಾರವಾಗಿ ಕೇಳಿದಳು ಲಕ್ಕಿ.

ನನ್ನ ಮದುವೆಯೇ.

ಹೆಣ್ಣು ಯಾರು ?

ಹೆಣ್ಣು ಇನ್ನೂ ನಿಶ್ಚಯವಾಗಿಲ್ಲ.

ರಾಜ ; ನನ್ನಲ್ಲಿ ಮುಚ್ಚು-ಮರೆ ಮಾಡಬೇಡಿ. ನಾನು ಹಳ್ಳಿಮುಕ್ಕ ; ಆದ್ರೂ ನಿಮ್ಮ ಸಹವಾಸದಿಂದ ಎಲ್ಲಾ ತಿಳಿವಳಿಕೇನೂ ಉಂಟಾಗಿದೆ. ನಿಮಗೂ ಸುಶೀ ಅಕ್ಕನಿಗೂ ಅಲ್ಲವಾ ಮದುವೆ ?

"ಲಕ್ಕಿ ಈ ವಿಚಾರದಲ್ಲಿ ನೀನು ತಲೆ ಕೆಡಿಸಿ ಕೊಳ್ಳಬೇಡ. ಅವರು ಮೊದಲಿನಿಂದಲೂ ಸುಶೀನ ನನಗೇ ಕೊಡಬೇಕು ಎಂದು ಮಾಡಿಕೊಂಡಿದ್ದಾರೆ. ನಾನು

ಮಾತ್ರ ಒಂದು ದಿನಕ್ಕೂ ಆಗಲಿ ಎಂದು ಮಾತು ಕೊಟ್ಟಿಲ್ಲ. ಈಗಲೂ ಮಾಡಿ ಕೊಳ್ಳುವುದಿಲ್ಲ.

ರಾಜ....ಸಾಕು....ನೀವು ಬಲು ಬುದ್ಧಿವಂತರು ಸುಶೀ ಅಕ್ಕನ್ನ ಏಕೆ ಮಾಡಿಕೊಳ್ಳುವುದಿಲ್ಲ ? ಅಂದಳು ಸಿಟ್ಟಿನಿಂದಲೇ.

ಈ ವನರಾಣಿ ನನ್ನ ಹೃದಯ ರಾಣಿಯಾಗಿರುವಾಗ ಬೇರಯವರಿಗೆ ಅಲ್ಲಿ ಸ್ಥಳವೇ ಇಲ್ಲ.

ಈಗ ಲಕ್ಕಿ ತುಂಬಾ ವ್ಯಸನದಿಂಡ ಹೇಳಿದಳು "ನೋಡಿ ! ರಾಜ : ಎಷ್ಟಾರ ನೀವು ದೊಡ್ಡ ಮನೆತನದವರು, ಉತ್ತಮ ಜಾತಿ, ಅಧಿಕಾರ ಅಂತಸ್ತು ಎಲ್ಲಾ ಉಳ್ಳವರು. ನಾವಂದ್ರೆ ತೀರಾ ಬಡ ಕುಟುಂಬದವರು. ಗುಡ್ಡಗಾಡಿನ ಒರಟು ಜನಗಳು. ನಿಮಗೂ-ನಮಗೂ ಎಂದಿಗೂ ಸರಿಬರಾಕಿಲ್ಲ, ಸುಶೀ ಅಕ್ಕನೇ ನಿಮಗೆ ಸರಿಯಾದ ಜೋಡಿ. ನಿಮ್ಮಿಬ್ಬರ ಮದುವೆಯನ್ನು ನಾನು ನೋಡಿ ಸಂತೋಷ ಪಡುತ್ತೇನೆ ನನ್ನ ರಾಜ ; ನೀವು ಇದಕ್ಕೆ ಒಪ್ಪಿಕೊಳ್ಳಿ" ಎಂದು ನಟರಾಜನ ಪಾದವನ್ನು ಮುಟ್ಟಿ ಕಣ್ಣೊತ್ತಿಕೊಂಡಳು.

ನಟರಾಜ ಲಕ್ಕಿಯ ಮಾತಿಗೆ ಬೆರಗಾದ. "ಏಯ್ ! ಲಕ್ಷ್ಮಿ : ನೀನು ನಿಜವಾಗಿ ಇಷ್ಟೊಂದು ಚೆನ್ನಾಗಿ ಮಾತಾಡ್ತೀಯಾ ! ಅಂತ ನಾನು ತಿಳಿದೇ ಇರಲಿಲ್ಲ. ಭೇಷ್ ; ನೀನು ಗುಡ್ಡಗಾಡಿನ ಜನನಾ ? ಅಬ್ಬ ! ಯಾವ ಪಟ್ಟಣದ ಹುಡುಗಿ ವಿದ್ಯಾವಂತೆ ನಿನ್ನಂತೆ ಮಾತನಾಡ ಬಲ್ಲಳು ? ಲಕ್ಕೀ ನೀನು ಹೇಗಿದ್ದರೂ ಸರಿ ನೀನೇ ನನ್ನ ಬಾಳ ಗೆಳತಿ. ನೀನಿಲ್ಲದ ಈ ಪ್ರಪಂಚವೇ ನನಗೆ ಬೇಡ ತಿಳಿಯಿತೇ ? "

ಅಯ್ಯೋ : ರಾಜ... ಈ ವಿಚಾರ ನಿಮ್ಮ ಮನೆಯವರಿಗೆ ತಿಳಿದರೆ ಏನೆಲ್ಲಾ ಅವಾಂತರ ಆಗಬಹುದು....ಎಂದು ಯೋಚಿಸಿದರೇ ನನಗೆ ಭಯ ವಾಗುತ್ತೆ.

ನೋಡು ಲಕ್ಕಿ ನಮ್ಮ ಅಕ್ಕನಿಗೆ ನಿನ್ನನ್ನು ಕಂಡರೆ ಏನೋ ಅಭಿಮಾನ, ನಾನೂ ನೋಡ್ತಾ ಇದ್ದೀನಲ್ಲಾ ! ನಿನಗಾಗಿ ಏನು ಬೇಕಾದ್ರೂ ಮಾಡ್ತಾಳೆ. ನಮ್ಮ ಮದುವೆಗೆ-ಅಕ್ಕನನ್ನೇ ಮರೆಹೊಕ್ಕರೆ ಆಯಿತು. ಅಂದ.

ಆದೇನೋ ನಿಜ ರಾಜ ; ಪಾಪ ! ಯಾವ ಜನ್ಮದ ತಾಯಿಯೋ ಆಕೆ ನನ್ನನ್ನು ತುಂಬಾ ಪ್ರೀತಿಸ್ತಾರೆ. ಅದಕ್ಕೆ ನಾನಂತೂ ಅಮ್ಮಾ ಎಂದೇ

ಕರೆಯುವುದು. ಏನಾದರೂ ಆಗಲಿ ನೀವು ಖಂಡಿತಾ ಅವರೆಲ್ಲರ ಮನಸ್ಸು ನೋಯಿಸಬಾರದು ತಿಳೀತಾ ! ರಾಜ ?

ಲಕ್ಕಿಯ ವಿವೇಕದ ಮಾತನ್ನು ಕೇಳಿ ನಟರಾಜನಿಗೆ ಅವಳ ಮೇಲಿನ ಮಮತೆ ಇನ್ನೂ ಹೆಚ್ಚಿತು. ಅವಳನ್ನು ಅಪ್ಪಿ-ಲಕ್ಕೀ.. ಲಕ್ಕೀ ನಿನ್ನಂತೆ ಸರಳ ಮನೋಭಾವದ ಹೆಣ್ಣು ಇನ್ನು ಎಲ್ಲಾರ ಉಂಟೇ ? ಇಂಥಾ ಅಮೂಲ್ಯ ರತ್ನವನ್ನು ನಾನೇಕೆ ಕಳೆದುಕೊಳ್ಳಲಿ ? ಎಂದ.

ನಾನಾದರೂ ನಿಮ್ಮನ್ನು ಬಿಟ್ಟು ಬದುಕಿರಲಾರೆ ರಾಜಾ ; ಆದರೂ ನಿಮ್ಮ ಮುಂದಿನ ಬಾಳು ಹಸನಾಗಲೆಂದು ನಾನು ದೂರವಾಗಲೇ ಬೇಕು.

ಅಯ್ಯೋ : ಹುಚ್ಚಿ ! ನೀನಿಲ್ಲದ ನನ್ನ ಬಾಳು ನೀರಿಲ್ಲದ ಮೀನಿನಂತೆ ಹಸನಾಗಲೂ ಸಾಧ್ಯವೇ ಇಲ್ಲ.

ಅದೇನೋ ಸರಿ... ನಿಮ್ಮ ಮನಸ್ಸಿಗೆ ಬೇಕಾದಂತೆ ನೀವು ಹೇಳಿಬಿಟ್ಟರಿ. ಆದರೆ ನಿಮ್ಮಲ್ಲಿಯೇ ಪ್ರಾಣವಿಟ್ಟಿರುವ ಸುಶೀ ಅಕ್ಕನ ಗತಿ ಏನಾಗಬೇಕೆಂದು ಯೋಚಿಸಿದ್ದೀರಾ ?

ಎಲಾ ! ಲಕ್ಷ್ಮೀ ನೀನು ನನಗೆ ಸವಾಲು ಹಾಕುವಂತಿದೆಯಲ್ಲಾ ; ಈ ಮಾತಿಗೆ ಉತ್ತರ ಹೇಳಲು ತೋಚುವುದೇ ಇಲ್ಲ.

ಏನೋ ಸುಶೀ ಅಕ್ಕನನ್ನು ಮಾತ್ರ ನಾನು ನೋಯಿಸಲಾರೆ ...

"ಆಯಿತು . ಸುಶೀನೇ ಇದಕ್ಕೆ ಒಪ್ಪಿದರೆ ಆಗಬಹುದಲ್ಲಾ !

"ಏನೋ ರಾಜ ; ಎಷ್ಟು ಒಳ್ಳೆಯ ಜನ, ಅವರ ಸಂತೋಷವೇ ನನ್ನ ಸಂತೋಷ. ಮೊದಲು ನಿಮ್ಮ ಅಕ್ಕ ಅವರುಗಳಿಗೆ ನಿಮ್ಮ ಮನಸ್ಸಿನಲ್ಲಿರುವ ಮಾತನ್ನು ಮೊದಲು ತಿಳಿಸಿ... ಆಮೇಲೆ ಮುಂದಿನ ಮಾತು.

ಓ ರಾಣಿಯವರ ಅಪ್ಪಣೆ. ಈ ದಿನ ಅಕ್ಕನಿಗೆ ಹೇಳಿಯೇ ಬಿಡುತ್ತೇನೆ. ಇಷ್ಟೆ ತಾನೇ....ಆಯಿತಲ್ಲಾ ; ಮಾತು. ಏಳು ಮನೆಗೆ ಹೋಗೋಣ. ಎಂದು ಲಕ್ಕಿಯ ಬೆನ್ನು ಸುತ್ತ ಕೈ ಬಳಸಿ ಅವಳನ್ನು ನಡೆಸಿಕೊಂಡೇ ಬಂದ ನಟರಾಜ.

# ಅಧ್ಯಾಯ ೧೧

ಲಕ್ಕೀ-ನಟರಾಜರ ಅನ್ಯೋನ್ಯತೆ, ಮನೆಯವರಿಗೆ ಕಂಡೂ ಕಾಣದಂತೆ ಅವರ ಪ್ರೇಮ ಸಂಭಾಷಣೆ, ಆಕರ್ಷಣೆ-ಇವೆಲ್ಲಾ ಸುಶೀಲಳಿಗೆ ತಿಳಿಯದೇನೂ ಇಲ್ಲ.

ಅವಳು ವಿದ್ಯಾವಂತೆ ವಿವೇಕಿ ...ಪ್ರೇಮ ಎಂಬುದು ಬಲವಂತದಿಂದ ಬಂಧಿಸುವ ವಸ್ತುವಲ್ಲ. ಮಾವನ ಮನಸ್ಸು ಅತ್ತ ವಾಲಿದ್ದರೆ ತಾನೇನೂ ಮಾಡಲು ಸಾಧ್ಯವಿಲ್ಲ.

ಅವರ ಪ್ರೇಮಕ್ಕೆ ತಾನು ಅಡ್ಡಿ ಬರಬಾರದು ಲಕ್ಕಿಯಾದರೂ ಉತ್ತಮ ಹೆಣ್ಣು ಯಾವ ಜಾತಿಯಾದರೆ ಏನು? ಅವಳ ಘನತೆ ಗಾಂಭೀರ್ಯ ಯಾರಿಗೂ ಇಲ್ಲ. ನನ್ನ ಆರಾಧ್ಯ ದೈವವನ್ನು ಅವಳಿಗೆ ಬಿಟ್ಟು ಕೊಡಬೇಕಾಗುತ್ತೋ ಏನೋ? ದೈವೇಚ್ಛೆ ಯಾರೂ ಬಲ್ಲರು; ಎಂದು ಮನದಲ್ಲಿ ಒಂದು ವಿಧವಾದ ವೈರಾಗ್ಯ ತಾಳುತ್ತಿದ್ದಳು ಸುಶೀ ...

ದಿನ ಕ್ರಮೇಣ ಲಕ್ಕಿಯ ಮೇಲಿನ ವಾತ್ಸಲ್ಯ ಮಂಗಳೆಗೆ ಮನಸ್ಸಿನಲ್ಲಿ ತಡೆ ಹಿಡಿಯದಾಯಿತು. ಅವಳ ಊಟ-ಉಪಚಾರವನ್ನು ತಾನೇ ಗಮನಿಸುತ್ತಿದಳು ಒಂದು ನಿಮಿಷ ಅವಳು ಕಣ್ಮರೆಯಾದರೆ ಏನೋ ಕಳ-ವಳ.

ಎಂದೆಂದೂ ಲಕ್ಕಿ ಈ ಮನೆಯವಳೇ ಏನೋ ಎನ್ನುವ ಭಾವನೆ. ಆದಿನ ಬೆಳಗ್ಗೆ ಲಕ್ಕಿ ಒಬ್ಬಳೇ ಮನೆಯ ಮುಂದಿನ ಆವರಣದ ಕಲ್ಲಿನ ಬೆಂಚಿನ ಮೇಲೆ ಕುಳಿತು ಚಿಂತಿಸುತ್ತಿದ್ದಳು.

ಮಂಗಳೆ ಹೊರಗೆ ಹೂ ಬಿಡಿಸಲು ಬಂದಳು. ಲಕ್ಕೀ ಒಬ್ಬಳೇ ಕುಳಿತಿರುವುದನ್ನು ನೋಡಿ ಅವಳ ಬಳಿ ಹೋದಳು.

ಲಕ್ಕಿ ತಟ್ಟನೆ ಎದ್ದು ನಿಂತು ಹೂ ಬಿಡಿಸ ಬೇಕೇನಮ್ಮಾ!

ಇಲ್ಲಿ ಹುಟ್ಟಿಕೊಡಿ; ನಾನೇ ಬಿಡಿಸುತ್ತೇನೆ ಅಂದಳು.

ಅಯ್ಯೋ! ಬುಚ್ಚು ಹುಡಿಗಿ! ನಾನು ಬಂದಿದ್ದಕ್ಕೆ ಯಾಕೆ ಗಾಬರಿಯಾಗಿ ಎದ್ದು ನಿಲ್ಲುತ್ತೀ? ಕುಳಿತುಕೋ ಲಕ್ಷ್ಮೀ....ನಾನು ನಿನ್ನ ಕೈಲಿ

ಸ್ವಲ್ಪ ಮಾತಾಡುವುದಿದೆ....ಎಂದು ಹೇಳಿ ಕುಳಿತುಕೊಂಡು ಲಕ್ಕಿಯನ್ನೂ ಕರೆದು ಕೊಂಡು ಹೋಗಿ ಅಲ್ಲಿ ಕುಳಿತುಕೊಂಡು ಲಕ್ಕಿಯನ್ನೂ ತನ್ನ ಪಕ್ಕದಲ್ಲಿ ಕುಳ್ಳಿರಿಸಿ ಕೊಂಡಳು. ವಾತ್ಸಲ್ಯದಿಂದ ಅವಳ ಬೆನ್ನ ಮೇಲೆ ಕೈ ಆಡಿಸುತ್ತಾ : ಏಕೆ ಲಕ್ಷ್ಮೀ ! ಏನೋ ತುಂಬಾ ಯೋಚಿಸುತ್ತೀಯಲ್ಲಾ ! ನಿಮ್ಮ ಅಮ್ಮನ ಜ್ಞಾಪಕ ವಾಯಿತೇ ? ಎಂದಳು.

ಇಲ್ಲಾಮ್ಮ ನೀವೇ ನನಗೆ ಅಮ್ಮನಿಗಿಂತ ಹೆಚ್ಚಾಗಿ ಇದ್ದೀರಿ. ಅಂದಳು ಗಂಭೀರವಾಗಿ.

ಲಕ್ಷ್ಮೀ ನೀನು ಇದಕ್ಕೆ ಮೊದಲು ನನ್ನನ್ನು ಎಲ್ಲಿಯಾದರೂ ನೋಡಿದ ಜ್ಞಾಪಕವಿದೆಯೇ ?

ಲಕ್ಕಿ ಮಂಗಳೆಯನ್ನೇ ಒಂದು ಕ್ಷಣ ನೋಡಿ ಹೌದಮ್ಮ ! ಎಲ್ಲೋ ನೋಡಿದ ಹಾಗಿದೆ ಅಂದಳು.

ನೀನು ಚಿಕ್ಕ ಹುಡಿಗಿಯಿಂದಲೂ ಇದೇ ಪ್ರಾಂತ ಜಾಲವಾಡಿ ಹಳ್ಳಿಯಲ್ಲೇ ಬೆಳೆದೆಯಾ ?

ಇಲ್ಲ ಅಮ್ಮಾವ್ರೆ.... ನಮ್ಮ ಸ್ಥಳ ಲಕ್ಕವಳ್ಳಿ ಹತ್ತಿರ ಬ್ಯಾಡರ ಹಳ್ಳಿ. ಇದುವರೆಗೂ ಅಲಿಯೇ ಇದ್ದುದು. ಈಗ ಒಂದು ವರ್ಷ ಆಯಿತು, ನಮ್ಮ ಮಾವ ಇಲ್ಲಿಗೆ ಕರೆದು ಕೊಂಡು ಬಂದ.

ಮಂಗಳೆಗೆ ಲಕ್ಕಿಯ ಮಾತು ಕುತೂಹಲವನ್ನುಂಟು ಮಾಡಿತು ಹಾಗಾ ದರೆ ! ನೀನು ಚಿಕ್ಕ ಹುಡಿಗಿಯಾಗಿದ್ದಾಗ ಅಲ್ಲಿಯೇ ಇದ್ದೆಯಾ ! ಲಕ್ಕೀ ?

ಹೌದು ಅಮ್ಮಾ ! ನಮ್ಮ ತಂದೆಯೂ ತೀರಿ ಹೋದ. ನಾವು ತಾಯಿ ಮಗಳು ಸೌದೆ ಹೊತ್ತು ಮಾರಿ ಜೀವನ ಮಾಡಿಕೊಂಡಿದ್ದೇವು.

ಹಾಂ....ಸರಿ ಸರಿ ಒಂದು ದಿನ ಅಲ್ಲಿ ನಮ್ಮ ಮನೆಗೆ ನೀನೂ ನಿಮ್ಮ ಅಮ್ಮನೂ ಸೌದೆ ಹೊತ್ತು ಬಂದಿದ್ದಿರಿ ಅಲ್ಲವಾ ? ಆಗ ನೀನು 5-6 ವರ್ಷದ ಹುಡಿಗಿ ಇರಬಹುದು. ನಾನು ಒಳಕ್ಕೆ ಹೋಗಿ ಬರುವ ವೇಳೆಗೆ ನೀವು ಹೋಗಿ ಬರುವ ವೇಳೆಗೆ ನೀವು ಹೊರಟು ಹೋಗಿದ್ದಿರಿ ಜ್ಞಾಪಕ ಇದೆಯಾ ? ಎಂದು ಮಂಗಳೆ ತನ್ನನ್ನೇ ತಾನು ಮರೆತು ಕಾತುರಳಾಗಿ ಕೇಳಿದಳು.

ಲಕ್ಕಿ ಸ್ವಲ್ಪ ಹೊತ್ತು ಯೋಚಿಸಿ ಹೌದು....ಹೌದು ಅಮ್ಮಾವ್ರೆ. ಅದ್ಯಾರೋ ಒಬ್ಬರು ಗಂಡಸರು ಹೊರಕ್ಕೆ ಬಂದು ಚಂದಾಗಿ ಬೈದುಬಿಟ್ರರು.

ನಾವು ಸೌದೆ ಎತ್ತಿಕೊಂಡು ಹೋದೆವು ಆಗ....ಮರದ್ ಕುದುರೇ ಮೇಲೆ ಒಂದು ಗಂಡು ಮೊಗಾ ಕುಳಿತಿತ್ತಲ್ಲಾ ! ಅದು ನಿಮ್ಮದೇ ಅಲ್ವಾ ! ಈಗೆಲ್ಲಿ ಆ ಹುಡುಗ ?

ಮಂಗಳೆಗೆ ತಲೆಯೆಲ್ಲಾ ಸುತ್ತುವಂತಾಗಿ ತಾನು ಕುಳಿತಿರುವ ಭೂಮಿಯೇ ಒಟ್ಟಿಗೆ ಸುತ್ತುವಂತಾಯಿತು.

ಇನ್ನು ಅವಳ ಮನಸ್ಸಿನಲ್ಲಿ ಸಂದೇಹ ಉಳಿಯಲಿಲ್ಲ.

ಅಯ್ಯೋ ! ಲಕ್ಷ್ಮೀ ನನ್ನ ಕಂದಾ ! ಇನ್ನು ನಿನಗೆ ಕಷ್ಟವನ್ನು ಕೊಡುವುದಿಲ್ಲವಮ್ಮಾ ! ಮುಂದಿನ ನಿನ್ನ ಬಾಳನ್ನು ಉತ್ತಮವಾಗಿಡಲು ನನ್ನ ಪ್ರಾಣವನ್ನೇ ಬೇಕಾದರೂ ಕೊಟ್ಟೇನು. ಇನ್ನು ನಿನ್ನ ಭವಿಷ್ಯ ಒಳ್ಳೆಯದಾಗಲೇ ಬೇಕು. ನೀನು ಸುಖವಾಗಿರಬೇಕು. ಎಂದು ಲಕ್ಷ್ಮಿಯನ್ನು ಅಪ್ಪಿಕೊಂಡು ಗಳ....ಗಳನೆ ಅತ್ತು ಬಿಟ್ಟಳು ಮಂಗಳೆ.

ಲಕ್ಕಿಗೆ ಏನೂ ತೋಚಲಿಲ್ಲ . ಯಾಕಮ್ಮ ! ಈಗ ನನಗೇನಮ್ಮ ಕಷ್ಟ ಆಗಿರೋದು ? ನಿಮ್ಮ ದಯೆಯಿಂದ ನಾನು ಚಂದಾಗೇ ಇದ್ದೀನಿ-ಬಿಡಿ ..ಅಂದಳು.

ಅಷ್ಟರಲ್ಲಿ ಕಾರು ಮನೆಯ ಬಾಗಿಲಲ್ಲಿ ನಿಂತಿತು. ಮೂರ್ತಿ ಕಾರಿನಿಂದ ಇಳಿದರು ಸುಶೀಲಾನೂ ಅಮ್ಮನನ್ನು ಹುಡುಕಿಕೊಂಡು ಬಾಗಿಲಿಗೆ ಬಂದಳು. ಓಹೋ ಅಪ್ಪ ಬಂದು ಬಿಟ್ಟರು, ಎಂದು ಜಿಗಿಯುತ್ತಾ ಕಾರಿನ ಬಳಿ ಓಡಿದಳು.

ಲಕ್ಕಿಯೂ ಮಂಗಳೆಯೂ ಅಲ್ಲಿಯೇ ನಿಂತಿದ್ದರು. ಮೂರ್ತಿ ಕಾರಿನಿಂದ ಇಳಿದವರೇ ಸುಶೀಯನ್ನು ಒಂದು ಬಾರಿ , ಲಕ್ಕಿಯನ್ನು ಒಂದು ಬಾರಿ ದಿಟ್ಟಿಸಿ ನೋಡಿದರು. "ಇದೇನೆ ಸುಮ್ಮಿ ಯಾವಾಗ ಬಂದ್ಲೆ" ಎಂದು ಹೆಂಡತಿಯನ್ನು ಕೇಳಿದರು.

"ಅಬ್ಬ !....ಅವನಿಗೆ ಕೂಡಾ ವ್ಯತ್ಯಾಸ ತಿಳಿಯದಷ್ಟು ನಮ್ಮ ಮಕ್ಕಳ ಹೋಲಿಕೆ ಇರುವ ಈ ಹುಡುಗಿ ನಮ್ಮ ಕುಟುಂಬಕ್ಕೆ ಸೇರಬೇಕಾದವಳೇ" ಎಂಬುದಕ್ಕೆ ಸಂದೇಹವೇ ಇಲ್ಲ ಎನ್ನಿಸಿತು, ಮಂಗಳೆಗೆ-

"ಹೌದು ಸುಮ್ಮಿಯಂತೆ ಇವಳೂ ಒಬ್ಬಳು ಮಗಳು ಅಂದುಕೊಳ್ಳಿ, ಬನ್ನಿ ಒಳಕ್ಕೆ" ಎಂದು ಮಂಗಳೆ ಒಳಗೆ ಹೋದಳು.

ಮೂರ್ತಿ ಕಕ್ಕಾ ಬಿಕ್ಕಿಯಾದರು. "ತುಂಬಾ ಆಶ್ಚರ್ಯ ಸುಶೀ....ಈ ಹುಡುಗಿ ನಮ್ಮ ಸುಮಿತ್ರ ಹಾಗೆ ಇದ್ದಾಳೆ ನೋಡು"

ಲಕ್ಕಿ ತಲೆ ತಗ್ಗಿಸಿ ಗಂಭೀರವಾಗಿ ನಿಂತಿದ್ದಳು. "ಬಾಪ್ಪಾ ಒಳಕ್ಕೆ ನಿಧಾನವಾಗಿ ಮಾತನಾಡಿದರಾಯಿತು. ಬಾ ಲಕ್ಷ್ಮೀ ಇವರೇ ನಮ್ಮ ತಂದೆ" ಅಂದಳು ಸುಶೀ.

ಲಕ್ಕಿ ಎರಡು ಕೈ ಜೋಡಿಸಿ ಸುಮ್ಮನೆ ಕೈ ಮು...... ಅಪ್ಪಾ. ಇವಳು ಲಕ್ಷ್ಮೀ ಅಂತ ಲಂಬಾಣಿ ಹುಡುಗಿ. ಮಾವ ಬರುವಾಗ ಜೋತೇಲಿ ಕರೆದುಕೊಂಡು ಬಂದಿದಾರೆ" ಅಂದಳು ಸುಶೀ.

"ಆಂ....ಲಂಬಾಣಿ ಹುಡುಗಿಯೇ ? ಏನಮ್ಮ ನೀನು ಹೇಳೋ ಮಾತು ! ನನ್ನನ್ನೇನು ಶುದ್ಧ ಶುಂಠಿ ಅಂತ ತಿಳಿದುಕೊಂಡು ಬಿಟ್ಟೆಯಾ ? ಹುಂ ಇರಲಿ ನಡಿ–ನಡಿ ಬಾಮ್ಮ ಹುಡುಗಿ ಒಳಕ್ಕೆ... ಅದು ಸರಿ ನಟರಾಜ ಏಕೆ ಹುಡುಗೀನ ಕರೆದುಕೊಂಡು ಬಂದ ?" ಎಂದು ಹೇಳುತ್ತಲೇ ಒಳಕ್ಕೆ ಬಂದರು ಮೂರ್ತಿ.

ಮೂರ್ತಿ ಬಂದ ಮೇಲೆ ಮನೆಯಲ್ಲಿ ಮದುವೆ ಸಿದ್ಧತೆ ತರಾತುರಿಯಿಂದ ನಡೆಯತೊಡಗಿತು. ಕೂತ ಕಡೆ ಕೂರದೆ, ನಿಂತ ಕಡೆ ನಿಲ್ಲದೆ ಮನೆಯೆಲ್ಲಾ ಓಡಾಡುತ್ತಿದ್ದರು ಮೂರ್ತಿ.

"ಮದುವೆ ಹತ್ತಿರವಾಯಿತು. ನೀವೆಲ್ಲರೂ ಈಗಲೇ ಹೊರಟು ಬನ್ನಿ" ಎಂದು ಕಾಶಿಗೆ ಕಾಗದ ಬರೆದಿದ್ದರು.

ಪಾರ್ವತಮ್ಮ, ವಿಶೂ, ಶೇಷಮಾವ, ಲಕ್ಷ್ಮಮ್ಮ ಎಲ್ಲರೂ ಬಂದಿಳಿದರು. ಮೂರ್ತಿಯ ಹೆಣ್ಣು ಮಕ್ಕಳೂ ಮದುವೆಯ ಕೆಲಸ ಕಾರ್ಯಕ್ಕೆ ನೆರವಾಗಲು ಒಬ್ಬೊಬ್ಬರಾಗಿ ಬರತೊಡಗಿದರು.

ಮದುವೆ ಮನೆಯ ಸಂಭ್ರಮ ಕಾಲಿಡತೊಡಗಿತು. ವಿಶೂ ಈಗ ಅನೇಕ ಕೈಗಾರಿಕೆ ಕೆಲಸಗಳನ್ನು ಕಲಿತು ಬಂದಿದ್ದ. ನಾಜೂಕಾಗಿ ಮರದ ಬೀರು ಪೆಟ್ಟಿಗೆ, ಮಂಚ, ಕುರ್ಚಿ, ಎಲ್ಲಾ ತಯಾರಿಸುವ ವಿಧಾನ ತಿಳಿದಿದ್ದ. ಅವನು ಬಂದ ಕೂಡಲೇ ಅಪ್ಪನೊಂದಿಗೆ "ಅಪ್ಪಾ ! ನಾನು ಒಂದು ವರ್ಕ್‌ಷಾಪ್ ಪ್ರಾರಂಭಿಸುತ್ತೇನೆ ಅಪ್ಪಾ" ಎಂದ.

ಮೂರ್ತಿಗೂ ಮಗನ ಚಟುವಟಿಕೆ ನೋಡಿ ಸಂತೋಷವಾಯಿತು. ಮಂಗಳೆಯೂ ಕೂಡಾ ವಿಶುವನ್ನು ತುಂಬಾ ಪ್ರೀತಿ ಆದರಗಳಿಂದ ನೋಡುತ್ತಿದ್ದಳು ಈ ಬಾರಿ.

ಮೂರ್ತಿಯವರು ಊಟಮಾಡಿ ಆರಾಮವಾಗಿ ಕುಳಿತಿದ್ದರು "ಲೋ ವಿಶೂ ! ಎಂದು ಕೂಗಿದರು.

"ಏನಪ್ಪಾ ! "

"ಈವತ್ತು ಸಾಯಂಕಾಲದೊಳಗಾಗಿ ಆ ಶಾರದಾ ಪ್ರಿಂಟಿಂಗ್ ಪ್ರೆಸ್ಸಿಗೆ ಹೋಗಿ ಒಂದು ಎರಡು ಸಾವಿರ ಲಗ್ನಪತ್ರಿಕೆ ಪ್ರಿಂಟಾಗಬೇಕು ಎಂದು ಹೇಳಿ ಬಾರೋ."

"ಇದೇನಪ್ಪಾ ! ಅವರಿಗೆ ಪತ್ರಿಕೆ ಕಾಪಿ ಕೊಡಬೇಡವೇನಪ್ಪಾ ! ಪ್ರಿಂಟ್ ಮಾಡೋಕೆ ?"

"ಸರಿ ಸರಿ ಮರತೇ ಹೋಯಿತು. ನಾಳೆ ನಟರಾಜನ ಅಪ್ಪ ಅಮ್ಮನೂ ಬರ್ತಾರೆ, ನಾಳೆಯೇ ಲಗ್ನಪತ್ರಿಕೆ ಮಾಡೋಕೆ ಮುಹೂರ್ತ ಗೊತ್ತುಮಾಡಿ ಬಿಡುತ್ತೇನೆ. ಹೋಗಿ ಆ ಶಾಸ್ತ್ರಿಗಳಿಗೆ ಹೇಳಿಬಿಟ್ಟು ಬಾರೋ" ಅಂದರು.

"ಆಗಲಿ ಅಪ್ಪ !"

"ನಟರಾಜ ಎಲ್ಲೋ ?"

"ಒಳಗೆ ಎಲ್ಲೋ ಅಮ್ಮನ ಹತ್ತಿರ ಮಾತಾಡುತ್ತಿರಬೇಕು."

"ಸರಿ ಬಾ ನಾವು ಸ್ವಲ್ಪ ಪೇಟೆಗೆ ಹೋಗಿ ಬಟ್ಟೆ ಹೊಲಿಹಾಕಿ ಬರೋಣ" ಎಂದು ಹೇಳಿದವರೇ ಮಗನೊಂದಿಗೆ ಕಾರಿನಲ್ಲಿ ಹೊರಟೇ ಬಿಟ್ಟರು.

ಇತ್ತ ನಟರಾಜನ ಎದೆ ಡವ ಡವನೆ ಬಡಿದುಕೊಳ್ಳತೊಡಗಿತು. ಅವನು ಭಾವನೆದುರು ನಿಂತು ಮಾತನಾಡಲಾರದೆ ಅವರ ಕಣ್ಣು ಮರೆಸಿ ಓಡಾಡುತ್ತಿದ್ದ. ಇನ್ನೂ ತಾನು ಸುಮ್ಮನಿದ್ದರೆ ಅನಾಹುತವಾದೀತೆಂದು ಮಂಗಳೆ ಒಬ್ಬಳೇ ಇದ್ದಾಗ ಅವಳ ಬಳಿ ಹೋದ.

"ಅಕ್ಕಾ ನಿನ್ನಕೈಲಿ ಸ್ವಲ್ಪ ಮಾತನಾಡಬೇಕಾಗಿತ್ತು. ಬಾ ಅಕ್ಕಾ ; ಅಷ್ಟು ದೂರ ನದೀ ದಂಡೆವರೆಗೆ ಹೋಗಿಬರೋಣ."

ಮಂಗಳೆ ಮಾಡುತ್ತಿದ್ದ ಕೆಲಸವನ್ನು ಅಷ್ಟಕ್ಕೇ ಬಿಟ್ಟು "ಅದೇನೋ ರಾಜ ! ಅಂಥಾ ವಿಷಯ ಇಲ್ಲೇ ಹೇಳು." ಅಂದಳು.

"ಇಲ್ಲಾಕ್ಕಾ ! ಒಂದು ನಿಮಿಷ ಬಾ ; ಮನೆಯಲ್ಲಿ ಮಾತನಾಡೋಕಾಗೋಲ್ಲ" ಅಂದ.

"ಸರಿ" ಎಂದು ಮಂಗಳೆ ನಟರಾಜನ ಜೊತೆಯಲ್ಲಿ ಹೊರಟಳು. ಇಬ್ಬರೂ ನಡೆದುಕೊಂಡೇ ಹೊಳೆಯ ದಂಡೆಯ ಬಳಿ ಹೋದರು.

ನಟರಾಜ ಒಂದೂ ಮಾತನಾಡದೆ ಮೌನವಾಗಿ ನಡೆಯುತ್ತಿದ್ದ. ಅವನ ತಲೆಯ ತುಂಬ ಯೋಚನೆ ತುಂಬಿತ್ತು. "ಆ ಮಾತನ್ನು ಅಕ್ಕನ ಬಳಿ ಹೇಗೆ ಹೇಳುವುದು ? ಅದರ ಪರಿಣಾಮ ಏನಾಗಬಹುದು ? ಆ ಗಳಿಗೆಯನ್ನು ಎದುರಿಸ ಬೇಕಲ್ಲಾ " ಎಂದು ಪರಿತಪಿಸುತ್ತಿದ್ದ.

ನಟರಾಜ ಒಂದೂ ಮಾತನಾಡದೇ ಇರುವುದನ್ನು ನೋಡಿ "ಇದೇನೋ; ರಾಜ ! ಹೀಗೆ ಸುಮ್ಮನೆ ನಡೆಯುತ್ತಿದ್ದಿಲ್ಲ ಅದೇನು ಹೇಳು ?"

ನಟರಾಜ ಮನಸ್ಸಿನ ತಳ ಮಳವನ್ನು ಹತ್ತಿಕ್ಕಿಕೊಳ್ಳಲಾರದೇ ಹೆಜ್ಜೆಯ ವೇಗವನ್ನು ಜೋರು ಮಾಡಿ ಅಕ್ಕನಿಗಿಂತ ಮುಂದೆ ಹೋಗಿ ನದಿ ದಂಡೆಯ ವಿಶಾಲ ಬಂಡೆಯೊಂದರ ಮೇಲೆ ತಲೆ ತಗ್ಗಿಸಿ ಕುಳಿತ.

ನಟರಾಜನ ಈ ವಿಚಿತ್ರ ವರ್ತನೆ ಮಂಗಳೆಗೆ ಗಾಬರಿಯಾಯಿತು. ಬೇಗ ಬೇಗ ಅವಳೂ ನಟರಾಜನ ಬಳಿ ಬಂದು ಅವನ ಪಕ್ಕದಲ್ಲಿ ಕುಳಿತು ಅವನ ಬೆನ್ನ ನೇವರಿಸುತ್ತಾ "ಏನೋ ನಟರಾಜ ! ಯಾಕಪ್ಪಾ ಹೀಗಿದ್ದೀ ? ಅದೇನೋ ಮಾತು ? ಹೇಳು."

ನಟರಾಜ ತಲೆ ಎತ್ತಿ ಅಕ್ಕನ ಮುಖವನ್ನೇ ನೋಡಿದ. ಮತ್ತೆ ತಲೆ ತಗ್ಗಿಸಿ "ಅಕ್ಕಾ ! ನಾನು ಹೇಳುವ ಮಾತಿನಿಂದ ನಿನ್ನ ಮನಸ್ಸಿಗೆ ತುಂಬಾ ನೋವಾಗಬಹುದು ಅಕ್ಕಾ!"

ಮಂಗಳೆ ಆಶ್ಚರ್ಯದಿಂದ "ಅದೇನೋ ರಾಜಾ ! ಅಂಥಾ ಮಾತು ?" ಅಂದಳು.

ತಗ್ಗಿದ ಸ್ವರದಲ್ಲಿ "ಅಕ್ಕಾ ! ನಾನು ಸುಶೀನ ಮದುವೆ ಆಗೋದು ಸಾಧ್ಯ ವಿಲ್ಲ ಅಕ್ಕಾ" ಅಂದ.

ಮಂಗಳೆ ಗಾಬರಿಯಿಂದ "ಇದೇನೋ ; ಈಗ ಮದುವೆ ಹತ್ತಿರವಾದಾಗ ಹೀಗೆ ಹೇಳ್ತಿ ? ಯಾಕೋ ?" ಅಂದಳು.

"ಅಕ್ಕಾ ನಾನೆಂದೂ ಮದುವೆ ಆಗ್ತೀನಿ, ಅಂತಾನೂ ಹೇಳಿರಲಿಲ್ಲ ಬೇಡ ಅಂತಾನೂ ಹೇಳಿರಲಿಲ್ಲ. ನೀನೇ ಹೇಳಕ್ಕಾ ನನ್ನಿಂದಲೇ ನಮ್ಮ ಸುಶೀಗೆ ಅನ್ಯಾಯವಾಗಬಹುದೇ ?"

"ಅನ್ಯಾಯ ಏನು ಬಂತೋ ?"

"ನಾನು ಬೇರೊಬ್ಬ ಹುಡಿಗಿಯನ್ನು ಮನಸಾರ ಪ್ರೀತಿಸಿದ್ದೀನಿ ಅಕ್ಕಾ".

"ಯಾರೋ ಅವಳು ?"

ನಟರಾಜ ತನ್ನ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ "ಲ ...ಕ್ಕಿ"....ಎಂದು ಹೇಳಿ ತಲೆ ತಗ್ಗಿಸಿದ.

"ಹೌದೇನೋ !" ಎಂದು ಮಂಗಳೆ ಆಶ್ಚರ್ಯದಿಂದ ಬಾಯಿ ಮೇಲೆ ಬೆರಳಿಟ್ಟಳು.

"ಅಕ್ಕಾ !ಈಗ ನೀನೇ ನನಗೆ ದಿಕ್ಕು ಕಾಪಾಡಕ್ಕಾ!" ಎಂದು ಮಂಗಳೆಯ ಕೈಗಳನ್ನು ಬಿಗಿಯಾಗಿ ಹಿಡಿದು ಬೇಡಿಕೊಂಡ.

ಇದೇನೋ "ಲಂಬಾಣಿ ಹುಡುಗಿಯನ್ನು ಮದುವೆ ಆಗ್ತೀನಿ ಅಂದ್ರೆ ಅಪ್ಪ-ಅಮ್ಮ ಜೀವಸಹಿತ ಇರ್ತಾರೇನೋ ?

"ನೋಡಕ್ಕಾ ! ಈಗಿನ ಕಾಲದಲ್ಲಿ ಅದೆಲ್ಲಾ ಜಾತಿ-ಭೇಧ ಏನೂ ಇಲ್ಲ. ಅಂತರ್ಜಾತೀಯ ವಿವಾಹಕ್ಕೆ ಸರ್ಕಾರವೇ ಸಹಾಯಕವಾಗಿದೆ. ಅಲ್ಲದೆ ಯಾವ ಉತ್ತಮ ಜಾತಿಯಲ್ಲೂ ಲಕ್ಕಿಯಂಥಾ ಹುಡುಗಿ ಸಿಕ್ಕೊಲ್ಲಾಕ್ಕಾ". "ಅಪ್ಪ-ಅಮ್ಮನ ಒಪ್ಪಿಸೋ ಭಾರ ನಿಂದೇ ಅಕ್ಕ" ಎಂದು ಎಳೆ ಮಗುವಿನಂತೆ ಗೋಗರೆದ ನಟರಾಜ.

ಮಂಗಳೆಗೆ ದೈವ ಘಟನೆಯನ್ನು ನೆನೆದು ಆಶ್ಚರ್ಯವಾಯಿತು. ಒಂದು ಘಳಿಗೆ ಏನೂ ತೋಚದೆ ಸುಮ್ಮನೆ ಕುಳಿತಳು. ಅವಳ ಮನಸ್ಸು ಹಿಂದಿನದನ್ನು ನೆನೆಯುತ್ತಿತು. ನಟರಾಜನ ಮನಸ್ಸಿನ ಕಾತುರ ಮಿತಿ ಮೀರಿತು. ಅವನು ತಲ್ಲಣಿಸುತ್ತಾ "ಅಕ್ಕಾ ! ನೀನು ಕೈಬಿಟ್ಟರೆ ನನ್ನಗತಿ ಮುಗಿದೇ ಹೋಯಿತು. ಏನಾದರೂ ಮಾತನಾಡಕ್ಕಾ" ಎಂದು ಮಂಗಳೆಯನ್ನು ಹಿಡಿದು ಅಲುಗಾಡಿಸಿದ.

ಮಂಗಳೆ ಬೆಚ್ಚಿ ವಾಸ್ತವ ಪ್ರಪಂಚಕ್ಕೆ ಬಂದಳು. "ತನ್ನ ಕರುಳಿನ ಕಂದನ ಭವಿಷ್ಯ ಭಂಗಾರವಾಗಲು ಇದೊಂದು ಅಪೂರ್ವ ಸಂದರ್ಭ. ಇದನ್ನೂ ಕೈಜಾರಿ ಬಿಟ್ಟು ಕೊರಗಲಾರೆ" ಎಂದು ಯೋಚಿಸಿ ಮಂಗಳೇ "ರಾಜಾ : ಇದೇನೋ ದೊಡ್ಡ ಕತೇನೇ ಆಗೋ ಹಾಗಿದೆಯಲ್ಲೋ" ಎಂದು ನಿಟ್ಟುಸಿರು ಬಿಟ್ಟಳು.

"ಏನೋಕ್ಕ ! ನನ್ನ ಕಾಪಾಡೋದು ನಿನ್ನ ಕೈಲಿದೆ".

"ರಾಜ ! ನಿನಗಿಂತ ಹೆಚ್ಚಾಗಿ ನನಗೆ ಲಕ್ಷ್ಮಿಯಮೇಲೆ ಮಮತೆ ಇದೆ ಕಣೋ. ಅವಳಿಗೆ ಒಳ್ಳೆಯದು ಮಾಡೋ ಅವಕಾಶ ಸಿಕ್ಕಿದಾಗ ಖಂಡಿತ ಕಳೆದುಕೊಳ್ಳಲಾರೆ ಕಣೋ! ಆ ಹುಡಿಗಿಯನ್ನು ಒಬ್ಬ ಲಂಬಾಣಿಗೆ ಕೊಟ್ಟು ಮದುವೆ ಮಾಡ ಗೊಡಿಸಲಾರೆ ರಾಜ ; ನನ್ನ ಕರುಳೇ ಹಿಂಡುತ್ತೆ.

ಮಂಗಳೆಯ ಮಾತು ಕೇಳಿ ನಟರಾಜನಿಗೆ "ಸ್ವರ್ಗ ಮೂರೇ ಗೇಣು" ಎನ್ನುವಷ್ಟು ಆನಂದವಾಯಿತು. "ನೋಡಿದ್ಯಾಕ್ಕಾ ; ಆ ಹುಡುಗಿಯನ್ನು ನೋಡಿದ ಎಂಟೇ ದಿನಕ್ಕೆ ನಿನಗೆ ಅವಳ ಮೇಲೆ ಎಷ್ಟು ಮಮತೆ ಹುಟ್ಟಬಿಟ್ಟಿತು: ಇನ್ನು ನಾನು ಹೇಗಿರಬೇಕು ? ನೀನೇ ಹೇಳು."

"ಇರಲಿ ಈಗ ನಾನು ಹೇಳುವಂತೆ ನೀನು ಮಾಡಿದರೆ ಮುಂದೆ ದೇವರಿದ್ದಾನೆ ನೋಡೋಣ."

"ಹೇಳು-ಹೇಳಕ್ಕಾ ! ನಾನು ಏನು ಮಾಡಬೇಕು ?" ಎಂದು ಮಕ್ಕಳಂತೆ ಕುಣಿದಾಡಿದ.

ನೋಡು ಈಗ ೧೮-೨೦ ವರ್ಷದ ಕೆಳಗೆ ನಾವಿದ್ದ ಲಕ್ಕವಳ್ಳಿಯ ಆಸ್ಪತ್ರೆಯಲ್ಲಿ ಒಬ್ಬ ನರ್ಸಿದ್ದಳು. ಅವಳ ಹೆಸರು ಲೀಲಾವತಿ. ಅವಳಿಗೆ ರಿಟೈರ್ಡ್ ಆಗಿ ಈ ಊರಿಗೆ ಬಂದಿದ್ದಾಳೆ ಎಲ್ಲಿದ್ದಾಳೋ ಗೊತ್ತಿಲ್ಲ. ವಿಚಾರಿಸಿ ಎಲ್ಲಿದ್ದರೂ ಹುಡಿಕಿ ಅವಳನ್ನು ಕರೆದುಕೊಂಡು ಬಾ :

"ಇದೇನಕ್ಕಾ : ನೀನು ಹೇಳೊದೊಂದೂ ನನಗೆ ಅರ್ಥವೇ ಆಗೋಲ್ಲ ! ನನ್ನ ಮದುವೆಗೂ ಆ ನರ್ಸಿಗೂ ಏನಕ್ಕ ಸಂಬಂಧ ?"

ಅದೆಲ್ಲ ತಲೆಹರಟೆ ನಿನಗ್ಯಾಕೋ ; ನಾನು ಹೇಳಿದಷ್ಟು ಮಾಡು. ಹಾಗೆಯೇ ಜೀಪ್ ತೆಗೆದುಕೊಂಡು ಹೆ ೀಗಿ ಲಕ್ಕಿಯ ತಾಯಿಯನ್ನೂ ಕೂಡಲೇ ಜೊತೆಯಲ್ಲಿ ಕರೆದು ಕೊಂಡು ಬಾ.

ಸರಿ ಕಣಕ್ಕ ಮನೆಗೆ ಹೋಗೋಣ ನಡಿ ನಾನು ಈಗಲೇ ಹೊರಟು ಬಿಡ್ತೀನಿ.

ಮಂಗಳೆ ಎದ್ದು ಹೊರಟಳು ಇಬ್ಬರೂ ಮಾತಾಡುತ್ತಾ ಮನೆಕಡೆ ನಡೆದರು. "ಆ ನರ್ಸ್ ಹೆಸರು ಲೀಲಾವತಿ ಜ್ಞಾಪಕದಲ್ಲಿಟ್ಟುಕೊಳ್ಳೋ ; " ಎಂದಳು ಮಂಗಳೆ.

ಕೂಡಲೇ ನಟರಾಜ ಜೇಬಿನಿಂದ ನೋಟು ಬುಕ್ಕು ತೆಗೆದು ಅದರಲ್ಲಿ ಗುರುತಿಸಿಕೊಂಡ.

ನೋಡೋ ! ನಿಮ್ಮ ಭಾವ ನಾಳೀನೇ ಲಗ್ನಪತ್ರಿಕೆ ಆಗಬೇಕೂ ಅಂತ ಇದಾರೆ ಅಷ್ಟರಲ್ಲಿ ಅವರಿಬ್ಬರನ್ನೂ ಕರೆದುಕೊಂಡು ನೀನು ಬಂದು ಬಿಡಬೇಕಪ್ಪಾ! ಜಾಗ್ರತೆ ಅಂದಳು ಮಂಗಳೆ.

ಹೂಂ - ಅಕ್ಕಾ : ಆ ಭಾರ ನನಗಿರಲಿ ಅಂದ. ಅಕ್ಕನ ಗೂಢ ಮಾತು ನಟರಾಜನಿಗೆ ಅರ್ಥವಾಗಲಿಲ್ಲ. ಏನಾದರಾಗಲಿ, ಅಕ್ಕ ಹೇಳಿದಷ್ಟು ಮಾಡಿದ ರಾಯಿತು. ಎಂದು ಮನೆಗೆ ಹೋದಕೂಡಲೇ ಜೀಪಿನಲ್ಲಿ ಹೊರಟೇಬಿಟ್ಟ.

ನಾಳೆಯೇ ಲಗ್ನ ಪತ್ರಿಕೆಯೆಂದು ತಿಳಿದ ನಟರಾಜನ ತಂದೆ ತಾಯಿಯರೂ ಬೆಂಗಳೂರಿನಲ್ಲಿ ಬಂದಿಳಿದರು. ಮನೆ ಮದುವೆ ಮನೆಯಂತೆ ಗಿಜ-ಗಿಜನೆ ತುಂಬಿ ಹೋಯಿತು.

ಲಕ್ಕಿ ಈಗ ಯಾರ ಎದುರಿಗೂ ಹೆಚ್ಚಾಗಿ ಓಡಾಡದೆ ಮಹಡಿಯ ಮೇಲಿದ್ದ ಒಂದು ಕೊಠಡಿಯಲ್ಲಿ ಕುಳಿತು ಗಡ-ಗಡನೆ ನಡುಗುತ್ತಿದ್ದಳು. ಇಷ್ಟು ಬಂಧು ಬಳಗದ ಮುಂದೆ ತಾನು ಇನ್ನು ಏನೇನು ಅವಮಾನ ಪಡಬೇಕೋ; ಎಂದು ಅವಳ ಎದೆ ಡವ-ಡವನೆ ಹೊಡೆದು ಕೊಳ್ಳುತ್ತಿತ್ತು.

ಬಹಳ ಹೊತ್ತಿನಿಂದ ನಟರಾಜನನ್ನು ಕಾಣದೆ ಅವಳ ಮನಸ್ಸಿಗೆ ತುಂಬಾ ಗಾಬರಿಯಾಯಿತು. ತನ್ನನ್ನು ಇಂಥಾ ಸಮಸ್ಯೆಯಲ್ಲಿ ಸಿಕ್ಕಿಸಿ ತಾನು ಎಲ್ಲಿ ಹೊರಟು ಹೋದ ? ಇದೆಂತಹ ಮೋಸ ? ಎಂದು ಏನೇನೋ ಚಿಂತಿಸಿದಳು.

ಆ ಮನೆಯ ಸುತ್ತಲೂ ವಿಶಾಲವಾದ ಕಾಂಪೌಂಡ್ ಇದ್ದಿತು. ಬೇಕಾದಷ್ಟು ಗಿಡ ಮರಗಳನ್ನು ಬೆಳೆಸಿದ್ದರು. ಮನೆಯ ಹಿಂಭಾಗದಲ್ಲಿ ದೊಡ್ಡದೊಂದು ಬೇವಿನ ಮರವಿದ್ದಿತು. ಕೆಳಗೆ ಕುಳಿತುಕೊಳ್ಳಲು ಕಲ್ಲು ಹಾಸು ಇತ್ತು. ಒಳಗೆ ಎಲ್ಲರೂ ಸೇರಿ ಖುಷಿಯಾಗಿ ಮಾತನಾಡುತ್ತಿದ್ದ ಸಮಯ ನೋಡಿ ಲಕ್ಕಿ ಮಹಡಿಯಿಂದ ಇಳಿದು ಬಂದು ಆ ನಿರ್ಜನ ಪ್ರದೇಶದಲ್ಲಿ ಒಂಟಿಯಾಗಿ ಕುಳಿತಳು ದುಃಖ ಉಕ್ಕಿ ಬಂತು. ಬಿಕ್ಕಿ ಬಿಕ್ಕಿ ಅತ್ತಳು.

ಅವಳಿಗೆ ಒಂದೇ ಭಯ, ತಾನು ಲಂಬಾಣಿ ಹುಡುಗಿ ತನ್ನನ್ನು ನಟರಾಜ ಮದುವೆಯಾಗುವ ಮಾತು ಕಿವಿಗೆ ಬಿದ್ದರೆ ಈ ಹಿರಿಯರು ಸುಮ್ಮನೆ

ಬಿಟ್ಟಾರೆಯೇ ? ಈ ಎಲ್ಲಾ ಸಮಸ್ಯೆಗೂ ಪರಿಹಾರವೆಂದರೆ ಇವರೆಲ್ಲರ ಕಣ್ಣು ತಪ್ಪಿಸಿ, ತಾನು ಇಲ್ಲಿಂದ ಹೊರಟು ಹೋಗವುದು.

ಆದೇ ಸರಿ, ಆದರೆ ಕಡೆಯದಾಗಿ ನನ್ನ ರಾಜನನ್ನು ಒಂದು ಬಾರಿ ಕಣ್ಣು ತುಂಬಾ ನೋಡಿ ಹೋಗಬೇಕು. ಆದರೆ ಎಲ್ಲೂ ಕಾಣುವುದಿಲ್ಲವಲ್ಲಾ! ಎಂದು ತಪಿಸಿದಳು.

ನಟರಾಜನಿಂದ ದೂರವಾಗಬೇಕಾದ ನೆನೆಪೇ ಲಕ್ಕಿಗೆ ಅತೀವ ದುಃಖವನ್ನುಂಟು ಮಾಡೀತು. ಅವನು ತನ್ನನ್ನು ಎಷ್ಟರ ಮಟ್ಟಿ ಪ್ರೀತಿಸುತ್ತಿದ್ದಾನೆ. ಎಂಬುದು ಲಕ್ಕಿಗೆ ಗೊತ್ತು. ಒಂದು ಗಳಿಗೆಯೂ ಅಗಲಿರಲಾರದಷ್ಟು ಅವರಿಬ್ಬರೂ ಆತ್ಮೀಯರಾಗಿದ್ದರು.

ಆದರೆ ಇದರ ಪರಿಣಾಮ ? ಮನೆಯವರೆಲ್ಲರೂ ಕಾತುರರಾಗಿ ನಿರೀಕ್ಷಿಸುತ್ತಿರುವ ಸುಶೀಲಳ ಮದುವೆ ತಪ್ಪುವುದು, ಮನೆಯಲ್ಲಿ ರಾದ್ಧಾಂತ, ಆಗ ಎಲ್ಲರಿಗೂ ತನ್ನ ಮೇಲೆ ಎಂತಹ ಸಿಟ್ಟು ಬರಬಹುದು ? ಮಗಳಂತೆ ತನ್ನನ್ನು ಪ್ರೀತಿಸುತ್ತಿರುವ ಆ ತಾಯಿ ಎಷ್ಟು ನೊಂದುಕೊಳ್ಳುವಳೋ ?

ಸಂತೋಷ ಸಾಗರದಲ್ಲಿ ತೇಲಾಡುತ್ತಾ ಮದುವೆಯ ಹೆಣ್ಣಾಗಿ ಮೆರೆದಾಡುತ್ತಿರುವ ಸುಶೀಗೆ ಎಂತಹ ಭಾರಿ ಪೆಟ್ಟು? ಛೆ....ತನ್ನಿಂದ ಎಷ್ಟೆಷ್ಟು ಅನಾಹುತ ಹೀಗಾಗಲು ನಾನು ಬಿಡಲಾರೆ,.... ನನ್ನ ರಾಜ ಸುಶೀಲಳೊಂದಿಗೆ ಸುಖವಾಗಿ ಬಾಳಬೇಕು. ಅದಕ್ಕಾಗಿ ನಾನು ಇವರೆಲ್ಲರಿಂದ ದೂರವಾಗಲೇ ಬೇಕು—ಎಂದು ನಿರ್ಧರಿಸಿದಳು ಲಕ್ಕಿ.

ಈ ನಿರ್ಧಾರದಿಂದ ಮನಸ್ಸು ಹಗುರವಾದರೂ ದುಃಖ ಒತ್ತರಿಸಿ ಬಂತು. ಮನದಣಿಯ ಅತ್ತಳು.

ಸುಶೀ ಜಾಜಿ ಹೂವಿನ ದಂಡೆ ಕಟ್ಟಿ ಒಂದನ್ನು ತಾನು ಮುಡಿದು ಇನ್ನೊಂದನ್ನು ಲಕ್ಷ್ಮಿಗಾಗಿ ಕೈಯಲ್ಲಿ ಹಿಡಿದು ಲಕ್ಷ್ಮೀ ಲಕ್ಷ್ಮೀ ಎಂದು ಕೂಗುತ್ತಾ ಮನೆಯೆಲ್ಲಾ ಹುಡುಕಾಡಿದಳು.

ಎಲ್ಲೂ ಕಾಣಲಿಲ್ಲ,.... ಮನೆಯ ಹಿಂಬಾಗಕ್ಕೆ ಬಂದಾಗ ದೂರದ ಬೇವಿನ ಮರದ ಕೆಳಗೆ ಲಕ್ಕಿ ಒಬ್ಬಳೇ ಕುಳಿತಿರುವುದು ಕಾಣಿಸಿತು.

ಓಡೋಡಿ ಅವಳ ಬಳಿಗೆ ಹೋದಳು, ಸುಶೀ ಬರುವ ಸೂಕ್ಷ್ಮ ತಿಳಿದು ಲಕ್ಕಿ ಅಳುವನ್ನು ಮರೆಮಾಡಲು ಕಣ್ಣೊರಸಿಕೊಂಡು, ಬಾ.... ಸುಶೀಲಕ್ಕಾ ! ಎಂದು ನಗುತ್ತಾ ಕರೆದಳು.

ಇದೇನು ಲಕ್ಷ್ಮಿ ! ಇಲ್ಲೇಕೆ ಒಬ್ಬಳೇ ಕುಳಿತುಕೊಂಡೆ ? ಎಂದು ಅವಳ ಹತ್ತಿರ ಹೋಗಿ ಕುಳಿತುಕೊಂಡಳು.

"ಸುಮ್ಮನೆ ಕುಳಿತೆ" ಎಂದಷ್ಟೇ ಉತ್ತರವನ್ನು ಹೇಳಿದಳು ಅಕ್ಕಿ. ಆದರೆ ಸುಶೀ ಬಿಡಬೇಕಲ್ಲ. ಲಕ್ಕಿಯ ಗಲ್ಲವನ್ನು ಹಿಡಿದು ಮುಖವನ್ನು ತನ್ನತ್ತ ತಿರುಗಿಸಿ ನೋಡಿದಳು. ಸುಂದರ ಮುಖ ಸೊರಗಿತ್ತು. ಅತ್ತೂ ಅತ್ತೂ ಕಣ್ಣು ರೆಪ್ಪೆಗಳು ಮಂದವಾಗಿದ್ದುವು. ಬಿಳುಪಿನ ಮುಖ ಕೆಂದಾವರೆಯಂತಾಗಿತ್ತು.

ಇದೇಕೆ ಲಕ್ಷ್ಮೀ ! ಇಲ್ಲಿ ಕುಳಿತು ಅಳುತ್ತಿದ್ದೆಯಾ ? ಏನಾಯಿತು ಲಕ್ಷ್ಮೀ ?.... ಎಂದು ಅವಳ ಭುಜ ಹಿಡಿದು ಅಲುಗಿಸಿ ಕೇಳಿದಳು, ಸುಶೀಲ.

ಏನೂ ಇಲ್ಲ ಅಕ್ಕ ನಮ್ಮ ಮನೆ ನೆನೆಸಿಕೊಂಡೆ ದುಃಖವಾಯಿತು ಅಷ್ಟೆ.

ಅದಕ್ಕೇಕೆ ಇಷ್ಟು ಅಳಬೇಕು ಲಕ್ಷ್ಮೀ ? ಮಾವ ಎಲ್ಲೋ ಹೋಗಿದಾರೆ. ಇನ್ನೇನು ಬರ್ತಾರೆ, ಬಂದ ಕೂಡಲೇ ಮೊದಲು ನಿನ್ನನ್ನು ಜೀಪಿನಲ್ಲಿ ಕರೆದುಕೊಂಡು ಹೋಗಿ ನಿಮ್ಮೂರಿಗೆ ಬಿಡುವಂತೆ ಹೇಳೋಣ. ಬಿಡು.... ಏಳು, ಮುಖ ತೊಳೆದು ತಲೆ ಬಾಚಿಕೋ ಇದೋ.... ನಿನಗಾಗಿ ಈ ಜಾಜಿ ದಂಡೆ ತಂದೆ.

ಸುಶೀಲೆಯ ವಾತ್ಸಲ್ಯದ ಪ್ರವಾಹ ಲಕ್ಕಿಯ ದುಃಖದ ಕಟ್ಟೆಯನ್ನು ಒಡೆಯಿತು. ಸುಶೀಯನ್ನು ತಬ್ಬಿಕೊಂಡು ಬಿಕ್ಕಿ-ಬಿಕ್ಕಿ ಅತ್ತಳು.

ಅಯ್ಯೋ ! ದೇವರೇ ? ನಿನಗೇನಾಗಿದೆ ಲಕ್ಷ್ಮೀ.... ಯಾಕಳ್ತೀ ಹೇಳು .... ಎಂದು ಅವಳನ್ನು ಸಂತೈಸಿದಳು.

ಇಂತಹ ಪ್ರೀತಿಯ ಅಕ್ಕನನ್ನು ನಾನು ಹೇಗೆ ಬಿಟ್ಟು ಹೋಗಲಿ ? ಸುಶೀಲಕ್ಕಾ ! ನಾನು ಹೋಗಲೂ ಆರೆ.... ಇಲ್ಲಿಯೇ ಇರಲೂ ಲಾರೆ.

ಹೋಗಲಿ ಬಿಡು ಲಕ್ಷ್ಮೀ ! ನೀನು ನಮ್ಮ ಮನೆಯಲ್ಲಿಯೇ ಇದ್ದು ಬಿಡು.

ಅದು ಸಾಧ್ಯವಿಲ್ಲ ಅಕ್ಕಾ ! ನಾನು ಈಗಲೇ ಹೊರಟು ಬಿಡಬೇಕು.

ಇದೇನು ಲಕ್ಷ್ಮೀ ಹೀಗಾಡುತ್ತೀ....ಮಾವಬರಲಿ ತಾಳು....ಇಲ್ಲ ಅಕ್ಕಾ ....ಇಲ್ಲ....ನಾನು ರಾಜ ಬರುವುದರೊಳಗಾಗಿ ಹೊರಟು ಬಿಡಬೇಕು ವಿಶೂ ಅಣ್ಣನ ಜೊತೆ ನನ್ನನ್ನು ಕಳುಹಿಸಿಕೊಡು ಅಕ್ಕ ಅಷ್ಟು ನನಗೆ ಉಪಕಾರ ಮಾಡು.

ಲಕ್ಕಿ ಕಾತುರತೆಯಿಂದ ಸುಶೀಯನ್ನು ಬೇಡಿಕೊಳ್ಳುವಂತೆ ಕೇಳಿದಳು. ಲಕ್ಕಿಗೆ ಸುಶೀಲ ಆತ್ಮೀಯ ಗೆಳತಿ, ಪ್ರೀತಿಯ ಅಕ್ಕ, ಅಷ್ಟೇ ಅಲ್ಲದೆ ತನ್ನ ಹೃದಯಾಧಿ ದೇವತೆ, ನಟರಾಜನನ್ನು ಅವಳೂ ತನ್ನ ಹೃದಯದಲ್ಲಿಟ್ಟು ಆರಾಧಿಸುತ್ತಿರುವ ಭಾಗದಾರಳು. ಆದ್ದರಿಂದ ಸುಶೀಲಳಲ್ಲಿ ಲಕ್ಕಿಗೆ ಯಾವ ಸಂಕೋಚವೂ ಇರಲಿಲ್ಲ. ಅವಳ ಜೊತೆ ಮಾತಾನಾಡುವಾಗ ನಟರಾಜನನ್ನು ಕುರಿತು ರಾಜ ಎಂದೇ ಹೇಳುತ್ತಿದ್ದಳು.

ಇದ್ದಕ್ಕಿದ್ದಂತೆ ಲಕ್ಕಿ ಹೀಗೇಕೆ ಮಾಡುತ್ತಿರುವಳೆಂದು ಸುಶೀಗೆ ಅರ್ಥವಾಗಲಿಲ್ಲ. ಅವಳೂ ಕಾತುರದಿಂದ... ನಿನಗೇನಾಯಿತು ಲಕ್ಷ್ಮೀ ? ಅದೇಕೆ ಇದ್ದಕ್ಕಿದಂತೆ ಹೊರಡಬೇಕೆನ್ನುತ್ತೀ ? ಬಾ... ಅಮ್ಮನ ಹತ್ತಿರ ಹೋಗೋಣ ಅಮ್ಮ ಕಳುಹಿಸಿದರೆ ಹೋಗುವಿಯಂತೆ....ಅಂದಳು.

"ಅಕ್ಕಾ ! ಕಡೆಯದಾಗಿ ನನ್ನದೊಂದು ಮಾತು ನಡೆಸಿಕೊಡಬೇಕು... ಎಂದು ಗೊಗರೆದಳು ಲಕ್ಕಿ.

ಅದೇನು ಹೇಳು ಲಕ್ಷ್ಮೀ

"ರಾಜ" ನಿನ್ನ ಸ್ವತ್ತು ಅಕ್ಕಾ ! ನೀನು ತುಂಬಾ ಪುಣ್ಯಶಾಲಿ, 'ನನ್ನ ದೇವರನ್ನು ನಿನಗೊಪ್ಪಿಸಿ ಹೋಗುತ್ತೇನೆ, ಚೆನ್ನಾಗಿ ನೋಡಿಕೋ ಅಕ್ಕಾ ! ಎಂದು ಹೇಳ ಹೇಳುತ್ತಾ ಸುಶೀಲೆಯ ಕಾಲ ಬಳಿ ಕುಸಿದು ಬಿದ್ದಳು ಲಕ್ಕಿ.

ಸುಶೀಲ ಗಾಬರಿಯಾಗಿ ಅವಳನ್ನು ಹಿಡಿದೆತ್ತಿ ನಿಲ್ಲಿಸಿದಳು. ಲಕ್ಕಿ ಅವಳ ಆಸರೆಯನ್ನು ಪಡೆದು ಬಿಕ್ಕಿ ಬಿಕ್ಕಿ ಅತ್ತಳು.

ಸುಶೀಲೆಯೇನೂ ಅರಿಯದ ಮಗುವಲ್ಲ. ಲಕ್ಕಿಗೆ ನಟರಾಜನ ಮೇಲೆ ಎಷ್ಟರ ಮಟ್ಟು ಪ್ರೀತಿಯಿದೆ ? ಎಂಬುದು ಅವಳಿಗೂ ಈಗೀಗ ಚೆನ್ನಾಗಿ ಅರ್ಥವಾಗಿತ್ತು ತನ್ನ ಮಾವನೂ ಲಕ್ಕಿಯನ್ನು ಉಪಾಯವಾಗಿ ತಮ್ಮ ಮನೆಯಲ್ಲಿ ತಂದು ಸೇರಿಸಿ ತನ್ನ ಮನಸ್ಸಿನ ಆಶಾ ಕಿರಣಕ್ಕೆ ತೆರೆಯೆಳೆದು ತಿರುಗುತ್ತಿರುವುದು ಅವಳು ಕಂಡೂ ಕಾಣದಂತೆ ಸಹಿಸುತ್ತಿದ್ದಳು. ತನ್ನ ಹೃದಯೇಶ್ವರ

ಅವಳಲ್ಲಿಯೇ ಅನುರಕ್ತನಾದರೆ; ತಾನು ಅದನ್ನು ಬಲವಂತವಾಗಿ ಪಡೆಯಲಾರೆ ನನ್ನ ರಾಜಾ ! ನಿನ್ನನು ಪಡೆಯುವ ಯೋಗ ಯಾರಿಗಿದೆಯೋ ? ಭವಿಷ್ಯ ವನ್ನು ನೆನೆಸಿಕೊಂಡರೇ ಭಯವಾಗುತೆ .... ಎಂದು ಯೋಚಿಸುವಾಗಲೇ ಸುಶೀಲೆಯ ಎದೆ ಗಡ-ಗಡನೆ ನಡುಗಿತು. ದುಃಖವನ್ನು ತಡೆದು ಎದೆಯನ್ನು ಒತ್ತಿಹಿಡಿದಳು. ಹಾಗೇ ಸಾಮಾಧಾನ ತಂದುಕೊಂಡು ಲಕ್ಕಿಯ ಕೈ ಹಿಡಿದು "ಬಾ ಲಕ್ಷ್ಮೀ....ಅಮ್ಮನ ಬಳಿಗೆ ಹೋಗೋಣ. ಅಮ್ಮ ಕಳುಹಿಸಿದರೆ ಹೋಗುವೆಯಂತೆ....ಎಂದು ಬಲವಂತವಾಗಿ ಒಳಕ್ಕೆ ಕರೆದುಕೊಂಡು ಬಂದಳು.

ಮಂಗಳೆ, ಪಾರ್ವತಮ್ಮ, ಮಿಕ್ಕ ಇನ್ನೂ ಕೆಲವರು ಹೆಂಗಸರು ಹಜಾರ ದಲ್ಲಿ ಕುಳಿತು ಹಪ್ಪಳ ಬಿತ್ತುತ್ತಿದ್ದರು ಸುಶೀಲ ಲಕ್ಷ್ಮಿಯ ಕೈಹಿಡಿದು ಕರೆದು ಕೊಂಡು ಬಂದದ್ದನ್ನು ನೋಡಿ ಮಂಗಳೆ ಗಾಬರಿಯಿಂದ ಎದ್ದು ಬಂದಳು "ಲಕ್ಷ್ಮಿಯ ಹತ್ತಿರ ಹೋಗಿ ಏಕೆ ಸುಶೀಲ ! ಲಕ್ಷ್ಮಿಗೆ ಏನಾಗಿದೆ ? ಯಾಕಮ್ಮಾ ಲಕ್ಷ್ಮೀ ?" ಎಂದಳು.

ನೋಡಮ್ಮ ಅವಳೇಕೋ ಈಗಲೇ ಊರಿಗೆ ಹೋಗಬೇಕೆಂದು ಅಳುತ್ತಿ ದ್ದಾಳೆ ; ನಾನು ಸಮಾಧಾನ ಮಾಡಿ ನಿನ್ನ ಬಳಿ ಕರೆದುಃಕೊಂಡು ಬಂದೆ ಅಂದಳು ಸುಶೀಲ.

ಲಕ್ಷ್ಮಿ ಹೊರಟು ಹೋದರೆ ತಾನೂ ಇಷ್ಟು ಮಾಡಿದ್ದು ವ್ಯರ್ಥವಾಗುತ್ತದೆಯಲ್ಲಾ ! ಅನ್ನಿಸಿತು ಮಂಗಳೆಗೆ. ಲಕ್ಷ್ಮಿಯ ತಲೆ ನೇವ ರಿಸುತ್ತಾ ಬಾ, ಲಕ್ಷ್ಮೀ . ಇಲ್ಲಿ, ಈ ರೂಮಿನಲ್ಲಿ ಕುಳಿತುಕೊಂಡು ಸ್ವಲ್ಪ ಮನಸ್ಸು ಸಮಾಧಾನ ಮಾಡಿಕೋ ..ಏಕಮ್ಮ ಏನಾಯಿತು ನಿನಗೆ ? ಎಂದು ಅವಳನ್ನು ಸಂತೈಸುತ್ತಾ ರೂಮಿಗೆ ಕರೆದುಕೊಂಡು ಹೋಗಿ ಮಂಚದ ಮೇಲೆ ಕೂರಿಸಿ ಸಮಾಧಾನ ಪಡಿಸಿದಳು,

ಲಕ್ಕಿ ಮಂಗಳೆಯ ಕೈಯನ್ನು ಬಿಗಿಯಾಗಿ ಹಿಡಿದು "ತಾಯಿ ನೀವು ಯಾವ ಜನ್ಮದ ತಾಯಿಯೋ ನನಗೆ ? ಇಷ್ಟೊಂದು ನನ್ನನ್ನು ಪ್ರೀತಿಸುತ್ತಿರಿ. ನನ್ನಿಂದಾಗಿ ನಿಮಗೆ ಯಾರಲ್ಲಿಯೂ ಮನಸ್ತಾಪ ಬೇಡ, ಬೇಗ ಸುಶೀ ಅಕ್ಕನ ಮದುವೆ ಮಾಡಿ ಬಿಡಿ ಅಮ್ಮಾ ; ನನ್ನನ್ನು ಈಗಲೇ ಊರಿಗೆ ಕಳುಹಿಸಿ ಕೊಡೀಮ್ಮಾ ;" ಎಂದು ಬಿಕ್ಕಿ ಬಿಕ್ಕಿ ಅತ್ತಳು.

ಮಂಗಳೆ ಲಕ್ಕಿಯನ್ನು ಅಪ್ಪಿ "ಇಲ್ಲಾ ; ಲಕ್ಷ್ಮೀ ಅದು ಮಾತ್ರ ಸಾಧ್ಯವಿಲ್ಲ. ನೀನು ಇನ್ನು ಈ ಮನೆ ಬಿಟ್ಟು ಹೋಗಕೂಡದು. ರಾಜ ಬರುವವರೆಗೂ ಸ್ವಲ್ಪ ಸಮಾಧಾನವಾಗಿರು." ಎಂದು ಹೇಳಿ ಹೊರಗೆ ಬಂದಳು. ಲಕ್ಕಿಯಲ್ಲಿ ಅಮ್ಮನ ಆತ್ಮೀಯತೆಯನ್ನು ಅವಕ್ಕಾಗಿ ಸುಶೀಲ ನೋಡುತ್ತಾ ನಿಂತಿದ್ದಳು. ಮಂಕು ಕವಿದಂತೆ ಹೊರಗೆ ನಡೆದಳು.

ಸುಶೀಲ ಹೊರಗೆ ಬಂದು ಅದೇ ಬೇವಿನ ಮರದ ಕೆಳಗೆ ಲಕ್ಕಿ ಕುಳಿತಿದ್ದ ಕಲ್ಲು ಹಾಸಿನ ಮೇಲೆ ಮಂಕು ಕವಿದಂತೆ ಕುಳಿತಳು. "ಇದೇನು ವಿಧಿಯಾಟ ?, ಮಾವನಂತೂ ಲಕ್ಕಿಯನ್ನು ಹಚ್ಚಿಕೊಂಡು ಅವಳಿಗಾಗಿ ಹಂಬಲಿಸುವುದು, ಲಕ್ಕಿ ಅವನನ್ನು ಬಿಟ್ಟು ಹೋಗಲಾರದೆ ತೋಳಲಾಟದಿಂದ ಬಳಲುವುದು ಇವೆಲ್ಲಾ ಬೇಡವೆಂದರೂ ಬಯಲಾಗುತ್ತಿದೆ. ಒಂದೇ ಕಡೆಯಲ್ಲಿದ್ದ ಅವರ ಪ್ರೇಮ ಎಷ್ಟರ ಮಟ್ಟು ಗಾಢವಾಗಿದೆಯೋ ಯಾರಿಗೆ ಗೊತ್ತು ?

ಅದು ಸರಿ, ಅಮ್ಮನ ಈ ವಿಚಿತ್ರ ವರ್ತನೆಯಂತೂ ಅರ್ಥವೇ ಆಗುತ್ತಿಲ್ಲ. ಆ ಲಂಬಾಣಿ ಹುಡುಗಿ ಲಕ್ಕಿಯನ್ನೇಕೆ ಅಷ್ಟು ಹಚ್ಚಿಕೊಂಡು ಒದ್ದಾಡುತ್ತಾಳೆ. ಈ ಅಮ್ಮ ಲಕ್ಕಿಯನ್ನು ಕಳುಹಿಸಿಬಿಡಬಾರದೇಕೆ ? " ಎಂದೆಲ್ಲಾ ಯೋಚಿಸುತ್ತಾ ತನ್ನನ್ನೇ ತಾನು ಮರೆತು ಕೂತಳು.

ವಿಶ್ವನಾಥ ಈ ಸಲ ಕಾಶಿಯಿಂದ ಬಂದ ಮೇಲೆ ಹೆಚ್ಚು ವಿವೇಕಶಾಲಿಯಾಗಿದ್ದ. ಅಕ್ಕನ ಮದುವೆ, ಕಾರ್ಯಕ್ಕೆ ತಂದೆಯ ಜೊತೆ ಓಡಾಡಿ ಸಹಾಯಕನಾಗಿದ್ದ. ಹೊಗ್ತಾ ಬರ್ತಾ ಸುಶೀಯನ್ನು ಕೀಟಲೆ ಮಾಡಿ ರೇಗಿಸುವುದೆಂದರೆ ಅವನಿಗೆ ತುಂಬಾ ಇಷ್ಟ.

ಅವತ್ತೂ ಪೇಟೆಯಿಂದ ಸಾಮಾನು ತಂದು ಒಳಗಿಟ್ಟು ಮನೆಯಲ್ಲಾ ಒಂದುಸಲ ಹುಡುಕಾಡಿದ. ಎಲ್ಲೂ ಸುಶೀಲ ಕಾಣಲಿಲ್ಲ. ಹಿಂದಿನ ಆವರಣಕ್ಕೆ ಬಂದು ನೋಡಿದ ದೂರದ ಬೇವಿನ ಮರದ ಕೆಳಗೆ ಗಲ್ಲಕ್ಕೆ ಕೈ ಹಚ್ಚಿ ಸುಶೀ ಒಬ್ಬಳೇ ಕುಳಿತ್ತಿದ್ದಳು. ಅಲ್ಲಿಂದ ಒಂದೇ ನೆಗೆತಕ್ಕೆ ಜಿಗಿದು ಅವಳ ಬಳಿ ಬಂದ.

ಸುಶೀ ಬೆಚ್ಚಿ ಅವನ ಕಡೆ ನೋಡಿದಳು.

"ಏಕಮ್ಮ ಮದುಮಗಳೇ. ? ನಿನ್ನ ಅಂತರಂಗದ ಆಲೋಚನೆಗೆ ಭಂಗವಾಯಿತೇ ? ಛೆ....ಛೆ—ಛೆ—ಹೀಗೆ ಒಂಟಿಯಾಗಿ ಕುಳಿತಿರಬಾರದು, ತಾಳು

ಮಾವ ಎಲ್ಲಿದ್ದರೂ ಹುಡಿಕಿ ಎಳೆದು ತರ್ತೇನೆ" ಎಂದು ಹಾಸ್ಯ ಮಾಡಿದ ವಿಶ್ವನಾಥ.

ಸುಶೀಗೆ ಅವನ ಹಾಸ್ಯ ಬೇಕಾಗಿರಲಿಲ್ಲ.

ಸಿಡುಕಿನಿಂದ "ಹೋಗೋ ನಿನ್ನ ಕೆಲಸ ನೀನು ನೋಡಿಕೊ ; ಇಲ್ಯಾಕೆ ಬಂದ್ಯೋ" ಎಂದು ಗದರಿದಳು.

ಎಂದೂ ತನ್ನನ್ನು ಬೈಯ್ಯದ ಅಕ್ಕ ಇಂದೇಕೆ ಹೀಗೆ ಗದರುತ್ತಾಳೆ ? ಎಂದೂ ವಿಶೂಗೆ ಆಶ್ಚರ್ಯವಾಯಿತು. ಅವಳ ಹತ್ತಿರ ಹೋಗಿ ಕುಳಿತು "ಅದೇಕೆ ? ನಾನೂ ಬರಬಾರದಾಗಿತ್ತೋ ? ರಾಣಿಯನ್ನು ನೋಡಲು ರಾಜ ಬರಲಿಲ್ಲವೆಂದು ಇಷ್ಟು ಕೋಪವೇ ? " ಎಂದು ಮತ್ತೆ ತಮಾಷಿ ಮಾಡಿದ.

ಉರಿಯುತ್ತಿರುವುದರ ಮೇಲೆ ಇನ್ನೂ ಉಪ್ಪು ಹಾಕಬೇಡ, ಹೋಗೋ ನೀನು, ನನ್ನ ಪಾಡಿಗೆ ನಾನು ಒಂದು ನಿಮಿಷ ಒಬ್ಬಳೇ ಕೂತುಕೊಳ್ಳುವುದಕ್ಕೂ ಬಿಡೋಲ್ಲ ಈ ಮನೇಲಿ ಎಂದಳು ಸಿಟ್ಟಿನಿಂದ.

ಈಗ ನಿಜವಾಗಿಯೂ ವಿಶೂಗೆ ಗಾಬರಿಯಾಯಿತು. ಸುಶೀಗೆ ಏನೋ ಮನಸ್ಸಿಗೆ ತುಂಬಾ ಬೇಸರವಾಗಿದೆಯೆಂದು ಅವನಿಗೆ ಅನ್ನಿಸಿತು. ತನ್ನ ಪ್ರೀತಿಯ ಅಕ್ಕ ನೊಂದರೆ ಅವನೆಂದೂ ಸಹಿಸಲಾರ.

ಅಕ್ಕಾ ! ಏನಾಯಿತಕ್ಕಾ ? ಯಾರಾದರೂ ನಿನ್ನನ್ನು ಏನಾದರೂ ಅಂದರೇ ? ನಾನೇದರೂ ತಪ್ಪು ಮಾತಾಡಿದೆನೇ ? ನಿನಗೇನು ಬೇಸರ ? ಹೇಳಕ್ಕಾ ಎಂದು ಗೋಗರೆದ.

ಸುಶೀ ಯಾರೊಂದಿಗೂ ಹೇಳಿಕೊಳ್ಳಲಾಗದ ತನ್ನ ಮನಸ್ಸಿನ ಬೇಗೆಯನ್ನು ಒಳಗೆ ಅದುಮಿಟ್ಟು ಚಿಂತಿಸಿ ಕೊರಗುತ್ತಿದ್ದಳು. ಈ ನಡುವೆ ತನ್ನ ಪ್ರೀತಿಯ ತಮ್ಮ ಆತ್ಮೀಯವಾಗಿ ಈಗ ಕೇಳಿದ್ದೇ ; ಅವಳ ದುಃಖದ ಕಟ್ಟೆಯೊಡೆದು ಕಣ್ಣಲ್ಲಿ ಕೋಡಿ ಹರಿಯಿತು. ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು.

ಚಿಗುರಿಯಂತೆ ಜಿಗಿದು ಓಡಾಡುತ್ತಿದ್ದ ಸುಶೀ ಮಂಕಾಗಿ ಏನೋ ವ್ಯಸನದಿಂದ ಕೊರಗುತ್ತಿರುವುದನ್ನು ವಿಶೂ ಊರಿಗೆ ಬಂದ ದಿನಗಳಿಂದಲೂ ಗಮನಿಸುತ್ತಿದ್ದ. ಮಲ್ಲಿಗೆಯರಳಿನಂತಿದ್ದ ಅವಳ ನಗು ಮಾಯವಾಗಿತ್ತು. ಹಾಸ್ಯ ಪ್ರಕೃಯ ಅವಳು ಯಾರೊಂದಿಗೂ ಹೆಚ್ಚು ಮಾತನಾಡದೆ ಯಾವುದೋ ಕೆಲಸದಲ್ಲಿ ತೊಡಗಿರುತ್ತಿದ್ದಳು. ಇಲ್ಲವೆ ಒಂಟಿಯಾಗಿ ಕುಳಿತು ಚಿಂತಾಸಾಗರದಲ್ಲಿ ಮುಳುಗಿರುತ್ತಿದ್ದಳು.

ಮನೆಗೆ ಹೊಸದಾಗಿ ಒಂದು ಹುಡಿಗಿ ಬಂದಿರುವುದನ್ನು ಅವಳನ್ನು ಮನೆಯವರೆಲ್ಲರೂ ಅಕ್ಕರೆಯಿಂದ ನೋಡಿಕೊಳ್ಳುವುದನ್ನೂ ಗಮನಿಸಿದ. ತನ್ನ ತಾಯಿ ಆ ಹುಡಿಗಿಯನ್ನು ಓಲೈಸುತ್ತಿರುವ ರೀತಿಯನ್ನು ನೋಡಿ ವಿಶೂ ಅಚ್ಚರಿಗೊಂಡದ್ದ, ತನಗೆ ದೊರಕದ ತಾಯಿ ವಾತ್ಸಲ್ಯ ಆ ಲಂಬಾಣಿ ಹುಡಿಗಿ ಪಡೆದುದು ಅವನಿಗೆ ಮೋಡಿಯಂತಿತ್ತು.

ಆದರೂ ಆ ಹುಡಿಗಿಯ ಘನತೆ, ಗಾಂಭೀರ್ಯ, ಸುಂದರ ರೂಪು, ಅವನನ್ನೂ ಆಕರ್ಶಿಸಿತ್ತು. ತನ್ನ ಸುಶೀ ಅಕ್ಕನನ್ನೇ ಹೋಲುವ ಅವಳಲ್ಲಿ ಏನೋ ಒಂದು ವಿಧವಾದ ಆತ್ಮೀಯತೆ ಅಂಕುರಿಸಿತ್ತು.

ಆದರೆ ತನ್ನ ಪ್ರೀತಿಯ ಅಕ್ಕನೂ ಅವಳೂ ಒಂದೇ ವಸ್ತುವಿನ ಪ್ರತಿಸ್ಪರ್ಧಿ ಎನ್ನುವುಧು ಅವನಿಗೇನು ಗೊತ್ತು ?

ಅವನು ಇನ್ನೂ ಸುಶೀಲಳ ಬಳಿ ಸರಿದು ಮುಖಕ್ಕೆ ಮುಚ್ಚಿದ್ದ ಅವಳ ಕೈಯ್ಯನ್ನು ಸರಿಸಿ "ಇದೇನು ಸುಶೀ ಅಕ್ಕಾ! ಹೀಗೆ ಅಳ್ತೀ? ನಿನ್ನ ಪ್ರೀತಿಯ ಗೆಳತಿ ಆ ಲಕ್ಕಿ ನಿನ್ನೊಬ್ಬಳನ್ನೇ ಇಲ್ಲಿ ಬಿಟ್ಟು ಎಲ್ಲಿ ಹೊರಟು ಹೋದಳು?" ಅಂದ.

ವಿಶೂ ! ನಾನು ಅತ್ತೂ, ಗೋಳಾಡಿದರೂ ಪರವಾಗಿಲ್ಲ ಕಣೋ— ಕೇಳೋವ್ರೇ ಇಲ್ಲ. ಆ ಲಕ್ಕಿ ಒಂದು ಚೂರು ಕಣ್ಣಲ್ಲಿ ನೀರು ಹಾಕಿದರೆ ಸಾಕು, ಅಮ್ಮ ಎಲ್ಲಿದ್ರೂ ಓಡಿ ಬಂದು ಅವಳನ್ನು ಸಂತೈಸುತ್ತಾಳೆ. ಅವಳ ಅದೃಷ್ಟ ನೋಡು. ಎಂದು ಹೇಳಿದಳು.

ವಿಶೂ ಮೊದಲೇ ಮುಂಗೋಪಿ, ಸುಶೀನ ಯಾರಾದರೂ ಸ್ವಲ್ಪ ಅಂದರೂ ಸುಮ್ಮನಿರುವವನಲ್ಲ, ಇನ್ನು ಲಂಬಾಣಿ ಹುಡಿಗಿ ಲಕ್ಕಿ ಒಂದು, ಈ ಮನೆಯಲ್ಲಿ ತಮ್ಮ ಸ್ಥಾನವನ್ನೇ ಆಕ್ರಮಿಸಿ ಕೊಳ್ಳುತ್ತಿರುವುದು ವಿಶೂಗೂ ಸಹಿಸದಾಯಿತು. ಅವನು ಕೋಪದಿಂದಲೇ "ಆ ಲಂಬಾಣಿ ಹುಡಿಗೀನ ಈವತ್ತೇ ಮನೆಯಿಂದ ಆಚೆ ಓಡಿಸ್ತೀನಿ, ನೀನು ಎದ್ದು ಬಾ ಅಕ್ಕಾ ! ಒಳಕ್ಕೆ, ಅಮ್ಮಂದು ಯಾವಾಗಲೂ ಅತೀ... ಮನೆಗೆ ಮಾರಿ ಹೆರರಿಗೆ ಉಪಕಾರಿ ನಮ್ಮನ್ನು ಕಂಡರಂತೂ ಆಗೋದೇ ಇಲ್ಲ. ಎಂದು ಸುಶೀನ ಕೈಹಿಡಿದು ಎಬ್ಬಿಸಿದ.

ಸುಶೀ ಕಣ್ಣೊರಸಿಕೊಂಡು ವಿಶೂಗೇ ಸಮಾಧಾನ ಪಡಿಸಿದಳು, "ನೀನು ಸುಮ್ಮನಿರಪ್ಪ, ಆ ಹುಡಿಗಿ ಏನೂ ಮಾಡಿದಳು ಪಾಪ ! ಅವಳೂ ಒಂದು

ವಿಧದಲ್ಲಿ ಇಕ್ಕಟ್ಟಿಗೆ ಸಿಕ್ಕಿ ತೊಳಲಾಡುತ್ತಿದಾಳೆ ಇದಕ್ಕೆಲ್ಲ ನಿಮ್ಮ ಮಾವಾನೇ ಕಾರಣ, ಎಂದಳು

ಅದೂ ಸರೀನ್ನು ! ಮಾವ ಏಕೆ ಈ ಹುಡಿಗೀನ ಇಲ್ಲಿಗೆ ಕರೆದು ಕೊಂಡು ಬರಬೇಕು ? ಅವಳನ್ನೇಕೆ ತಲೆ ಮೇಲೆ ಕೂರಿಸಿಕೊಳ್ಳಬೇಕು ? ಮದುವೆ ಇನ್ನು ಒಂದು ವಾರ ಉಳಿಯಿತು. ಮದುವೆಗೆ ಮೊದಲು ಆ ಲಂಬಾಣಿನ ಅವರ ಮನೆಗೆ ಕಳುಹಿಸು ಅಂತ ಮಾವನಿಗೆ ಹೇಳ್ತೀನಿ ತಾಳು. ನಿನ್ನ ಮದುವೇಲಿ ಅವಳೇನು ಕಲಶ-ಕನ್ನಡಿ ಹಿಡಿಬೇಕೇ ? ಅಂದ ವಿಶು.

"ಕಲಶ-ಕನ್ನಡೀನೇ ಹಿಡೀತಾಳೋ ? ಹಸೇಮಣೇನೇ ಹತ್ತುತ್ತಾಳೋ : ಯಾರಿಗೆ ಗೊತ್ತೋ ; ವಿಶೂ, ವಿಧಿಯ ಕೈಗೊಂಬೆಗಳು ನಾವು ; ಮನುಷ್ಯ ಯೋಚಿಸಿದ್ದೆಲ್ಲಾ ನಡೆದು ಬಿಟ್ಟರೆ ನಮ್ಮನ್ನು ಹಿಡಿದು ನಿಲ್ಲಿಸುವವರು ಯಾರೋ? ಎಂದು ನಿಟ್ಟುಸಿರುಬಿಟ್ಟಳು ಸುಶೀ.

"ಅಲ್ಲ ಅಕ್ಕಾ ! ಇನ್ನು ಒಂದು ವಾರ ಮದುವೆ ಇದೆ, ಮದುಮಗಳು ನೀನು ; ಮಜಾವಾಗಿ ಇರೋದು ಬಿಟ್ಟು ಯಾಕೆ ಹೀಗೆ ವ್ಯಸನ ಪಡ್ತಿಯೋ; ನಾನು ಬೇರೆ-ಕಾಣೆ. ಅಯ್ಯೋ... ಸುಶೀ—ನಾನು ಇಲ್ಲಿಗೆ ನಿನ್ನನ್ನು ಹುಡುಕಿ ಕೊಂಡು ಯಾಕ್ ಬಂದೇ ? ಅನ್ನೋದೇ ಮರೆತ್ಬಿಟ್ಟೆ. ನೋಡೂ ; ೫-೬ ರೇಷ್ಮೆ ಸೀರೆ ಕೊಟ್ಟು ಕಳುಹಿಸಿದ್ದಾರೆ, ನಾವು ಸೂಟಿನ ಬಟ್ಟೆ ತರೋಣಾಂತ ವಿಜಯಾ ಹಾಲ್‌ಗೆ ಹೋಗಿದ್ದೇವು. ಅಲ್ಲಿ ರೇಷ್ಮೆ ಕಲಾಪತ್ತು ಸೀರೆಗಳು ಚೆನ್ನಾಗಿ ಕಂಡವು ; ಆದರಲ್ಲಿ ಆರಿಸಿ ಕಳುಹಿಸಿದ್ದಾರೆ, ನಿನಗೆ ಯಾವ ಕಲರ್ ಇಷ್ಟಾನೋ ಸೆಲೆಕ್ಟ್ ಮಾಡಿಕೊಂಡು ಬಾಕೀದನ್ನು ಕಳುಹಿಸಬೇಕಂತೆ, ಬಾ ಸುಶೀ, ಬೇಗ, ಆರಿಸಿಕೊ" ಎಂದ.

ತನ್ನ ಮದುವೆಗಾಗಿ ಅಪ್ಪ ಪಡುತ್ತಿರುವ ಸಂಭ್ರಮ ಅಕ್ಕರೆ ನೋಡಿ ಸುಶೀಗೆ ಏನೋ ಒಂದು ಬಗೆಯ ನೆಮ್ಮದಿಯಾಯಿತು. ತನ್ನ ಮೆಚ್ಚಿನ ಮಾವ, ನಟರಾಜನೊಂದಿಗೆ ತನ್ನ ಮದುವೆ ; ಮದುವೆ ಮಂಟಪದಲ್ಲಿ ತಾನೂ ಮದು ಮಗಳಾಗಿ ನಾಚಿ ತಲೆ ತಗ್ಗಿಸಿ ಕುಳಿತಿರುವಂತೆ ನೆನೆಸಿಕೊಂಡು, ಆ ನೆನಪೇ ಅವಳ ಹೃದಯದಲ್ಲಿ ಸಂತೋಷವನ್ನು ಉಕ್ಕಿಸಿತು. ಮನಸ್ಸಿನ ಸಂತೋಷ ನಡಿಗೆ ಯಲ್ಲಿ ಚಿಮ್ಮಿತು. "ಬಾ—ವಿಶೂ ಸೀರೆ ಎಂಥಾದ್ದು : ನೋಡೋಣ" ಎಂದು ವಿಶೂವನ್ನು ತಳ್ಳಿಕೊಂಡೇ ಬೇಗ ಬೇಗ ನಡೆದಳು.

ಇಬ್ಬರೂ ಒಳಗೆ ಬರುವಾಗ ಹಾಲಿನಲ್ಲಿ ಎಲ್ಲರೂ ಸೇರಿ ಸೀರೆಗಳನ್ನು ಬಿಚ್ಚಿ ನೋಡುತ್ತಿದ್ದರು. ಸುಮ್ಮೀ, ರಾಜಿ, ಮಂಗಳೆ, ಪಾರ್ವತಮ್ಮ ಎಲ್ಲರೂ ಸೀರೆಗಳ ಸೆರಗು ಅಂಚು ಬಿಡಿಸಿ ನೋಡುತ್ತಿದ್ದರು.

ಸುಶೀಲಳಿಗಾಗಿ ಅವರೂ ಕಾದಿದ್ದರು. ಅವಳು ಒಳಗೆ ಬಂದ ಕೂಡಲೇ ಸುಮ್ಮೀ...ರಾಜಿ ಇಬ್ಬರೂ ಒಟ್ಟಿಗೆ "ಏನೇ ಸುಶೀ ಪತ್ತೆ ಇಲ್ಲದೆ ಎಲ್ಲಿ ಹೋಗಿ ಬಿಟ್ಟಿದ್ದೆ ? ನೋಡು ಈ ಡಬ್ಬಲ್‌ಬಾರ್ಡರ್ ವೈಲೆಟ್ ಕಲರ್ ಸಾರೀ ನಿನಗೆ ಚೆನ್ನಾಗಿ ಒಪ್ಪುತ್ತೆ ಅಂತ ನಮಗೆ ಅನ್ನಿಸುತ್ತೆ. ನಿನಗೆ ಯಾವುದು ಇಷ್ಟ ನೋಡು ಬಾರೇ" ಎಂದರು.

ಪಾರ್ವತಮ್ಮನವರು ತಮ್ಮ ಮೊಮ್ಮಗಳಿಗೆ ಎಷ್ಟು ಅಲಂಕಾರ ಮಾಡಿದರೂ ಅವರಿಗೆ, ಸರಿ ಸಾಕೆನ್ನಿಸುತ್ತಿರಲಿಲ್ಲ. "ಅಲ್ಲ ಕಣೆ ಮಂಗಳಾ ! ಇದರಲ್ಲಿ ವಾಪಸ್ಸು ಕಳಿಸುವುದೇನಿದೆ ; ಈ ಅರು ಸೀರೇನೂ ಚೆನ್ನಾಗಿದೆ. ಇಟ್ಟುಕೊಂಡು ಬಿಡ್ರೇ ;" ಬೇಕಾಗುತ್ತೆ ಅಂದರು.

ಮಂಗಳೆ ಕೂಡಲೇ ಹೌದತ್ತೆ. ಇರಲಿ, ಲಕ್ಷ್ಮೀನ ಕರೀತಿನಿ ತಾಳಿ ; ಅವಳಿಗೆ ಯಾವ ಕಲರ್ ಇಷ್ಟಾನೋ ನೋಡೋಣ ಎಂದು ಲಕ್ಷ್ಮೀ ಬಾ ಇಲ್ಲಿ ಎಂದು ಕೂಗಿದಳು. ಕೂಡಲೇ ಪಾರ್ವತಮ್ಮನವರು. ಸಿಡಾರನೆ "ಆ ತಿರುಬೋಕಿ ಲಕ್ಷ್ಮಿ ಯಾರೇ ? ಇಷ್ಟು ಭಾರಿ ಸೀರೆ ಅವಳಿಗೇಕೆ ? ಎಂದು ಗದರಿದರು.

ಲಕ್ಷ್ಮೀ ರೂಮಿನಿಂದ ಹೊರಗೆ ಬರುವ ವೇಳೆಗೂ ಈ ಮಾತು ಅವಳ ಕಿವಿಗೆ ಬೀಳುವುದೂ ಒಂದೇ ಆಯಿತು. ಅವಳು ಭಯದಿಂದ ಗಡ-ಗಡನೆ ನಡುಗಿ ಗುಬ್ಬಚ್ಚಿಯಂತಿದ್ದಳು.

ತನ್ನ ಅತ್ತೆಯ ಮಾತು ಮಂಗಳೆಯನ್ನು ಕೆಣಕಿತು. ಅವಳು ಕೂಡಲೇ ಲಕ್ಷ್ಮೀ ಏಕೆ ತಿರುಬೋಕಿ ಆಗ್ತಾಳೆ ? ನೋಡುವಿರಂತೆ ಸುಮ್ಮನಿರಿ ; ಯಾರು ತಿರುಬೋಕಿ ಅನ್ನೋದು" ಎಂದಳು.

ವಿಶೂಗೆ ಅಮ್ಮನ ಮೇಲೆ ಕುತ್ತಿಗೆಯವರೆಗಿದ್ದ ಕೋಪ ನೆತ್ತಿಗೇರಿತು. "ಅಮ್ಮಾ ! ನಿನಗೆ ಸ್ವಲ್ಪವೂ ವಿವೇಕವಿಲ್ಲ. ಆ ಲಕ್ಷ್ಮಿಗೆ ಏನಮ್ಮ ಅಷ್ಟು ಏರಿಸ್ತೀಯ ? ಅವಳು ಯಾರಮ್ಮಾ ? ಹೆತ್ತ ಮಕ್ಕಳಿಗಿಂತ ಅವಳೇ ನಿನಗೆ ಹೆಚ್ಚಾ" ಎಂದು ಕೂಗಾಡಿದ.

"ಮುಚ್ಕೋ ಬಾಯಿ. ಹಿಂದು ಮುಂದು ತಿಳೀದೆ ಮಾತನಾಡ ಬೇಡ, ಅವಳ ಸುದ್ದಿ ನಿನಗೆ ಯಾಕೆ, " ಕಿರಿಚಿದಳು ಮಂಗಳೆ.

"ಅಮ್ಮಾ! ಈ ಕ್ಷಣ ಅವಳನ್ನ ಈ ಮನೆಯಿಂದ ಆಚೆ ಕಳುಹಿಸು. ಆ ಲಂಬಾಣಿನೇನಮ್ಮಾ ಹಾಗೆ ಉಪಚರಿಸ್ತೀ?"

"ಅದೇ ಕಣೋ ವಿಶೂ ಇವಳ ಅತಿರೇಕ ನನಗೆ ಸ್ವಲ್ಪಾನೂ ಹಿಡಿಸೋಲ್ಲ. ಮಡಿ ಇಲ್ಲ ಮೈಲಿಗೆ ಇಲ್ಲ ಆ ಲಂಬಾಣಿ ಹುಡಿಗೀನ್ನ ಮನೆ ಒಳಗೆಲ್ಲಾ ಓಡಾಡಿ ಸ್ತಾಳಲ್ಲಾ ನಾನೇನು ತಲೆ ಚಚ್ಚಿಕೊಂಡು ಸಾಯ್ಲೀನೋ?" ಎಂದರು ಪಾರ್ವತಮ್ಮ.

ಇವರುಗಳ ಒಂದೊಂದು ಚುಚ್ಚು ಮಾತೂ ಬಾಣದಂತೆ ಮಂಗಳೆಯ ಕರುಳನ್ನು ಇರಿಯುತ್ತಿದ್ದವು. "ಅಯ್ಯೋ ದೇವರೇ ಈ ಶರಪಂಜರದಿಂದ ನನಗೆ ಬಿಡುಗಡೆ ಎಂದಿಗೆ?" ಎಂದು ತವಕಿಸಿದಳು.

ಈ ಎಲ್ಲಾ ಮಾತುಕತೆಗಳನ್ನೂ ಲಕ್ಕಿ ಕೇಳಿಸಿಕೊಂಡೇ ನಿಂತಿದ್ದಳು. ತನ್ನಿಂದಾಗಿ ಎಷ್ಟು ಹಗರಣ? ಇನ್ನೊಂದು ಘಳಿಗೆಯೂ ತಾನಿಲ್ಲಿ ಇರಬಾರದು ಎನ್ನಿಸಿತು ಅವಳಿಗೆ.

ಮಂಗಳೆಯ ಬಳಿ ಬಂದು "ಅಮ್ಮಾ! ನಿಮ್ಮ ಋಣವನ್ನು ನಾನು ಈ ಜನ್ಮದಲ್ಲಿ ತೀರಿಸಲಾರೆ ನಾನು ಹೋಗ್ತೀನಿ. ನನ್ನಿಂದಾಗಿ ನಿಮಗೆ ಕಷ್ಟಬೇಡ ತಾಯಿ" ಎಂದವಳೇ ಬಗ್ಗಿ ಮಂಗಳೆಯ ಕಾಲಿಗೆ ನಮಸ್ಕಾರ ಮಾಡಿದಳು. ನಂತರ ಅಲ್ಲಿ ಒಂದು ಘಳಿಗೆಯೂ ನಿಲ್ಲದೆ ಬಿರ ಬಿರನೆ ಹೊರಟುಬಿಟ್ಟಳು.

ಮಂಗಳೆ ಗಾಬರಿಯಿಂದ "ಅಯ್ಯೋ! ಲಕ್ಷ್ಮೀ ಹೋಗಬೇಡ ನಿಲ್ಲೂ.. ನಿಲ್ಲೂ, ಖಂಡಿತ ಹೋಗಬೇಡ," ಎಂದು ಮುಂದೆ ಮುಂದೆ ಹೋಗಿ ಲಕ್ಷ್ಮೀಯನ್ನು ತಡೆದಳು. ವಿಶೂ ಮುಂದೆ ನುಗ್ಗಿ ತಾಯಿಗೆ ಅಡ್ಡ ಹಾಕಿದ. "ಅಯ್ಯೋ! ಬಿಡೋ; ನನ್ನನ್ನು ತಡೀಬೇಡ. ನನ್ನ ಕಂದ! ಲಕ್ಕೀ!....ನಾನು ಇಷ್ಟೊ ಮಾಡಿದ್ದೂ ವ್ಯರ್ಥ ಹೋಗಬೇಡ ಬಾ... ಎಂದು ಕೂಗಿಕೊಂಡಳು. ಅತ್ತು ಗೋಳಾಡಿದಳು.

ಸುಶೀ ಈ ಹಗರಣವನ್ನೆಲ್ಲಾ ನೋಡುತ್ತಿದ್ದವಳು ಲಕ್ಕಿಯ ಹಿಂದೆಯೇ ಬೇಗ ಬೇಗ ಓಡಿ ಹೋಗಿ ಅವಳನ್ನು ಹಿಡಿದು ನಿಲ್ಲಿಸಿದಳು.

ಲಕ್ಕಿ ಕೈ ಕೋಸರಿಕೊಂಡು "ಬಿಡಿ ಅಕ್ಕಾ ! ನನ್ನನ್ನು ತಡೆಯಬೇಡಿ. ನಾನು ಈಗಲೇ ಹೋಗಬೇಕು" ಅಂದಳು.

"ಇದೇನು ಲಕ್ಷ್ಮೀ ನೀನೊಬ್ಬಳೇ ಈಗೆಲ್ಲಿ ಹೋಗ್ತೀ ? ಮಾವ ಬರಲಿ ತಾಳು, ಆ ಮೇಲೆ ಎಲ್ಲಿಬೇಕಾದರೂ ಹೋಗುವಿಯಂತೆ. ಅವರೇ ನಿನ್ನನ್ನು ಕರೆದುಕೊಂಡು ಬಂದರು. ಅವರೇ ಕಳುಹಿಸಿ ಕೊಡುತ್ತಾರೆ ಇರು" ಅಂದಳು ಸುಶೀ

ಮಂಗಳೆ ಕೂಡಾ ಲಕಿ ಯ ಬಳಿ ಬಂದು "ಬಾಮ್ಮ ಲಕ್ಷ್ಮೀ ; ಯಾರು ಏನಾದರೂ ಹೇಳಲಿ ; ನಟರಾಜ ಬರುವವರೆಗೂ ನೀನು ಎಲ್ಲಿಗೂ ಹೋಗ ಬೇಡ" ಎಂದು ಸಮಾಧಾನ ಪಡಿಸಿ ಬಲವಂತವಾಗಿ ಸುಶೀ-ಮಂಗಳೆ ಇಬ್ಬರೂ ಸೇರಿ ಬಲವಂತವಾಗಿ ಲಕ್ಕಿಯನ್ನು ಕರೆತಂದರು.

ಲಕ್ಕಿಗಂತೂ ಏನೂ ದಿಕ್ಕು ತೋರದಂತಾಯಿತು. ಪುಕ್ಕ ತೆರೆದ ಪಾರಿವಾಳದಂತೆ ಹುದುಗಿ ಒಂದು ಮೂಲೆಯಲ್ಲಿ ಕುಳಿತಳು.

ಪಾರ್ವತಮ್ಮನವರಿಗಂತೂ ಸೊಸೆಯ ಈ ವಿಚಿತ್ರ ರೀತಿ ನೋಡಿ ಸಹಿಸ ದಂತಾಯಿತು.

ಅವರು ಒಂದೇ ಸಮ ಕೂಗಾಡಿದರು. ಮಗ ಮನೆಗೆ ಬಂದ ಕೂಡಲೇ ತಮ್ಮ ಮನಸ್ಸಿನ ಬೇಗುದಿಯನ್ನು ತೋಡಿಕೊಂಡರು.

"ಇದೇನೋ ಮೂರ್ತಿ ನಿನ್ನ ಹೆಂಡತಿ ರೀತಿ ಬಲು ವಿಚಿತ್ರಪ್ಪ ! ಮೊದಲೆಲ್ಲಾ ವಿಶೂ ತಲೆ ಕಂಡರೇ ಉರಿದು ಬೀಳುತ್ತಿದ್ದಳು. ಈಗೇನೋ ಸರಿಯಾಗಬಹುದು, ಎಂದುಕೊಂಡಿದ್ದೆ. ಈಗ ಇನ್ನೊಂದು ತರಹ ವಿಚಿತ್ರ.... ಆ ಲಂಬಾಣಿ ಹುಡಿಗಿನ್ನ ಮನೇಲೆಲ್ಲಾ ಮೆರಸ್ತಾಳೆ. ಈ ಪಾಪ ಕರ್ಮವನ್ನು ಯಾರು ನೋಡಿ ಸಹಿಸ್ತಾರೇಳು ? " ಎಂದು ಗೊಣಗಿದರು.

ಮೂರ್ತಿ ತಾಯಿಯನ್ನು ಸಮಾಧಾನ ಪಡಿಸುತ್ತಾ ; ಬಿಡಮ್ಮ ಅವಳು ಏನು ಬೇಕಾದರೂ ಮಾಡಿಕೊಳ್ಳಲಿ, ಸುಶೀ ಮದುವೆ ಇನ್ನು ೮ ದಿನ ಇದೆ, ಆ ವೇಳೆಗೆ ಅವಳಿಗೆಲ್ಲಾದರೂ ಬೈರ್ರನು ಕೆಟ್ಟು ಹಗರಣವಾದಿತು ! ಅದೇನೋಪ್ಪ ನಿನಗೇ ಗೊತ್ತಿಲ್ಲ ಆ ಲಂಬಾಣಿ ಅನ್ನೋ ಮೂರಕ್ಷರ ಅವಳ ಮೂಲ ಮಂತ್ರ ಆ ಹೆಸರು ಕೇಳಿಬಿಟ್ಟರೆ ಹುಚ್ಚಿಯಂತೆ ಆಡುತ್ತಿದ್ದಳು. ಸದ್ಯ ಆ ಲಂಬಾಣಿ ಲಕ್ಷ್ಮಿಯನ್ನು ನೋಡಿ ಸಮಾಧಾನ, ಸಂತೋಷವಾಗಿದಾಳಲ್ಲ ಅಷ್ಟೇ ಸಾಕು ಅಷ್ಟಕ್ಕೂ ಏನಮ್ಮ ! ಈಗ ಜಾತಿ ಭೇದ ಅನ್ನೋದೇ ಇಲ್ಲ. ಆ ಹುಡುಗಿ,

ಯಂತೂ ಲಕ್ಷಣವಾಗಿ ನಮ್ಮ ಸುಮ್ಮೀ ಇದ್ದ ಹಾಗೇ ಇದಾಳೆ. ಒಳ್ಳೆ ಹುಡುಗಿ, ನೋಡು ನೀನು ಹುಂ ಅಂದರೆ ಆ ಹುಡುಗಿಯನ್ನು ನಮ್ಮ ವಿಶೂಗೆ ತಂದು ಮದುವೆ ಮಾಡಿ ಬಿಡ್ತೀನಿ.... ಅಂದರು.

ಪಾರ್ವತಮ್ಮನವರಿಗೆ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು. "ಏನೋ ಮೂರ್ತಿ ! ಇದು ಕೇಡುಗಾಲ ನಿನಗ್ಯಾಕೋ ಇಂಥಾ ಬುದ್ಧಿ ? ಉತ್ತಮ ಜಾತಿಯವರು ನಾವು ಹೋಗಿ ಹೋಗಿ, ಆ ಲಂಬಾಣಿಯನ್ನು ಮನೆ ಸೊಸೆಯಾಗಿ ತರುವುದೇ ? ಲಕ್ಷಣವಾಯಿತು" ಅಂದರು.

ಈ ಕೊನೆಯ ಮಾತನ್ನು ಕೇಳಿಸಿಕೊಂಡೇ ಮಂಗಳೆ ಅಲ್ಲಿಗೆ ಬಂದಳು. "ಅತ್ತೇ ಸಾಕು ಸುಮ್ಮನಿರಿ ; ನಿಮ್ಮಿಂದ ಆಗಿರುವ ಅನಾಹುತ ಏನೂ ಅನ್ನೋದು ಇನ್ನು ಸ್ವಲ್ಪದರಲ್ಲಿಯೇ ಗೊತ್ತಾಗುತ್ತೆ. ಆಗ ಯಾರು ಮೇಲು ಜಾತಿ ; ಯಾರು ಕೀಳು ಜಾತಿ ? ಎಂದು ತೀರ್ಮಾನ ಮಾಡುವಿರಂತೆ, ಆಗ ಒಂದು ವಿಧವಾಗಿ ನನ್ನ ಹೊಟ್ಟೆ ಉರಿಸಿದಿರಿ, ಈಗ ಒಂದು ವಿಧವಾಗಿ ಕರುಳು ಕತ್ತರಿಸ ಬೇಡಿ" ಎಂದು ರೋಷಾ ವೇಷದಿಂದ ಹೇಳಿದಳು.

ಮೂರ್ತಿಯವರಿಗೂ ಮಂಗಳೆಯ ಮಾತು ಏನೆಂದು ಅರ್ಥವಾಗಲಿಲ್ಲ. ಅವರು ಹೆಂಡತಿಯನ್ನು ಸಮಾಧಾನ ಪಡಿಸುತ್ತಾ ; "ಮಂಗಳಾ ; ಇದ್ಯಾಕೆ ಹೀಗೆಲ್ಲಾ ಕೂಗಾಡ್ತಿ ? ಮುಂದಿನ ಕೆಲಸ ನೋಡು, ನಿಮ್ಮ ತಂದೆ ತಾಯಿ ಈಗ ೩ ಗಂಟೆ ರೈಲಿನಲ್ಲಿ ಬರುತ್ತಾರೆ. ಇವತ್ತೇ ದಿನ ಚೆನ್ನಾಗಿದೆ. ಲಗ್ನ ಪತ್ರಿಕೆ ಶಾಸ್ತ್ರ ಆಗಬೇಕು. ಅದು ಸರಿ ನಟರಾಜ ಎಲ್ಲಿ ? ಕಾಣ್ತಾನೇ ಇಲ್ಲವಲ್ಲ ! ಮದುವೆ ಗಂಡು, ಸೂಟಿನ ಅಳತೆ ಕೊಡಬೇಕೂ ಅಂತ ಬೆಳಿಗ್ಗೆಯಿಂದ ಕಾಯ್ತಾ ಇದ್ದೀನಿ. ಎಲ್ಹೋದ ? " ಎಂದು ಎಲ್ಲಾ ಒಟ್ಟಿಗೆ ಬಡ ಬಡನೆ ಮಾತಾಡಿದರು.

"ನಟರಾಜ ಬಂದ ಮೇಲೆ ತಾನೆ ಲಗ್ನ ಪತ್ರಿಕೆ ಶಾಸ್ತ್ರ ; ಅದುವರೆಗೂ ಸುಮ್ಮನಿರಿ ಯಾಕ್ ಅವಾಂತ್ರ ಮಾಡ್ತೀರ ? ರೈಲ್ವೆ ಸ್ಟೇಷನ್ನಿಗೆ ಕಾರ್ ತೆಗೆದು ಕೊಂಡು ಹೋಗಿ ಬನ್ನಿ ಆಗಲೇ ಮೂರು ಗಂಟೆ, ಎಂದಳು ಮಂಗಳೆ.

ವಿಶೂ ಎಲ್ಲಿ ಹೋದ್ನೇ ? ಅವನನ್ನೆ ಸ್ಟೇಷನ್ನಿಗೆ ಕಳುಹಿಸಿದ್ದರೆ ಆಗಿತ್ತು ನನಗಿನ್ನೂ ಬೇಕಾದಷ್ಟು ಕೆಲಸವಿದೆ.

"ಅಯ್ಯೋ, ರಾಮ; ಹೀಗೇ ಚರ್ಚೆ ಮಾಡ್ತಾ ಇರಿ ರೈಲು ಬರೋ ಹೊತ್ತೇ ಆಯಿತು". ಎಂದಳು ಮಂಗಳೆ.

ಅಷ್ಟಕ್ಕೆ ಸರಿಯಾಗಿ ಮನೆಬಾಗಿಲಲ್ಲಿ ಆಟೋ ಬಂದು ನಿಂತಿತು. ಮಂಗಳೆಯ ತಂದೆ-ತಾಯಿಯರು ಅಟೋದಿಂದ ಇಳಿದರು.

"ನೋಡಿದ್ರಾ! ಅಮ್ಮಾ-ಅಪ್ಪ ಬಂದೇ ಬಿಟ್ರು ಬಾಮ್ಮ : ಈಗ ಅವರು ಕಾರ್ ತೆಗೆದುಕೊಂಡು ಸ್ಟೇಷನ್ನಿಗೆ ಹೊರಟಿದ್ದರು. ಈವತ್ತೇನೋ ರೈಲು ಬೇಗ ಬಂದಂತಿದೆ. ಬಾಪ್ಪ ಒಳಕ್ಕೆ," ಎಂದು ಮಂಗಳೆ ಆಟೋದಿಂದ ಅವರ ಸಾಮಾನನ್ನು ಇಳಿಸಿದಳು.

ಮೂರ್ತಿಯೂ ಆದರದಿಂದ ಅತ್ತೆ ಮಾವನನ್ನು ಒಳಕ್ಕೆ ಕರೆದುಕೊಂಡು ಹೋದರು. ಒಬ್ಬರಿಗೊಬ್ಬರಿಗೆ ಯೋಗಕ್ಷೇಮ ಎಲ್ಲಾ ಆಯಿತು.

ಮಂಗಳೆಯ ತಂದೆ ಚಂದ್ರಶೇಖರಪ್ಪನವರು "ಏನಪ್ಪಾ ಮೂರ್ತಿ ಮದುವೆ ಲಗ್ನ ಯಾವಾಗ? ಎಲ್ಲಾ ಏರ್ಪಾಡು ಆಗಿದೆಯೇ?" ಎಂದು ಕೇಳಿದರು.

"ಈಗೇನು ಮಾವ! ನಾಳೇನೇ ಬೇಕಾದ್ರೂ ಮದುವೆ ಮಾಡಿಬಿಡಬಹುದ್ದು. ಎಲ್ಲಾ ರೆಡೀಮೇಡ್ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ಎಲ್ಲಾ ಸಿದ್ಧವಾಗಿರುತ್ತೆ. ಹೇಗಿದ್ದರೂ ಹೆಣ್ಣು-ಗಂಡೂ ಕೂಡಾ ರೆಡೀಮೇಡ್ ಮನೆಯದೇ; ಇನ್ನೇನು ಮಾವ;" ಎಂದು ಮೂರ್ತಿ ತಮಾಷಿ ಮಾಡಿದರು.

ಸುಶೀ ಎಲ್ಲರಿಗೂ ಕಾಫಿ ತಂದುಕೊಟ್ಟಳು.

"ನೋಡಮ್ಮ ಸುಶೀ: ನಿನ್ನ ಅತ್ತೆ ಮಾವಾನೂ ಬಂದು ಬಿಟ್ರು. ಅದು ಸರಿ ಯಜಮಾನರನ್ನೆಲ್ಲಿ? ಗುಟ್ಟಾಗಿ ಎಲ್ಲಿಗೆ ಕಳುಹಿಸಿ ಬಿಟ್ಟಿದ್ದೀಯಮ್ಮ? ಕಾಣಿಸ್ತಾನೆ ಇಲ್ಲ?" ಅಂದರು ಮೂರ್ತಿ.

"ನಾನೆಲ್ಲೂ ಕಳಿಸಿಲ್ಲಾಪ್ಪ! ನನಗೇನು ಗೊತ್ತು?" ಎಂದು ಅವರುಗಳು ಕುಡಿದಿಟ್ಟಿದ ಕಾಫಿ ಲೋಟಗಳನ್ನು ಎತ್ತಿ ಜೋಡಿಸಿದಳು.

"ಛೆ .. ಛೆ ಬಿಡಮ್ಮ . ನೀನ್ಯಾಕೆ ಈ ಕೆಲಸ ಎಲ್ಲಾ ಮಾಡ್ತೀ? ರಾಮಪ್ಪ ಇಲ್ವೆ .. ಮಾಡ್ತಾನೆ. ನೀನು ಮದು ಮಗಳು ಇನ್ನು ಮೇಲೆ ಏನೂ ಕೆಲಸ ಮಾಡಬಾರದು". ಎಂದು ಅಕ್ಕರೆಯಿಂದ ಮಗಳ ಬೆನ್ನಮೇಲೆ ಕೈ ಆಡಿಸಿದರು ಮೂರ್ತಿ.

ಸುಶೀಲಳ ಮುಖವನ್ನೇ ಅಕ್ಕರೆಯಿಂದ ನೋಡುತ್ತಾ ನಟರಾಜನ ತಾಯಿ "ಏಕೆ ಮಂಗಳಾ! ಸುಶೀ ಇಷ್ಟು ಇಳಿದುಹೋಗಿದ್ದಾಳೆ? ಮೈ ಹುಷಾರಿರಲಿಲ್ಲವೇ?" ಎಂದು ಕೇಳಿದರು.

"ಅದೇನೋಮ್ಮ ಈ ನಡುವೆ ಏನೋ ಚಿಂತೆ ಹಚ್ಚಿಕೊಂಡು ಹೀಗಾಗಿದಾಳೆ" ಅಂದಳು ಅಲ್ಲೇ ಇದ್ದ ಮಂಗಳೆ.

"ಅಲ್ಲ ಕಣೇ, ಹೆಣ್ಣು-ಗಂಡು ಗೊತ್ತಾಗಿ ಎಷ್ಟು ಕಾಲವಾದರೂ ಇನ್ನೂ ಮದುವೆ ಮಾಡದಿದ್ದರೆ ಇನ್ನೇನು ಚಿಂತೆ ಹಚ್ಚಿಕೊಳ್ಳದೆ ಏನಾಗುತ್ತೆ?" ಅಂದರು ಮಂಗಳೆಯ ತಾಯಿ.

"ಅಲ್ಲಾ: ಅತ್ತೇ ನಾವೇನು ಮಾಡೋಲ್ಲ ಅಂದಿದ್ವೇ?" ನಿಮ್ಮ ಮಗನೇ ಈಗಲೇ ಬೇಡ-ಬೇಡ ಅಂದು ನಮ್ಮನ್ನು ಸತಾಯಿಸಿದ್ದು! ಸದ್ಯ ಈಗಲಾದರೂ ಒಪ್ಪಿದನಲ್ಲಾ!

"ಏನ್ ಒಪ್ಪಿದಾನೋ; ಮನಸ್ಸಿನಲ್ಲಿರೋದು ಮಹದೇವನೇ ಬಲ್ಲ ಅನ್ನೋ ಹಾಗೆ ಅವನ ಮನಸ್ಸಿನಲ್ಲಿರೋದು ಯಾರಿಗೆ ಗೊತ್ತು?" ಅಂದಳು ಮಂಗಳೆ.

"ಸರಿ-ಸರಿ-ಅವನ ಮನಸ್ಸಿನಲ್ಲಿ ಇನ್ನೇನಿದೆ ಮದುವೆ ಆದ ತಕ್ಷಣ ನಮ್ಮ ಸುಶೀನ ಹಾರಿಸ್ಕೊಂಡ್ ಹೋಗೋದು ಅಷ್ಟೆ" ಅಂದರು ಮೂರ್ತಿ.

ಹೌದಪ್ಪ ಹೌದಪ್ಪ ಎಂದು ಸುಮ್ಮೀ, ರಾಜಿ, ಎಲ್ಲರೂ ಘೊಳ್ಳನೆ ನಕ್ಕರು. ಸುಶೀಲ ಮಾತ್ರ ಯಾವ ಸಂತೋಷವನ್ನೂ ವ್ಯಕ್ತಪಡಿಸದೆ ತಲೆ ತಗ್ಗಿಸಿ ಅಲ್ಲಿಂದ ಹೊರಟು ಹೋದಳು.

ಅದಕ್ಕೆ ಮೂರ್ತಿಯವರ ಅರ್ಥವೇ ಬೇರೆ ತಮ್ಮ ಮುದ್ದು ಮಗಳು, ಸುಶೀ ಮಕ್ಕಳಂತೆ ಕುಣಿದು ಕುಪ್ಪಳಿಸುತ್ತಿದ್ದವಳು ಮದುವೆ ಗೊತ್ತಾದ ಕೂಡಲೇ ನಾಚಿಕೆಯ ಮುದ್ದೆಯಾಗಿದ್ದಾಳೆ; ಅವಳ ಸ್ವಭಾವವೇ ಪೂರ್ತಿ ಬದಲಾಯಿಸಿ ಬಿಟ್ಟಿದೆ" ಎಂದು ನಗುತ್ತಾ ಹೇಳಿದರು.

ಎಲ್ಲರೂ ಸಂಭ್ರಮದಿಂದ ಓಡಾಡುತ್ತಾ ಲಗ್ನಪತ್ರಿಕೆ ಶಾಸ್ತ್ರ ನಡೆಸಲು ಅಣಿಮಾಡುತ್ತಿದ್ದರು. ಮಂಗಳೆ ಮಾತ್ರ ಯಾವುದಕ್ಕೂ ಮನಸ್ಸಿಲ್ಲದೆ ತವಕಿಸುತ್ತಾ ಇನ್ನೂ ನಟರಾಜ ಬರಲಿಲ್ಲವಲ್ಲಾ; ಇದೇನು ಕಥೆಯಾಂತ್ರ ಆಗುತ್ತೋ ಏನೋ: ಎಂದು ಹೊರಗಡೆ ಬಗ್ಗಿ ಬಗ್ಗಿ ನೋಡುತ್ತಿದ್ದಳು.

ಮೂರ್ತಿಯವರು ಗಡಿ-ಬಿಡಿಯಿಂದ ಅತ್ತಿಂದಿತ್ತ ಓಡಾಡುತ್ತಾ "ಲೋ ! ವಿಶೂ ; ಬಾರೋ ಇಲ್ಲಿ" ಎಂದು ಕೂಗಿದರು:

ವಿಶೂ ಬಂದು "ಏನಪ್ಪಾ ! " ಎಂದ.

"ಹೋಗೋ ಪುರೋಹಿತರಿಗೆ ಇನ್ನೊಂದು ಸಲ ಜ್ಞಾಪಿಸಿ ಬಾರೋ; ಐದು ಗಂಟೆಗೆ ಬರುವಂತೆ ಹೇಳಿ ಬಾರೋ ; ಹಾಗೆಯೇ ನಟರಾಜ ಎಲ್ಲಿ ಹೋಗಿದ್ದಾನೆ ನೋಡಿ ಕರೆದುಕೊಂಡು ಬಾರೋ," ಎಂದು ಹೇಳಿ,

"ಲೇ ಮಂಗಳಾ ...ಮಂಗಳಾ" ಎಂದು ಕೂಗಿಕೊಂಡೇ ಒಳಗೆ ಬಂದರು. ಮಂಗಳೆ ಯಾವ ಸಿದ್ಧತೆಯೂ ಇಲ್ಲದೆ ಉಟ್ಟಸೀರೆ, ತೊಟ್ಟ ರವಿಕೆಯಲ್ಲೇ ಸುಮ್ಮನೆ ತಲೆಯಮೇಲೆ ಕೈ ಹೊತ್ತು ಕುಳಿತಿದ್ದುದನ್ನು ನೋಡಿ ಮೂರ್ತಿಯವರಿಗೆ ಭಯವಾಯಿತು.

ಇದೇಕೆ ಮಂಗಳಾ ಹೀಗೆ ಕುಳಿತುಬಿಟ್ಟೆ. ನೀನೂ ಲಕ್ಷಣವಾಗಿ ಒಳ್ಳೆ ಸೀರೆ ಉಟ್ಟುಕೊಂಡು ಸುಶೀಗೂ ಅಷ್ಟು ಲಕ್ಷಣವಾಗಿ ಒಡವೆ, ಸೀರೆ ಹಾಕಿ ಅಲಂಕಾರ ಮಾಡು. ಇನ್ನೇನು ಪುರೋಹಿತರು ಬಂದು ಬಿಡುತ್ತಾರೆ" ಎಂದರು.

"ನಟರಾಜ ಬಂದಮೇಲೆ ತಾನೇ ಎಲ್ಲಾ ಶಾಸ್ತ್ರ: ಬರಲಿ ಹೋಗಿ" ಎಂದು ಸಿಡುಕಿದಳು. ಮೂರ್ತಿ ಇದೇಕೋ ಹೆಂಡತಿ ಮೂಡ್ ಸರಿ ಇಲ್ಲ, ಎಂದು ಕೊಂಡು "ಲೇ ಸುಮಿತ್ರಾ, ರಾಜಿ, ನೀವಾದರೂ ಅಷ್ಟು ಸುಶೀಲೆಗೆ ಅಲಂಕಾರ ಮಾಡೀಮ್ಮಾ: ಇನ್ನೇನು ಮನೆಗಂಡು ಮಾವನೇ ತಾನೇ ಎಂದು ಸುಶೀ ನೋಡು ಎಷ್ಟು ಉದಾಸೀನವಾಗಿದಾಳೆ?" ಎಂದರು.

"ಅವಳಿದ್ದರೆ, ನಾವು ಬಿಡಬೇಕಲ್ಲಪ್ಪಾ : ಈಗ ನೋಡ್ತಿರು ಸುಶೀಲೆ ಹೇಗೆ ಶೃಂಗಾರವಾಗಿ ಬರ್ತಾಳೆ ಅಂತ" ಎಂದು ಹೇಳಿ ಅವಳ ಬಳಿ ಹೋಗಿ ಸುಶೀಲೆಯನ್ನು ಹಾಸ್ಯಮಾಡಿ ಪೀಡಿಸಿ ಅವಳ ಅಲಂಕಾರಕ್ಕೆ ತೊಡಗಿದರು.

ಮಂಗಳೆಯು ಲಕ್ಕಿಯನ್ನು ತನ್ನ ಕೊಠಡಿಗೆ ಕರೆದುಕೊಂಡು ಹೋಗಿ ಕೂರಿಸಿಕೊಂಡು ಅವಳೆಷ್ಟು ಬೇಡವೆಂದರೂ ಮುಡಿಯಿಂದ ಅಡಿಯವರೆಗೆ ಅವಳನ್ನು ಅಲಂಕರಿಸಿದಳು. ತನ್ನ ಒಡವೆಗಳನ್ನೆಲ್ಲಾ ಅವಳಿಗೆ ತೊಡಿಸಿದಳು. ಬೆನಾರಸ್ ರೇಷ್ಮೆ ಸೀರೆಯೊಂದನ್ನು ತನ್ನ ಕೈಯ್ಯಾರ ಉಡಿಸಿದಳು, ಅಡಿಗಡಿಗೆ ಅವಳನ್ನು ಮೇಲಿಂದ ಕಾಲವರೆಗೆ ನೋಡಿದಳು. ತನ್ನ ಎಲ್ಲಾ ಮಕ್ಕಳಿಗಿಂತಲೂ ಲಕ್ಕಿಯ ರೂಪ ಮನಮೋಹಕವಾಗಿದೆ ಎನ್ನಿಸಿತು. ಅವಳ ತಾಯಿ ಮಮತೆ

ಉಕ್ಕಿಬಂತು. ಲಕ್ಕಿಯನ್ನು ಬಿಗಿದಪ್ಪಿ "ನನ್ನ ಕಂದಾ ! ಪಾಪಿ ನನ್ನಿಂದಾಗಿ ನಿನಗೆ ಎಂತಹ ಗತಿ ಬಂತು ? ನಾನು ಮಾಡಬಾರದ ಅನ್ಯಾಯವನ್ನು ನಿನಗೆ ಮಾಡಿಬಿಟ್ಟೆ ಲಕ್ಷ್ಮೀ....ನನ್ನನ್ನು ಅಗಲಿ ಇನ್ನು ನೀನು ಹೋಗಬೇಡ" ಎಂದು ಗಳ-ಗಳನೆ ಅತ್ತು ಬಿಟ್ಟಳು.

ಲಕ್ಕಿಗೆ ಈ ಮನೆಯ ವಿಚಿತ್ರವೇ ಅರ್ಥವಾಗುತ್ತಿರಲಿಲ್ಲ. "ಪಾಪ ! ಈಯಮ್ಮ ಯಾಕೆ ತನ್ನ ಮೇಲೆ ಇಷ್ಟು ಪ್ರಾಣ ಇಟ್ಟಿದ್ದಾಳೆ ? ನಾನೇನು ಮಾಡಲಿ ? " ಎಂದು ಪರಿತಪಿಸಿದಳು.

ವಿಶೂ ತಂದೆಯ ಅಪ್ಪಣೆಯ ಪ್ರಕಾರ ಪುರೋಹಿತರಿಗೇನೋ ಹೇಳಿ ಬಂದ. ಆದರೆ ಎಲ್ಲೆಲ್ಲಿ ಹುಡುಕಿದರೂ ನಟರಾಜ ಮಾತ್ರ ಸಿಕ್ಕಲಿಲ್ಲ. ಸುಶೀನ ಕೀಟಲೆ ಮಾಡುವುದಕ್ಕೆ ಇದೊಂದು ನೆಪ ಸಿಕ್ಕಿತು. ಸುಶೀಲಳ ಕೊಠಡಿಯೊಳಕ್ಕೆ ಹೋದ.

ಸರ್ವಾಲಂಕಾರದಿಂದ ಶೋಭಿಸುತ್ತಿದ್ದ ಸುಶೀಯನ್ನು ನೋಡಿ ಢಂಗಾದ "ಆಹಾ ಹಾ ..ಹಾ....ಇವಳ್ಯಾರು ? ದೇವ ಕನ್ನಿಕೆಯೋ ? ಗಂಧರ್ವ ದೇವಿಯೋ ? ಎಲ್ಲಿಂದ ಇಳಿದು ಬಂದಳು ? " ಎಂದು ತಮಾಷಿ ಮಾಡಿದ.

ಸುಶೀ ಈಗ ಖುಷಿಯಾಗಿದ್ದಳು. ಹಸೆಮಣೆ ಹತ್ತುವ ಹೆಣ್ಣಾಗಿ ಶೋಭಿಸುತ್ತಿದ್ದಳು. ಸುಮಿತ್ರ, ರಾಜಿ ಇಬ್ಬರೂ ಸೇರಿ ಅವಳನ್ನು ಅಂದವಾಗಿ ಅಲಂಕರಿಸಿದ್ದರು. ಸುಶೀ ಈಗ ಸಂತೋಷ ಸಾಗರದಲ್ಲಿ ತೇಲಾಡುತ್ತಿದ್ದಳು. ಅವಳ ಮನಸ್ಸೆಲ್ಲಾ ತನ್ನ ಇನಿಯನ ಪ್ರಣಯ ಪ್ರೇಮಾಲಾಪನ್ನು ನೆನೆಸುವುದರಲ್ಲಿ ತಲ್ಲೀನವಾಗಿತ್ತು. ವಿಶೂ ಮಾತನ್ನು ಕೇಳಿ ನಾಚಿಕೆಯಿಂದ "ಹೋಗೋ.. ನಾನು ಯಾವ ಲೋಕದಿಂದಲೂ ಇಳಿದು ಬಂದಿಲ್ಲ.ಸದ್ಯ ನಿನ್ನ ಕನಸಿನ ರಾಣಿ ಪೂನಾದಿಂದ ಇಳಿದು ಬಂದಳೋ ಇಲ್ಲವೋ ಮೊದಲು ನೋಡು." ಎಂದು ಅವನ ಬೆನ್ನಿನ ಮೇಲೆ ಗುದ್ದಿದಳು.

"ಅಯ್ಯಯ್ಯೋ ! ಯಾಕಾದ್ರೂ ಜ್ಞಾಪಿಸಿದೆಯೇ ಸುಶೀ ! ಪೂನಾವಾಲಿ-ಬಿಳೀಜರ್ಲೆ, ಇನ್ನೂ ಬರ್ಲಿಲ್ಲವಲ್ಲಾ ಬರ್ಲಿಲ್ಲವಲ್ಲಾ , ಎಂದು ನಿರೀಕ್ಷಿಸಿ ಅನ್ನ-ನೀರು ಬಿಟ್ಟು ಕೊರಗ್ತಾ ಇದ್ದೀನಿ. ಹೇಗೋ ನಿನ್ನ ಈ ಗಡಿ ಬಿಡಿಯಲ್ಲಿ ಸ್ವಲ್ಪ ಮರೆತಿದ್ದೆ .. ಮತ್ತೆ ಜ್ಞಾಪಿಸಿಬಿಟ್ಟೆಯಲ್ಲೇ ! ಹೋಗೇ .. ನಿನ್ನ ಆನಂದದಲ್ಲಿ ಯಾರ ಚಿಂತೆ ನಿನಗೇನಿದೆ ? " ಅಂದ ವಿಶೂ.

"ಅಯ್ಯೋ! ಅಯ್ಯೋ! ಏನ್ ಆಸೆನಪ್ಪಾ! ಆ ವೀಣಾಪಾಣಿ ಚೆನ್ನಾಗೇ ಮಂಕು ಬೂದಿ ಎರಚಿದಾಳೆ ಎಂದು ಕಾಣುತ್ತೆ ಮದುವೆಗೆ ಮೊದಲೇ ಬಾಯ್-ಬಾಯ್ ಬಿಡ್ತಿದ್ದೀಯಲ್ಲೋ!" ಎಂದು ಸುಮಿತ್ರ ಹಾಸ್ಯ ಮಾಡಿದಳು.

"ಹೌದು ಕಣೇ...ಮದುವೆಗೆ ಮೊದಲೇ ಮತ್ತೆ ಬಾಯ್-ಬಾಯ್ ಬಿಡೋದು. ಮದುವೆ ಆದಮೇಲೆ ಅವಳು ಬಾಯ್ ಮುಚ್ಚಿಸ್ತಾಳಲ್ಲಾ! ಅದಿರಲಿ, ಮದವಣಗಿತ್ತೀ; ಮದುವೆ ಗಂಡೆಲ್ಲಮ್ಮ? ನೀನು ಮಾತ್ರ ಶೃಂಗಾರ ಮಾಡಿಕೊಂಡು ರೆಡೀಯಾಗಿ ಬಿಟ್ಟೆಯಲ್ಲಾ ಯಜಮಾನರೆಲ್ಲಿ?" ಅಂದ ವಿಶೂ.

ಈಗ ಸುಶೀಲೆ-ಸುಮಿತ್ರೆ ಇಬ್ಬರಿಗೂ ಘಾಬರಿಯಾಯಿತು. ಪುರೋಹಿತರೂ ಬಂದಾಯಿತು. "ಮಾವ ಇದೆಲ್ಲಿ ಹೊರಟು ಹೋದ? ನೀನು ಹೋಗಿ ನೋಡಲಿಲ್ಲವೇನೋ ವಿಶೂ!"....ಎಂದರು.

"ಅಮ್ಮಾ ಸುಶೀಲಾ ದೇವಿಯವರೇ ಎಲ್ಲಿರುವರೆಂದು ಹುಡುಕಲಿ? ನನಗೂ ಸುತ್ತಿ....ಸುತ್ತಿ ಸಾಕಾಗಿ ಹೋಗಿದೆ. ಇಂತಹ ಕಡೆ ಕಳುಹಿಸಿದ್ದೀನಿ ಅಂತ ಹೇಳು ಹೋಗಿ ಕರೆದುಕೊಂಡು ಬರ್ತೀನಿ" ಅಂದ.

"ಹೋಗೋ! ತಲೆ ಹರಟೆ ನಾನೇನೂ ಕಳುಹಿಸಿಲ್ಲ ಅಮ್ಮನನ್ನು ಕೇಳು" ಅಂದಳು ಸುಶೀ

"ಸುಶೀ ಪ್ಲೀಸ್ ಒಂದೇ ಒಂದು ಮಾತು ಕೇಳ್ತೀನಿ ನಿಜವಾದ ಉತ್ತರ ಹೇಳ್ಬೇಡಮ್ಮ ಜಾಣ" ಅಂದ ವಿಶು.

"ಏನೋ ಅದು?" ಎಂದು ನಗುತ್ತಾ ಕೇಳಿದಳು ಸುಶೀ.

"ಪೂನಾದಿಂದ ದೇವಕಿ ಅತ್ತೆ ಯಾವತ್ತು ಬರುತ್ತಾರಂತೆ? ಹೇಳೇ....

"ಒಳ್ಳೆ ತರಾತುರಿ ಆಯ್ತಲ್ಲೋ ನಿಂದೂ, ತಾಳು ನನ್ನ ಮದುವೆ ಆಮೇಲೆ ಆಗಲಿ, ಮೊದಲು ನಿನಗೆ ಮಾಡಿಬಿಡುವಂತೆ ಅಪ್ಪನಿಗೆ ಹೇಳ್ತೀನಿ."

"ಯಾವಾಗ ಬರ್ತಾರೆ, ಅಂದರೆ ಏನೇನೋ ಜಂಭ ಆಡ್ತಾಳೆ. ಹೋಗೇ, ನೀನೇನು ಹೇಳೋದು. ಅಜ್ಜಿಯನ್ನೇ ಕೇಳ್ತೀನಿ" ಎಂದು ವಿಶು ಅಲ್ಲಿ ನಿಲ್ಲದೆ ಓಡಿದ.

ಅರಸಿನ, ಕುಂಕುಮ, ಫಲ, ತಾಂಬೂಲ, ಆರತಿ, ಅಕ್ಷತೆ ಎಲ್ಲವನ್ನೂ ಹಸೆ ಮಣೆಯ ಮುಂದೆ ಸಿದ್ಧಪಡಿಸಿ ಇಟ್ಟಿದ್ದಾಗಿತ್ತು. ಪುರೋಹಿತರು ಬಂದು ಕುಳಿತ್ತು, ಅದು ತನ್ನಿ-ಇದು ತನ್ನಿ ಎಂದು ಗಡಿ-ಬಿಡಿ ಪಡಿಸುತ್ತಿದ್ದರು. ನಟರಾಜನ ತಂದೆ ತಾಯಿಯರು ಮಗನನ್ನು ಬೇಗ ನೋಡಬೇಕೆಂಬ ಕಾತುರ ದಿಂದ ಅವನು ಬರುವುದನ್ನೆ ನಿರೀಕ್ಷಿಸುತ್ತಿದ್ದರು. ಆ ವೇಳೆಗೆ ಸರಿಯಾಗಿ ಪೂನಾದಿಂದ ದೇವಕಿ ಅವಳ ಮಕ್ಕಳು ಗಂಡ ಎಲ್ಲಾ ಕಾರಿನಿಂದ ಬಂದಿಳಿದರು. ವೀಣಾಳನ್ನು ಕಂಡಿದ್ದೇ ತಡ, ವಿಶೂ ಕತ್ತಿನ ಸರ ಎತ್ತಿ ತೋರಿಸಿದ. ವೀಣಾ ತನ್ನ ಪೈಜಾಮು ಜೋಬಿನಲ್ಲಿಟ್ಟು ಕೊಂಡಿದ್ದ ನುಣುಪಾದ ಕಲ್ಲನ್ನು ತೆಗೆದು ಕೆನ್ನೆಗೆ ಸವರಿಕೊಂಡು ವಿಶೂ ಕಡೆ ಕಣ್ಣು ಮಿಟುಕಿಸಿದಳು.

ಒಬ್ಬೊಬ್ಬರಿಗೆ ಒಂದೊಂದು ಬಗೆಯ ಕಾತುರ, ನಟರಾಜನಿಗಂತೂ ಉಸಿರು ಬಿಡಲು ಹೊತ್ತಿಲ್ಲದೆ ಒಂದೇ ಸಮನೆ ಜೀಪು ಓಡಿಸಿ ಕೊಂಡು ಸೋಮನಾಯಕ ನಿದ್ದ ಹಳ್ಳಿಗೆ ಬಂದ. ಸದ್ಯ ಲಕ್ಕಿಯ ತಾಯಿ, ಸಿಕ್ಕಿ ಅವಳನ್ನು ಆದಷ್ಟು ಬೇಗ ಮನೆಗೆ ಕರೆದು ಕೊಂಡು ಹೋಗಿ ಬಿಟ್ಟರೆ ಗೆದ್ದೆ. ಎಂಬ ಕಾತುರ.

ಇದ್ದಕ್ಕಿದ್ದಂತೆ ಜೀಪು ಸೋಮನಾಯಕನ ಮನೆಯ ಬಾಗಿಲಲ್ಲಿ ನಿಂತಿದ್ದು ನೋಡಿ ಹೊರಗೆ ಆಡುತ್ತಿದ್ದ ಮಕ್ಕಳೆಲ್ಲಾ ಒಳಕ್ಕೆ ಓಡಿಹೋಗಿ ಅಪ್ಪಾ! ದಣಿಯೋರು ಬಂದವ್ರೇ! ನೋಡು ಬಾರಪ್ಪಾ! ಎಂದು ಕೂಗಿ ಕೊಂಡವು.

ಸೋಮನಾಯಕನ ಸಂಸಾರದವರೆಲ್ಲರೂ ಒಟ್ಟಿಗೆ ಹೊರಕ್ಕೆ ಬಂದು ಬಗ್ಗಿ ನೋಡಿದರು.

ನಟರಾಜ ಜೀಪಿನಿಂದ ಇಳಿದು ನಿಂತಿದ್ದ. ಅವನನ್ನು ಕಂಡು ಅವರಿಗಾದ ಆನಂದ ಅಷ್ಟಿಷ್ಟಲ್ಲ. "ಅಯ್ಯೋ ದ್ಯಾವರಾ! ಈ ಬಡವನ ಮನೆಗಂಟ ಪಾದ ಬೆಳಸಿ ಬಂದು ಬಿಟ್ರಲ್ಲ; ದಣಿಯೋರಾ? ಬನ್ನಿ ಬನ್ನಿ ಒಳಕ್ಕೆ" ಎಂದು ಸಂಭ್ರಮದಿಂದ ಕರೆದ ಸೋಮನಾಯಕ.

"ಎಲ್ಲಾ ಚೆನ್ನಾಗಿದ್ದೀರೇನಪ್ಪಾ! ಇದೇನು ಮನೆಯ ಸಾಮಾನೆಲ್ಲಾ ಮೂಟೆ ಕಟ್ಟಿ ಇಟ್ಟಿದ್ದೀರಲ್ಲಾ! ಏನು ಸಮಾಚಾರ?" ಎಂದ ನಟರಾಜ.

"ಇನ್ನೇನು ದಣಿಯೋರಾ; ನೀವು ಇಲ್ಲಿಂದ ಹೋದ ಮ್ಯಾಲೆ ನಮ್ಮನ್ನು ಕೇಳೋವ್ರು ಯಾರವ್ರೆ! ಒಂದು ದಿನ ಕೂಲಿ ಸಿಕ್ಕಿದರೆ ಒಂದು ದಿನ ಕೂಲಿ ಸಿಕ್ಕಾಕಿಲ್ಲ. ಇನ್ನೆಲ್ಲಾದ್ರೂ ಕೆಲಸ ಹುಡುಕಿಕೊಂಡು ಹೋಗಬೇಕಲ್ಲಾ!" ಅಂದ.

"ಹಾಗಾದ್ರೆ ಈವತ್ತು ನಾನು ಇಲ್ಲಿಗೆ ಬರದಿದ್ದರೆ, ನೀವೆಲ್ಲಾ ಹೋಗಿ ಬಿಡುತ್ತಿದ್ದಿರೋ ಏನೊ ?" ಎಂದ.

"ಇಲ್ಲ ದಣಿಯೋರಾ ! ನಾಳೆ ಬೆಳಿಗ್ಗೆ ನಿಮ್ಮೂರಿಗೆ ಬಂದು ತಮ್ಮನ್ನು ಕಂಡು ನಮ್ಮ ಹುಡುಗಿ ಲಕ್ಕೀನ ಕರೆದು ಕೊಂಡು ಬಂದು ಬಿಡುವಾ ಎಂದು ಕೊಂಡಿದ್ದೆವು. ದಣೀ, ನಮ್ಮ ಮಲ್ಲವ್ವ ಕೂಡಾ ಹುಡುಗೀನ ಬಿಟ್ಟಿರೋ ಕಾಗಾಕಿಲ್ಲ ನನ್ನ ಕೈಲಿ, ಕರೆದು ಕೊಂಡು ಬಂದು ಬಿಡು ಸೋಮ್ಯಾ ! ಎಂದಳು ಕಣ್ ಬುದ್ಧೀ... ಏನು ನಮ್ಮ ಲಕ್ಕಿ ಹೆಂಗವ್ಳೆ ? ಅಮ್ಮಾವ್ರು ಹೇಳಿದ ಕೆಲಸ ಕಾರ್ಯ ಮಾಡ್ಕೊಂಡು ಗನವಾಗಿ-ಗಂಭೀರವಾಗಿ ಅವ್ಳಾ ಬುದ್ಧೀ ? ಎಂದ.

ಅಲ್ಲಿಯೇ ನಿಂತಿದ್ದ ಮಲ್ಯಾ "ಈಗಲೇ ನಿಮ್ಮ ಜೊತೆಯಾಗೇ ಲಕ್ಕೀನ ಕರೆದುಕೊಂಡು ಬಂದಿದ್ದರೆ ಆಗಿತ್ತು ಧಣೀ" ಎಂದಳು.

"ಏನಪ್ಪಾ ! ಸೋಮನಾಯಕಾ ; ಹೇಗಿದ್ದರೂ ನೀನು ನಾಳೆ ನಮ್ಮೂರಿಗೆ ಬರಬೇಕೆಂದಿದ್ವೆ. ನಾನೂ ಕೂಡಾ ನಿಮ್ಮನ್ನು ಕರೆದು ಕೊಂಡು ಹೋಗಬೇಕೆಂದೇ ಜೀಪು ತಂದೆ, ಸ್ವಲ್ಪ ಅರ್ಜೆಂಟ್ ಕೆಲಸ ಇದೆ. ನೀನೂ ಮಲ್ಲವ್ವಾನೂ ಈಗಲೇ ನನ್ನ ಜೊತೆ ಹೊರಟು ಬಿಡಿ. ಸ್ವಲ್ಪ ಜಾಗ್ರತೆ ಹೊರಡಿ" ಅಂದ.

ಮಲ್ಯಾಗೆ ತುಂಬಾ ಸಂಕೋಚವಾಯಿತು. "ನಾನ್ಯಾಕೆ ದಣೀ ನಮ್ಮ ಸೋಮ್ಯಾ ಬರ್ತಾನೆ. ಅವನ ಜೊತೆಯಾಗೆ ನಮ್ಮ ಲಕ್ಕೀನ ಕಳಿಸಿ ಬುಡ್ರಿ" ಅಂದಳು.

"ನಮ್ಮ ಅಕ್ಕ ಹೇಳಿದ್ದಾರೆ, ನೀವೂ ಖಂಡಿತ ಬರಬೇಕಂತೆ ಬೇಗ ಹೊರಡಿ ಎಂದು ಗಡಿ-ಬಿಡಿ ಮಾಡಿದ.

"ಬಾರವ್ವ ಮಲ್ಯಾ ! ದಣಿಯೋರು ಅಷ್ಟು ಕರೆಯೋವಾಗ ನಮ್ಮದೇನು ಬಿರೀನ ಹೊರಡು" ಎಂದ.

ಮಲ್ಯಾ ! ತಾನು ಇದ್ದಂತೆಯೇ ಲಂಬಾಣಿ ಉಡುಪಿನಲ್ಲಿಯೇ ಜೀಪು ಹತ್ತಿ ಕುಳಿತಳು. ಸೋಮನಾಯಕನೂ ಹೊರಟ. ಜೀಪು ವಾಯುವೇಗ ದಿಂದ ಓಡಿತು.

ನಟರಾಜ ನರ್ಸ್ ಲೀಲಾವತೀ ಮನೆಯನ್ನು ಪತ್ತೆ ಹಚ್ಚಿ ಅವಳೊಂದಿಗೆ ಮಾತನಾಡಿ, ತಾನು ಬೇರೆ ಎಲ್ಲೋ ಹೋಗಿ ಬರಬೇಕಾಗಿದೆ. ಇನ್ನು ಒಂದು

ಗಂಟೆ ಕಾಲದೊಳಗಾಗಿ ಬಂದು ಬಿಡುತ್ತೇನೆ. ನೀವೂ ನಮ್ಮ ಮನೆಗೆ ಬರಬೇಕು, ನಮ್ಮ ಅಕ್ಕ ಹೇಳಿದ್ದಾರೆ" ಎಂದು ಹೇಳಿ ಬಂದಿದ್ದ.

ಶಿವಮೊಗ್ಗದಲ್ಲಿ ಕಾಳಿ ಬೀದಿಯಲ್ಲಿದ್ದ ಅವರ ಮನೆಯ ಮುಂದೆ ಜೀಪು ನಿಲ್ಲಿಸಿದ.

ನರ್ಸ್ ಲೀಲಾವತಿಗೂ ಕೂಡ ನಟರಾಜ ಹೇಳಿ ಹೋದ ಘಳಿಗೆಯಿಂದ ಮನಸ್ಸಿನಲ್ಲಿ ಏನೋ ಅಂದೋಲನ ; ಮಂಗಳೆ ಏಕೆ ಹೇಳಿ ಕಳುಹಿಸಿರಬಹುದು ? ಆಗಾಗ ಹೆದರಿಸಿ-ಬೆದರಿಸಿ ಅವಳಿಂದ ಇಷ್ಟೋ-ಅಷ್ಟೋ ಹಣವನ್ನು ಕೀಳುತ್ತಿದ್ದೆ! ಈಗಲೂ ಹಣಕೊಟ್ಟು ರಹಸ್ಯವನ್ನು ಕಡೆಯವರೆಗೂ ಹಾಗೆಯೇ ಬಚ್ಚಿಡು ಎಂದು ಹೇಳಲು ಇರಬೇಕು" ಎಂದು ಕೊಂಡಳು. ಕೂಡಲೇ ರೆಡಿಯಾಗಿ ನಟರಾಜ ಬರುವುದನ್ನೇ ಕಾದು ಕುಳಿತಳು.

ಮನೆಯ ಬಾಗಿಲಲ್ಲಿ ಜೀಪು ನಿಂತ ಕೂಡಲೇ ಲೀಲಾವತಿ ಜೀಪು ಹತ್ತಿ ಕುಳಿತಳು. ಜೀಪು ೨ ನಿಮಿಷಗಳೊಳಗಾಗಿ ಮಂಗಳೆಯ ಮನೆಬಾಗಿಲಲ್ಲಿ ಬಂದು ನಿಂತಿತು.

ಮನೆ ವಿದ್ಯುತ್ ದೀಪಗಳಿಂದ ಅಲಂಕೃತವಾಗಿ ಜಗಜಗಿಸುತ್ತಾ ಬೆಳಗುತ್ತಿತ್ತು ಬಾಗಿಲು ತಳಿರು ತೋರಣಗಳಿಂದ ಮಂಗಳವನ್ನು ಸೂಚಿಸುತ್ತಿತ್ತು. ಹೆಂಗಸರು, ಮಕ್ಕಳು ಅಲಂಕರಿಸಿಕೊಂಡು ಸಂಭ್ರಮದಿಂದ ಓಡಾಡುತ್ತಿದ್ದರು. ಹಸೆಮಣೆ-ಪುರೋಹಿತರು ನಟರಾಜನಿಗೆ ಈ ದೃಶ್ಯವನ್ನು ನೋಡಿದ ಕೂಡಲೇ ಎದೆ ಧಸಕ್ಕೆಂದಿತು

ಓ ಆಗಲೇ ಲಗ್ನಪತ್ರಿಕೆಗೆ ಎಲ್ಲಾ ಸಿದ್ಧವಾಗಿ ಬಿಟ್ಟಿದೆ. ತಾನು ಇನ್ನು ಯಾವ ವಿಧದಿಂದಲೂ ತಪ್ಪಿಸಿಕೊಳ್ಳಲಾಗುವುದಿಲ್ಲ. ಮತ್ತೆ ಅಕ್ಕನ ಮಾತಿನ ಅರ್ಥವೇನು ? ಇವರನ್ನೆಲ್ಲಾ ಏಕೆ ಕರೆಸಿದ್ದು ? ಮುಂತಾದ ಚಿಂತೆಗಳು ಮಿಂಚಿನಂತೆ ಹೊಳೆದು ಮಾಯವಾದುವು.

ಬಾಗಿಲಿನ ಬಳಿ ಬಂದು ನೋಡಿ ಸುಮಿತ್ರ, ರಾಜಿ, ಅವರುಗಳು ಓ ಮಾವ ಬಂದ, ಸದ್ಯ ಸರಿಯಾದ ಸಮಯಕ್ಕಾದರೂ ಬಂದೆಯಲ್ಲ ; ಅಂದರು.

ಮೂರ್ತಿಯವರು ಬಂದು "ಏನಪ್ಪ ಈಗಲೇ ಅಳಿಯನ ಜೋರು ಶುರು ಮಾಡಿ ಬಿಟ್ಟೆಯಲ್ಲಪ್ಪ. ಬಾ .. ಬಾ.... ಪುರೋಹಿತರು ಕಾದಿದ್ದಾರೆ" ಎಂದರು.

ನಟರಾಜ ಏನು ಮಾತನಾಡಲು ಚೈತನ್ಯವಿಲ್ಲದವನಂತೆ ಸುಮ್ಮನೆ ಹೊಸಲು ದಾಟಿ ಒಳಗೆ ಬಂದು "ಅಕ್ಕಾ !" ಎಂದು ಕರೆದ ಮಂಗಳೆಯ ಜೀವ ಗಡ-ಗಡನೆ ನಡುಗಿತು. ನಟರಾಜ ಅವರನ್ನು ಕರೆದುಕೊಂಡು ಬಂದನೋ ಇಲ್ಲವೋ ? ಇಪ್ಪತ್ತು ವರ್ಷಗಳಿಂದ ಬಚ್ಚಿಟ್ಟ ರಹಸ್ಯ ಇಂದು ಬಯಲಾಗುವ ಕಾಲ ಬಂದಿದೆ. ದೇವರೇ !... ಧೈರ್ಯ ಕೊಡಪ್ಪಾ ! ಎಂದು ದೇವರಲ್ಲಿ ಮೊರೆಯಿಟ್ಟು ಹೊರಗೆ ಬಂದಳು.

ಎಲ್ಲರೂ ನಟರಾಜನನ್ನು ಮುತ್ತಿಕೊಂಡು ಎಲ್ಲಿ ಹೋಗಿದ್ದೆ ? ಎಲ್ಲಿ ಹೋಗಿದ್ದೆ ? ಎಂದು ಕೇಳುತ್ತಿದ್ದರು. ಮಂಗಳೆ ಬಂದು ನಟರಾಜ! ಏನಪ್ಪಾ! ಹೋದ ಕೆಲಸ ಆಯಿತೇ ? ಎಂದು ಕೇಳಿದಳು. "ಹೂಂ....ಅಕ್ಕಾ ಅವರೆಲ್ಲ ಬಂದ್ಧಿದಾರೆ" ಎಂದ.

"ಅವರನ್ನು ಒಳಕ್ಕೆ ಬರಹೇಳು" ಅಂದಳು. ಅದನ್ನು ಕೇಳಿಸಿ ಕೊಂಡ ಎಲ್ಲರೂ ಓ.. ಹೋ... ಜೀಪಿನಲ್ಲಿ ಇನ್ನೂ ಯಾರೋ ಇದ್ದಾರೆ ಎಂದು ತಿಳಿದು, ಸರಿದು ನಿಂತರು.

"ಬಾ ಸೋಮನಾಯಕ ಬನ್ನಿ ಎಲ್ಲರೂ ಒಳಕ್ಕೆ" ಎಂದು ಕರೆದ, ಲೀಲಾವತಿ, ಮಲ್ಯಾ, ಸೋಮನಾಯಕ, ಎಲ್ಲರೂ ಒಳಕ್ಕೆ ಬಂದರು. ಮನೆಯ ಸಂಭ್ರಮವನ್ನು ನೋಡಿ ಮಲ್ಯಾ–ಸೋಮನಾಯಕ ಅವರು ಚಕಿತಗೊಂಡರು.

ಮಂಗಳೆ ಬಂದು ಅವರನ್ನು ಕುಳಿತುಕೊಳ್ಳುವಂತೆ ಹೇಳಿದಳು. ಮೂರ್ತಿ ಯವರು ಮಂಗಳೆಯನ್ನು ಹತ್ತಿರ ಕರೆದು ಗುಟ್ಟಾಗಿ "ಇವರೆಲ್ಲಾ ಯಾರೆ ? ಮೊದಲು ಲಗ್ನಪತ್ರಿಕೆ ಶುಭ ಕೆಲಸ ನಡೆಯಲಿ, ಆಮೇಲೆ ಇವರನ್ನೆಲ್ಲಾ ಉಪ ಚರಿಸುವಿಯಂತೆ," ಎಂದರು.

"ಅವರು ಬಂದಿರೋದು ಲಗ್ನಪತ್ರಿಕೆಗೋಸ್ಕರಾನೇ" ಎಂದಳು, ಮಂಗಳೆ.

"ಮಂಗಳಾ ! ದಯವಿಟ್ಟು ಸ್ವಲ್ಪ ಸುಮ್ಮನಿರು ನಟರಾಜ ಏಕೆ ಇವರನ್ನೆಲ್ಲಾ ಕರೆದು ಕೊಂಡು ಬಂದ ?" ಎಂದರು ಮೂರ್ತಿ.

ಅಲ್ಲಿಗೆ ಮಂಗಳೆಯ ತಂದೆತಾಯಿಯರೂ ಬಂದರು. "ಏನಮ್ಮ ಮಂಗಳಾ! ನಟರಾಜ ಬಂದನೇನೆ ? ಇನ್ನು ಮುಂದಿನ ಕೆಲಸ ಶುರು ಮಾಡಿ, ಎಂದರು. ನಟರಾಜ ಬಂದು ತಂದೆ-ತಾಯಿಯರಿಗೆ ನಮಸ್ಕಾರ ಮಾಡಿದ. ಏನೋ ! ನಾವು ಬಂದು ಎಷ್ಟು ಹೊತ್ತಾಯಿತು; ಎಲ್ಲಿ ಹೊರಟು ಹೋಗಿದ್ದೆಯೋ? ಅಂದರುತಾಯಿ.

"ಹೂಂ ಅವ್ವಾ! ಸ್ವಲ್ಪ ಮುಖ್ಯ ಕೆಲಸಕ್ಕೆ ಅಕ್ಕಾನೇ ಕಳುಹಿಸಿದ್ದಳು ಹೋಗಿದ್ದೆ: ನೀವು ಆರೋಗ್ಯವೇ?" ಅಂದು ಯೋಗಕ್ಷೇಮ ವಿಚಾರಿಸಿದ.

"ನಮ್ಮ ಯೋಗಕ್ಷೇಮ ಇರಲಿ, ಹೋಗೋ ಮೊದಲು ಒಳಕ್ಕೆ ಹೋಗಿ ಬಟ್ಟೆ ಬದಲಾಯಿಸಿ, ಲಕ್ಷಣವಾಗಿ ಪಂಚೆ ಉಟ್ಟುಕೊಂಡು ಬಾ. ಪುರೋಹಿತರು ಕಾದಿದ್ದಾರೆ," ಎಂದು ಗದರಿದರು ಅವನ ತಂದೆ.

ಮಲ್ಯಾ ಇವರೆಲ್ಲರ ಸಂಭ್ರಮವನ್ನು ನೋಡಿ ಬೆಕ್ಕಸ ಬೆರಗಾಗಿ ನಿಂತಲ್ಲಿಯೇ ಕವಲದೆ ನಿಂತು ಬಿಟ್ಟಳು. ಅವಳ ಕಣ್ಣುಗಳು ಮಾತ್ರ ಆ ವಿಶಾಲವಾದ ಮನೆಯ ಮೂಲೆ-ಮೂಲೆಯನ್ನೂ ಹುಡುಕಾಡಿದುವು; ತನ್ನ ಮಗಳು ಲಕ್ಕಿ ಮನೆಯ ಕೆಲಸದವಳಾಗಿ ಯಾವುದೋ ಮೂಲೆಯಲ್ಲಿ ಮುದುರಿ ಕುಳಿತಿರಬಹುದೆಂದು, ಅವಳ ಯೋಚನೆ, ಹಾಗಿದ್ದರೂ ಅವಳಿಗೆ ಸಂತೋಷ; ಇಂತಹ ದೊಡ್ಡವರ ಮನೆಯಲ್ಲಿ ತನ್ನ ಮಗಳು ಕೆಲಸಕ್ಕಿದ್ದರೂ, ಸುಖವಾಗಿ ಹೊಟ್ಟೆ ತುಂಬ ಉಂಡಾಳು ಎಂಬುದೇ ಅವಳಿಗೆ ನೆಮ್ಮದಿ.

ಮಂಗಳೆ ಅವಳ ಬಳಿ ಬಂದು "ಏನಮ್ಮಾ! ಮಲ್ಯಾ ಚೆನ್ನಾಗಿದ್ದೀಯಾ? ಎಂದು ಮಾತನಾಡಿಸಿದಳು.

"ಇಷ್ಟು ಜನಗಳ ಮಧ್ಯೆ ಯೇನವ್ವಾ! ನನ್ನ ಹುಡುಕಿಕೊಂಡು ಬಂದಿರಿ. ಹೋಗಿ ಅವ್ವಾ! ನಿಮ್ಮ ಕೆಲಸ ನೋಡಿ. ನಾನು ಇಲ್ಲೇ ಕುಂತಿರ್ತೀನಿ. ಅಂದಳು ಮಲ್ಯಾ... ಅಲ್ಲಿಯೇ ನಿಂತಿದ್ದ ಸೋಮನಾಯಕ "ತಾಯಿ ನಮ್ಮ ವುಡಿಗಿ ಲಕ್ಕೀನ ಒಂದು ಸಾರಿ ಕರೀರಿ ತಾಯಿ! ಮಗಳನ್ನು ನೋಡಬೇಕು ಎಂದು ಬಲೆ ಹಂಬಲ್‌ಸ್ತಾ ಬಂದವ್ಳೆ ನನ್ನ ತಂಗಿ" ಅಂದ.

"ಈಗ ಬರ್ತಾಳೆ, ಎಲ್ಲಾ ಈ ಕಡೆ ಬನ್ನಿ ಕುಳಿತು ಕೊಳ್ಳೀಪ್ಪ, ಎಂದು ಹೇಳಿ, ಅವರನ್ನು ಒಂದು ಚಾಪೆಯ ಮೇಲೆ ಕುಳ್ಳಿರಿಸಿದಳು ಮಂಗಳೆ. ಪಾರ್ವತಮ್ಮನವರು ಹೊರಕ್ಕೆ ಬಂದು ಇದನ್ನೆಲ್ಲಾ ನೋಡಿ ಸೊಸೆಯ ವಕ್ರ ಬುದ್ಧಿಗೆ ಕೊನೆಯೇ ಇಲ್ಲ, ಎಂದು ತಲೆ-ತಲೆ ಚಚ್ಚಿ ಕೊಂಡರು.

ಮಂಗಳೆ ಅತ್ತೆಯನ್ನು ನೋಡಿ...."ಅತ್ತೆ! ನಿಮ್ಮ ವಕ್ರ ಬುದ್ಧಿಯ ಪರಿಣಾಮ ಏನಾಗಿದೆ ಅನ್ನೋದು ಇನ್ನು ಸ್ವಲ್ಪ ಹೊತ್ತಿಗೆ ಗೊತ್ತಾಗುತ್ತೆ. ಇಲ್ಲೆ ಕುಳಿತುಕೊಳ್ಳಿ ಅತ್ತೆ." ಎಂದು ಹೇಳಿ ಒಳಕ್ಕೆ ಹೋದಳು.

ನರ್ಸ್ ಲೀಲಾವತಿಗೂ ಇವತ್ತು ಏನೋ ವಿಶೇಷ ನಡೆಯುವುದಿದೆ, ಎಂದು ಎಲ್ಲವನ್ನೂ ನೋಡುತ್ತಾ ಸುಮ್ಮನೆ ಕುಳಿತಳು.

ನಟರಾಜ ಹೊರಗಿನಿಂದ ಬಂದ ಕೂಡಲೇ ಲಕ್ಕಿಯನ್ನು ಕಾಣುವ ಕಾತುರ ದಿಂದ ರೂಮಿಂದ-ರೂಮಿಗೆ ಓಡಾಡಿ ಹುಡುಕಾಡಿದ. ಮಂಗಳಿಯ ರೂಮಿಗೆ ಬಂದಾಗ ಅಲಂಕೃತಳಾದ ಲಕ್ಕಿ, ತಲೆ ತಗ್ಗಿಸಿ ಗಾಬರಿಯಿಂದ ಮುದುಡಿ ಕುಳಿತಿದ್ದಳು.

ನಟರಾಜ ನೋಡಿದ ಕೂಡಲೇ ಸುಶೀನೇ ಅಲಂಕರಿಸಿಕೊಂಡು ಕುಳಿತಿರುವಂತೆ ಕಂಡಿತು. ಅವಳ ಹತ್ತಿರ ಬಂದು "ಸುಶೀ" ಎಂದು ಅವಳ ಬೆನ್ನಮೇಲೆ ಕೈ ಆಡಿಸಿದ.

ಲಕ್ಕಿ ಬೆಚ್ಚಿ-ತಟ್ಟನೆ ನಿಂತುಕೊಂಡಳು. ನಟರಾಜನಿಗೆ ತಬ್ಬಿಬ್ಬಾಯಿತು. ಇದೇಕೆ ಸುಶೀ ಹೀಗೆ ಗಾಬರಿಗೊಂಡಳು ? ಎಂದು

ಲಕ್ಕಿಗೆ ನಟರಾಜನನ್ನು ನೋಡಿ ತಡೆದಿದ್ದ ದುಃಖ ಮರುಕಳಿಸಿತು. "ಅಯ್ಯೋ ! ಧಣೀ ! ಎಲ್ಲಿ ಹೊರಟು ಹೋಗಿದ್ದೀರಿ ? ನಿಮ್ಮ ದಮ್ಮಯ್ಯ ನನ್ನನ್ನು ಬೇಗ ನಮ್ಮೂರಿಗೆ ಕಳುಹಿಸಿಕೊಡಿ" ಎಂದು ಬಿಕ್ಕುತ್ತಾ ಅವನ ಕಾಲ ಬಳಿ ಕುಸಿದು ಕುಳಿತಳು.

ನಟರಾಜ ಅವಳ ತೋಳನ್ನು ಹಿಡಿದೆತ್ತಿ "ಓ...ಹೋ ನೀನೇ ಲಕ್ಕೀನಾ? ಅಬ್ಬ....ಸುಶೀ ಅಂತಾನೇ ಇದ್ದೆ. ನನ್ನ ಲಂಬಾಣಿ ಲಕ್ಕಿ ಏನು ಶೃಂಗಾರವಾಗಿ ಬಿಟ್ಟಿದ್ದಾಳಪ್ಪಾ ! ಗುರುತೇ ಸಿಕ್ಕೋಲ್ಲ ಎಂದು ಹೇಳುತ್ತಾ ಅವಳನ್ನು ಬಿಗಿದಪ್ಪಿ, ತಲೆಯನ್ನು ನೇವರಿಸುತ್ತಾ ಸಮಾಧಾನ ಪಡಿಸಲು ಹೋದ.

ಲಕ್ಕಿಗೆ ನಟರಾಜನ ಸಾನ್ನಿಧ್ಯ ಸುಖ, ಎಷ್ಟೋ ನೆಮ್ಮದಿಯನ್ನು ಕೊಟ್ಟಿತು. ಅವನ ಎದೆಯಲ್ಲಿ ಮುಖವನ್ನು ಹುದುಗಿಸಿ : ರಾಜಾ ಸದ್ಯ ಬಂದೆಯಲ್ಲ. ನಿನ್ನನ್ನು ನೋಡದೆಯೇ ನಾನು ಹೊರಟು ಹೋಗಬೇಕಲ್ಲ" ಎಂದು ಹೆಂಗೆ ಒದ್ದಾಡಿದೆ ಗೊತ್ತಾ : ಎಂದು ಮುದ್ದು ಮುದ್ದಾಗಿ ಮಾತನಾಡಿದಳು.

ತನ್ನ ಬಾಹುಗಳಿಂದ ಅವಳನ್ನು ಬಳಸಿ ಇನ್ನೂ ಹತ್ತಿರಕ್ಕೆ ಎಳೆದುಕೊಂಡು ಈ ನನ್ನ ಮುದ್ದು ಗಿಣಿ ಎಲ್ಲಪ್ಪ ಹಾರಿ ಹೊರಟು ಹೋಗ್ತಿತ್ತು? ಹೋದರೆ ಬಿಡೋವ್ರುಯಾರು ? ಎಂದ.

ಸಾಕು ರಾಜ ; ನೀನು ನಗಸಾರ ಆಡಬೇಡ, ಎಂದು ಕೊಸರಿ ಅವನಿಂದ ಬಿಡಿಸಿಕೊಂಡು ದೂರನಿಂತು ಅಲ್ಲಾ ಇವತ್ತು ನಿನಗೂ-ಸುಶೀ ಅಕ್ಕನಿಗೂ ಲಗ್ನದ ಸಾಸ್ತ್ರ ನಡೀತದೆ, ಮನೇಲಿ ಜನ ತುಂಬಹ್ರೆ....ಅಂಥಾದ್ದಲ್ಲಿ ನಾನು ಇಲ್ಲಿ ಒಬ್ಬಳು ಹೆಂಗಿರ್ಲಿ? ನಮ್ಮೂರಿಗೆ ಹೋಗಿಬಿಡಬೇಕು ಎಂದು ಹೊರಟೇ ಬಿಟ್ಟಿದ್ದೆ ನಿಮ್ಮ ಅಕ್ಕನವರೂ, ಸುಶೀ ಅಕ್ಕನೂ ನನ್ನನ್ನು ತಡೆದು ಕರೆದು ಕೊಂಡು ಬಂದರು.

ಓಹೋ ! .. ಈ ಹಳ್ಳಿ ಮುಕ್ಕನಿಗೆ ಅಷ್ಟು ಧೈರ್ಯ ಬಂದುಬಿಡ್ತಾ ? ಎಂದು ಅವಳ ಕೆನ್ನೆಯನ್ನು ಚಿವುಟಿದ.

ನಾನು ಈಗಲೂ ಹಳ್ಳಿ ಮುಕ್ಕನೇ . ನೀವು ಧಣಿಗಳೇ ನಿಮ್ಮ ಅಕ್ಕನೇ ಇವೆಲ್ಲಾ ಅಲಂಕಾರ ಮಾಡಿ ರಾಜ ಬರೋವರ್ಗೂ ನೀನು ಎಲ್ಲಿಯೂ ಹೋಗ ಕೂಡದು ಎಂದು ಇಲ್ಲಿಯೇ ಕೂರಿಸಿ ಹೋದರು.

ಸಧ್ಯ ಬದುಕಿದೆ, ಇಲ್ಲದಿದ್ದರೆ ಲಂಬಾಣಿ ಲಕ್ಕಿಯಾಗಿ ಮಂಗಳ ಮಾಯ ಆಗಿ ಬಿಡುತ್ತಿದ್ದೆ, ಅಲ್ಲವಾ ?

ಸಾಕು ಮಾತು ರಾಜಾ.... ಬೇಗ ನನ್ನನ್ನು ಇಲ್ಲಿಂದ ಕಳುಹಿಸಿಬಿಡು.

ಈಗೀಗ ಲಕ್ಕಿ ನಟರಾಜನನ್ನು ಅತೀ ಪ್ರೀತಿಯಿಂದ ಕರೆಯುವಾಗ ಏಕ ವಚನದಲ್ಲಿಯೇ ಕರೆದು ಬಿಡುತ್ತಿದ್ದಳು.

ಎಲ್ಲಿಗೆ ಕಳುಹಿಸುವುದು ನಿನ್ನನ್ನು ? ನಿನ್ನ ತಾಯಿ, ಮಾವ, ಎಲ್ಲಾ ಇಲ್ಲಿಯೇ ಬಂದಿದ್ದಾರೆ ಅಂದ ನಟರಾಜ.

ಹಾಂ.... ಹೌದಾ ರಾಜಾ! ಎಲ್ಲಿ ನಮ್ಮ ಅಮ್ಮ ? ಮೊದಲು ನಾನು ನೋಡಬ್ಬೇಕು ಎಂದು ಧಾವಿಸಿ ಹೊರಟಳು ಲಕ್ಕಿ.

ಹಾಂ... ಹಾಂ ಸ್ವಲ್ಪ ತಾಳು ನೋಡುವಿಯಂತೆ. ಎಂದು ಅವಳನ್ನು ತಡೆದು ಹಾಗೆಯೇ ಅವಳ ಸುತ್ತ ತೋಳಬಳಸಿ, ಅವಳ ಮುಖದ ಬಳಿ ಮುಖ ವಿಟ್ಟು, ಲಕ್ಷ್ಮೀ! ನನ್ನ ಮೇಲೆ ನಿನಗೆ ನಿಜವಾಗಿಯೂ ಪ್ರೀತಿ ಇದೆಯಾ? ಎಂದು ಪಿಸುಮಾತಿನಲ್ಲಿ ಕೇಳಿದ.

"ಅದು ನನಗೇನು ಗೊತ್ತು ? ಇದೆಯೋ ಇಲ್ಲವೋ ನೀನೇ ಹೇಳು" ಎಂದಳು.

"ಇದ್ದರೆ ನನ್ನ ಕೆನ್ನೆಗೆ ನಿನ್ನ ತುಟಿಯನ್ನು ಒತ್ತಿ ಹೇಳು ಮತ್ತೆ" ಎಂದ

ಇವರ ಪ್ರೇಮಾಲಾಪದಲ್ಲಿ ಹೊರಗಿನ ಪ್ರಪಂಚವನ್ನೇ ಮರೆತಿದ್ದರು. ಆ ವೇಳೆಗೆ ಮಂಗಳೆಯು ನಟರಾಜನನ್ನು ಹುಡುಕಿಕೊಂಡು ಅಲ್ಲಿಗೆ ಬಂದಳು. ಅವಳ ಹಿಂದೆಯೇ ಅಲಂಕೃತಳಾದ ಸುಶೀಲಳೂ ಬಂದಳು.

ನಟರಾಜನೂ ಲಕ್ಕಿಯೂ, ಪ್ರೇಮಪಾಶದಲ್ಲಿ ಬಂಧಿತರಾಗಿ ತಮ್ಮನ್ನೇ ತಾವು ಮರೆತಿರುವ ದೃಶ್ಯವನ್ನು ನೋಡಿ ಸುಶೀಲೆಗಂತೂ ನೂರಾರು ಬಾಣಗಳು ಒಂದೇ ಬಾರಿಗೆ ಎದೆಗೆ ಚುಚ್ಚಿದಂತಾಯಿತು. ಅಲ್ಲಿ ಕ್ಷಣವೂ ನಿಲ್ಲದೆ ತನ್ನ ಕೊಠಡಿಗೆ ಹೋಗಿ, ತನಗೆ ತೊಡಿಸಿದ್ದ ಆಭರಣಗಳನ್ನೆಲ್ಲಾ ಕಳಚಿ ಕುಳಿತಳು. ಅವಳ ಮನಸ್ಸು ಹೇಳಿತು "ರಾಜ ನಿನ್ನವನಲ್ಲ" ಎಂದು. ಮಂಗಳೆಗೆ ಇವರ ಪ್ರೀತಿ ನೋಡಿ ಎಷ್ಟೋ ನೆಮ್ಮದಿಯಾಯಿತು.

ಮಂಗಳೆಯು ನಟರಾಜನನ್ನೂ ಲಕ್ಕಿಯನ್ನೂ ಹೊರಕ್ಕೆ ಬರುವಂತೆ ಕರೆದಳು. ಅವಳಿಗೆ ಏನೋ ತಳ-ಮಳ, ಇನ್ನು ಏನೇನು ರಗಳೆ ರಾದ್ಧಾಂತವೋ ? ಏನಾದರಾಗಲಿ ಈ ದಿನ ಬಾಳು ಬಯಲಾಗಲೇ ಬೇಕು ಎಂದು ಧೃಢ ನಿರ್ಧಾರ ಮಾಡಿಕೊಂಡು ಹೊರಕ್ಕೆ ಬಂದಳು.

ದೊಡ್ಡದಾದ ಹಜಾರದಲ್ಲಿ ರತ್ನಕಂಬಳಿಯನ್ನು ಹಾಸಿತ್ತು. ಹಸೆಮಣೆಯ ಮುಂದೆ ಮಂಗಳ ದ್ರವ್ಯಗಳನ್ನು ಇಡಲಾಗಿತ್ತು. ಹಚ್ಚಿದ ಊದುಬತ್ತಿಯ ವಾಸನೆ ಮನೆಯಲ್ಲೆಲ್ಲಾ ಪರಿಮಳವನ್ನು ತುಂಬಿತ್ತು. ಪುರೋಹಿತರು ಅವಸರಿಸುತ್ತಿದ್ದರು. ಮೂರ್ತಿಯವರನ್ನು ಕರೆದು ; "ಇನ್ನೇಕೆ ಸ್ವಾಮಿ ತಡ ? ಹೆಣ್ಣು ಗಂಡು ಬರಲಿ, ಮುಂದಿನ ಶಾಸ್ತ್ರ ಪ್ರಾರಂಭಿಸಿಬಿಡೋಣ" ಎಂದರು

ಮಂಗಳೆಯ ಗಡಿ-ಬಿಡಿಯನ್ನು ನೋಡಿ ಮೂರ್ತಿಗೂ ಏನು ಹೇಳಲೂ ತೋಚಲಿಲ್ಲ. "ಸ್ವಲ್ಪ ತಡಿಯಿರಿ ಸ್ವಾಮಿ ; ನಮ್ಮ ಮನೆ ಹೆಂಗಸರು ಬರಲಿ" ಎಂದು ಸುಮ್ಮನೆ ಸೋಫಾ ಮೇಲೆ ಕುಳಿತರು.

ಅವರು ಮಾಡತಕ್ಕ ಕೆಲಸವನ್ನು ಮುಗಿಸಿ ಸುಮಿತ್ರ-ರಾಜೇಶ್ವರಿ, ದೇವಕಿ ಎಲ್ಲರೂ ಬಂದು ಹಜಾರದಲ್ಲಿ ರತ್ನಗಂಬಳಿ ಮೇಲೆ ಕುಳಿತರು.

ವಿಶೂಗೆ ವೀಣಾ ಪಾಣಿ ಬಂದದ್ದು ಬಲು ಖುಷಿ ಬಂದಷ್ಟು ಹೊತ್ತಿನಿಂದಲೂ ಅವಳನ್ನು ಒಂದು ಘಳಿಗೆಯೂ ಬಿಡದೆ ಅವಳ ಹಿಂದೆ ಮುಂದೆ ಓಡಾಡುತ್ತಲೇ ಇದ್ದ. ಈಗ ಒಂದು ಕೊಠಡಿಯಲ್ಲಿ ಅವಳೊಂದಿಗೆ ಕೇರಂಬೋರ್ಡ್ ಆಡುತ್ತಾ ಕುಳಿತು ಬಿಟ್ಟ.

ಮಂಗಳೆಯ ಜೊತೆಯಲ್ಲಿ ಲಕ್ಕಿಯೂ ಹೊರಕ್ಕೆ ಬಂದಳು. ಅವಳು ಸರ್ವಾಭರಣ ಭೂಷಿತಳಾಗಿ ಸಾಕ್ಷಾತ್ ಲಕ್ಷ್ಮಿಯಂತೆಯೇ ಕಾಣುತ್ತಿದ್ದಳು. ಮಂಗಳೆ ಲಕ್ಕಿಯ ಕೈ ಹಿಡಿದು ಮಲ್ಯಾ ಬಳಿ ಕರೆದುಕೊಂಡು ಹೋಗಿ "ಮಲ್ಯಾ ನೋಡಮ್ಮ ನಿನ್ನ ಮಗಳು ಇಲ್ಲಿಯೇ ಇದ್ದಾಳೆ ಮಾತನಾಡಿಸು" ಎಂದಳು.

ಮಲ್ಯಾ ಕೂತಿದ್ದವಳು ಧಿಗ್ಗನೆ ಎದ್ದು ಲಕ್ಕಿಯನ್ನು ಪಿಳ-ಪಿಳನೆ ಅವಳ ಹತ್ತಿರ ಹೋಗಿ ಕಾಲಿಂದ ತಲೆಯವರೆಗೆ ಬಗ್ಗಿ ನೋಡಿದಳು. ಬೆಲೆಬಾಳುವ ಒಡವೆಗಳನ್ನು ತೊಟ್ಟು ಪೀತಾಂಬರವನ್ನು ಉಟ್ಟು ಲಕ್ಷಣವಾಗಿ ಜಡೆಹೆಣೆದು ಹೂ ಮುಡಿದಿದ್ದ ಈ ಸುಂದರ ಕನ್ಯೆ ತನ್ನ ಮಗಳು ಲಕ್ಕಿಯೇ ? ಎಂದು ಅನುಮಾನವಾಯಿತು ಮಲ್ಯಾಗೆ.

ಅಷ್ಟರಲ್ಲಿ ಲಕ್ಕಿ ಹೋಗಿದ್ದೇ ಅಮ್ಮನನ್ನು ತಬ್ಬಿಕೊಂಡು "ಅವ್ವಾ ; ಯಾಕವ್ವಾ ಇಲ್ಲಿಗೆ ಬಂದೆ ? ನಿನಗೆ ಈ ಮನೆ ಹೆಂಗವ್ವಾ ಗೊತ್ತಾಯಿತು ? " ಎಂದು ಕಣ್ಣಲ್ಲಿ ನೀರು ಸುರಿಸುತ್ತಾ ಕೇಳಿದಳು.

ಪಾರ್ವತಮ್ಮನವರೂ ಕಿಡಿ-ಕಿಡಿಯಾಗಿ "ಇದೇನೇ ಮಂಗಳಾ ಮನೇಲಿರೋ ಒಡವೆ ವಸ್ತುನೆಲ್ಲ ಆ ಲಂಬಾಣಿ ಹುಡಿಗೀಗೆ ಹಾಕಿ ಅಲಂಕಾರ ಮಾಡಿದ್ದೀಯಲ್ಲೇ ಇದೇನು ಕೇಡುಗಾಲ" ಅಂದರು.

"ಏನು ಕೇಡುಗಾಲ ಅನ್ನೋದು ಈಗ ಅರ್ಥವಾಗುತ್ತೆ. ತಾಳಿ 'ಅತ್ತೇ" ಎಂದಳು.

ಅಲ್ಲಿಯೇ ಇದ್ದ ನರ್ಸ್ ಲೀಲಾವತಿ "ಏನಮ್ಮ ಮಂಗಳಮ್ಮ ನಾನು ಮನೆಗೆ ಹೋಗಲೇ ? ನಿಮ್ಮ ಮನೆಯಲ್ಲೇನೋ ಶುಭ ಕೆಲಸ, ಎಂದು ಕಾಣುತ್ತೆ. ನನಗೇನಮ್ಮ ಕೆಲಸ ಇಲ್ಲಿ ? "ಎಂದಳು.

ಮಂಗಳೆ ಲೀಲಾವತಿಯ ಬಳಿ ಬಂದು "ನೋಡಮ್ಮ ನರ್ಸ್ ಈಗ ೨೦ ವರ್ಷದ ಕೆಳಗೆ ನಡೆದ ನಿಜಸಂಗತಿಯನ್ನು ಎಲ್ಲರ ಮುಂದೆ ಧೈರ್ಯವಾಗಿ ಹೇಳಿಬಿಡು. ನಾನು ಅದನ್ನು ಹೊಟ್ಟೆಯಲ್ಲಿಯೇ ಅಡಗಿಸಿಟ್ಟು ಆ ಬಡಬಾಗ್ನಿಯಿಂದ ಬೆಂದು ಹೋದೆ. ಇನ್ನು ಸಾಧ್ಯವಿಲ್ಲ" ಎಂದು ಅವಳಿಗೆ ಕೇಳಿಸುವಷ್ಟು ಮೆಲ್ಲನೆ ಹೇಳಿದಳು.

"ಆಗಲಿ ಬಿಡೀಮ್ಮ ! ನನಗೇನು ಈಗ ನಾನು ರಿಟೇರ್ ಆಗಿದ್ದೂ ಆಯಿತು. ಇನ್ನೇನು ಭಯ ? " ಎಂದಳು.

ಮಂಗಳೆ ಲಕ್ಕಿಯನ್ನು ಕರೆದು ಸುಮಿತ್ರ ಪಕ್ಕದಲ್ಲಿ ನಿಲ್ಲಿಸಿ "ನೋಡಿ ಅತ್ತೇ ಇವರಿಬ್ಬರಿಗೂ ಏನಾದರೂ ವ್ಯತ್ಯಾಸವಿದೆಯೇ ?" ಎಂದು ಕೇಳಿದಳು.

ಇಬ್ಬರೂ ಒಂದೇ ರೀತಿ ಇರುವ ಹೋಲಿಕೆಯನ್ನು ನೋಡಿ ಎಲ್ಲರೂ ಬೆಕ್ಕಸ ಬೆರಗಾದರು.

"ವಿಶೂ ಎಲ್ಲೇ ? ರಾಜಿ ವಿಶೂನೂ ಸುಶೀನೂ ಕರೆದುಕೊಂಡು ಬಾರೇ" ಎಂದಳು ಮಂಗಳೆ.

ಈ ಮಧ್ಯೆ ನಟರಾಜ ಸುಶೀಯನ್ನು ಎಲ್ಲಿಯೂ ಕಾಣದೆ ತಳಮಳಿಸಿದ. ಮದುವೆಯ ವಧುವಾಗಿ ಶೋಭಿಸುತ್ತಿರಬೇಕಾದ ಸುಶೀ ಎಲ್ಲಿ ಕಾಣುವುದಿಲ್ಲವಲ್ಲಾ ! ಎಂದು ಹುಡುಕಾಡಿದ.

ಅವಳ ಕೊಠಡಿಯಲ್ಲಿ ನಿರಾಭರಣ ಸುಂದರಿಯಾಗಿ ಸಪ್ಪೆಯಾಗಿ ಕುಳಿತಿದ್ದಳು ಸುಶೀ.

ನಟರಾಜ ಹೋಗಿ ಅವಳ ಪಕ್ಕದಲ್ಲಿ ಕುಳಿತು ಅವಳ ಕೈಯ್ಯನ್ನು ತನ್ನ ಕೈಯ್ಯಲ್ಲಿ ಹಿಡಿದು, "ಏಕೆ ಸುಶೀ .. ನನ್ನ ಮೇಲೆ ಕೋಪವಾ ?" ಎಂದ.

"ನನಗೆ ಯಾರ ಮೇಲೆಯೂ ಕೋಪವಿಲ್ಲ" ಎಂದಳು ಗಂಭೀರವಾಗಿ

"ಹೊರಕ್ಕೆ ಬಾ ಸುಶೀ ನೀನು ನೊಂದರೆ ನನಗೆ ಸಹಿಸುವುದಿಲ್ಲ ನನ್ನ ಹೃದಯ ಬಿಚ್ಚಿ ನಿನಗೆ ಹೇಳುತ್ತೇನೆ. ಸುಶೀ !ನಿನಗಾಗಿ ನಾನು ಏನು ತ್ಯಾಗ ಮಾಡಲೂ ಸಿದ್ಧ"... ಎಂದ.

"ಪ್ರೀತಿ ಎನ್ನುವುದನ್ನು ಬಲವಂತವಾಗಿ ಕಸಿದುಕೊಳ್ಳಲು ಆಗುವುದಿಲ್ಲ ಮಾವ. ನಿನ್ನ ಮನಸ್ಸಿನ ತುಂಬಾ ಲಕ್ಕಿಯ ಬಿಂಬವು ತುಂಬಿರುವಾಗ ಅಲ್ಲಿ ನನಗೆಲ್ಲಿ ಸ್ಥಾನವಿದೆ ? ಹೆಣ್ಣು ಯಾವಾಗಲು ತನ್ನ ಪ್ರೀತಿಯ ವಸ್ತು ತನ್ನೊಬ್ಬಳ ಸ್ವತ್ತಾಗಿರ ಬೇಕೆಂದು ಬಯಸುತ್ತಾಳೆ. ಅದರಲ್ಲಿ ಮತ್ತೊಬ್ಬರಿಗೆ ಭಾಗ ಕೊಡಲು ಅವಳು ಖಂಡಿತ ಇಷ್ಟಪಡುವುದಿಲ್ಲ." ಎಂದಳು.

"ಸರಿ.... ಸುಶೀ.... ನಾನು ನಿನ್ನ ಸ್ವತ್ತೇ... ಹಿರಿಯರ ಅಪೇಕ್ಷೆಯಂತೆ ಯಾರಿಗೂ ನನ್ನಿಂದ ನೋವಾಗದಂತೆ, ನಿನ್ನನ್ನೇ ಮದುವೆಯಾದರೆ ಸರಿ ತಾನೇ"

"ಅದೇ ಮತ್ತೆ ಬಲವಂತ ಮಾಘಸ್ನಾನ ಎನ್ನುವುದು. ಒಲ್ಲದ ಮನಸ್ಸಿನಿಂದ ಒಂದಾದರೆ ಯಾರಿಗೆ ಸುಖವಿದೆ ಮಾವ ?" ಎಂದಳು. ನಟರಾಜ ಸುಶೀಯ ಕೈಯ್ಯನ್ನು ಒತ್ತಿ "ಇಲ್ಲ ಸುಶೀ ನಿನಗಾಗಿ ಲಕ್ಕಿಯನ್ನು ನನ್ನ

ಮನಸ್ಸಿನಿಂದ ಸರಿಸಲು ಪ್ರಯತ್ನಿಸುತ್ತೇನೆ. ಬಾ... ಸುಶೀ ಹಿರಿಯರೆಲ್ಲಾ ತೀರ್ಮಾನ ಮಾಡಿದಂತೆ ನಡೆದುಕೊಳ್ಳೋಣ" ಎಂದ.

"ಮಾವ ! ನಾನು ನಿನ್ನನ್ನು ಖಂಡಿತ ಮದುವೆಯಾಗಲಾರೆ. ನಿನ್ನ ಅಡ್ಡಗೋಡೆಯ ಮೇಲಿನ ದೀಪದ, ಮಾತು ಸಾಕು; ನನ್ನ ಹೃದಯ ದಲ್ಲಿ ಮಾತು ನಿನಗೊಬ್ಬನಿಗೇ ಸ್ಥಾನ. ಬೇರೆಯಾರಿಗೂ ಅಲ್ಲಿ ಸ್ಥಳವಿಲ್ಲ ತಿಳಿದುಕೋ" ಎಂದು ಹೇಳಿದವಳೇ ಬಿಕ್ಕಿ-ಬಿಕ್ಕಿ ಅಳುತ್ತಾ ಹೊರಕ್ಕೆ ಬಂದು ಬಿಟ್ಟಳು.

ಸುಶೀ ಅಳುತ್ತಾ ಹೊರಕ್ಕೆ ಬರುವಾಗ ವಿಶೂ ಗಮನಿಸಿದ. ಕೇರಂ ಆಡುವುದನ್ನು ಬಿಟ್ಟು ಹೋಗಿ, ಅವಳ ಕೈ ಹಿಡಿದು "ಸುಶೀ ಅಕ್ಕಾ ! ಇದೇಕೆ ನಿನ್ನ ಕಣ್ಣಲ್ಲಿ ನೀರು ? ನಿನ್ನನ್ನು ಹಸೆಮಣೆಯಲ್ಲಿ ಕೂರಿಸುವ ಸಂಭ್ರಮದಲ್ಲಿ ಎಲ್ಲರೂ ಖುಷಿ ಯಾಗಿರುವಾಗ ನೀನು ಒಳಗೆ ಅಳುತ್ತಾ ಕೂತಿದ್ದೀಯಾ ? ಈಗ ಸ್ವಲ್ಪ ಮುಂಚೆ ನಗು-ನಗುತ್ತಾ ಇದ್ದವಳಿಗೆ ಏನಾಯಿತು ? " ಎಂದು ಅಕ್ಕರೆಯಿಂದ ಕೇಳಿದ.

"ನಾನು ನನ್ನ ಈ ಜನ್ಮದಲ್ಲಿ ಹಸೆಮಣೆ ಹತ್ತುವುದಿಲ್ಲ ವಿಶೂ"... ಎಂದವಳೇ ಕಣ್ಣೊರಿಸಿಕ್ಕೊಂಡು ಎಲ್ಲರೂ ಇದ್ದ ಹಜಾರಕ್ಕೆ ಬಂದಳು. "ಬಾರೇ ವೀಣಾ ! ಇದೇನೋ ವಿಪರೀತವಾಗಿದೆ ಹೊರಗಡೆ ಏನೋ ನೋಡೋಣ" ಎಂದು ವೀಣಾನ ಕೈಹಿಡಿದೇ ವಿಶೂನೂ ಹೊರಕ್ಕೆ ಬಂದ.

ನಟರಾಜನಿಗೆ ಏನೂ ತೋಚದೆ ಇದೇನು ಅಕ್ಕ ಮಾಡುವ ಅನಾಹುತ ? ನನಗೆ ತ್ರಿಶಂಕು ಸ್ವರ್ಗ ಮಾಡಿಬಿಟ್ಟಳಲ್ಲಾ ! ಭಾವ ಒಂದೇ ಸಮನೆ ಶಾಸ್ತ್ರಕ್ಕೆ ಅವಸರಿಸುತ್ತಿದಾರೆ ; ದೇವರು ಬಿಟ್ಟ ದಾರಿಯಾಗಿಲಿ ; ಪಾಪ ! ನನ್ನನ್ನೇ ನಂಬಿ ಬಂದ ಲಕ್ಕಿಯ ಗತಿಯೇನು ? ದೇವರೇ ಕಾಪಾಡಬೇಕು ಎಂದು ಎಲ್ಲರೂ ಇದ್ದಲ್ಲಿಗೆ ಬಂದ. ಪುರೋಹಿತರು ಅವನನ್ನು ಆ ಗಡಿ-ಬಿಡಿಯಲ್ಲಿ ಹಸೆಯ ಮೇಲೆ ಕುಳ್ಳಿರಸಿದರು.

ಮಂಗಳೆ ; "ನೋಡಿ ಪುರೋಹಿತರೇ ಇನ್ನೆರಡು ನಿಮಿಷ ಸ್ವಲ್ಪ ಸಾವ ಕಾಶ ಮಾಡಿ. ನಾನೊಂದು ಮುಖ್ಯ ವಿಷಯ ಹೇಳಬೇಕಾಗಿದೆ. ಅದನ್ನು ಎಲ್ಲರೂ ಕೇಳಿಸಿಕೊಳ್ಳಿ ಈಗ ನಟರಾಜ ಮದುವೆಯಾಗಬೇಕೆಂದಿರುವುದು ಸುಶೀಯನ್ನಲ್ಲ. ಆ ಲಂಬಾಣಿ ಲಕ್ಕಿಯನ್ನೇ ಅಗಬೇಕೆಂದು ಅವನು ಆಸೆ ಪಟ್ಟಿದ್ದಾನೆ" ಎಂದಳು.

ನಟರಾಜನ ತಂದೆ-ತಾಯಿ, ಘಾಬರಿಯಿಂದ "ಏನೋ! ನಟರಾಜ? ಹೌದೇನೋ ನಿನಗೇನೋ ಕೇಡುಗಾಲ" ಎಂದು ಅವನ ಬಳಿ ಬಂದು ಕೇಳಿದರು.

ನಟರಾಜ ತಲೆ ತಗ್ಗಿಸಿ ಸುಮ್ಮನೆ ನಿಂತ.

"ಅಮ್ಮಾ! ಸ್ವಲ್ಪ ತಾಳಿ ಆತುರಬೀಳಬೇಡಿ, ವಿಶೂ ಇಲ್ಲಿ ಬಾಪ್ಪ!" ಎಂದು ವಿಶೂವನ್ನು ಕರೆದು ಮಲ್ಯಾ ಬಳಿ ನಿಲ್ಲಿಸಿ, "ನೋಡಮ್ಮ! ಯಾಡೀ... ಮಲ್ಯಾ! ಇವನು ನಿನ್ನ ಮಗ, ನಿನ್ನ ಮಗಳೆಂದೇ ಸಾಕಿದ ಲಕ್ಕಿ ನನ್ನ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳು. ತಿಳಿಯಿತೇ?" ಎಂದಳು.

ಅಲ್ಲಿದ್ದವರೆಲ್ಲರೂ ಆಶ್ಚರ್ಯ ಚಕಿತರಾದರು. ಪಾರ್ವತಮ್ಮನವರು "ಲೇ ಮಂಗಳಾ ನಿನಗೇನಾದರೂ ಬುದ್ಧಿ ಕೆಟ್ಟಿದೆಯೇನೇ? ಇದೇನೇ ಇಲ್ಲದ್ದೊಂದು ರಾಮಾಯಣ ಮಾಡ್ತಾ ಇದ್ದೀಯಾ?" ಎಂದು ಕೂಗಾಡಿದರು.

"ನಾನಲ್ಲ ಅತ್ತೇ ರಾಮಾಯಣ ಮಾಡುವುದಕ್ಕೆ ಮೂಲಕಾರಣ ಆ ಮಂಥರೆಯಂತೆ, ನೀವು! ನಿಮ್ಮಿಂದಲೆ ಈ ಅನಾಹುತ ಆಗಿದ್ದು" ಎಂದಳು.

"ಲೋ ಮೂರ್ತೀ....ಏನೋ ಇವಳ ನಾಲಗೆಗೆ ತಡೆ ಬಡೆಯೇ ಇಲ್ಲವೇನೇ ನಾನೇನೋ ಮಾಡಿದೆ?" ಎಂದು ಅಳುಮುಖ ಮಾಡಿದರು.

"ಅತ್ತೇ! ಸ್ವಲ್ಪ ಹಿಂದಿನದನ್ನು ನೀವು ನೆನೆಸಿಕೊಳ್ಳಿ. ನಾನೂ ಮೂರೂ ಹೆಣ್ಣನ್ನು ಹೆತ್ತು ನಾಲ್ಕನೆಯದು ಗರ್ಭಿಣಿಯಾದಾಗ ನನ್ನನ್ನು ಎಷ್ಟು ಹೀಯಾಳಿಸುತ್ತಿದ್ದಿರಿ? ಮೂದಲಿಸುತ್ತಿದ್ದಿರಿ? ಜ್ಞಾಪಕವಿದೆಯೇ ಬರೀ ಹೆಣ್ಣನ್ನು ಹೆತ್ತು ನನ್ನ ಮನೆ ಹಾಳು ಮಾಡಿಬಿಡುತ್ತಾಳೆ, ಎಂದು ಬಯ್ಯುತ್ತಿದ್ದಿರಿ. ಹೆರಿಗೆ ನೋವಿನಿಂದ ಒದ್ದಾಡುತ್ತಿರುವಾಗಲೂ "ಈ ಸಲ ಏನಾದರೂ ಹೆಣ್ಣು ಹೆತ್ತೆಯೋ ಅದಕ್ಕೂ ಅಷ್ಟು ವಿಷ ಕುಡಿಸಿ ನೀನೂ ಕುಡಿದು ಸಾಯಿ" ಎಂದ ಮಾತು ಇಷ್ಟು ಪರಿಣಾಮವನ್ನು ಮಾಡಿತು ನೋಡಿ. ನಾಲ್ಕನೆಯದೂ ಹೆಣ್ಣು ಅಂದಿದ್ದರೆ ನೀವು ನನ್ನನ್ನು ಮನೆಗೂ ಸೇರಿಸುತ್ತಿರಲಿಲ್ಲ. ನನ್ನನ್ನು ಕಂಡರೆ ಅವರೂ ಸಿಡಿ-ಮಿಡಿಗೊಳ್ಳುತ್ತಿದ್ದರು. ನೀವೂ ಚಿತ್ರ ಹಿಂಸೆ ಮಾಡಿ ಜೀವ ಸಮಾಧಿಯನ್ನೇ ಮಾಡುತ್ತಿದ್ದಿರಿ.

ಈ ಸಲವೂ ಎಲ್ಲಿ ಹೆಣ್ಣು ಹುಟ್ಟಿ ಬಿಡುವುದೋ ಎಂದು ಗಡ-ಗಡನೆ ನಡುಗುತ್ತಿದ್ದೆ. ಅದೇನು ನಮ್ಮ ಕೈಯ್ಯಲ್ಲಿದೆಯೇ? ಹೆಣ್ಣು ಗಂಡು ಮಾಡಿ ಹೊಟ್ಟೆಯಲ್ಲಿ ಇಟ್ಟು ಕೊಳ್ಳಲು?

ಇಷ್ಟಕ್ಕೂ ಹುಟ್ಟುವ ಮಕ್ಕಳ ಹೊಣೆ ಹೆಣ್ಣೊಬ್ಬಳಿಗೆ ಸೇರಿದ್ದೇನು ? ಅಷ್ಟೇ ಹೊಣೆ....ಅಲ್ಲ ಅದಕ್ಕಿಂತಲೂ ಹೆಚ್ಚು ಗಂಡಿಗೂ ಇದೆ ತಾನೆ ?

ಈ ಕಣ್ಣಿಲ್ಲದ ಕೆಟ್ಟ ಸಮಾಜ ಯಾವುದೇ ತಪ್ಪಿಗೂ ಬಹು ಸುಲಭವಾಗಿ ಹೆಣ್ಣನ್ನು ಹೊಣೆ ಮಾಡಿ ಬಿಡುತ್ತೆ. ಅವಳು ನೊಂದು-ಬೆಂದು ಸಾಯುತ್ತಿದ್ದರೆ ನೋಡಿ ನಗುತ್ತೆ.

ಅತ್ತೇ ಇಲ್ಲಿ ಕೇಳಿ. ಲಕ್ಕವಳ್ಳಿ ಆಸ್ಪತ್ರೆಗೆ ನಾನು ಹೆರಿಗೆಗೆ ಹೋದದ್ದು ನಿಮಗೆ ಜ್ಞಾಪಕವಿದೆ ತಾನೇ ? ಆ ನೋವು ಸಂಕಟದಲ್ಲಿಯೂ ದೇವರೇ ! ಹೆಣ್ಣು ಬೇಡಾಪ್ಪಾ ! ಎಂದು ಮೊರೆಯಿಟ್ಟೆ ಆದರೆ ವಿಧಿ ಸಂಕಲ್ಪ....ಆ ಸಲವೂ ಹೆಣ್ಣೇ ಹುಟ್ಟಿತು.

ಈ ಮಾತು ಮಂಗಳೆ ಹೇಳಿದ ಕೂಡಲೇ ಮೂರ್ತಿಯೂ ಪಾರ್ವತಮ್ಮ ನವರೂ ಆಶ್ಚರ್ಯದಿಂದ "ಹಾಂ ಈ ಮಾತು ನಿಜವೇ ? " ಎಂದು ಬಾಯಿ ಮೇಲೆ ಕೈ ಇಟ್ಟರು.

ಹೂಂ ನಿಜ....ನಿಜ....ನಿಜ...ಹೆಣ್ಣು ಮಗುವೆಂದು ತಿಳಿದ ಕೂಡಲೇ ನಾನು ಗಡ-ಗಡನೆ ನಡುಗಿ ಹೋದೆ....ಇದೋ ನೋಡಿ ಈ ನರ್ಸೇ ಹೆರಿಗೆ ಮಾಡಿದ್ದು. ಅವಳೊಂದಿಗೆ ಗೋಳಾಡಿದೆ. ಹೇಗಾದರೂ ಮಾಡಿ ಈ ಮಗು ವನ್ನು ಬದಲಾಯಿಸಿ ನನಗೆ ಗಂಡು ಮಗು ಒಂದನ್ನು ತಂದು ಕೊಟ್ಟು ಬಿಡು ಎಂದು ಬೇಡಿಕೊಂಡೆ. ಹೌದೇನಮ್ಮ ; ನರ್ಸ್ ಲೀಲಾವತಿ ? ಸುಳ್ಳೋ ? ನಿಜವೋ ? ಹೇಳು" ಅಂದಳು ಮಂಗಳೆ.

ಲೀಲಾವತಿ, "ಹೌದಮ್ಮ ಅವರು ಹೇಳುವುದು ಸತ್ಯಾಂಶ" ಅಂದಳು. ಮಲ್ಯಾವನ್ನು ಹತ್ತಿರ ಕರೆದು ಮಂಗಳೆ "ಇದೋ ನೋಡಿ ; ಈ ಲಂಬಾಣಿ ಹೆತ್ತ ಮಗುವೇ . ನಿಮ್ಮ ವಂಶೋದ್ಧಾರಕನೆಂದು ನೀವು ತಿಳಿದಿರುವ ವಿಶೂ ಆ ಲಂಬಾಣಿ ಹೆತ್ತ ಮಗುವನ್ನು ನನಗೆ ಕೊಟ್ಟು ನನ್ನ ಹೆಣ್ಣು ಮಗುವನ್ನು ಆವಳ ಪಕ್ಕದಲ್ಲಿ ಮಲಗಿಸಿದಳು ನರ್ಸ್....ಆ....ಲಂಬಾಣಿ....ಲಕ್ಕಿಯೇ ನನ್ನ ಕರುಳಿನ ಕಂದ....ನನ್ನ ಮಗಳು ಇದಕ್ಕೆ ಈ ನರ್ಸೇ ಸಾಕ್ಷಿ ..

ಈಗ ಹೇಳಿ ಅತ್ತೇ !...ವಿಶೂ ನಿಮ್ಮ ಮೊಮ್ಮಗನೋ ? ಲಕ್ಕಿ ನಿಮ್ಮ ಮೊಮ್ಮಗಳೋ ? ನೀವೇ ಹೇಳಿ....

ನೀವು ಹೆಣ್ಣು ... ಹೆಣ್ಣು ....ಎಂದು ಹೀಗಳಿವದ್ದಕ್ಕಲ್ಲವೇ ನಾನು ಅಂತಹ ತಪ್ಪು ಕೆಲಸವನ್ನು ಮಾಡಬೇಕಾಯಿತು ? " ಎಂದು ರೋಷಾವೇಷದಿಂದ ಹೇಳಿದಳು ಮಂಗಳೆ

ಅಲ್ಲಿದ್ದವರೆಲ್ಲರೂ ಆಶ್ಚರ್ಯಚಕಿತರಾದರು. ಮೂರ್ತಿಯವರಿಗೆ ಅವಮಾನದಿಂದ ತಲೆ ತಗ್ಗಿಸುವಂತಾಯಿತು. ಮಂಗಳೆಯು ಮಾಡುತ್ತಿದ್ದ ಒಂದೊಂದು ವಿಚಿತ್ರ ವರ್ತನೆಯೂ ಈಗ ಅವರಿಗೆ ಅರ್ಥವಾಯಿತು. ಅವರು ವಾತ್ಸಲ್ಯದಿಂದ ಲಕ್ಕಿಯನ್ನು ಹತ್ತಿರ ಕರೆದರು.

ಲಕ್ಕಿ ಅಂಜುತ್ತಾ ಅಳುಕುತ್ತಾ ಅವರ ಬಳಿ ಬಂದಳು. ಅವಳ ಬೆನ್ನ ಮೇಲೆ ಕೈ ಆಡಿಸುತ್ತಾ "ಲಕ್ಷ್ಮೀ... ನೀನೂ ನನ್ನ ಮಗಳೆ ಎಂದು ತಿಳಿದಾಗ ನನಗೆ ಬಹಳ ಸಂಕಟವಾಗುತ್ತಮ್ಮಾ ; ಇಲ್ಲಿ ಸುಖವಾಗಿ ಬೆಳೆಯ ಬೇಕಾದ ವಳನ್ನು ಬಡವರ ಗುಡಿಸಲಿಗೆ ತಳ್ಳಿದೆವು ; " ಎಂದು ಕಣ್ಣೀರು ಹಾಕಿದರು.

"ಬಿಡಿ ಧಣೀ ; ಬಡವರಾದರೆ ಏನು ? ಅವರು ನನ್ನನ್ನು ಎಷ್ಟು ಪ್ರೀತಿಯಿಂದ ಸಾಕಿದ್ದಾರೆ. ನೀವು ನನ್ನ ತಂದೆ–ತಾಯಿ ಎಂದು ತಿಳಿದರೂ ಸಾಕಿದ ಅವರ ಮೇಲೆಯೇ ಹೆಚ್ಚು ಪ್ರೀತಿ"...ಎಂದು ಮಲ್ಯಾ ಬಳಿ ಹೋಗಿ ಅವಳ ಕೆಂಪು ದಟ್ಟದ ಸೆರಗಿನಲ್ಲಿ ಅವುಚಿಕೊಂಡಳು.

ಮಲ್ಯಾಗೆ ಈಗ ದುಃಖ ಉಮ್ಮಳಿಸಿ ಬಂತು. "ಯವ್ವಾ ! ನನಗಂತೂ ಮಗು ಬದಲಾಯಿಸಿರುವ ವಿಚಾರ ತಿಳಿಯದು ತಾಯೀ.... ಈ ಯೆಣ್ಣು ಮೊಗಾನೇ ನನ್ನದೆಂದು ಹಿಟ್ಟೋ–ಸೊಪ್ಪೋ ಆಕಿ ಸೌದೆ ವೊರಿಸಿ ಸಾಕಿದೆ ಕಣವ್ವ ! ರಾಜಕುಮಾರಿ ಹಂಗೆ ಬೆಳೆಯ ಬೇಕಾದವಳು ಭಂಗ ಪಟ್ಟಳು. ಹಣೇ ಬರಹ" ಎಂದು ಲಕ್ಕಿಯನ್ನು ಅಪ್ಪಿ ಕಣ್ಣೀರುಗರೆದಳು.

ಎಲ್ಲವನ್ನೂ ಕೇಳಿಸಿಕೊಂಡಿದ್ದ ವಿಶೂ....ಹೋಗಿದ್ದೇ ತನ್ನ ಹೆತ್ತ ತಾಯಿ ಮಲ್ಯಾ ಕಾಲಮೇಲೆ ತಲೆಯನ್ನಿಟ್ಟು "ಅಮ್ಮಾ ! ಈಗ ನನಗೆ ನಿಜವಾದ ತಾಯಿ ಪ್ರೇಮ ಸಿಕ್ಕಿತಮ್ಮಾ ! ಅಮ್ಮಾ... ಅಮ್ಮಾ" ಎಂದು ಲಂಬಾಣಿ ಕೊಳಕು ಉಡುಪಿನಲ್ಲಿದ್ದ ಅವಳನ್ನು ಅಳುಕದೆ ಅಪ್ಪಿಕೊಂಡ.

ಮಲ್ಯಾಗಂತೂ ಅಷ್ಟು ನಾಜೂಕಾಗಿ ಉತ್ತಮ ಉಡುಪನ್ನು ಧರಿಸಿ ರಾಜಕುಮಾರನಂತೆ ಠೀವಿಯಾಗಿದ್ದ ವಿಶೂವನ್ನು ತನ್ನ ಮಗನೆಂದು ಹೇಳಿ ಕೊಳ್ಳುವುದಕ್ಕೇ ಸಂಕೋಚವಾಯಿತು. ಅವನಿಂದ ದೂರ ಸರಿದು "ನೀನು

ದೊಡ್ಡ ರೀತಿಯಲ್ಲಿ ಬೆಳೆದವನಪ್ಪಾ ! ನಮ್ಮ ಗುಡ್ಡಗಾಡು ಜನರ ನಡಾವಳಿಕೆ ನಿನಗೆ ಸರಿಬರಾಕಿಲ್ಲ. ಎಲ್ಲ್ಯಾನ ದ್ಯಾವರು ನಿನ್ನನ್ನು ಸುಖವಾಗಿ ಮಡಗಲಪ್ಪಾ" ಎಂದಳು.

"ಅಮ್ಮಾ ! ನೀನು ನನ್ನನ್ನು ಒಂಭತ್ತು ತಿಂಗಳು ಹೊಟ್ಟೆಯಲ್ಲಿ ಹೊತ್ತು ಹೆತ್ತಮೇಲೆ ನನ್ನ ಮೈಯ್ಯಲ್ಲಿ ಹರಿಯುವ ರಕ್ತ ನಿನ್ನದೇ ಅಮ್ಮಾ ! ಇನ್ನು ನಿನ್ನನ್ನು ಸುಖವಾಗಿ ಕಾಪಾಡುವ ಹೊಣೆ ನನ್ನದಮ್ಮ.. ಕಷ್ಟಪಟ್ಟು ದುಡಿದು ನಿನ್ನನ್ನು ಸಾಕುತ್ತೆನಮ್ಮ" ಎಂದು ಎದೆ ತಟ್ಟಿ ಹೇಳಿದ ವಿಶೂ.

ಮೂರ್ತಿಯವರಿಗೆ ದಿಕ್ಕೇ ತೋಚದಾಯಿತು, "ಏನೋ ವಿಶೂ.... ನನ್ನ ಮಗನೆಂದೇ ಎಷ್ಟು ಅಕ್ಕರೆಯಿಂದ ಸಾಕಿದೆವಲ್ಲೋ.... ನಮ್ಮನ್ನು ಬಿಟ್ಟು ಹೋಗ ಬೇಡಪ್ಪಾ, ನೀನೂ ಇಲ್ಲಿಯೇ ಇರೋ" ಅಂದರು.

ಆದರೆ ಪಾರ್ವತಮ್ಮನವರಿಗೆ ಈಗ ಜಿಗುಪ್ಸೆಯಾಯಿತು. "ಇದೇನೋ ಮೂರ್ತಿ ನೀನು ಹೇಳುವ ಮಾತು ? ಸಾಕ್ಷಿ ಸಮೇತ ತಿಳಿದಾಯಿತು ಅವನು ಲಂಬಾಣಿ ಹುಡುಗ, ಎಂದು ತಿಳಿದೂ–ತಿಳಿದೂ ಅವನು ನಮ್ಮ ಹುಡುಗನೆಂದು ಮನೆಯಲ್ಲಿ ಇಟ್ಟುಕೊಳ್ಳಲು ಸಾಧ್ಯವೇನೋ ? " ಎಂದರು.

ಮೂರ್ತಿಯವರ ಕೋಪ ನೆತ್ತಿಗೇರಿತು. "ಅಮ್ಮಾ ಇಷ್ಟಕ್ಕೂ ನೀನೇ ಕಾರಣ, ಹೆಣ್ಣೋ ಗಂಡೋ.... ದೇವರು ಕೊಟ್ಟದ್ದಕ್ಕೆ ಸಂತೋಷ ಪಟ್ಟುಕೊಳ್ಳ ಬೇಕು. ಆ ಸಲ ಗಂಡಾಗದಿದ್ದರೆ ನಮ್ಮ ವಂಶೋದ್ಧಾರಕನೇ ಇಲ್ಲವಾಗುತ್ತೆ ನನಗೆ ಬೇರೆ ಮದುವೆ ಮಾಡುತ್ತೆನೆಂದು ನೀನು ಹಟ ತೊಟ್ಟದ್ದಕ್ಕಲ್ಲವೇ ಅವಳು ಹೆದರಿ ಹಾಗೆ ಮಾಡಿದಳು. ಅವಳ ಸಂಕಟ ಆಗ ಎಷ್ಟು ಇತ್ತು ಎನ್ನುವುದು ಈಗಲಾದರೂ ನಿನಗೆ ಅರ್ಥವಾಯಿತೇ ? ನಿನ್ನದು ಈಗಲೂ ಕೆಡಕು ಬುದ್ಧಿ ಮನೆಯಲ್ಲಿ ಬೆಳೆದ ಆ ಮಗುವನ್ನು ಜಾತಿ ಭೇಧ ಮಾಡಿ, ಲಂಬಾಣಿ ಎಂದು ಅಟ್ಟಬೇಕು ಅನ್ನುತ್ತೀಯಲ್ಲಮ್ಮಾ ! ಈಗೆಲ್ಲಿ ಹೋಯಿತು ನಿನ್ನ ಮೊಮ್ಮಗನ ವಾಲಾಟ ? " ಎಂದರು. ಗಳ–ಗಳನೆ ಅಳುತ್ತಾ ಪಾರ್ವತಮ್ಮನವರು "ತಪ್ಪಾಯಿತು ಕಣೋ ಮೂರ್ತಿ ಇನ್ನು ನಿಮ್ಮ ಸುದ್ದಿಗೆ ಬರುವುದಿಲ್ಲ. ಹೇಗಾ ದರೂ ಮಾಡಿಕೊಳ್ಳಿ" ಎಂದು ಅಲ್ಲಿ ನಿಲ್ಲದೆ ಹೊರಟು ಹೋದರು.

ಮೂರ್ತಿಯವರು ಮಂಗಳೆಯ ಬಳಿ ನಿಂತು, "ಮಂಗಳಾ ; ನಿನ್ನ ಕರುಳಿನ ಕಂದನನ್ನು ಬೇರೆಯವರ ಕೈಯ್ಯಲ್ಲಿ ಹಾಕಿ ನೀನು ಎಷ್ಟು ಸಂಕಟ

ಪಡುತ್ತಿದ್ದೆ ; ಎನ್ನುವುದು ಒಂದೊಂದು ಸಂದರ್ಭವೂ ಈಗ ಅರ್ಥವಾಗುತ್ತಿದೆ. ಮಂಗಳಾ ! ಲಂಬಾಣಿ ಎಂದರೆ ಎಷ್ಟು ಹಾತೊರೆಯುತ್ತಿದ್ದೆ ? ತಾಯಿ ಕರುಳು ಎಷ್ಟು ಕರಗುತ್ತದೆ ? ಅದೆಲ್ಲಾ ಈಗ ತಿಳಿಯಿತು. ಇನ್ನು ನಿನ್ನ ಮಗಳು ಲಕ್ಷ್ಮಿಯನ್ನು ನಿನಗೆ ಇಷ್ಟ ಬಂದಂತೆ ಸುಖವಾಗಿ ಇಡು" ಎಂದರು.

ಇವರೆಲ್ಲರ ಸಂತೋಷಕ್ಕಿಂತಲೂ ನೂರು ಪಟ್ಟು ಸಂತೋಷಗೊಂಡವನೆಂದರೆ ನಟರಾಜ.

ಅಲ್ಲಿಂದ ಓಡಿ ಬಂದು ಅಕ್ಕ ಭಾವನ ಕಾಲನ್ನು ಹಿಡಿದುಕೊಂಡು ನಮಸ್ಕಾರ ಮಾಡಿ "ನೋಡಿ ಭಾವ ; ನನ್ನನ್ನು ಮೊದಲಿನಿಂದಲೂ ಈ ಮನೆಯ ಅಳಿಯ ಎಂದು ತೀರ್ಮಾನ ಮಾಡಿಟ್ಟಿದ್ದಿರಿ. ಅದು ತಪ್ಪಲಿಲ್ಲ. ನಾನು ನಿಮ್ಮ ಮಗಳು ಲಕ್ಕಿಯನ್ನು ಮದುವೆ ಆಗುತ್ತೇನೆ. ದಯವಿಟ್ಟು ಮಾಡಿಕೊಡಿ" ಅಂದ.

ಮಂಗಳಿ, ನಟರಾಜನಿಗೆ ಈಗ ಭರವಸೆ ಕೊಟ್ಟಳು. "ರಾಜ ! ಈಗ ಅಪ್ಪ-ಅಮ್ಮನಿಗೂ ತಿಳಿಯಿತಲ್ಲ ಲಕ್ಷ್ಮಿ ಲಂಬಾಣಿ ಹುಡುಗಿಯಲ್ಲ ನನ್ನ ಮಗಳೇ ಎನ್ನುವುದು ; ಅವಳನ್ನು ಮಾಡಿಕೊಳ್ಳಲು ಅಡ್ಡಿಯೇನಿದೆ ? " ಅಂದಳು.

"ಅದು ಸರಿ ಕಣೆ ಮಂಗಳಾ ಪಾಪ ! ಆವತ್ತಿನಿಂದ ಸುಶೀನೇ ನಟರಾಜನಿಗೆ, ಎಂದು ಹೆಸರಿಟ್ಟಿದ್ದೆವಲ್ಲೇ ? ಪಾಪ ಅವಳ ಮನಸ್ಸಿಗೆ ಎಷ್ಟು ಬೇಜಾರಾಗೋಲ್ವೇ ? " ಎಂದರು ಮಂಗಳೆಯ ತಾಯಿ. "ಖಂಡಿತ ಇಲ್ಲ ಅಜ್ಜಿ" ಎಂದು, ಸುಶೀಲಾ ನಗು ನಗುತ್ತಾ ಲಕ್ಷ್ಮಿಯ ಕೈ ಹಿಡಿದು ಕರೆದು ಕೊಂಡು ಬಂದು ತಾನೇ ಅವಳನ್ನು ಹಸೆಯ ಮೇಲೆ ಕೂರಿಸಿ ಪ್ರೇಮದಿಂದ ಅವಳ ಕೆನ್ನೆಯನ್ನು ಸವರಿ "ಲಕ್ಷ್ಮೀ ! ನೀನೂ ನನ್ನ ತಂಗಿಯೇ ಎನ್ನುವುದು ತಿಳಿದ ಮೇಲೆ ನನಗೆ ತುಂಬಾ ಸಂತೋಷವಾಯಿತು. ಅಪ್ಪಾ ! ಪುರೋಹಿತರಿಂದ ಮುಂದಿನ ಶಾಸ್ತ್ರ ಮಾಡಿಸೀ ಅಪ್ಪ. ನಮ್ಮ ಲಕ್ಕಿಗೂ ಮಾವನಿಗೂ ಮದುವೆ ಆಗುವುದೇ ಚೆನ್ನ. ನನಗೆ ನಿಜವಾಗಿಯೂ ತುಂಬಾ ಸಮಾಧಾನ ಎಂದಳು.

ಮೂರ್ತಿಯವರಿಗೆ ಸುಶೀ ! ಎಂದರೆ ಪ್ರಾಣ, "ಏನಮ್ಮ ಸುಶೀ ! ನೀನು ಮಾಡ್ತಿರೋ ಕೆಲಸ ? ನೀನು ಹಸೆಯ ಮೇಲೆ ಕುಳಿತುಕೊಳ್ಳಬೇಕಾದವಳು ನಟರಾಜ ಹೇಳ್ತಾ ಅಂತ ನೀನೂ ಸರೀನೇ" ಎಂದರು.

"ಇಲ್ಲಪ್ಪ ! ಅವರಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುತ್ತಾರೆ ಅಪ್ಪಾ ! ಅವರನ್ನು ನಾವು ಅಗಲಿಸಬಾರದು. ಹೇಗಿದ್ದರೂ ಮಾವ ನಿನ್ನ ಅಳಿಯನೇ ಆಗುತ್ತಾರಲ್ಲಾ ! ಇನ್ನು ಲಗ್ನ ಪತ್ರಿಕೆ ಶಾಸ್ತ್ರ ನಡೆಯಲಿ" ಎಂದು ತನ್ನ ಕುದುರೆಗೆ ಲಗಾಮು ಹಾಕಿ, ಮುಂದಿನ ಕೆಲಸಕ್ಕೆ ನಡುಕಟ್ಟಿ ನಿಂತಳು.

ಎಲ್ಲರ ಸಂಮ್ಮತಿಯಂತೆ ನಟರಾಜನಿಗೂ-ಲಕ್ಕಿಗೂ ವಿಜೃಂಭಣೆಯಿಂದ ವಿವಾಹವು ನೇರವೇರಿತು. ಮಲ್ಯಾಗೂ ತನ್ನ ಸಾಕಿದ ಕಂದ ಇಷ್ಟು ಅದೃಷ್ಟ ವಂತೆಯಾದಳಲ್ಲಾ, ಎಂದು ಸಂತೋಷವಾಯಿತು. ಲಕ್ಕಿಯೂ, ನಟರಾಜನೂ ಬಂದು ನಮುಸ್ಕರಿಸಿದಾಗ ಸೋಮನಾಯಕನೂ, ಮಲ್ಯಾನೂ ತುಂಬು ಹೃದಯ ದಿಂದ ಆಶೀರ್ವದಿಸಿದರು.

ಮದುವೆಯೆಲ್ಲಾ ಆದನಂತರ ಮಲ್ಯಾ ಮತ್ತು ಸೋಮನಾಯಕ ಹೊರಟು ನಿಂತರು ಮಂಗಳೆಯೊಂದಿಗೆ "ತಾಯಿ ! ನಾವು ನಮ್ಮೂರಿಗೆ ಹೋಗಿ ಬರುತ್ತೇವೆ. ಕಣವ್ವ ನಿಮ್ಮ ಮಗಳನ್ನು ನಿಮಗೆ ಒಪ್ಪಿಸಿದ್ದೇವೆ. ಇನ್ನು ನೀವು ಸಂತೋಸವಾಗಿರವ್ವ. ನಮ್ಮನ್ನು ಕಳುಹಿಸಿ ಕೊಡಿ" ಅಂದಳು.

ಅಲ್ಲಿಯೇ ಇದ್ದ ವಿಶೂ ; ಮಂಗಳೆಗೂ ಮೂರ್ತಿಯವರಿಗೂ ಪಾದ ಮುಟ್ಟಿ ನಮಸ್ಕಾರಮಾಡಿ "ನಾನೂ ಹೋಗುತ್ತೇನೆ ಅಪ್ಪಾ ! ಅಮ್ಮಾ ನೀನು ನನ್ನನ್ನು ಕಷ್ಟಪಟ್ಟು ಸಾಕಿದೆ ನಿನ್ನ ಋಣವನ್ನು ಈ ಜನ್ಮದಲ್ಲಿ ತೀರಿಸಲಾರೆ. ನಿನ್ನನ್ನು ಏನಾದರೂ ಅಂದಿದ್ದರೆ ಅದು ಅಮ್ಮಾ ಅನ್ನೋ ಪ್ರೀತಿಯಿಂದ ನನ್ನನ್ನು ಕ್ಷಮಿಸಮ್ಮಾ ! ಎಂದು ಹೇಳುತ್ತಾ ಗಳ-ಗಳನೆ ಅತ್ತುಬಿಟ್ಟ.

ಮಂಗಳೆಗೂ ದುಃಖ ಒತ್ತರಿಸಿ ಬಂತು ; "ಅಲ್ಲ ಕಣೋ ವಿಶೂ ಸಾಕಿದ ಮಮತೆ ಎಲ್ಲಿ ಹೋಗುತ್ತೋ ನೀನೂ ನನ್ನ ಸಾಕು ಮಗನೇ ಈ ಮನೆಯಲ್ಲಿ ಬೆಳೆದ ನಿನಗೂ ಸ್ವತಂತ್ರವಿದೆ. ನಿಮ್ಮ ಅಮ್ಮನೊಂದಿಗೆ ಇಲ್ಲಿಯೇ ಇರಪ್ಪಾ ! ವಿಶೂ ನಿನ್ನನ್ನು ಬಿಟ್ಟಿರುವುದಕ್ಕೂ ಆಗುವುದಿಲ್ಲ ಕಣೋ.... ನಿನ್ನನ್ನು ಏನೇನೋ ಅಂದಿದ್ದೆ ಅದೆಲ್ಲಾ ಮರೆತು ಬಿಡಪ್ಪಾ ! " ಎಂದು ಅವನನ್ನು ಅಪ್ಪಿ ದುಃಖಿ ಸಿದಳು.

"ಸುಮ್ಮನಿರೇ ಮಂಗಳಾ ಅವನೆಲ್ಲಿ ಹೋಗುತ್ತಾನೆ ? ಏನೋ ವಿಶೂ : ನಿನಗೆ ಇಲ್ಲಿಯೇ ಒಂದು ವರ್ಕ್‌ಷಾಪ್ ಹಾಕಿ ಕೊಡುತ್ತೇನೆ ನಿನ್ನಿಷ್ಟದಂತೆ

ಅವನ್ನ ನಡೆಸಿಕೊಂಡು ಹಾಯಾಗಿ ಇದ್ದು ಬಿಡೋ ನಿನ್ನ ಜೊತೆಯಲ್ಲಿ ಮಲ್ಲಪ್ಪ, ಸೋಮನಾಯಕ ಎಲ್ಲರೂ ಇರಲಿ" ಎಂದರು

ಮಂಗಳೆ ಮಲ್ಯಾನನ್ನು ಉಡುಗೊರೆ, ಹಣ, ಕಾಸು, ಎಲ್ಲಾ ಬೇಕಾದಷ್ಟು ಕೊಟ್ಟು ಉಪಚರಿಸಿದಳು ಸೋಮನಾಯಕ "ತಾಯಿ ನಮ್ಮ ಸಂಸಾರ ಬಿಟ್ಟು ಬಂದು ತುಂಬಾ ದಿನಗಳಾಯಿತು. ಅವರು ದಿಗಿಲು ಗೊಳ್ಳುತ್ತಾರೆ ನಾವು ಹೋಗಿ ಬರುತ್ತೀವೆ" ಎಂದು ಮಲ್ಯಾ ಸಮೇತ ಹೊರಟ.

ವಿಶೂ ತನ್ನ ಆಡಂಬರದ ಉಡುಗೆಯನ್ನು ಬಿಚ್ಚಿಟ್ಟು ಸಾಮಾನ್ಯವಾದುದನ್ನು ಉಟ್ಟು ಹೊರಟು ನಿಂತ.

ಸುಶೀಗೆ ವಿಶೂವನ್ನು ಅಗಲುವುದೆಂದರೆ ಪ್ರಪಂಚವೇ ಶೂನ್ಯವಾದಂತೆ, ಅವಳ ಜೀವನದಲ್ಲಿ ಮೊದಲ ಪೆಟ್ಟು, ನಟರಾಜನನ್ನು ಬಿಟ್ಟು ಕೊಡುವುದು. ಚಿಕ್ಕಂದಿನಿಂದಲೂ ಒಲವನ್ನು ಹೃದಯ ನೆಲದಲ್ಲಿ ಬಿತ್ತಿ ಅದು ಬೆಳೆದು ಬೇರು ಬಿಟ್ಟು ಹೆಮ್ಮರವಾದಾಗ ಬುಡಸಮೇತ ಅದನ್ನು ಕಿತ್ತೊಗೆಯ ಬೇಕಾದರೆ ಸಾಮಾನ್ಯ ನೋವಲ್ಲ. ಆ ತ್ಯಾಗಮಯಿ ತನ್ನ ಒಲಿದ ದೇವರು ಮೆಚ್ಚಿದವಳನ್ನೇ ಮದುವೆಯಾಗಲಿ, ಎಂದು ತನ್ನ ನೋವನ್ನು ನುಂಗಿ ಅವರ ಸಂತೋಷಕ್ಕೆ ಆಸರೆಯಾದಳು

ಅದೇ ಭರಿಸಲಾರದ ಪೆಟ್ಟಾಗಿತ್ತು. ಆ ಗಾಯದ ಮೇಲೆ ಮತ್ತೂ ಬರೆ ಎಳೆದಂತೆ ಈಗ ವಿಶೂ ; ಇಪ್ಪತ್ತು ವರ್ಷಗಳಿಂದ ಕೂಡಿ-ಆಡಿ ಬೆಳೆದ ವಾತ್ಸಲ್ಯದ ತಮ್ಮನನ್ನು ತೊರೆಯುವುದು ಅವಳಿಗೆ ಅತೀವ ದುಃಖವಾಯಿತು. ಆಗ ಅವಳಿಗೆ ಬುಡು-ಬುಡುಕೆಯವನ ಮಾತು ಜ್ಞಾಪಕವಾಯಿತು. ಇದೇನೋ ವಿಶೂ ನಮ್ಮನ್ನೆಲ್ಲಾ ಬಿಟ್ಟು ಹೋಗೋಕೆ ನಿನಗೆ ಹೇಗೆ ಮನಸ್ಸು ಬರುತ್ತೋ ಎಂದು ?ಗೋಗರೆದಳು.

"ಸುಶೀ ಅಕ್ಕಾ ! ನಿನ್ನನ್ನು ಅಗಲಿ ಇರಬೇಕಾದರೆ ನನಗೆಷ್ಟು ನೋವು ಎನ್ನುವುದು ಗೊತ್ತೇ ? ಆದರೆ ಕರ್ತವ್ಯ ದೊಡ್ಡದು ಸುಶೀ ಇನ್ನು ನನ್ನ ಕರ್ತವ್ಯ ಈ ಮನೆಯಲ್ಲಿಲ್ಲ. ನನ್ನ ಹೆತ್ತ ತಾಯಿಯ ಮಗನಾಗಿ ಅವಳನ್ನು ಸುಖವಾಗಿ ಇಡಬೇಕು. ಆದರೂ ಸುಶೀ ಎಂದೆಂದೂ ಈ ನಿನ್ನ ತಮ್ಮನು ನಿನ್ನವನೇ ಈಗ ನಮ್ಮ ಅಮ್ಮನ ಜೊತೆಯಲ್ಲಿ ಹೋಗಿ ಬರುತ್ತೇನೆ" ಎಂದು

ಯಾರು ಎಷ್ಟು ಹೇಳಿದರೂ ಅವನು ನಿಲ್ಲಲಿಲ್ಲ. ವೀಣಾಗೆ ಇದೆಲ್ಲಾ ಕೇಳಿ ಘಾಬರಿಯಾಯಿತು. ವಿಶೂ, ತನ್ನನ್ನು ಬಿಟ್ಟು ಹೋದರೆ ತನ್ನ ಪ್ರಾಣವೇ ಹೋದಂತೆ. ಎಂದು "ವಿಶೂ ಇರಲಿ, ನೀನು ಹೇಳಿದ್ದೇನು ಈಗ ಮಾಡುವು ದೇನು ? ನನ್ನನ್ನು ಬಿಟ್ಟು ಹೋಗ್ತಿಯೇನೋ ? " ಎಂದು ಕೆನ್ನೆ ಉಬ್ಬಿಸಿ, ಮುದ್ದು ಮುದ್ದಾಗಿ ಕೇಳಿದಳು.

"ವೀಣಾ ! ಈಗ ನಾನು ಲಂಬಾಣಿ ಹುಡುಗ, ಎಂದೂ ತಿಳಿದೂ ನನ್ನನ್ನು ನೀನು ಮದುವೆಯಾಗ್ತೀಯೇನೇ ? " ಎಂದು ತಮಾಷೆ ಮಾಡಿದ

ಅವಳು ತನ್ನ ಪೈಜಾಮಾ ಜೇಬಿದಲ್ಲಿದ್ದ ಕಲ್ಲನ್ನು ತೋರಿಸಿ, ಇಲ್ಲಿನೋಡು ಇದೇ ಸಾಕ್ಷಿ, ನೀನು ಹೇಗಿದ್ದರೂ ನಿನ್ನೇ ನಾನು ಮದುವೆಯಾಗುವುದು" ಎಂದಳು. ಅಲ್ಲಿದ್ದವರೆಲ್ಲರೂ ಘೊಳ್ಳನೆ ನಕ್ಕರು.

ವೀಣಾಳ ತಾಯಿ ದೇವಕಿಯೂ ಕೂಡ "ಈಗಿನ ಕಾಲದಲ್ಲಿ ಜಾತಿಬೇಧ ವೇನೂ ಇಲ್ಲ ವಿಶೂ. ವೀಣಾಳನ್ನು ನಿನಗೇ ಕೊಡುವುದೆಂದು ಮೊದಲೇ ಗೊತ್ತು ಮಾಡಿಕೊಂಡಿದ್ದೆವು. ಈಗಲೂ ಬದಲಾಯಿಸುವುದಿಲ್ಲಪ್ಪ" ಎಂದಳೂ.

ಮಂಗಳೆಯೂ, "ಹೌದು ಕಣೋ ವಿಶೂ ; ನೀನು ವೀಣಾಪಾಣಿ ಯನ್ನು ಮದುವೆಯಾಗುವುದು ನನಗೂ ಇಷ್ಟ. ಮುಂದಿನ ಲಗ್ನದಲ್ಲಿ ಆ ಶುಭ ಕೆಲಸವನ್ನೂ ನೆರವೇರಿಸಿ ಬಿಡುತ್ತೇವೆ ಕಣೋ" ಎಂದಳು.

"ಅಮ್ಮಾ : ನಿನ್ನ ಮಾತಿನಂತೆಯೇ ಆಗಲಿ, ಅಷ್ಟಕ್ಕೂ ಆ ಬಿಳಿ ಜಿರ್ಲೆ ಯನ್ನು ನಾನೆಲ್ಲಿ ಬಿಡುತ್ತೇನಮ್ಮಾ ! " ಎಂದು ವೀಣಾಳ ಜಡೆ ಎಳೆದ. "ಮದುವೆ ನಿಧಾನವಾಗಿ ಆಗಲಿ, ಈಗ ಹೋಗಿ ಬರುತ್ತೇನಮ್ಮಾ ! " ಅಂದ.

ವೀಣಾ "ಅಮ್ಮಾ ! ನಾನೂ ವಿಶೂ, ಜೊತೆಯಲ್ಲಿ ಎರಡು ದಿನ ಹೋಗಿ ಬರುತ್ತೇನಮ್ಮ" ಎಂದು ಗೋಗರೆದಳು.

ಮಲ್ಯಾಗೂ, ಸೋಮನಾಯಕನಿಗೂ ಇವೆಲ್ಲಾ ತಾವು ಯೋಚಿಸಲಾರದ ಒಂದೊಂದು ಆಶ್ಚರ್ಯ ಸಂಗತಿಯಾಗಿತ್ತು.

ಮಲ್ಯಾ ! ವೀಣಾ ತಲೆಯನ್ನು ನೇವರಿಸುತ್ತಾ "ನಮ್ಮ ಬಡವರ ಮನ್ಯಾಗೆ ನೀನು ಹೆಂಗಿರ್ತೀ ನಮ್ಮವ್ವ ; ಬೇಡ ಕಣಮ್ಮ" ಎಂದಳು.

ವಿಶೂ "ಇದ್ಲು ಬರ್ಲಿ ಬಿಡಮ್ಮ. ಅವಳು ಮುಂದೆ ನಿನ್ನ ಸೊಸೆಯೇ ತಾನೆ" ಅಂದ.

ಅವರೆಲ್ಲರೂ ಹೊರಟರು. ವಿಶೂ-ವೀಣಾ ಸುಶೀಗೆ ಟಾ ಟಾ ಹೇಳಿ ಹೊರಟರು. ಎಲ್ಲರಿಗೂ ದುಃಖ ಉಕ್ಕಿ ಬರುವಂತಾಯಿತು. ಮೂರ್ತಿಯು ವರು "ಬೇಗ ವಾಪಸ್ ಬಂದು ಬಿಡೋ ವಿಶೂ" ಎಂದು ಅವನು ಕಣ್ಮರೆ ಯಾಗುವವರೆಗೂ ಹೇಳುತ್ತಲೇ ಇದ್ದರು.

ನಟರಾಜ ಲಕ್ಕಿಯೂ ಜೋಡಿಯಾಗಿ ನಿಂತು ಅವರನ್ನು ಕಳುಹಿಸಿ ಕೊಟ್ಟರು. ಲಕ್ಕಿ ತನ್ನ ತಾಯಿಯನ್ನೂ ಅಗಲಿದ ದುಃಖವನ್ನು ತಡೆಯಲಾರದೆ ಒಳಗೆ ಹೋಗಿ ಬಿಕ್ಕಿ ಬಿಕ್ಕಿ ಅತ್ತಳು. ನಟರಾಜ ಹಿಂದೆಯೇ ಬಂದು ಅವಳನ್ನು ಸಮಾಧಾನ ಪಡಿಸಿದ.

"ಏಕೆ ಲಕ್ಕೀ ನಿನಗೆ ಈ ಮನೆಯಲ್ಲಿರುವುದು ಸರಿ ಬರಾಕಿಲ್ಲವಾ ? ಎಂದು ಅವಳ ಭಾಷೆಯಲ್ಲಿಯೇ ಹಾಸ್ಯ ಮಾಡಿದ.

"ಸಾಕು ಸುಮ್ಮನಿರಿ ರಾಜ. ನಿಮ್ಮ ಹಟವನ್ನೇ ಸಾಧಿಸಿದಿರಿ. ಪಾಪ; ಸುಶೀ ಅಕ್ಕನಿಗೆ ಎಷ್ಟು ಮನಸ್ಸು ನೊಂದಿದೆ ? ಅವಳನ್ನು ನೀವು ಚೆನ್ನಾಗಿ ನೋಡಿಕೊಳ್ಳಬೇಕು ರಾಜ" ಎಂದಳು.

"ರಾಣಿಯವರೆ ಅಪ್ಪಣೆ ಸುಶೀಗೆ ಒಳ್ಳೆ ವರನನ್ನು ನೋಡಿ ನಿಂತು ನಾನೇ ಮದುವೆ ಮಾಡುತ್ತೇನೆ. ಆಯಿತೋ ಇಲ್ಲವೋ ; ಎಂದು ಅವಳ ಗಲ್ಲವನ್ನು ಹಿಡಿದು ಕೆನ್ನೆ ಮೇಲೆ ಮೆಲ್ಲನೆ ತಟ್ಟಿದ.

ಎಲ್ಲರೂ ಜೋಡಿಯಾಗಿ ಅವರವರು ಒಂದು ನೆಲೆಯನ್ನು ಪಡೆದರು. ಆದರೆ ಒಂಟಿಯಾಗಿ, ಶೂನ್ಯ ಹೃದಯವನ್ನು ತಳೆದವಳೆಂದರೆ ಸುಶೀಲ.

ಎಲ್ಲರೂ ಹೊರಟು ಹೋದ ಮೇಲೆ ಅವಳ ಮನಸ್ಸು ವೈರಾಗ್ಯದತ್ತ ಎಳೆಯಿತು. ಮನಸ್ಸಿನಲ್ಲಿ ಏನೋ ಒಂದು ಧೃಢ ನಿರ್ಧಾರವನ್ನು ಮಾಡಿದಳು. ಶೇಷಣ್ಣನವರು ಕಾಶಿಯಿಂದ ಬಂದವರು ಕನ್ಯಾಕುಮಾರಿಗೆ ಹೋಗಿ, ಸ್ವಾಮಿ ವಿವೇಕಾನಂದರ ಸ್ಮಾರಕದ ಸ್ಥಳದಲ್ಲಿ ಒಂದು ವಾರ ಶಾಂತಿಯಾಗಿ ಇದ್ದು ಬರ ಬೇಕೆಂಬ ಉದ್ದೇಶದಿಂದ ಅಲ್ಲಿಗೆ ಹೋಗಿ ಬಿಟ್ಟಿದ್ದರು. ಅವರು ಬಂದ ಕೂಡಲೇ ಮೂರ್ತಿಯವರ ಸಂಸಾರದ ಆಶ್ಚರ್ಯ ಸಂಗತಿಗಳನ್ನು ಕೇಳಿ ಬೆರಗಾದರು.

ತಮ್ಮ ತಂಗಿ ಪಾರ್ವತಮ್ಮನವರನ್ನು ಕರೆದು, ನೋಡಿದೆಯಾ ಪಾರ್ವತಿ, ಪಾಪ ! ಮಂಗಳೆ ಎಷ್ಟು ಸಂಕಟವನ್ನು ಹೊಟ್ಟೆಯಲ್ಲಿ ಅಡಗಿಸಿಟ್ಟು ನೊಂದಳು ಎನ್ನುವುದು ಈಗ ಅರ್ಥವಾಯಿತು. ನಿನ್ನ ತಪ್ಪಿನಿಂದಲೇ ಸದ್ಯ ಎಲ್ಲಾ ಒಂದು

ಸ್ಥಿಮಿತಕ್ಕೆ ಬಂದುದು ಸಂತೋಷ ಮೂರ್ತಿ ಇನ್ನು ನಾವು ನಾಳೆಯೇ ಕಾಶಿಗೆ ಹೊರಡುತ್ತೇವೆ ಎಂದರು.

ಪಾರ್ವತಮ್ಮನವರು ನಾನು ಇನ್ನು ಕಾಶಿಯಲ್ಲಿಯೇ ಇದ್ದು ಬಿಡುತ್ತೇನೆ. ಅಣ್ಣಾ, ನಿನ್ನ ಆಶ್ರಮದ ಮಕ್ಕಳ ಸೇವೆ ಮಾಡಿ ನನ್ನ ಪಾಪ ಕರ್ಮವನ್ನು ಕಳೆಯುತ್ತೇನಪ್ಪಾ ! ಎಂದು ಅವರೂ ಅಣ್ಣನ ಜೊತೆ ಹೊರಟರು.

ಇವರೆಲ್ಲಾ ಹೊರಡುವ ಸಮಯಕ್ಕೆ ಸುಶೀಲ ನಿರಾಭರಣ ಸುಂದರಿಯಾಗಿ ಒಂದು ಬಿಳೀಸೀರೆಯನ್ನುಟ್ಟು ಸನ್ಯಾಸಿಯಂತೆ ಶೇಷ ಮಾವನ ಜೊತೆಯಲ್ಲಿ ಹೊರಡಲು ಸಿದ್ಧವಾದಳು

ಇದೇನಮ್ಮ ಸುಶೀಲ ಇದೇನು ನಿನ್ನ ವೇಶ ? ಎಲ್ಲಿಗೆ ಹೊರಟೆ ಎಂದು ಕಾತುರರಾಗಿ ಮೂರ್ತಿ ಕೇಳಿದರು.

ಅಪ್ಪಾ ! ನಾನು ಮಾವನ ಆಶ್ರಮದಲ್ಲಿ ಇದ್ದುಕೊಂಡು ಮಕ್ಕಳ ಸೇವೆಯಲ್ಲಿ ನನ್ನ ಜೀವಿತವನ್ನು ಕಳೆಯಬೇಕೆಂದು ನಿರ್ಧಾರ ಮಾಡಿದ್ದೇನೆ ಅಪ್ಪಾ ಕಳುಹಿಸಿಕೊಡು; ಎಂದು ಶಾಂತವಾಗಿ ಹೇಳಿದಳು.

ಮಂಗಳೆಗೂ, ಮೂರ್ತಿಗೂ ಈ ಮಾತನ್ನು ಕೇಳಿ ಆಕಾಶವೇ ತಲೆಯಮೇಲೆ ಬಿದ್ದಂತಾಯಿತು, ಬೇಡ, ಸುಶೀ-ನೀನು ಈ ರೀತಿ ನಿರ್ಧಾರ ಮಾಡಬೇಡಮ್ಮಾ! ನಿನಗೆ ಒಳ್ಳೆಯ ವರನೋಡಿ ನಾನು ಮದುವೆ ಮಾಡುತ್ತೇನೆ ; ನೀನು ಸಂತೋಷವಾಗಿರಬೇಕು ಸುಶೀ: ಈ ವೈರಾಗ್ಯ ಬೇಡಮ್ಮಾ ಎಂದು ಕಣ್ಣಲ್ಲಿ ನೀರು ಹಾಕಿದರು ಮೂರ್ತಿ.

ಯಾರು ಎಷ್ಟು ಹೇಳಿದರೂ ಸುಶೀಲೆಯ ಮನಸ್ಸು ಬದಲಾಯಿಸಲಿಲ್ಲ. ಅಪ್ಪಾ ನಾನು ಖಂಡಿತ ಮದುವೆಯಾಗುವುದಿಲ್ಲ ಅಪ್ಪಾ : ನನಗೆ ಇದರಲ್ಲಿಯೇ ನೆಮ್ಮದಿ ಶಾಂತಿ ದೊರಕುತ್ತದೆ. ನಾನು ಹೋಗಿಬರುತ್ತೇನೆ. ಎಂದು ತಂದೆ ತಾಯಿಗೆ ನಮಸ್ಕರಿಸಿದಳು.

ಮಂಗಳೆ ಸುಶೀಯನ್ನು ತಬ್ಬಿಕೊಂಡು ಬಿಕ್ಕಿ-ಬಿಕ್ಕಿ ಅತ್ತಳು. "ಬೇಡ ಸುಶೀ ನೀನು ಹೊರಟು ಹೋದರೆ ಈ ಮನೆಯೇ ನನಗೆ ಶೂನ್ಯವಾಗಿ ತೋರುತ್ತೆ. ನಾನು ನಿನಗೆ ಅನ್ಯಾಯ ಮಾಡಿದೆ, ನಿನ್ನ ಮನಸ್ಸಿಗೆ ತುಂಬಾ ಆಘಾತವಾಗಿದೆ, ನನಗೆ ಗೊತ್ತು. ನಾನು ಮತ್ತೆ ಕೊರಗುವಂತೆ ಮಾಡಬೇಡ,

ನಿನಗೂ ಮದುವೆ ಮಾಡಿ ಸಂತೋಷಪಟ್ಟು ನಾನೂ ನೆಮ್ಮದಿಯಾಗಿರುವಂತೆ ಒಂದು ಅವಕಾಶ ಕೊಡು ಸುಶೀ” ಎಂದು ಸುಶೀಯನ್ನು ಗೋಗರೆದು ಬೇಡಿಕೊಂಡಳು ಮಂಗಳೆ.

ಆದರೆ ಸುಶೀಲಳ ಮನಸ್ಸು ವಿಚಲಿತವಾಗಲಿಲ್ಲ. “ಅಮ್ಮಾ ನಿನ್ನ ಇಷ್ಟು ಮಕ್ಕಳಲ್ಲಿ ಒಬ್ಬ ಮಗಳನ್ನು ದೇಶಸೇವೆಗಾಗಿ ಬಿಟ್ಟುಕೊಡಮ್ಮ: ನೀನು ಮನಸಾರ ಹರಸಿ ಕಳುಹಿಸಮ್ಮಾ ! ನನಗೆ ಅದೇ ನೆಮ್ಮದಿ ನನ್ನ ಸ್ಥಾನಕ್ಕೆ ಈ ಮನೆಯಲ್ಲಿ ಇನ್ನು ಮೇಲೆ ಲಕ್ಷ್ಮೀ ಇದ್ದಾಳೆ.” ಎಂದು ಹೇಳಿ ಶೇಷಮಾವನ ಕಡೆ ತಿರುಗಿ, “ಇದೇನು ಮಾವ ! ಕರ್ಮಯೋಗಿಗಳಾದ ನೀವೇ ಹೀಗೆ ಮುಂದೆ ಹೆಜ್ಜೆ ಇಡಲಾರದೆ ಕಣ್ಣಲ್ಲಿ ನೀರು ಹಾಕುತ್ತಾ ನಿಂತಿರಿ ? ನಡೆಯಿರಿ ಆಶ್ರಮದ ಸೇವೆಗೆ ನನಗೂ ಅವಕಾಶ ಕೊಡಿ” ಎಂದಳು.

ಶೇಷ ಮಾವನು ಕಣ್ಣೊರೆಸಿಕೊಂಡು “ಮಂಗಳಾ ! ನೀನು ತುಂಬಾ ಭಾಗ್ಯಶಾಲಿಯಮ್ಮ ಇಂಥಾ ತ್ಯಾಗಮಯಿ ; ಸ್ತ್ರೀ ರತ್ನವೊಂದನ್ನು ದೇಶ ಸೇವೆಗೆ ಮೀಸಲಾಗಿ ಕಳುಹಿಸಿ ಕೊಟ್ಟ ಪುಣ್ಯವು ನಿನಗೇ ಸೇರಿದ್ದು. ಇನ್ನು ನಾವು ಹೊರಡುತ್ತೇವೆ ಮೂರ್ತಿ ; ” ಎಂದು ಧಡ ಧಡನೆ ಹೆಜ್ಜೆಯಿಟ್ಟು ಮುಂದೆ ನಡೆದರು.

ಅವರ ಹೆಜ್ಜೆಯ ಗುರುತಿನಲ್ಲಿ ಸುಶೀಲ ಹಿಂಬಾಲಿಸಿದಳು.

ನಟರಾಜನೂ, ಲಕ್ಕಿಯೂ ಅವಳು ಕಣ್ಮರೆಯಾಗುವವರೆಗೂ ದಿಟ್ಟಿಸಿ ನೋಡುತ್ತಲೇ ಇದ್ದರು.

